ಮಂಗಳವಾರ, ಏಪ್ರಿಲ್ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 100 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ
ಕ್ಯಾನ್ಸರ್‌ರೋಗಿಗಳಿಗೆ ಆಶಾದಾಯಕವಾಗಬಲ್ಲ ಚಿಕಿತ್ಸೆ ಇಮ್ಯುನೋಥೆರಪಿ

‘ಬಂಧಿಸಿದರೆ ಬೀದಿಗೆ ಇಳಿಯಿರಿ’ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,742 ▲	22,666 ▲	₹73,560 (ಬೆಂಗಳೂರು) ▲	₹83,900 (ಬೆಂಗಳೂರು) ▲	83.31

ದಿ ಕಾಸ್ಮೋಸ್ ಕೋ-ಆಪ್. ಬ್ಯಾಂಕ್ ಲಿ.
(ಮಲ್ಟಿಸ್ಟೇಟ್ ಷೆಡ್ಯೂಲ್ಡ್ ಬ್ಯಾಂಕ್)
ಎನ್‌ರಿಚಿಂಗ್ ಲೈಫ್!
₹ 35000,00,00,000
ಕಾಸ್ಮೋಸ್ ಬ್ಯಾಂಕ್ ರೂ 35 ಸಾವಿರ ಕೋಟಿ ವ್ಯಾಪಾರ ವಹಿವಾಟು ಸಾಧನೆ ಮಾಡಿದೆ!
(ಮಾರ್ಚ್ 2024 ರಂತೆ)
ಸದಸ್ಯರಿಗೆ, ಠೇವಣಿ ದಾರರಿಗೆ, ಸಾಲಗಾರರಿಗೆ, ಖಾತೆದಾರರಿಗೆ, ಸಿಬ್ಬಂದಿ ಮತ್ತು ಹಿತೈಷಿಗಳಿಗೆ ಧನ್ಯವಾದಗಳು!
ಯುಗಾದಿ ಹಬ್ಬದ ಶುಭಾಶಯಗಳು

ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟ: ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪೀಠದಿಂದ ತರಾಟೆ

ಬೋರ್ಡ್ ಪರೀಕ್ಷೆ ಫಲಿತಾಂಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ 5,8, 9 ಹಾಗೂ 11ನೇ ತರಗತಿಗಳ ಬೋರ್ಡ್ ಪರೀಕ್ಷೆಗಳ ಫಲಿತಾಂಶ ಹೊರಬಿದ್ದ ಬೆನ್ನಲ್ಲೇ, ಈ ಫಲಿತಾಂಶವನ್ನು ತಡೆ ಹಿಡಿಯುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ತಮ್ಮ ಅನಿಶ್ಚಿತ ನಿರ್ಧಾರಗಳಿಂದ ವಿದ್ಯಾರ್ಥಿಗಳ ಭವಿಷ್ಯದ ಜತೆಗೆ ಆಟವಾಡುತ್ತಿರುವುದು ಅಲ್ಲದೆ, ಪೋಷಕರಿಗೂ ತೊಂದರೆ ಉಂಟು ಮಾಡುತ್ತಿರುವ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠ, ‘ಕರ್ನಾಟಕ ಸರ್ಕಾರವು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಲ್ಲಿ ಆತಂಕ, ಒತ್ತಡ ಉಂಟು ಮಾಡುವುದಷ್ಟೇ ಅಲ್ಲದೇ, ಶಿಕ್ಷಕರು ಹಾಗೂ ಶಾಲಾ ಆಡಳಿತ ಮಂಡಳಿ ನಡುವೆ ಬಿಕ್ಕಟ್ಟನ್ನು ತಂದಿಟ್ಟಿದೆ’ ಎಂದಿದೆ.

ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಮೂಲಕ ನಡೆಸಲು ಅನುಮತಿ ನೀಡಿ ಕರ್ನಾಟಕ ಹೈಕೋರ್ಟ್ ಮಾರ್ಚ್ 22ರಂದು ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆಯನ್ನೂ ನೀಡಿದೆ.

ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ಆದೇಶವು ಆರ್‌ಟಿಇ ಕಾಯ್ದೆಯ ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿಲ್ಲ ಎಂದು ನ್ಯಾಯಪೀಠ ಅಭಿಪ್ರಾಯ ವ್ಯಕ್ತಪಡಿಸಿದೆ.

ಫಲಿತಾಂಶ ಪ್ರಕಟಣೆಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಏಪ್ರಿಲ್ 6ರಂದು ಹೊರಡಿಸಿದ್ದ ಆದೇಶಕ್ಕೂ ನ್ಯಾಯಪೀಠ ತಡೆಯಾಜ್ಞೆ ನೀಡಿದೆ.

‘ಬೆಳಿಗ್ಗೆ 9 ಗಂಟೆಯ ಒಳಗೆ ಫಲಿತಾಂಶ ಪ್ರಕಟಿಸುವಂತೆ ಏಪ್ರಿಲ್ 6ರಂದು ಹೊರಡಿಸಿರುವ ಆದೇಶ ದುರುದ್ದೇಶಪೂರಕವಾಗಿದೆ. ಯಾಕೆಂದರೆ, ಹೈಕೋರ್ಟ್ ಆದೇಶ ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಬಾರದು. ಸಲ್ಲಿಸಿದರೂ ಅದು ಮಾನ್ಯತೆ ಕಳೆದುಕೊಳ್ಳಬೇಕು ಎಂಬ ದುರುದ್ದೇಶ ಈ ಆದೇಶದ ಹಿಂದಿದೆ’ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಸಂಘಟನೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು, ‘ಒಂದು ವೇಳೆ ಯಾವುದೇ ಶಾಲೆ ಫಲಿತಾಂಶ ಪ್ರಕಟಿಸಿದ್ದರೆ ಅದಕ್ಕೆ ಮಾನ್ಯತೆ ಇಲ್ಲ. ಪೋಷಕರಿಗೂ ತಿಳಿಸಬಾರದು’ ಎಂದು ತಾಕೀತು ಮಾಡಿತು.

ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ ಪೀಠವು, ಏಪ್ರಿಲ್ 23ಕ್ಕೆ ವಿಚಾರಣೆಯನ್ನು ಮುಂದೂಡಿತು.

ಬೋರ್ಡ್ ಪರೀಕ್ಷೆ ವಿರೋಧಿಸಿ ಕೆಲ ಖಾಸಗಿ ಶಾಲಾ ಸಂಘಟನೆಗಳು ಹೈಕೋರ್ಟ್ ಮೊರೆ ಹೋಗಿದ್ದವು. ಸಂಘಟನೆಗಳ ಮನವಿ ಪುರಸ್ಕರಿಸಿದ್ದ ಏಕ ಸದಸ್ಯ ನ್ಯಾಯಪೀಠ ಬೋರ್ಡ್ ಪರೀಕ್ಷೆಗಳನ್ನು ರದ್ದು ಮಾಡಿತ್ತು. ನಂತರ ಆ ಆದೇಶಕ್ಕೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ತಡೆ ನೀಡಿತ್ತು.

ನಂತರ ಸಂಘಟನೆಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದವು. ಇದೇ ಮಾರ್ಚ್ 11ರಿಂದ ಆರಂಭವಾಗಿದ್ದ ಬೋರ್ಡ್ ಪರೀಕ್ಷೆಗಳನ್ನು ಸುಪ್ರೀಂ ಕೋರ್ಟ್ ಆದೇಶದಂತೆ ಮಾರ್ಚ್ 13ರಂದು ಸ್ಥಗಿತಗೊಳಿಸಲಾಗಿತ್ತು. ಪರೀಕ್ಷೆ ನಡೆಸಲು ಹೈಕೋರ್ಟ್ ವಿಭಾಗೀಯ ಪೀಠ ಅನುಮತಿ ನೀಡಿತ್ತು.

ಮಕ್ಕಳ ಭವಿಷ್ಯದ ಜತೆಗೆ ಆಟವಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ, ಪೋಷಕರಿಗೆ, ಶಿಕ್ಷಕರಿಗೆ ಹಾಗೂ ಶಾಲಾ ಆಡಳಿತ ಮಂಡಳಿಗೆ ಮಾನಸಿಕ ಒತ್ತಡ ಹಾಗೂ ದೈಹಿಕ ತೊಂದರೆ ಉಂಟು ಮಾಡುತ್ತಿದೆ
ಸುಪ್ರೀಂ ಕೋರ್ಟ್ ನ್ಯಾಯಪೀಠ

ರಾಜ್ಯ ಸರ್ಕಾರ ತರಾತುರಿಯಲ್ಲಿ ಪರೀಕ್ಷೆ ನಡೆಸಿದೆ. ಇದರಿಂದ, ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ. ಸೋಮವಾರವೇ ಫಲಿತಾಂಶ ಪ್ರಕಟಿಸಬೇಕೆಂದು ಶನಿವಾರ ತಡರಾತ್ರಿ ಆದೇಶ ಹೊರಡಿಸಲಾಗಿದೆ. ಅರ್ಜಿದಾರರಿಗೆ ನ್ಯಾಯಾಲಯದಿಂದ ಪರಿಹಾರ ಸಿಗಬಾರದು ಎಂಬುದು ಸರ್ಕಾರದ ಉದ್ದೇಶ
ಕೆ.ವಿ.ಧನಂಜಯ, ವಕೀಲ

‘ಎಜಿ ಅಭಿಪ್ರಾಯ ಪಡೆದು ಮುಂದಿನ ಕ್ರಮ’

ಬೆಂಗಳೂರು: ‘ರಾಜ್ಯ ಪಠ್ಯಕ್ರಮದ ಶಾಲೆಗಳ 5, 8 ಮತ್ತು 9ನೇ ತರಗತಿ ಮೌಲ್ಯಾಂಕನ ವಿಚಾರವಾಗಿ ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ತೀರ್ಪಿಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆದು ಮುಂದುವರಿಯುತ್ತೇವೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ತಿಳಿಸಿದರು.

ತೀರ್ಪು ಕುರಿತಂತೆ ಪ್ರತಿಕ್ರಿಯಿಸಿದ ಅವರು, ‘ಈಗಾಗಲೇ ಪರೀಕ್ಷೆ ಮುಗಿದು, ಸೋಮವಾರ ಫಲಿತಾಂಶವನ್ನು ಕೂಡ ಪ್ರಕಟಿಸಲಾಗಿದೆ. 2023-24ನೇ ಸಾಲಿನ ಶೈಕ್ಷಣಿಕ ವರ್ಷ ಪೂರ್ಣಗೊಂಡಿದ್ದು, ಮಂಗಳವಾರದಿಂದ ಬೇಸಿಗೆ ರಜೆ ನೀಡಲಾಗಿದೆ’ ಎಂದರು.

ಗೊಂದಲ ನಿವಾರಿಸಿ: ‘ರಾಜ್ಯ ಹೈಕೋರ್ಟ್‌ನ ದ್ವಿಸದಸ್ಯ ಪೀಠ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಆರ್‌ಟಿಇ ಕಾಯ್ದೆ ಉಲ್ಲಂಘಿಸಿ ನಡೆಸಿದ ಪರೀಕ್ಷೆ ಅಸಿಂಧುವಾಗಿದೆ. ಹೀಗಾಗಿ, 5, 8 ಮತ್ತು 9ನೇ ತರಗತಿ ಫಲಿತಾಂಶ ಪ್ರಕಟಿಸುವಂತೆ ಇಲ್ಲ. ಒಂದು ವೇಳೆ ಪ್ರಕಟಿಸಿದ್ದರೆ ಮಾನ್ಯತೆ ನೀಡುವಂತಿಲ್ಲ. ಹೀಗಾಗಿ ಮಕ್ಕಳಿಗೆ ಮತ್ತು ಪೋಷಕರಿಗೆ ಉಂಟಾಗಿರುವ ಗೊಂದಲ ನಿವಾರಿಸಲು ಇಲಾಖೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು’ ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಆಗ್ರಹಿಸಿದ್ದಾರೆ.

ಯುಗಾದಿ — ಯುಗಾದಿ ಹಬ್ಬದ ಅಂಗವಾಗಿ ಬೆಂಗಳೂರಿನ ಗಾಂಧಿ ಬಜಾರ್ ಮುಖ್ಯರಸ್ತೆಯಲ್ಲಿ ಸಾರ್ವಜನಿಕರು ಮಾವಿನ ತೋರಣ, ಬೇವಿನ ಸೊಪ್ಪು, ಹೂವು ಹಾಗೂ ಹಣ್ಣು ಖರೀದಿಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ

14 ಕ್ಷೇತ್ರ: 247 ಮಂದಿ ಕಣದಲ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 26ರಂದು ಮತದಾನ ನಡೆಯಲಿರುವ ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯುವ ಅವಧಿ ಸೋಮವಾರ ಮುಕ್ತಾಯಗೊಂಡಿದ್ದು, ಒಟ್ಟು 247 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಒಟ್ಟು 358 ಮಂದಿ ನಾಮಪತ್ರ ಸಲ್ಲಿಸಿದ್ದರು. 419 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 74 ನಾಮಪತ್ರಗಳನ್ನು ಪರಿಶೀಲನೆ ವೇಳೆ ಚುನಾವಣಾಧಿಕಾರಿಗಳು ತಿರಸ್ಕರಿಸಿದ್ದರು. 300 ಅಭ್ಯರ್ಥಿಗಳ ನಾಮಪತ್ರಗಳು ಸ್ವೀಕೃತವಾಗಿದ್ದವು. ಶನಿವಾರ ಒಬ್ಬರು ಮತ್ತು ಸೋಮವಾರ 52 ಮಂದಿ ನಾಮಪತ್ರಗಳನ್ನು ಹಿಂಪಡೆದಿದ್ದಾರೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ಪೈಕಿ 226 ಮಂದಿ ಪುರುಷರು ಹಾಗೂ 21 ಮಹಿಳೆಯರಿದ್ದಾರೆ. ಉಡುಪಿ–ಚಿಕ್ಕಮಗಳೂರು, ಹಾಸನ ಮತ್ತು ಕೋಲಾರ ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳೇ ಇಲ್ಲ. ಮೊದಲ ಹಂತದ ಚುನಾವಣೆ ನಡೆಯುವ 14 ಕ್ಷೇತ್ರಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ಕಣದಲ್ಲಿಲ್ಲ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಅತ್ಯಧಿಕ 29 ಅಭ್ಯರ್ಥಿಗಳಿದ್ದಾರೆ. ನಂತರದ ಸ್ಥಾನಗಳಲ್ಲಿ ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ ಮತ್ತು ಬೆಂಗಳೂರು ಉತ್ತರ ಕ್ಷೇತ್ರಗಳಿವೆ.

6ನೇ ಪುಟ ನೋಡಿ

ಯುಗಾದಿಯ ಶುಭಾಶಯಗಳು

ಯುಗಾದಿ ಬಾಳಿನ ಸಂತಸದ ವಸಂತ. ಬೇವು–ಬೆಲ್ಲ ಮೆದ್ದು, ಹೊಸತನ್ನು ಹೊದ್ದು ಸುಖ–ನೆಮ್ಮದಿ ಸಿಗುವಂತಾಗಲಿ. ಈ ಶುಭದಿನ ಅನುದಿನವೂ ನಿಮ್ಮದಾಗಲಿ

ಯುಗಾದಿ ಪ್ರಯುಕ್ತ ಕಚೇರಿಗೆ ಮಂಗಳವಾರ ಬಿಡುವು. ಹೀಗಾಗಿ ಬುಧವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕೇಂದ್ರ–ರಾಜ್ಯ ಸಂಘರ್ಷ ಸಲ್ಲ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಅನುದಾನ ಬಿಡುಗಡೆ ಸೇರಿದಂತೆ ಯಾವುದೇ ವಿಷಯದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷ ಸಲ್ಲದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಭಿಪ್ರಾಯಪಟ್ಟಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ಬರ ಪರಿಹಾರವಾಗಿ ₹35,162 ಕೋಟಿಯನ್ನು ತಕ್ಷಣ ಹಣ ಬಿಡುಗಡೆಗೊಳಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು. ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರನ್ನು ಒಳಗೊಂಡ ಪೀಠವು, ‘ಇತ್ತೀಚಿನ ದಿನಗಳಲ್ಲಿ ವಿವಿಧ ರಾಜ್ಯ ಸರ್ಕಾರಗಳು ಅರ್ಜಿ ಸಲ್ಲಿಸುತ್ತಿರುವುದನ್ನು ನಾವು ಗಮನಿಸಿದ್ದೇವೆ’ ಎಂದು ಹೇಳಿತು.

7ನೇ ಪುಟ ನೋಡಿ

ಕೇಂದ್ರಕ್ಕೆ ತರಾಟೆ: ಕೃಷ್ಣ ಬೈರೇಗೌಡ

‘ಅರ್ಜಿ ವಿಚಾರಣೆ ವೇಳೆ ಪೀಠವು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಅರ್ಜಿ ಬಗ್ಗೆ ಎರಡು ವಾರಗಳಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ಕೇಂದ್ರಕ್ಕೆ ಸೂಚಿಸಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. 7

‘ಸುಪ್ರೀಂ’ಗೂ ತಪ್ಪು ಮಾಹಿತಿ– ಸಿಎಂ

‘ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ನೀಡಬೇಕಾಗಿರುವ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಹ ತಪ್ಪು ಮಾಹಿತಿ ನೀಡಿ, ನ್ಯಾಯಾಲಯದ ಹಾದಿ ತಪ್ಪಿಸುವ ಪ್ರಯತ್ನ ಮಾಡುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ. 7

ಕೇಂದ್ರ ತಂಡವು ವರದಿ ಸಲ್ಲಿಸಿದ ಒಂದು ತಿಂಗಳೊಳಗೆ ಬರ ಪರಿಹಾರ ಬಿಡುಗಡೆಗೆ ಕೇಂದ್ರ ತೀರ್ಮಾನ ತೆಗೆದುಕೊಳ್ಳಬೇಕು. ಆದರೆ, ಈ ಅವಧಿಯು 2023ರ ಡಿಸೆಂಬರ್‌ಗೆ ಮುಗಿದಿದೆ. ಕೇಂದ್ರ ಚುನಾವಣಾ ಆಯೋಗವನ್ನು ಪ್ರತಿವಾದಿಯನ್ನಾಗಿ ಮಾಡಬೇಕು
ಕಪಿಲ್ ಸಿಬಲ್
ಕರ್ನಾಟಕ ಸರ್ಕಾರದ ಪರ ವಕೀಲ

ಬರ ಪರಿಹಾರ ಬಿಡುಗಡೆಗೆ ಆಗ್ರಹಿಸಿ ಕರ್ನಾಟಕವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಅದರ ಬದಲು, ಕೇಂದ್ರ ಸರ್ಕಾರದ ಯಾರಾದರೂ ಅಧಿಕಾರಿಗಳೊಂದಿಗೆ ಒಂದು ಹಂತದವರೆಗೆ ಮಾತುಕತೆ ನಡೆಸಿದ್ದರೆ ಸಮಸ್ಯೆಯನ್ನು ಪರಿಹರಿಸಬಹುದಿತ್ತು
ತುಷಾರ್ ಮೆಹ್ತಾ
ಕೇಂದ್ರದ ಸಾಲಿಸಿಟರ್ ಜನರಲ್

ಧಾರವಾಡ ಕ್ಷೇತ್ರ: ಪ್ರಲ್ಹಾದ ಜೋಶಿ ಮೇಲಿನ ಸಿಟ್ಟಿನಿಂದ ಸ್ಪರ್ಧೆ

ಅಖಾಡಕ್ಕೆ ದಿಂಗಾಲೇಶ್ವರ ಸ್ವಾಮೀಜಿ

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಸಂಸದ ಪ್ರಲ್ಹಾದ ಜೋಶಿ ವಿರುದ್ಧ ತೊಡೆ ತಟ್ಟಿರುವ ಶಿರಹಟ್ಟಿ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ.

ಬಿಜೆಪಿಯ ಪ್ರಲ್ಹಾದ ಜೋಶಿ ಹಾಗೂ ಕಾಂಗ್ರೆಸ್‌ನ ವಿನೋದ ಅಸೂಟಿ ನಡುವಿನ ಸ್ಪರ್ಧೆ ಈಗ ಸ್ವಾಮೀಜಿ ಅವರ ಪ್ರವೇಶದಿಂದ ತ್ರಿಕೋನ ಸ್ಪರ್ಧೆಯಾಗಿ ಮಾರ್ಪಟ್ಟಿದೆ.

‘ರಾಷ್ಟ್ರೀಯ ಪಕ್ಷಗಳ ನಾಯಕರು ಅಲ್ಲದೇ ಭಕ್ತರು ಧಾರವಾಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಒತ್ತಡ ಹೇರುತ್ತಿದ್ದಾರೆ’ ಎಂದು ಸ್ವಾಮೀಜಿ ಎರಡು ವಾರದ ಹಿಂದೆಯೇ ಹೇಳಿದ್ದರು. ನಂತರ ಧಾರವಾಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ವಿರುದ್ಧ ನಿರಂತರ ಹರಿಹಾಯ್ದರು. ಜೋಶಿ ಬದಲು ಲಿಂಗಾಯತ ನಾಯಕರಿಗೆ ಟಿಕೆಟ್ ನೀಡುವಂತೆ ಮಾರ್ಚ್ 31ರವರೆಗೆ ಗಡುವು ಕೊಟ್ಟರು. ಆದರೆ, ಬಿಜೆಪಿ ಹೈಕಮಾಂಡ್ ಸ್ಪಂದಿಸಲಿಲ್ಲ.

‘ಪ್ರಲ್ಹಾದ ಜೋಶಿ ಅವರ ಸೇಡಿನ ರಾಜಕಾರಣದಿಂದ ವೀರಶೈವ ಲಿಂಗಾಯತ, ಕುರುಬ, ಪರಿಶಿಷ್ಟ ಸಮುದಾಯದ ನಾಯಕರು ಮಾನಸಿಕ, ಆರ್ಥಿಕ ಮತ್ತು ರಾಜಕೀಯವಾಗಿ ಕುಸಿದಿದ್ದಾರೆ. ಜಗದೀಶ ಶೆಟ್ಟರ್‌ನಂತಹ ನಾಯಕರ ಟಿಕೆಟ್ ತಪ್ಪಿಸುವಲ್ಲಿ ಜೋಶಿ ಕೈವಾಡವಿದೆ’ ಎಂದು ಸ್ವಾಮೀಜಿ ಆರೋಪಿಸಿದ್ದರು.

6ನೇ ಪುಟ ನೋಡಿ

ದಾವಣಗೆರೆ: ಬಂಡಾಯದ ಬಿಸಿ

ವಿನಯ್ ಕುಮಾರ್

ದಾವಣಗೆರೆ: ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ, ಕಾಂಗ್ರೆಸ್ ಮುಖಂಡ ಜಿ.ಬಿ. ವಿನಯ್‌ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಧ್ಯಸ್ಥಿಕೆಯ ಹೊರತಾಗಿಯೂ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.

ಸೋಮವಾರ ಇಲ್ಲಿ ತಮ್ಮ ಬೆಂಬಲಿಗರ ಸಭೆ ನಡೆಸಿದ ಬಳಿಕ ವಿನಯ್‌ಕುಮಾರ್ ಸ್ಪರ್ಧಿಸುವುದಾಗಿ ಘೋಷಿಸಿದರು.

‘ಚುನಾವಣೆಯಲ್ಲಿ ಗೆದ್ದ ಬಳಿಕ ಸಿದ್ದರಾಮಯ್ಯ ಅವರಿಗೆ ಮುಖ ತೋರಿಸುತ್ತೇನೆ. ನಾಯಕರ ಮಾತಿಗಿಂತ ಜನರ ಅಭಿಪ್ರಾಯಕ್ಕೆ ನಾನು ಮನ್ನಣೆ ನೀಡುತ್ತೇನೆ. ಇದೊಂದು ಧರ್ಮ ಸಂಕಟ. ಪಕ್ಷೇತರ ಸ್ಪರ್ಧೆ ಸುಲಭ ಅಲ್ಲ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ನಾನು ಜನರ ತೀರ್ಮಾನದಂತೆ ಸ್ಪರ್ಧಿಸುವ ತೀರ್ಮಾನ ಮಾಡಿದ್ದೇನೆ’ ಎಂದು ಹೇಳಿದರು.

‘ಜಿಲ್ಲೆಯಲ್ಲಿ ಎರಡು ಪ್ರಮುಖ ಪಕ್ಷಗಳಲ್ಲೂ ಕುಟುಂಬ ರಾಜಕಾರಣ ನಡೆಯುತ್ತಿರುವುದರಿಂದ ಜನರಲ್ಲಿ ಅಸಮಾಧಾನವಿದೆ. ಇಬ್ಬರ ವಿರುದ್ಧವೂ ಜನರು ಮತ ಚಲಾಯಿಸಲಿದ್ದು, ಆ ಮತಗಳು ನನಗೆ ಬೀಳಲಿವೆ. ಹೊಸಬರಿಗೆ ಅವಕಾಶ ಸಿಗಬೇಕು ಎಂದೇ ನನ್ನ ಹೋರಾಟ’ ಎಂದು ಸುದ್ದಿಗಾರರಿಗೆ ತಿಳಿಸಿದರು.

60 Years of Excellence 1962-2022 Margadarsi
RAMOJI GROUP

ಈ ಹೊಸ ವರ್ಷದಲ್ಲಿ ನಿಮ್ಮ ಮತ್ತು ನಿಮ್ಮ ಪ್ರೀತಿಪಾತ್ರರ ಜೀವನ ಸುಖಮಯವಾಗಿರುವಂತೆ ನೋಡಿಕೊಳ್ಳಿ.
ಮೊದಲೇ ಯೋಜಿಸಿ. ಮಾರ್ಗದರ್ಶಿ ಚಿಟ್ಸ್‌ನೊಂದಿಗೆ ಉಳಿತಾಯ ಮಾಡಿ.

ಈ ಹೊಸ ವರ್ಷದಲ್ಲಿ ನಿಮ್ಮ ಮತ್ತು ನಿಮ್ಮ ಪ್ರೀತಿಪಾತ್ರರ ಜೀವನ ಸುಖಮಯವಾಗಿರುವಂತೆ ನೋಡಿಕೊಳ್ಳಿ, ಮುಂಚಿತವಾಗಿ ಯೋಜಿಸಿ. ಮಾರ್ಗದರ್ಶಿಯೊಂದಿಗೆ ಉಳಿಸಿ. ಹಿಂದೆಂದಿಗಿಂತಲೂ ಸಂಭ್ರಮದಿಂದ ಯುಗಾದಿಯನ್ನು ಆಚರಿಸಿ! ಮಾರ್ಗದರ್ಶಿ ಚಿಟ್‌ಗೆ ಚಂದಾದಾರರಾಗಿ ಮತ್ತು ನಿಮ್ಮ ಆರ್ಥಿಕ ಮೈಲಿಗಲ್ಲುಗಳನ್ನು ಸುಲಭವಾಗಿ ಸಾಧಿಸಿ. ನಿಮ್ಮ ಅಗತ್ಯಗಳಿಗೆ ಸರಿಹೊಂದುವಂತೆ ವಿನ್ಯಾಸಗೊಳಿಸಲಾದ ವಿವಿಧ ಚಿಟ್ ಯೋಜನೆಗಳ ಬಗ್ಗೆ ತಿಳಿದುಕೊಳ್ಳಿ, ಅನನ್ಯ ಹಣಕಾಸು ಸಾಧನವು ನಿಮಗೆ ಉಳಿಸಲು, ಲಾಭಾಂಶಗಳನ್ನು ಗಳಿಸಲು ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಸಮಯದಲ್ಲಿ ದೊಡ್ಡ ಮೊತ್ತ ಹಿಂಪಡೆಯಲು ನಿಮಗೆ ಸ್ವಾತಂತ್ರ್ಯವನ್ನು ನೀಡುತ್ತದೆ. ಅರವತ್ತು ಲಕ್ಷಕ್ಕೂ ಹೆಚ್ಚು ಚಂದಾದಾರರು ಮಾರ್ಗದರ್ಶಿ ಚಿಟ್‌ನಿಂದ ಪ್ರಯೋಜನ ಪಡೆದಿದ್ದಾರೆ. ಇಂದೇ ನಮ್ಮೊಂದಿಗೆ ಮಾತನಾಡಿ, ಜೀವನವನ್ನು ಸುಖಮಯವಾಗಿಸಿ.

ಯುಗಾದಿಯ ಶುಭಾಶಯಗಳು

1962 ರಲ್ಲಿ ಸ್ಥಾಪಿತವಾಗಿದೆ
60 ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ ಸಲ್ಲಿಸಿದ್ದೇವೆ
ಕ್ಯುಮುಲೇಟಿವ್ ಆಕ್ಷನ್ ಟರ್ನೋವರ್ ₹9,396 ಕೋಟಿ
ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ 113 ಶಾಖೆಗಳು

ಮಾರ್ಗದರ್ಶಿ
ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನೀವು ಯೋಜಿಸಿದಾಗ ಜೀವನ ಸರಳ
www.margadarsi.com

ರಿಜಿಸ್ಟರ್ಡ್ ಆಫೀಸ್: ನಂ.ಎಸ್-801-802, ಮಣಿಪಾಲ್ ಸೆಂಟರ್, ನಂ.47, ಡಿಕೆನ್ಸನ್ ರೋಡ್, ಬೆಂಗಳೂರು - 560 042
ಫೋನ್: 080-25322939 | ಕರೆಮಾಡಿ 1800 425 7373 (ದರ ರಹಿತ) | ಅಥವಾ 56263ಗೆ <MARG>ಎಸ್‌ಎಂಎಸ್ ಮಾಡಿ
For more details scan this QR-Code

ಸಂಸದೆ ಕಾರಿನ ಬಾಗಿಲು ತಾಗಿ ಅಪಘಾತ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರ ಕಾರಿನ ಬಾಗಿಲು ದ್ವಿಚಕ್ರ ವಾಹನಕ್ಕೆ ತಾಗಿ ಅಪಘಾತ ಸಂಭವಿಸಿದ್ದು, ಸವಾರ ಪ್ರಕಾಶ್ (62) ಎಂಬವರು ಮೃತಪಟ್ಟಿದ್ದಾರೆ. ಅವರು ಬಿಜೆಪಿ ಕಾರ್ಯಕರ್ತರೂ ಆಗಿದ್ದರು.

‘ಕೆ.ಆರ್. ಪುರದ ಗಣಪತಿ ದೇವಸ್ಥಾನ ಬಳಿ ಸೋಮವಾರ ಮಧ್ಯಾಹ್ನ ಈ ಅಪಘಾತ ಸಂಭವಿಸಿದೆ. ಶೋಭಾ ಕರಂದ್ಲಾಜೆ ಅವರ ಕಾರಿನ ಚಾಲಕ ಹಾಗೂ ಖಾಸಗಿ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೆ.ಆರ್.ಪುರಕ್ಕೆ ಬಂದಿದ್ದ ಶೋಭಾ ಅವರು ಪ್ರಚಾರದಲ್ಲಿ ತೊಡಗಿದ್ದರು. ಇದೇ ಸಂದರ್ಭದಲ್ಲಿ ಅವರ ಕಾರನ್ನು ರಸ್ತೆ ಪಕ್ಕದಲ್ಲಿ ನಿಲ್ಲಿಸಲಾಗಿತ್ತು. ಚಾಲಕ ಕಾರಿನಲ್ಲಿದ್ದರು. ಟಿ.ಸಿ. ಪಾಳ್ಯದ ಪ್ರಕಾಶ್ ಅವರು ದ್ವಿಚಕ್ರ ವಾಹನ ಚಲಾಯಿಸಿಕೊಂಡು ಹೊರಟಿದ್ದರು. ಅದೇ ಸಂದರ್ಭದಲ್ಲಿ ಕಾರಿನ ಚಾಲಕ, ದಿಢೀರ್ ಬಾಗಿಲು ತೆರೆದಿದ್ದರು. ವೇಗವಾಗಿ ಹೊರಟಿದ್ದ ಪ್ರಕಾಶ್ ಅವರ ದ್ವಿಚಕ್ರ ವಾಹನ, ಕಾರಿನ ಬಾಗಿಲಿಗೆ ತಾಗಿತ್ತು. ವಾಹನ ಸಮೇತ ಪ್ರಕಾಶ್ ರಸ್ತೆಗೆ ಬಿದ್ದಿದ್ದರು. ಅದೇ ಮಾರ್ಗದಲ್ಲಿ ಹೊರಟಿದ್ದ ಖಾಸಗಿ ಬಸ್ಸಿನ ಚಕ್ರ, ಪ್ರಕಾಶ್ ದೇಹದ ಮೇಲೆ ಹರಿಯಿತು. ತೀವ್ರ ಗಾಯಗೊಂಡಿದ್ದ ಪ್ರಕಾಶ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ಅಪಘಾತ ಬಗ್ಗೆ ಪ್ರತಿಕ್ರಿಯಿಸಿದ ಶೋಭಾ ಕರಂದ್ಲಾಜೆ ಅವರು, ‘ಆಕಸ್ಮಿಕ ಅಪಘಾತದಿಂದ ನಮ್ಮ ನಿಷ್ಠಾವಂತ ಕಾರ್ಯಕರ್ತ ಪ್ರಕಾಶ್ ಮೃತಪಟ್ಟಿದ್ದಾರೆ. ಇವರ ಸಾವಿನಿಂದ ನೋವಾಗಿದೆ. ಅವರ ಕುಟುಂಬದ ಜೊತೆ ನಾವಿದ್ದೇವೆ. ಪಕ್ಷದ ವತಿಯಿಂದ ಎಲ್ಲ ಸವಲತ್ತು ಹಾಗೂ ಪರಿಹಾರ ಕಲ್ಪಿಸುವ ವ್ಯವಸ್ಥೆ ಮಾಡಲಾಗುವುದು’ ಎಂದು ಹೇಳಿದರು.

ದ.ಭಾರತದ ಪ್ರಮುಖ ವಾಯುಯಾನ ಕೇಂದ್ರವಾಗಿ ಕೆಐಎ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು (ಕೆಐಎ) ದಕ್ಷಿಣ ಭಾರತದ ಪ್ರಮುಖ ವಾಯುಯಾನ ಕೇಂದ್ರವಾಗಿ (ಪ್ರೀಮಿಯರ್ ಏವಿಯೇಷನ್ ಹಬ್) ಅಭಿವೃದ್ಧಿ ಪಡಿಸಲು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ಸೋಮವಾರ ಏರ್ ಇಂಡಿಯಾ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.

‘ವಿಮಾನ ನಿಲ್ದಾಣದಲ್ಲಿ ದಕ್ಷ ಹಾಗೂ ಸುರಕ್ಷಿತ ಕಾರ್ಯಾಚರಣೆ ನಡೆದರೆ ಗ್ರಾಹಕರಿಗೆ ಉತ್ತಮ ಅನುಭವ ಸಿಗಲಿದೆ’ ಎಂದು ಏರ್ ಇಂಡಿಯಾದ ಮುಖ್ಯಸ್ಥ ಕ್ಯಾಂಪ್‌ಬೆಲ್ ವಿಲ್ಸನ್ ಹೇಳಿದ್ದಾರೆ.

₹31 ಕೋಟಿ ನಕಲಿ ನೋಟು ಜಪ್ತಿ

₹40 ಲಕ್ಷಕ್ಕೆ ₹1 ಕೋಟಿ ನೀಡುವ ಆಮಿಷ ಒಡ್ಡಿ ವಂಚನೆ • ಐವರ ಬಂಧನ

ಪ್ರಜಾವಾಣಿ ವಾರ್ತೆ

ಸುಧೀರ್

ಚಂದ್ರಶೇಖರ್

ವಿನಯ್

ಕಿಶೋರ್

ತೀರ್ಥ ರಿಷಿ

ಬೆಂಗಳೂರು: ಕಪ್ಪು ಹಣ ವರ್ಗಾವಣೆ ಹೆಸರಿನಲ್ಲಿ ಜನರನ್ನು ವಂಚಿಸುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಪೊಲೀಸರು, ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ₹ 30.91 ಕೋಟಿ ಮೊತ್ತದ ನಕಲಿ ನೋಟುಗಳನ್ನೂ ಜಪ್ತಿ ಮಾಡಿದ್ದಾರೆ.

‘ಬೆಂಗಳೂರಿನ ಸುಧೀರ್, ಕಿಶೋರ್, ತೀರ್ಥ ರಿಷಿ, ವಿನಯ್ ಹಾಗೂ ಚಂದ್ರಶೇಖರ್ ಬಂಧಿತರು. ತಮ್ಮದೇ ಜಾಲ ಸೃಷ್ಟಿಸಿಕೊಂಡಿದ್ದ ಆರೋಪಿಗಳು, ಟ್ರಸ್ಟ್ ಹಾಗೂ ಸಂಸ್ಥೆಗಳ ಸದಸ್ಯರನ್ನು ಸಂಪರ್ಕಿಸಿ ವಂಚಿಸುತ್ತಿದ್ದರು. ಟ್ರಸ್ಟ್ ಸದಸ್ಯರೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಸೆರೆಹಿಡಿಯಲಾಗಿದೆ’ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಆರೋಪಿ ಸುಧೀರ್ ವಿರುದ್ಧ ಬಸವನಗುಡಿ ಹಾಗೂ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಈ ಹಿಂದೆಯೂ ಪ್ರಕರಣಗಳು ದಾಖಲಾಗಿದ್ದವು. ಪ್ರಮುಖ ಆರೋಪಿ ಎನ್ನಲಾದ ಕಿಶೋರ್ ವಿರುದ್ಧ ಮುಂಬೈನಲ್ಲಿ ಪ್ರಕರಣಗಳಿವೆ. ಅಲ್ಲಿಯೇ ಈತ, ನಕಲಿ ನೋಟುಗಳನ್ನು ಬಳಸಿ ಜನರನ್ನು ವಂಚಿಸಿರುವುದು ಗೊತ್ತಾಗಿದೆ. ಈ ಬಗ್ಗೆ ಮುಂಬೈ ಪೊಲೀಸರಿಂದ ಹೆಚ್ಚಿನ ಮಾಹಿತಿ ಪಡೆಯಬೇಕಿದೆ’ ಎಂದು ಹೇಳಿದರು.

‘ರೈಸ್ ಪುಲ್ಲಿಂಗ್, ಹವಾಲಾ ಸೇರಿದಂತೆ ಹಲವು ದಂಧೆಗಳಲ್ಲಿ ಆರೋಪಿಗಳು ಭಾಗಿಯಾಗಿದ್ದ ಮಾಹಿತಿ ಇದೆ. ಆರೋಪಿಗಳಿಂದ ಯಾರಿಗಾದರೂ ವಂಚನೆ ಆಗಿದ್ದರೆ, ಪೊಲೀಸ್ ಠಾಣೆಗೆ ದೂರು ನೀಡಬಹುದು’ ಎಂದರು.

₹ 40 ಲಕ್ಷಕ್ಕೆ ₹ 1 ಕೋಟಿ ನೀಡುವ ಭರವಸೆ: ‘ದೂರುದಾರರಿಗೆ ಕರೆ ಮಾಡಿದ್ದ ಆರೋಪಿಗಳು, ‘ಪ್ರತಿಷ್ಠಿತ ಕಂಪನಿಗಳಿಗೆ ಸೇರಿದ್ದ ₹ 100 ಕೋಟಿ ಕಪ್ಪು ಹಣ ನಗದು ರೂಪದಲ್ಲಿ ನಮ್ಮ ಬಳಿ ಇದೆ. ಇದನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಲು ಸಾಧ್ಯವಿಲ್ಲ. ನೇರವಾಗಿ ನಿಮಗೆ ಕೊಡುತ್ತೇವೆ’ ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ವ್ಯವಹಾರದ ಬಗ್ಗೆ ಮಾತುಕತೆ ಮುಂದುವರಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಕಂಪನಿಯ ಸಿಎಸ್‌ಆರ್ ದೇಣಿಗೆ ಹೆಸರಿನಲ್ಲಿ ನಿಮಗೆ ₹ 1 ಕೋಟಿ ನಗದು ಕೊಡುತ್ತೇವೆ. ಅದಕ್ಕೆ ಪ್ರತಿಯಾಗಿ ನೀವು ₹ 40 ಲಕ್ಷ ನೀಡಬೇಕು. ಈ ವ್ಯವಹಾರದಲ್ಲಿ ಮಧ್ಯಸ್ಥಿಕೆ ವಹಿಸಲು ನಮಗೆ ಶೇ 10ರಷ್ಟು ಕಮಿಷನ್ ಕೊಡಬೇಕು’ ಎಂದು ಆರೋಪಿಗಳು ಹೇಳಿದ್ದರು. ಅದಕ್ಕೂ ದೂರುದಾರ ಒಪ್ಪಿದ್ದರು’ ಎಂದು ತಿಳಿಸಿದರು.

ನೋಟುಗಳ ಕಂತೆ ಪ್ರದರ್ಶನ: ‘ದೂರುದಾರರಿಗೆ ವಿಡಿಯೊ ಕರೆ ಮಾಡಿದ್ದ ಆರೋಪಿಗಳು, ನಕಲಿ ನೋಟುಗಳ ಕಂತೆ ತೋರಿಸಿದ್ದರು. ಅವು ನಿಜವಾದ ನೋಟುಗಳೆಂದು ಹೇಳಿ ನಂಬಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳ ವರ್ತನೆಯಿಂದ ಅನುಮಾನಗೊಂಡಿದ್ದ ದೂರುದಾರ, ಸಿಸಿಬಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡ ಸಿಸಿಬಿಯ ವಿಶೇಷ ತಂಡ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ₹30.91 ಕೋಟಿ ಮೊತ್ತದ ನಕಲಿ ನೋಟುಗಳನ್ನು ಜಪ್ತಿ ಮಾಡಿದೆ. ಇದರಲ್ಲಿ ₹ 500 ಹಾಗೂ ₹2,000 ಮುಖಬೆಲೆಯ ನೋಟುಗಳಿವೆ. ಇವುಗಳನ್ನು ಎಲ್ಲಿ ಮುದ್ರಿಸಲಾಗಿತ್ತು ಎಂಬುದರ ಬಗ್ಗೆ ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.

‘ಆರೋಪಿ ಮನೆಯಲ್ಲಿ ₹ 23.49 ಲಕ್ಷ’

‘ಆರೋಪಿಯೊಬ್ಬನ ಮನೆ ಮೇಲೆ ಇತ್ತೀಚೆಗೆ ದಾಳಿ ಮಾಡಿ, ಶೋಧ ನಡೆಸಲಾಯಿತು. ಈತನ ಮನೆಯಲ್ಲಿ ₹ 23.49 ಲಕ್ಷ ನಗದು ಪತ್ತೆಯಾಗಿದ್ದು, ಜಪ್ತಿ ಮಾಡಲಾಗಿದೆ’ ಎಂದು ಕಮಿಷನರ್ ಬಿ.ದಯಾನಂದ್ ಅವರು ಹೇಳಿದರು.

ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.

ಪ್ರಧಾನ ಕಛೇರಿ: ನಂ.156, 17ನೇ ಕ್ರಾಸ್, 8ನೇ ಮುಖ್ಯ ರಸ್ತೆ,
ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು – 560 055.
Ph: 080-2334 1972, 2344 9450, 2344 2648, Fax: 080-4128 1917
E-mail: managerho@jcbank.in; gm@jcbank.in

ಬ್ಯಾಂಕು ಮತ್ತೆ ಲಾಭದತ್ತ ಮುನ್ನಡೆಯುತ್ತಿರುವ ಈ ಶುಭ ಸಂದರ್ಭದಲ್ಲಿ ನಮ್ಮೆಲ್ಲಾ ಸದಸ್ಯರು ಹಾಗೂ ಗ್ರಾಹಕರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ

ಕ್ರೋಧಿನಾಮ ಸಂವತ್ಸರ ಯುಗಾದಿ ಹಬ್ಬದ ಶುಭಾಶಯಗಳನ್ನು ಕೋರುತ್ತೇವೆ.

ಸಿಬ್ಬಂದಿ ವರ್ಗ ಹಾಗೂ ಆಡಳಿತ ಮಂಡಳಿ

JOCKEY
FACTORY SECONDS
UPTO 50% OFF*
*T & C apply
· 10 am to 8 pm · Open All Days · Master / Visa Card Accepted
INNERWEAR · LEISUREWEAR · ACTIVEWEAR · KIDSWEAR · SOCKS

Venues In Bangalore

Infantry Road: Safina Plaza, No.84/85 - 560001
Kundalahalli Gate: S K R Convention hall, Thubarahalli, Varthur Main Road, - 66
Jayanagar: Prem Chandra Kalyan Mahal, T.Mariappa Road, 2nd block, (Near Ashoka Pillar), – 11.
Banshankari: Sri Hari Kalyana Mantap, 30th Main, B.S.K. 3rd Stage, Near K.I.M.S. Hospital, - 85
J .P. Nagar 3rd Phase: Shilpa KalaMantapa, No.12, 9th Cross, Bannerghatta Road, -76
Rajarajeswari Nagar: Vasavi Mahal Kalyana Mantapa, Next To Reliance Digital, Ideal Homes I Phase - 98
Vijay Nagar: Five O Gallery, 17th Cross, M.C. Road, Near Vijay Nagar Bus Stop - 40
Mahalaxmipuram: Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next to Anupama English School, - 86
Malleswaram: The Canara Union, No. 42, 8th Main, Canara Union Road - 03
Koramangala: Apoorva International, #35A, Raheja Arcade, Opp Star Box - 95
Basavanagudi: Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.

ಮೊಬೈಲ್ ಫೋನ್ ಕಳ್ಳತನ: ಡೆಲಿವರಿ ಬಾಯ್ ಬಂಧನ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುವ ವ್ಯಕ್ತಿಗಳ ಮೊಬೈಲ್ ಫೋನ್ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಆರೋಪಿ ಸತೀಶ್ (23) ಅವರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಸತೀಶ್, ಆಹಾರ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಅದರ ಜೊತೆಯಲ್ಲೇ ಮೊಬೈಲ್ ಕಳ್ಳತನ ಮಾಡಿ ಮಾರುತ್ತಿದ್ದ.

ಈತನಿಂದ ₹ 8.50 ಲಕ್ಷ ಮೌಲ್ಯದ 15 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಫೆಬ್ರುವರಿ 24ರಂದು ವ್ಯಕ್ತಿಯೊಬ್ಬರ ಮೊಬೈಲ್ ಫೋನ್ ಕಳ್ಳತನವಾಗಿತ್ತು. ಈ ಬಗ್ಗೆ ದಾಖಲಾದ ದೂರಿನ ತನಿಖೆ ಕೈಗೊಂಡು ಆರೋಪಿಯನ್ನು ಸೆರೆಹಿಡಿಯಲಾಗಿದೆ ಎಂದರು.

₹ 9,000 ಲಂಚ ಪಡೆದ ಹಿರಿಯ ಕಾರ್ಮಿಕ ನಿರೀಕ್ಷಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಒಂದಕ್ಕೆ ಕಾರ್ಮಿಕ ಇಲಾಖೆಯಿಂದ ಪರವಾನಗಿ ನೀಡಲು ₹ 9,000 ಲಂಚ ಪಡೆದ ಕಾರ್ಮಿಕ ಭವನದ ಹಿರಿಯ ಕಾರ್ಮಿಕ ನಿರೀಕ್ಷಕ ಭೋಪಾಲ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಎಚ್‌ಬಿಆರ್ ಬಡಾವಣೆಯ ಟೀಚರ್ಸ್ ಕಾಲೋನಿಯಲ್ಲಿ ಮಂಗಳೂರು ಹೋಟೆಲ್ ಎಂಬ ಹೆಸರಿನ ಹೋಟೆಲ್ ಆರಂಭಿಸಲು ಕಾರ್ಮಿಕ ಇಲಾಖೆಯ ವೃತ್ತ 42ರ ಕಾರ್ಮಿಕ ನಿರೀಕ್ಷಕರ ಕಚೇರಿಗೆ ಪರವಾನಗಿ ಕೋರಿ ದೀಕ್ಷಿತ್ ಎಂಬುವವರು ಅರ್ಜಿ ಸಲ್ಲಿಸಿದ್ದರು. ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಪರವಾನಗಿ ವಿತರಿಸಲು ₹ 9,000 ಲಂಚ ನೀಡುವಂತೆ ಹಿರಿಯ ಕಾರ್ಮಿಕ ನಿರೀಕ್ಷಕ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–2ಕ್ಕೆ ದೂರು ನೀಡಿದ್ದರು. ಆರೋಪಿಯ ಸೂಚನೆಯಂತೆ ಶನಿವಾರ ಸಂಜೆ ಕಾರ್ಮಿಕ ಭವನಕ್ಕೆ ಹೋದ ದೀಕ್ಷಿತ್, ₹ 9,000 ಲಂಚದ ಹಣ ತಲುಪಿಸಿದರು. ತಕ್ಷಣ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತ ಪೊಲೀಸ್ ವಿಭಾಗದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–2ರ ಎಸ್‌ಪಿ ಕೆ.ವಂಶಿಕೃಷ್ಣ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ನಾಗೇಶ್, ಇನ್‌ಸ್ಪೆಕ್ಟರ್ ಹಾಲಪ್ಪ ಬಾಲದಂಡಿ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಹುಕ್ಕಾ ಬಾರ್ ಮೇಲೆ ಪೊಲೀಸರ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎರಡು ಹುಕ್ಕಾ ಬಾರ್‌ಗಳ ಮೇಲೆ ಪೊಲೀಸರು ದಾಳಿ ಮಾಡಿದ್ದು, ಗ್ರಾಹಕರು ಸೇರಿ ಹಲವರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಹುಕ್ಕಾ ಸಂಗ್ರಹ, ಮಾರಾಟ ಹಾಗೂ ಸೇವನೆಯನ್ನು ಸಂಪೂರ್ಣವಾಗಿ ನಿಷೇಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಅಷ್ಟಾದರೂ ಕೆಲವರು ಅಕ್ರಮವಾಗಿ ಹುಕ್ಕಾ ಬಾರ್ ನಡೆಸುತ್ತಿದ್ದರು. ಸಿಸಿಬಿ ಹಾಗೂ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಪ್ರತ್ಯೇಕವಾಗಿ ದಾಳಿ ಮಾಡಿದ್ದರು’ ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

‘ಅಶೋಕನಗರ ಠಾಣೆ ವ್ಯಾಪ್ತಿಯ ಹುಕ್ಕಾ ಬಾರ್‌ವೊಂದರ ಮೇಲೆ ದಾಳಿ ಮಾಡಿ ಮಾಲೀಕ, 6 ಕೆಲಸಗಾರರು ಹಾಗೂ 12 ಗ್ರಾಹಕರನ್ನು ವಶಕ್ಕೆ ಪಡೆಯಲಾಗಿದೆ. ₹ 1.20 ಲಕ್ಷ ಮೌಲ್ಯದ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ’ ಎಂದರು.

‘ಕಬ್ಬನ್ ಪಾರ್ಕ್ ಠಾಣೆ ವ್ಯಾಪ್ತಿಯಲ್ಲಿರುವ ಇನ್ನೊಂದು ಹುಕ್ಕಾ ಬಾರ್ ಮೇಲೂ ದಾಳಿ ಮಾಡಲಾಗಿದ್ದು, ಮಾಲೀಕ ಹಾಗೂ ಗ್ರಾಹಕನನ್ನು ವಶಕ್ಕೆ ಪಡೆಯಲಾಗಿದೆ. 3 ಹುಕ್ಕಾ ಪಾಟ್ ಹಾಗೂ 3 ಪೈಪ್ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ.: 01 UBL 2024-25 ದಿನಾಂಕ: 03.04.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿರುವ ಡಿಟಿಎಚ್ ಸಂಪರ್ಕಗಳ ಕೇಂದ್ರೀಕೃತ ವಾರ್ಷಿಕ ರೀ–ಚಾರ್ಜಿಂಗ್ (ಪರಿಮಾಣ 160 ನಂ.)	ರೂ. 8,46,492/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2024, 11:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: 02 UBL 2024-25 ದಿನಾಂಕ: 03.04.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ವಿವಿಧ ಇಂಜಿನಿಯರಿಂಗ್ ಕಾಮಗಾರಿಗಳಾದ ಥ್ರೂ ಟರ್ನ್ ಔಟ್ ರಿನ್ಯೂವಲ್ (ಟಿಟಿಆರ್, ಸಿಎಸ್+ಸಿಎಂಎಸ್‌ಸಿ ಮತ್ತು ಟಿಡಬ್ಲ್ಯೂಎಸ್+ಸಿಎಂಎಸ್‌ಸಿ) ಕಾರ್ಯಗಳಿಗೆ ಬೇಕಾದ ಸಿಗ್ನಲ್ ಮತ್ತು ದೂರಸಂಪರ್ಕ ಕೆಲಸಗಳು. (ಒಟ್ಟು: 270 ಸೆಟ್‌ಗಳು)	ರೂ. 52,63,766.30

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03.05.2024, 11:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: 03 UBL 2024-25 ದಿನಾಂಕ: 03.04.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಎಡಿಇಎನ್/ಪಶ್ಚಿಮ ವ್ಯಾಪ್ತಿಯಲ್ಲಿ ಪಿಹೆಚ್–29 (ಹಣಕಾಸು ವರ್ಷ 2022–23) ಅಡಿಯಲ್ಲಿ ಪ್ರಸ್ತಾವಿತ ಲೆವೆಲ್ ಕ್ರಾಸಿಂಗ್‌ಗಳ ಅಭಿವೃದ್ಧಿಗಳಿಗೆ ಬೇಕಾಗಿರುವ ಸಿಗ್ನಲಿಂಗ್ ಕಾಮಗಾರಿಗಳು.	ರೂ. 54,25,879.73

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್/ಹುಬ್ಬಳ್ಳಿ

PUB/13/AAD/PRB/SWR/2024-25

South Western Railway - SWR | SWRRLY | SWRRLY

ಮೌಢ್ಯ ವಿರೋಧಿ ಜಾಗೃತಿ

ಸೂರ್ಯಗ್ರಹಣದ ಪ್ರಯುಕ್ತ ‘ಬೆಂಗಳೂರು ಮೂಢನಂಬಿಕೆ ವಿರೋಧಿ ಒಕ್ಕೂಟದ ವತಿಯಿಂದ ‘ವೈಜ್ಞಾನಿಕ ಮನೋಧರ್ಮದೊಂದಿಗೆ ಸೂರ್ಯಗ್ರಹಣ’ ಕಾರ್ಯಕ್ರಮವನ್ನು ಸೋಮವಾರ ನಗರದ ಪುರಭವನದ ಬಳಿ ಹಮ್ಮಿಕೊಳ್ಳಲಾಯಿತು. ಪ್ರಗತಿಪರ ಸಂಘಟನೆಗಳ ಸದಸ್ಯರು ಹಣ್ಣು, ಸಿಹಿತಿನಿಸು ಒಬ್ಬಟ್ಟು, ಸಮೋಸ ಖಾದ್ಯಗಳನ್ನು ಸೇವಿಸಿ ಮೌಢ್ಯ ಕೂಡದು ಎಂದು ಸಾಂಕೇತಿಕವಾಗಿ ಸಾರಿದರು. –ಪ್ರಜಾವಾಣಿ ಚಿತ್ರ

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ

ಚುನಾವಣಾ ಪರ್ವ ದೇಶದ ಗರ್ವ – ಲೋಕಸಭಾ ಚುನಾವಣೆ–2024

ಎನ್.ಆರ್.ಚೌಕ, ಬೆಂಗಳೂರು-560 002.

ಲೋಕಸಭಾ ಸಾರ್ವತ್ರಿಕ ಚುನಾವಣೆ-2024

ವಿಷಯ: ದಿನಾಂಕ: 07.04.2024 ರಂದು ನಡೆದ ತರಬೇತಿಗೆ ಗೈರುಹಾಜರಾದ ಚುನಾವಣಾ ಕಾರ್ಯಕ್ಕೆ ನಿಯೋಜಿತ ಅಧಿಕಾರಿ/ಸಿಬ್ಬಂದಿಗಳಿಗೆ ಕಾರಣ ಕೇಳಿ ನೋಟೀಸ್ ಜಾರಿಯಾಗಿರುವ ಬಗ್ಗೆ ಮತ್ತು ಹೆಚ್ಚುವರಿ ಸಿಬ್ಬಂದಿಗಳು ಹೊಸ ತರಬೇತಿಗೆ ಗೈರುಹಾಜರಾದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ.

ಚುನಾವಣಾ ಮತಗಟ್ಟೆ ಅಧಿಕಾರಿಗಳ ನಿಯೋಜನೆ:

ಮೊದಲನೇ ಹಂತದ ಚುನಾವಣೆ ತರಬೇತಿ ದಿನಾಂಕ (ಗೈರು ಹಾಜರಾದವರಿಗೆ ಮತ್ತು ಹೆಚ್ಚುವರಿ ಸಿಬ್ಬಂದಿಗೆ)	10.04.2024, ಬುಧವಾರ ಬೆಳಿಗ್ಗೆ 9.30 ಗಂಟೆಗೆ.
ಮತಗಟ್ಟೆ ಅಧ್ಯಕ್ಷಾಧಿಕಾರಿಗಳ (PRO) ತರಬೇತಿ ಕೇಂದ್ರ	Government Pre University College 18th Cross , Malleswaram, Bengaluru-560012.
ಸಹಾಯಕ ಮತಗಟ್ಟೆ ಅಧ್ಯಕ್ಷಾಧಿಕಾರಿಗಳ (APRO) ತರಬೇತಿ ಕೇಂದ್ರ	Smt. V.H.D. Central Institute of Home Science, Sheshadri Road, Bengaluru-560 001.
ಎರಡನೇ ಹಂತದ ಚುನಾವಣೆ ತರಬೇತಿ	ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು.
ಮಸ್ಟರಿಂಗ್ ದಿನಾಂಕ	25.04.2024, ಬುಧವಾರ ಬೆಳಿಗ್ಗೆ 9.30 ಗಂಟೆಗೆ
ಮತದಾನದ ದಿನಾಂಕ	26.04.2024

ಅಂತಿಮ ಎಚ್ಚರಿಕೆ

ದಿನಾಂಕ: **07.04.2024** ರಂದು ನಡೆದ ತರಬೇತಿಗೆ ಗೈರುಹಾಜರಾದವರಿಗೆ ಪ್ರಜಾಪ್ರತಿನಿಧಿ ಕಾಯ್ದೆ 1951 ರಂತೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದು ತಮ್ಮ ನಿಯೋಜಿತ ತರಬೇತಿ ಕೇಂದ್ರಗಳಿಗೆ ಖುದ್ದು ಹಾಜರಾಗಿ ಸ್ಪಷ್ಟೀಕರಣ ನೀಡುವುದು.

ಚುನಾವಣಾ ಕೆಲಸಕ್ಕೆ ನಿಯೋಜಿಸಲಾದ ಸಿಬ್ಬಂದಿಗಳು ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಕೇಂದ್ರಗಳಲ್ಲಿ ತರಬೇತಿ, ಮಸ್ಟರಿಂಗ್ ಮತ್ತು ಮತದಾನ ಕಾರ್ಯಕ್ಕೆ ಕಡ್ಡಾಯವಾಗಿ ಹಾಜರಾಗುವುದು.

ಮುಂದುವರೆದು ಸಿಬ್ಬಂದಿಯು ಯಾರಾದರೂ ಗೈರುಹಾಜರಾದಲ್ಲಿ, ಅಂತಹವರ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆ 1951ರ ಕಲಂ 134 ರಂತೆ ಕೂಡಲೇ ಎಫ್.ಐ.ಆರ್ (FIR) ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸೇವಾ ನಿಯಮಾವಳಿಗಳಂತೆ ಮತ್ತು ಅಪರಾಧ ಕಾಯ್ದೆಯಂತೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ಚುನಾವಣೆಗೆ ಸಿಬ್ಬಂದಿಯನ್ನು ನಿಯೋಜಿಸಲು ಪ್ರತಿ ಕಛೇರಿಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದೇಶಿಸಲಾಗಿದೆ. ಸದರಿ ನೋಡಲ್ ಅಧಿಕಾರಿಯು ತಮ್ಮ ಕಛೇರಿಯ ಸಿಬ್ಬಂದಿಗೆ ಚುನಾವಣೆ ಕರ್ತವ್ಯದ ಆದೇಶಗಳನ್ನು ಹಾಗೂ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ, ಚುನಾವಣಾ ತರಬೇತಿಗೆ ಹಾಜರಾಗುವಂತೆ ನೋಡಿಕೊಳ್ಳುವ ಹಾಗೂ ಗೈರುಹಾಜರಾದವರಿಗೆ ಚುನಾವಣಾ ಕರ್ತವ್ಯಕ್ಕೆ ಹಾಜರುಪಡಿಸುವ ಜವಾಬ್ದಾರಿ ನಿರ್ವಹಿಸುವುದು. ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷ್ಯತನ ತೋರಿದ್ದಲ್ಲಿ, ನೋಡಲ್ ಅಧಿಕಾರಿ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆ 1951ರ ಕಲಂ 134 ರಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಮತಗಟ್ಟೆ ಸಿಬ್ಬಂದಿಯು ಪ್ರಿಸೈಡಿಂಗ್ ಆಫೀಸರ್ ಕೈಪಿಡಿಯನ್ನು **https://eci.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು

ಕೆ.ಎಂ.ಎಫ್ – ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 26096832/26096822/26096910 ಇಮೇಲ್: purchase@kmf.coop

ಸಂ.ಕಹಾಮ/ಖರೀದಿ/ಟೆಂಡರ್–643/2023–24 ದಿನಾಂಕ: 10.04.2024

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ)

ಬಯೋಮಾಸ್ ಫ್ಯೂಯಲ್ ಬ್ರಿಕ್ಕೆಟ್ ಉರುವಲುಗಳ ನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸರಕು ಮತ್ತು ಸೇವೆಗಳ ಸಂಗ್ರಹಣಾ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ವೆಬ್‌ಸೈಟ್ ವಿಳಾಸ https://kppp.karnataka.gov.in ಸಹಾಯವಾಣಿ ಸಂಖ್ಯೆ: : +91–8068948777/+91–8046010000 ನಿಂದ ಪಡೆಯಬಹುದಾಗಿದೆ. ಸಂಕ್ಷಿಪ್ತ ವಿವರಗಳು ಈ ರೀತಿ ಇವೆ.

ಕ್ರ.ಸಂ.	ಸಾಮಗ್ರಿ / ಘಟಕಗಳ ವಿವರ	ಪರಿಮಾಣ	ಇಎಂಡಿ (ರೂ.)
I.	ಬಯೋಮಾಸ್ ಫ್ಯೂಯಲ್ ಬ್ರಿಕ್ಕೆಟ್‌ಉರುವಲು :		
1	ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್–ರಾಮನಗರ	10000 MT	ರೂ.10,30,000/–
2	ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್–ಚನ್ನರಾಯಪಟ್ಟಣ	6000 MT	ರೂ.9,25,000/–
3	ಹಾಸನ ಪಶು ಆಹಾರಘಟಕ	900 MT	ರೂ.1,75,000/–
4	ಗುಬ್ಬಿ ಪಶು ಆಹಾರಘಟಕ	900 MT	ರೂ.1,75,000/–
5	ಧಾರವಾಡ ಪಶು ಆಹಾರಘಟಕ	500 MT	ರೂ.1,00,000/–
6	ಶಿಕಾರಿಪುರ ಪಶು ಆಹಾರಘಟಕ	700 MT	ರೂ.1,40,000/–

ಟೆಂಡರ್ ವೇಳಾಪಟ್ಟಿ: ಟೆಂಡರ್ ಶುರುವಾಗುವ ದಿನಾಂಕ : 10.04.2024 ರಿಂದ. ಟೆಂಡರ್ ಪೂರ್ವಭಾವಿ ಸಭೆ : 18.04.2024 ರಂದು ಬೆಳಗ್ಗೆ11.00 ಘಂಟೆಗೆ. ಟೆಂಡರ್ ಅಪ್ ಲೋಡಿಂಗ್ ಮಾಡಲು ಕಡೆಯ ದಿನಾಂಕ : 13.05.2024 ರಂದು 5.00 ಘಂಟೆಯವರೆಗೆ. ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 16.05.2024 ರಂದು ಬೆಳಗ್ಗೆ 11.00 ಘಂಟೆಗೆ. ವಾಣಿಜ್ಯ ಬಿಡ್‌ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಪರಿಶೀಲನೆಯ ನಂತರ. ಇತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ವೀಕ್ಷಿಸಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/– ನಿರ್ದೇಶಕರು (ಖರೀದಿ)

ಮೋಹನ ಕುಂಟಾರು, ಶ್ರವಣಕುಮಾರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೋಹನ ಕುಂಟಾರು

ಶ್ರವಣಕುಮಾರಿ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2023ನೇ ಸಾಲಿನ ‘ಸೂ.ವೆಂ. ಆರಗ ವಿಮರ್ಶಾ ಪ್ರಶಸ್ತಿ’ಗೆ ಮೋಹನ ಕುಂಟಾರು, ‘ಡಾ. ವಿಜಯಾ ಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ’ಗೆ ಟಿ.ಎಸ್. ಶ್ರವಣಕುಮಾರಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗಳು ತಲಾ ₹10 ಸಾವಿರ ನಗದು, ಸ್ಮರಣಿಕೆ ಒಳಗೊಂಡಿವೆ. ಏ.13ರಂದು ನಡೆಯಲಿರುವ ಸಮಾರಂಭದಲ್ಲಿ ಸಾಹಿತಿ ಜಾಣಗೆರೆ ವೆಂಕಟರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅವರು ತಿಳಿಸಿದ್ದಾರೆ.

ಸ್ಟೋರ್‌ಗಳು ಬೆಳಗ್ಗೆ 9 ಕ್ಕೆ ತೆರೆಯುತ್ತವೆ

Reliance

ಡಿಜಿಟಲ್ ಡಿಸ್ಕೌಂಟ್ ದಿನಗಳು

6ನೇ - 15ನೇ ಏಪ್ರಿಲ್

#AddToHeart
#MakeFriendsWithTechnology

ಈ ಯುಗಾದಿ ಪ್ರಯುಕ್ತ, ಹಿಂದೆಂದೂ ಇಲ್ಲದ ಡೀಲ್ ಗಳನ್ನು ಪಡೆಯಿರಿ

10% ವರೆಗೆ ಇನ್‌ಸ್ಟಂಟ್ ಡಿಸ್ಕೌಂಟ್*

AMERICAN EXPRESS | AU SMALL FINANCE BANK | ICICI Bank | IDFC FIRST Bank | kotak Kotak Mahindra Bank | onecard

CREDIT CARDS

ಅಥವಾ

₹15 000 ವರೆಗೆ ಕ್ಯಾಶ್‌ಬ್ಯಾಕ್*

HDB FINANCIAL SERVICES | IDFC FIRST Bank CONSUMER DURABLE LOAN | kotak Kotak Mahindra Bank

Reliance digital

PERSONALISING TECHNOLOGY

TCL | Google TV — 2 Year Warranty
*Price after cashback
146CM (58) ₹35 990* | 165CM (65) ₹47 490* | 189CM (75) ₹66 990*

SAMSUNG Neo QLED — 2 Year Warranty
Starting from ₹79 990*
BENEFITS: GET UPTO 60% OFF ON SELECT SOUNDBAR

OLED TV — 2 Year Warranty
LG SAMSUNG SONY
Starting from ₹89 990*
BENEFITS: GET MAX CASHBACK OF ₹15000/- ON LEADING BANK CARDS

LG NanoCell ULTRA BRIGHT PANEL 65NANO83 — 2 Year Warranty
165CM (65) ₹89 990*
EMIs of ₹2999*
BENEFITS: GET CASHBACK OF ₹7000/- ON LEADING BANK CARDS

	EVERDAY LAPTOP	GAMING LAPTOP	MULTI TASKING LAPTOP
	Intel® Core™ i3	Intel® Core™ i5 2050	Intel® Core™ i5
Starting from	₹29 999*	₹48 999*	₹45 999*
		EMIs of ₹4083*	EMIs of ₹3899*
	AMD R3	AMD R5 3050	AMD R5
Starting from	₹32 999*	₹56 999*	₹35 999*
		EMIs of ₹4750*	EMIs of ₹3999*

GET FREE* TROLLEY BAG WORTH ₹7500 ON LAPTOP PURCHASE

iPhone 13 128GB — EMIs OF ₹999*
SAMSUNG GALAXY A35 5G — EMIs OF ₹2583*
OnePlus Nord CE4 5G — EMIs OF ₹4167*

SIDE BY SIDE
HAIER 630L ₹64 990* EMIs of ₹5416*
LG 650L ₹88 690* EMIs of ₹7391*
SAMSUNG 653L ₹91 490* EMIs of ₹7624*

FRONT LOAD
LG 9Kg ₹36 490* EMIs of ₹3041*
IFB 8Kg ₹36 990* EMIs of ₹3083*
SAMSUNG 8Kg ₹36 990* EMIs of ₹3083*

*PRICES AFTER BANK CASHBACK

INVERTER AC 1.5T — 3 STAR
Starting from ₹25 990*

SAMSUNG INVERTER AC 1.5T AR18CY5ZAWK — 5 STAR, 5 YEARS PCB WARRANTY
PER DAY EMI STARTING FROM ₹119*

LG INVERTER AC 1.5T TS-Q19CNZE — 5 STAR, 5 YEARS PCB WARRANTY
PER DAY EMI STARTING FROM ₹129*

BENEFITS: INSTALLATION AT ₹699 + GST*

₹1000 ADDITIONAL DISCOUNT* | GET FREE ODU STAND WORTH ₹899* ON ACs

UNLIMITED DISCOUNT ON SMALL APPLIANCES
BUY
1 GET 5% OFF* | 2 GET 10% OFF* | 3 GET 15% OFF*

NOW OPEN AT
• TUMKUR, BATAWADI, OPP TO SIT COLLEGE
• ORION AVENUE MALL, BANASAWADI EAST
• VIDYARANYAPURA MAIN ROAD, NANJAPPA CIRCLE

VISIT US AT BANGALORE: • **HENNUR ROAD,** KOTHANUR • KENGERI SATELLITE TOWN • **GT WORLD MALL,** MAGADI MAIN ROAD • KR PURAM • BANASWADI • MARATHALLI • MANTRI SQUARE MALL • KORAMANGALA • PHOENIX MARKET CITY • NEXUS SHANTINIKETAN MALL • BROOKEFIELD • KAMMANAHALLI • SAHAKARA NAGAR • OPP. R T NAGAR POLICE STATION • NELAMANGALA • NAGARBHAVI • NEW BEL ROAD • BADAMI HOUSE, JP NAGAR 2ND PHASE • **VIJAYANAGAR,** TTMC • VIDYARANYAPURA MAIN ROAD • RAJARAJESHWARI NAGAR • MSR ELEMENTS MALL • **ORION MALL (RAJAJINAGAR)** • BASAWESHWARNAGAR • JAYANAGAR • JP NAGAR • BANNERGHATTA ROAD • BULL TEMPLE ROAD • HOSUR ROAD • KANAKAPURA ROAD • UTTHARAHALLI MAIN ROAD- HOBLI • T DASARAHALLI • NEELADRI ROAD- BEGUR HOBLI • YELAHANKA NEW TOWN • BOMMANAHALLI • INDIRANAGAR (12TH MAIN RD SIGNAL) • SARJAPUR ROAD • **ORION UPTOWN-** KATAMMNALLUR GATE •BANNERGHATTA ROAD • BELATHUR • **CUNNINGHAM ROAD-** • FORUM FALCON MALL • KATHRIGUPPE CIRCLE, BANASHANKARI 3RD STAGE • **HSR LAYOUT,** SECTOR 6, 17TH CROSS • MALL OF ASIA 2ND FLOOR • DEVANAHALLI MAIN ROAD • **HARALUR MAIN ROAD,** VARTHUR HOBLI • **COLLEGE ROAD,** DODDABALLAPURA. • **TUMKUR : B H ROAD,** OPP BATA SHOWROOM • **BATAWADI,** OPP TO SIT COLLEGE • **HUBLI: PRIDE ICON,** GOKUL ROAD • OPPOSITE VIDYANAGAR BRTC BUS STOP • **DHARWAD :** P B ROAD JUBILEE CIRCLE, BESIDE OSWAL TOWER • **BELGAUM :** B R AMBEDKAR ROAD • GOAVES CIRCLE • **DAVANGERE :** NEAR HOTEL POOJA INTERNATIONAL, P.B ROAD • **BELLARY :** NEAR VASAVI SCHOOL, INFANTRY ROAD • **BIJAPUR :** MAHAL BHAGATH AREA, SHIV LING ROAD • **SHIMOGA :** GROUND FLOOR KSRTC BUS TERMINAL • BEARYS CITY CENTER MALL • **HOSPET : COLLEGE ROAD,** BASAVESHWARA EXTENSION • **GULBARGA :** OPP. SBI BANK, P &T CROSS, OLD JEWARGI ROAD • ASIAN MALL, BEHIND KBN HOSPITAL, AIWAN SHAHI ROAD. • BIDAR: PAPNASH GATE ALIAYABAD, OPPOSITE TVS SHOWROOM, SHIVANAGAR. • HASSAN: BM ROAD NEAR GANDHI BAZAAR CIRCLE | **TO LOCATE YOUR NEAREST MY JIO STORE SMS LOCATE <PINCODE> TO 561611**

ಇಲ್ಲಿ ಕೂಡ ಶಾಪಿಂಗ್ ಮಾಡಿ relіancedigital.in

SHOP ANY ELECTRONICS AT MY JIO STORE | Jio DIGITAL LIFE

Unless specified, the retail prices shown are for 1 unit of the product.
Terms & Conditions Apply: General: General: Offers are on select brands & models only. Product visuals are for representational purpose only. Offers valid till stocks last. MRP of all products is inclusive of all taxes. **Up to 10% Instant Discount-** American Express – 10% Instant discount up to Rs 2,500 on Credit Card EMI transactions on purchase of Rs 15,000 & above. Offer is applicable at Reliance Digital & My Jio Stores only. **AU Bank –** 5% Instant Discount up to Rs 1,750 on Credit Card Full-swipe transactions on purchase of Rs 10,000 & above. **ICICI Bank –** 5% Instant Discount up to Rs 1,750 on Credit Card Full-swipe transactions, Flat Rs 1,000 Instant Discount on Debit Card Full-swipe transactions and 10% Instant discount up to Rs 2,500 on Credit/Debit Card EMI transactions on purchase of Rs 25,000 & above. **IDFC First Bank -** 5% Instant Discount up to Rs 1,750 on Credit Card Full-swipe transactions and 10% Instant discount up to Rs 2,500 on Credit Card EMI transactions on purchase of Rs 10,000 & above. **Kotak Mahindra Bank –** 7.5% Instant discount up to Rs 2,500 on Credit/Debit Card EMI transactions on purchase of Rs 10,000 & above. **OneCard-** 5% Instant Discount up to Rs 1,750 on Credit Card Full-swipe transactions and 10% Instant discount up to Rs 2,500 on Credit Card EMI transactions on purchase of Rs 10,000 & above. Offer is applicable at Reliance Digital, My Jio Stores and reliancedigital.in from 6th April 2024 to 15th April 2024. **Up to Rs 15,000 Cashback –** HDB Financial Services – Up to Rs 2,500 Cashback with Consumer Durable loans on Net loan of Rs 18,000 & above. IDFC First Bank - Up to Rs 15,000 Cashback with Consumer Durable loans on purchase of Rs 20,000 & above. **Kotak Mahindra Bank** - Up to Rs 4,000 Cashback with Consumer Durable loans on Gross loan of Rs 25,000 & above. Offer applicable at Reliance Digital & My Jio Stores from 6th April 2024 to 15th April 2024. Offers valid on select products only. For detailed offer terms, please visit your nearest store and read the detailed T&Cs. Please visit the website/store and read the detailed T&Cs. Reliance Retail reserves its right to amend, withdraw/modify the offers at any point of time without any notice. All disputes are subject to jurisdiction of Courts in Mumbai only.

HONDA

Shine 100

ವೀಡಿಯೋ, ಆನಂದಿಸಲು QR ಕೋಡ್ ಸ್ಕ್ಯಾನ್ ಮಾಡಿ.

ಯುಗಾದಿ ಹಬ್ಬದ ಶುಭಾಶಯಗಳು

₹ 66600/- ಎಕ್ಸ್-ಶೋರೂಂ ಬೆಲೆ (ಕರ್ನಾಟಕ)

BOOK ONLINE NOW!
www.honda2wheelersindia.com

*ನಿಯಮ ಮತ್ತು ಷರತ್ತುಗಳು ಅನ್ವಯ. ಚಿತ್ರದಲ್ಲಿ ತೋರಿಸಿದ ಉತ್ಪನ್ನವು ಮಾರ್ಕೆಟ್‌ನಲ್ಲಿ ಲಭ್ಯವಿರುವ ಅಸಲು ಉತ್ಪನ್ನಕ್ಕಿಂತ ಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಿದ ಅಕ್ಸೆಸರಿಗಳು ಪ್ರಮಾಣಿತ ಉತ್ಪನ್ನದ ಭಾಗವಾಗಿಲ್ಲದಿರಬಹುದು.

ಡೌನ್ ಪೇಮೆಂಟ್	ಕಡಿಮೆ EMI	ಕಡಿಮೆ ROI	ಇಲ್ಲ
1999*	₹1999*	@ 9.99%*	ಹೈಪೊಥಿಕೇಶನ್*

ಡೀಲರ್ ವಿವರಗಳಿಗೆ 7230032200 ಗೆ WhatsApp ಅಥವಾ ಮಿಸ್ಡ್ ಕಾಲ್ ಮಾಡಿ ಅಥವಾ QR Code ಸ್ಕ್ಯಾನ್ ಮಾಡಿ

CLICK BOOK RELAX
Honda 2Wheelers
BOOK NOW

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

Honda Exclusive Authorised Dealerships: **Ananda Honda** - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; **Anekal Honda** - **ANEKAL:** 080-27830234, 9880417779; **City Honda** - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; **Haiku Honda** - **DOMLUR:** 49656565, 9342432156; **INDIRANAGAR:** 9844478636; **Dhruvdesh Honda** - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; **Planet Honda** - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; **Raja Honda** - **KORAMANGALA:** 08067329000,9035310055; **Prime Honda** - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; **Silicon Honda** - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; **Saphire Honda** - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; **VFM Honda** - **KR PURAM:** 9071858885, 9071858881; **HENNUR ROAD:** 9108989817, 9108989818; **Tansi Honda** - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; **Turbo Honda** - **DODDABALLAPURA:** 7022620885; **NELAMANAGALA:** 080-27722333, 7022008894; **Wings Honda** - **HOSKOTE:** 7676907272; **MALUR:** 7676155600; **TC PALYA:** 9590815959; **Sri Kausthub Honda** - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; **Namma Honda** - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; **Shankar Honda** - **GOWRIBIDANUR:** 9900007422/33; **SIDLAGHATTA:** 9611596113; **Century Honda** - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; **Shantinath Honda** - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; **Honey Honda** - **PAVAGADA:** 9535941215; **Annapoorna Honda** - **MADHUGIRI:** 9886627429; **Vignesh Honda** - **TIPTUR:** 9886711161; **TURUVEKERE:** 9448214014; **Sri Srinivasa Honda** - **CHIKKANAYAKANAHALLI:** 8722522221; **Prestige Honda** - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; **ART Honda** - **BIDADI:** 9945966771, 9164871007; **Springs Honda** - **KENGERI:** 9513771114; **Nideesh Honda** - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ಪಿಎಸ್ಐ ಜಗದೀಶ್ ಹತ್ಯೆ: ಇಬ್ಬರಿಗೆ ಸಜೆ, ಮೂವರ ಖುಲಾಸೆ

ಜಗದೀಶ್

ದೊಡ್ಡಬಳ್ಳಾಪುರ: ಒಂಬತ್ತು ವರ್ಷದ ಹಿಂದೆ ನಡೆದ ನಗರ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಜಗದೀಶ್ ಹತ್ಯೆ ಪ್ರಕರಣದ ಐವರು ಆರೋಪಿಗಳ ಪೈಕಿ ಮೂವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಸೋಮವಾರ ಖುಲಾಸೆಗೊಳಿಸಿದೆ. ಇಬ್ಬರಿಗೆ ಶಿಕ್ಷೆ ಪ್ರಕಟಿಸಿದೆ.

ಯಲಾಲ ಹನುಮಂತರಾವ್, ರಘು, ತಿಮ್ಮಕ್ಕ ಅವರನ್ನು ನ್ಯಾಯಾದೀಶ ರಘುನಾಥ್ ಖುಲಾಸೆಗೊಳಿಸಿದ್ದಾರೆ. ಮಧು ಎಂಬಾತನಿಗೆ ಏಳು ವರ್ಷ ಶಿಕ್ಷೆ ಹಾಗೂ ₹1 ಲಕ್ಷ ದಂಡ ಹಾಗೂ ಹರೀಶ್ ಬಾಬು ಎಂಬಾತನಿಗೆ ಜೀವಾವಧಿ ಶಿಕ್ಷೆ ಹಾಗೂ ₹3 ಲಕ್ಷ ದಂಡ ವಿಧಿಸಲಾಗಿದೆ.

2015ರ ಅಕ್ಟೋಬರ್ 16ರಂದು ಜಗದೀಶ್ ಅವರು ಸಿಬ್ಬಂದಿ ಜೊತೆ ಕಳ್ಳರನ್ನು ಬಂಧಿಸಲು ನೆಲಮಂಗಲ ಟೌನ್ ಠಾಣಾ ವ್ಯಾಪ್ತಿಯ ವೆಂಕಟೇಶ್ವರ ಕಲ್ಯಾಣ ಮಂಟಪದ ಬಳಿಯ ಟರ್ಬೋ ಹೊಂಡಾ ಶೋರೂಂ ಬಳಿ ಹೋಗಿದ್ದರು.

ಕಳ್ಳತನ ಮಾಡುತ್ತಿದ್ದ ಕೃಷ್ಣಪ್ಪ ಮತ್ತು ಮಧು ಬೆನ್ನತ್ತಿದ್ದ ಜಗದೀಶ್ ಅವರನ್ನು ಚರಂಡಿಗೆ ನೂಕಿದ್ದ ಮಧು, ಸರ್ವಿಸ್ ಪಿಸ್ತೂಲ್ ಕಸಿದುಕೊಂಡಿದ್ದು, ಚಾಕುವಿನಿಂದ ಐದಾರು ಬಾರಿ ಇರಿದಿದ್ದ. ಇದರಿಂದ ಜಗದೀಶ್ ಮೃತಪಟ್ಟಿದ್ದರು.

ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರ ಮೇಲೆ ಸಿಸಿಬಿ ಪೊಲೀಸರ ದಾಳಿ

₹4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಹೆನ್ರಿ

ಬಾಬಾಜ್ಯೋತಿ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ₹4 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಡ್ರಗ್ಸ್ ಸಂಗ್ರಹಿಸಿಟ್ಟಿದ್ದ ಬಗ್ಗೆ ಮಾಹಿತಿ ಬಂದಿದ್ದರಿಂದ, ಬಾಗಲಗುಂಟೆ ಬಳಿಯ ಮನೆಯೊಂದರ ಮೇಲೆ ಏಪ್ರಿಲ್ 6ರಂದು ದಾಳಿ ಮಾಡಲಾಯಿತು. ಡ್ರಗ್ಸ್ ಮಾರಾಟ ಆರೋಪದಡಿ ನೈಜೀರಿಯಾದ ಹೆನ್ರಿ ಚುಕ್ವುಮೆಕಾ ಎಂಬಾತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

'2020ರಲ್ಲಿ ಬೆಂಗಳೂರಿಗೆ ಬಂದಿದ್ದ ಹೆನ್ರಿ, ಬಾಗಲಗುಂಟೆ ಬಳಿಯ ಮನೆಯೊಂದರಲ್ಲಿ ಬಾಡಿಗೆಗೆ ವಾಸವಿದ್ದ. ವಿದೇಶದಲ್ಲಿ ನೆಲೆಸಿರುವ ತನ್ನ ಸ್ನೇಹಿತರಿಂದ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ ಆರೋಪಿ, ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಕಂಪನಿಗಳ ಉದ್ಯೋಗಿಗಳಿಗೆ ಮಾರುತ್ತಿದ್ದ.'

'ಆರೋಪಿ ಹಲವು ವರ್ಷಗಳಿಂದ ಡ್ರಗ್ಸ್ ಮಾರುತ್ತಿದ್ದನೆಂದು ಗೊತ್ತಾಗಿದೆ. ಈತನಿಂದ 4 ಕೆ.ಜಿ. ತೂಕದ ಎಂಡಿಎಂಎ ಜಪ್ತಿ ಮಾಡಲಾಗಿದೆ. ಈತ ₹ 8 ಸಾವಿರದಿಂದ ₹ 10 ಸಾವಿರಕ್ಕೆ 1 ಗ್ರಾಂ ಎಂಡಿಎಂಎ ಮಾರುತ್ತಿದ್ದನೆಂಬ ಮಾಹಿತಿ ಇದೆ' ಎಂದರು.

'ಡೆಲಿವರಿ ಬಾಯ್ ಕೆಲಸ ಬಿಟ್ಟು ಡ್ರಗ್ಸ್ ಮಾರಾಟ'

ಅಪರಾಧ ಸುದ್ದಿ

'ಒಡಿಶಾದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಆರೋಪಿ ಬಾಬಾಜ್ಯೋತಿ ಡೋಲೆ ಎಂಬಾತನನ್ನು ಬಂಧಿಸಲಾಗಿದೆ. ಈತನಿಂದ ₹ 10 ಲಕ್ಷ ಮೌಲ್ಯದ ಗಾಂಜಾ, ಮೊಬೈಲ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಅಸ್ಸಾಂನ ಬಾಬಾಜ್ಯೋತಿ, 12 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಭದ್ರತಾ ಸಿಬ್ಬಂದಿ ಆಗಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅಲ್ಲಿಯ ಕೆಲಸಕ್ಕೆ ರಾಜೀನಾಮೆ ನೀಡಿ, ಡೆಲಿವರಿ ಬಾಯ್ ಆಗಿದ್ದ. ಕೆಲ ತಿಂಗಳ ಹಿಂದೆಯಷ್ಟೇ ಡೆಲಿವರಿ ಬಾಯ್ ಕೆಲಸ ಬಿಟ್ಟಿದ್ದ ಈತ, ಡ್ರಗ್ಸ್ ಮಾರಾಟಕ್ಕೆ ಇಳಿದಿದ್ದ' ಎಂದು ತಿಳಿಸಿದರು.

ಹೋಟೆಲ್‌ನ 19ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ

ಬೆಂಗಳೂರು: ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯಲ್ಲಿ ಹೋಟೆಲ್‌ನ ಕಟ್ಟಡದ 19ನೇ ಮಹಡಿಯಿಂದ ಜಿಗಿದು ಶರಣ್ (28) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತಮಿಳುನಾಡಿನ ಶರಣ್, ಏಪ್ರಿಲ್ 7ರಂದು ಹೋಟೆಲ್‌ಗೆ ಬಂದಿದ್ದರು. 19ನೇ ಮಹಡಿಯಲ್ಲಿರುವ ಕೊಠಡಿಯಲ್ಲಿ ಉಳಿದುಕೊಂಡಿದ್ದರು. ಎರಡು ದಿನ ಹೋಟೆಲ್‌ನಲ್ಲಿ ಉಳಿಯುವುದಾಗಿ ಹೇಳಿದ್ದರು' ಎಂದು ಪೊಲೀಸರು ತಿಳಿಸಿದರು. 'ಸೋಮವಾರ ಮಧ್ಯಾಹ್ನ 2.30 ಗಂಟೆ ಸುಮಾರಿಗೆ ಶರಣ್ ಮಹಡಿಯಿಂದ ಜಿಗಿದು ನೆಲಮಹಡಿಗೆ ಬಿದ್ದಿದ್ದರು. ಭದ್ರತಾ ಸಿಬ್ಬಂದಿ ಸ್ಥಳಕ್ಕೆ ಹೋಗುವಷ್ಟರಲ್ಲಿ ಶರಣ್ ಮೃತಪಟ್ಟಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ' ಎಂದು ಹೇಳಿದರು.

ಅಕ್ರಮ ವಾಸ: ವಿದೇಶಿ ಪ್ರಜೆ ಸೆರೆ

ಬೆಂಗಳೂರು: ವೀಸಾ ಅವಧಿ ಮುಗಿದರೂ ಅಕ್ರಮವಾಗಿ ವಾಸವಿದ್ದ ಆರೋಪದಡಿ ವಿದೇಶಿ ಪ್ರಜೆ ಇಮ್ಯೂನಿಯಲ್ ಜಿಡೊಜಿನ್ (28) ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಡ್ರಗ್ಸ್ ವಿರುದ್ಧ ಕಾರ್ಯಾಚರಣೆ ನಿಮಿತ್ತ ಪರಿಶೀಲನೆ ವೇಳೆ ನೈಜೀರಿಯಾದ ಜಿಡೊಜಿನ್ ಬಾಣಸವಾಡಿಯ ಮನೆಯೊಂದರಲ್ಲಿ ಅಕ್ರಮವಾಗಿ ವಾಸವಿದ್ದದ್ದು ತಿಳಿಯಿತು. ' ಎಂದು ಪೊಲೀಸರು ಹೇಳಿದರು.

'2015ರಲ್ಲಿ ಪ್ರವಾಸಿ ವೀಸಾದಡಿ ನಗರಕ್ಕೆ ಬಂದಿದ್ದ. 2019ರಲ್ಲಿ ಈತನ ವೀಸಾ ಅವಧಿ ಮುಗಿದಿತ್ತು. ಬಳಿಕ ಸ್ವದೇಶಕ್ಕೆ ವಾಪಸು ಹೋಗಿರಲಿಲ್ಲ' ಎಂದು ಪೊಲೀಸರು ತಿಳಿಸಿದರು.

ಸಂಗೀತ ಸಂಧ್ಯಾ... ನಗರದ ಹವ್ಯಕ ಸಭಾಭವನದಲ್ಲಿ ಸಪ್ತಕ ಮತ್ತು ಕಲಾನಂದನಂ ಸಹಯೋಗದಲ್ಲಿ ನಡೆದ 'ಸಂಗೀತ ಸಂಧ್ಯಾ' ಕಾರ್ಯಕ್ರಮದಲ್ಲಿ ಪಂಡಿತ್ ಭೀಮಸೇನ್ ಜೋಶಿ ಅವರ ಮೊಮ್ಮಗ ವಿರಾಜ ಜೋಶಿ ಗಾಯನ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಬಸವನಗುಡಿಯ ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ಚುನಾವಣಾ ರಾಯಭಾರಿ ರಮೇಶ್ ಅರವಿಂದ್ ಮತದಾನದ ಬಗ್ಗೆ ಜಾಗೃತಿ ಮೂಡಿಸಿದರು.

'ರಾಷ್ಟ್ರ ಮುನ್ನಡೆಸಲು ಮತ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರ ಮುನ್ನಡೆಸಲು ಎಲ್ಲರೂ ತಪ್ಪದೇ ಮತ ಚಲಾಯಿಸೋಣ. ಯಾವುದೇ ಆಮಿಷಗಳಿಗೆ ಒಳಗಾಗದೇ ಸ್ವಇಚ್ಛೆಯಿಂದ ಮತದಾನ ಮಾಡೋಣ' ಎಂದು ಚುನಾವಣಾ ರಾಯಭಾರಿ ರಮೇಶ್ ಅರವಿಂದ್ ತಿಳಿಸಿದರು.

ಬಸವನಗುಡಿಯ ಬಿಎಂಎಸ್ ಮಹಿಳಾ ಕಾಲೇಜಿನಲ್ಲಿ ಸೋಮವಾರ ನಡೆದ ಮತದಾನ ಜಾಗೃತಿ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿದರು.

'ನಿಮ್ಮ ಕ್ಷೇತ್ರದ ಅಭ್ಯರ್ಥಿ ಯಾರು? ಏನು ಕೆಲಸ ಮಾಡಿದ್ದಾರೆ? ಹಿನ್ನೆಲೆ ಏನು? ಹಿಂದೆ ಸ್ಪರ್ಧಿಸಿದ್ದರೆ ಅವರು ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳಲ್ಲಿ ಎಷ್ಟು ಈಡೇರಿಸಿದ್ದಾರೆ ಎಂದು ಪರಿಶೀಲಿಸಬೇಕು. ಆಲೋಚಿಸಿ ಮತ ಹಕ್ಕು ಚಲಾಯಿಸಬೇಕು. ಯಾರೋ ಹೇಳಿದ ಮಾತು ಕೇಳಿ ಮತದಾನ ಮಾಡಬಾರದು' ಎಂದು ಸಲಹೆ ಮಾಡಿದರು.

ಇದೇ ವೇಳೆ ವಿದ್ಯಾರ್ಥಿಗಳು 'ತಪ್ಪದೇ ಮತದಾನ ಮಾಡುತ್ತೇವೆ' ಎಂದು ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿದರು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಕಾಂತರಾಜು, ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿ ಪ್ರತಿಭಾ, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸ್ವೀಪ್ ನೋಡಲ್ ಅಧಿಕಾರಿ ರಮಾಮಣಿ, ಬಿಎಂಎಸ್ ಕಾಲೇಜಿನ ಪ್ರಾಚಾರ್ಯೆ ವಸುಂಧರಾ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಸೂರ್ಯಪ್ರಭಾ ವಾಹನ ಉತ್ಸವ, ಚಂದ್ರಪ್ರಭಾ ವಾಹನ ಉತ್ಸವ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ರಾಮನವಮಿ ಸಂಗೀತೋತ್ಸವ–2024: ನಾದಸ್ವರ: ಮೈಸೂರು ವಿಜಯ ಸೂರ್ಯ ಮತ್ತು ತಂಡ, ಕರ್ನಾಟಕ ಸಂಗೀತ ಕಛೇರಿ: ತ್ರಿಚೂರು ಸಹೋದರರು, ಪಿಟೀಲು: ಎಡಪಲ್ಲಿ ಅಜಿತ್, ಮೃದಂಗ: ತ್ರಿಚೂರು ಮೋಹನ್, ಘಟ: ಕೋವೈ ಸುರೇಶ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 4ರಿಂದ

ಕರ್ನಾಟಕ ರಾಜ್ಯ ಕ್ರಿಕೆಟ್ ತಂಡದ ಚೊಚ್ಚಲ ರಣಜಿ ಟ್ರೋಫಿ ವಿಜಯಕ್ಕೆ 50 ವರ್ಷ, ಸಂವಾದ: ಮಾತನಾಡುವವರು: ಭಾರತ ತಂಡದ ಮಾಜಿ ಕ್ರಿಕೆಟಿಗ ಎರ್ರಪಲ್ಲಿ ಪ್ರಸನ್ನ, ಕರ್ನಾಟಕ ತಂಡದ ಮಾಜಿ ಆಟಗಾರ ಸಂಜಯ್ ದೇಸಾಯಿ, ಕ್ರಿಕೆಟ್ ಲೇಖಕ ಸುರೇಶ್ ಮೆನನ್, ಕ್ರೀಡಾ ಪತ್ರಕರ್ತೆ ಶಾರದಾ ಉಗ್ರಾ, ನಿರ್ವಹಣೆ: ಇತಿಹಾಸಕಾರ ರಾಮಚಂದ್ರ ಗುಹಾ, ಸ್ಥಳ: ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್, ಸಮಯ: ಸಂಜೆ 6.30.

ಕ್ರೋಧಿನಾಮ ಸವಂತ್ಸರ ಯುಗಾದಿ ಮಹೋತ್ಸವ, ವೈರಾಗ್ಯ ನಿಧಿ ಅಲ್ಲಮ ಪ್ರಭು ಜಯಂತಿ: ಸಾನ್ನಿಧ್ಯ: ಮಲ್ಲಿಕಾರ್ಜುನ ದೇವರು, ಸಿದ್ಧಲಿಂಗ ದೇವರು, ಉದ್ಘಾಟನೆ: ರಾಣಿ ಸತೀಶ್, ಅಧ್ಯಕ್ಷತೆ: ಬಿ.ಎಸ್. ಪರಮಶಿವಯ್ಯ, ಆಯೋಜನೆ: ಸರ್ಪಭೂಷಣ ಶಿವಯೋಗಿಗಳ ಮಠದ ಟ್ರಸ್ಟ್, ಸ್ಥಳ: ಸರ್ಪಭೂಷಣ ಶಿವಯೋಗಿಗಳ ಮಠ, ಕೆಂಪೇಗೌಡ ವೃತ್ತ, ಸಂಜೆ 5

'ಜಾಂಬವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಭಾಗವತರು: ಬಾಲಕೃಷ್ಣ ಹಿಳ್ಲೋಡಿ, ಗಜಾನನ ಹೆಗಡೆ ಕಲ್ಲಬ್ಬೆ, ಮದ್ದಳೆ: ಸಂಪತ್ ಆಚಾರ್ಯ, ನಾರಾಯಣ ಭಟ್, ಚೆಂಡೆ: ಭಾವನ ಹೆಗಡೆ ಮಳಗೀಮನೆ, ಮುಮ್ಮೇಳ: ರವಿ ಐತುಮನೆ, ಕೃಷ್ಣ ಕುಮಾರ್ ನೆಗಳಗುಳಿ, ಅಕ್ಷಯ್ ಹೆಗಡೆ ಹೊಡ್ಲಮನೆ, ಸಮರ್ಥ ಭಟ್ ಬೆಂಕಟವಳ್ಳಿ, ಯಶಸ್ ಮಾರುತಿಪುರ, ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: ದೇವಿ ಭಗವತಿ ದೇವಾಲಯ, ಹುಳಿಮಾವು ಬನ್ನೇರುಘಟ್ಟ, ಸಂಜೆ 5

ರಾಮೋತ್ಸವ: ಉದ್ಘಾಟನೆ: ಎನ್.ಎಸ್. ಗೋಪಾಲ್, ಎನ್.ಎ. ಚಿದಂಬರ, ಉದಯಸಿಂಹ, ಭಾಸ್ಕರ್, 'ಪಂಚಾಂಗಶ್ರವಣ ಹಾಗೂ ಪ್ರವಚನ–ಬಾಲಕಾಂಡ': ರಾಮವಿಠಲಾಚಾರ್ಯ, ಆಯೋಜನೆ: ರಾಮಭಕ್ತಾ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐಸಿಐಸಿಐ ಬ್ಯಾಂಕ್ ಹತ್ತಿರ, ಮಲ್ಲೇಶ್ವರ, ಸಂಜೆ 5.30

ಪಂಚಾಂಗ ಶ್ರವಣ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ, ಸ್ಥಳ: ವ್ಯಾಸಮಧ್ವ ಸಂಶೋಧನಾ ಪ್ರತಿಷ್ಠಾನ, ಹನುಮಂತನಗರ, ಸಂಜೆ 6.30

ಶ್ರೀರಾಮೋತ್ಸವ: ದಾಸವಾಣಿ: ನಾಗರಾಜ್ ರಾವ್ ಹವಾಲ್ದಾರ್, ತಬಲಾ: ಕೇದಾರನಾಥ್ ಹವಾಲ್ದಾರ್, ಹಾರ್ಮೋನಿಯಂ: ಸಮೀರ್ ಹವಾಲ್ದಾರ್, ಆಯೋಜನೆ: ಶ್ರೀರಾಮ ಮಂದಿರ ಅಸೋಸಿಯೇಷನ್, ಸ್ಥಳ: ಶ್ರೀರಾಮ ಮಂದಿರ, ಬಸವನಗುಡಿ, ಸಂಜೆ 6.30

ನಗರದಲ್ಲಿ ನಾಳೆ

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಇಂದ್ರ ವಿಮಾನ ಉತ್ಸವ ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇಗುಲ , ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ಕಲಾ ವಿಕಸನ ಶಿಬಿರ–2024: ಶಿಬಿರದ ನಿರ್ದೇಶಕ: ರಾಧಾಕೃಷ್ಣ ಉರಾಳ, ಆಯೋಜನೆ: ಕಲಾಕದಂಬ ಆರ್ಟ್ ಸೆಂಟರ್, ಸ್ಥಳ: ಮನೋರಂಜಿನಿ ಸಭಾಂಗಣ, ಸಿದ್ಧಿಗಣಪತಿ ದೇವಾಲಯ, ಚಿಕ್ಕಲ್ಲಸಂದ್ರ, ಬೆಳಿಗ್ಗೆ 9.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಚೈತ್ರಾ ಕೆ. ಅಯ್ಯರ್, ಆಯೋಜನೆ: ಶ್ರೀಕೃಷ್ಣ ಕಲಾಲಯ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 4.30

ಮಾಸ್ಟರ್ ಹಿರಣ್ಣಯ್ಯ ಸ್ಮರಣಾರ್ಥ ಹಾಸ್ಯೋತ್ಸವ: ಭಾಗವಹಿಸುವವರು: ಸುಧಾ ಬರಗೂರು, ವೈ.ವಿ. ಗುಂಡೂರಾವ್, ಅಚ್ಯುತರಾವ್ ಪದಕಿ, ಎನ್. ರಾಮನಾಥ್, ಅಶೋಕ ಹಾರನಹಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮ ಮಂದಿರ, ಎನ್.ಆರ್. ಕಾಲೊನಿ, ಸಂಜೆ 5

ಕ್ರೋಧಿನಾಮ ಸವಂತ್ಸರ ಯುಗಾದಿ ಮಹೋತ್ಸವ, ವೈರಾಗ್ಯ ನಿಧಿ ಅಲ್ಲಮ ಪ್ರಭು ಜಯಂತಿ: ಸಾನ್ನಿಧ್ಯ: ಮಲ್ಲಿಕಾರ್ಜುನ ದೇವರು, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಸುಭಾಷ್ ಬಿ. ಆಡಿ, ಆಯೋಜನೆ: ಸರ್ಪ ಭೂಷಣ ಶಿವಯೋಗಿಗಳ ಮಠದ ಟ್ರಸ್ಟ್, ಸ್ಥಳ: ಸರ್ಪಭೂಷಣ ಶಿವಯೋಗಿಗಳ ಮಠ, ಕೆಂಪೇಗೌಡ ವೃತ್ತ, ಸಂಜೆ 5

ರಾಮನವಮಿ ಸಂಗೀತೋತ್ಸವ–2024: ಸಂಗೀತ ಕಛೇರಿ: ಕುಮರೇಶ್ ರಾಜಗೋಪಾಲ್, ಜಯಂತಿ ಕುಮರೇಶ್, ಮೃದಂಗ: ಕೆ.ಯು. ಜಯಚಂದ್ರ ರಾವ್, ಘಟ: ತ್ರಿಚಿ ಕೃಷ್ಣ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ. ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6.30ರಿಂದ

Range	65 OLED TV	55 LED TV	Side-by-Side Refrigerator	Frost Free Refrigerator	Front Load Washing Machine	Microwave Oven	Air Conditioner
Discount (up to)	₹98,160	₹19,000	₹43,500	₹25,000	₹10,000	₹5,000	20%
Exchange Bonus (up to)	₹5,000	₹3,000	₹3,000	₹3,000	₹3,000	₹2,000	₹4,000
Instant Cash Back (up to)	₹12,500	₹7,000	₹8,000	₹8,000	₹7,000	₹2,000	₹3,000
Gift / Combi worth (up to)	₹8,000	₹5,000	₹2,500	₹2,000	₹2,000	₹2,000	₹5,200#
Total Harshotsava Benefits (up to)	₹1,23,660	₹34,000	₹57,000	₹38,000	₹22,000	₹11,000	₹12,200

₹ 3.80 ಲಕ್ಷ ಲಂಚ ಬೆಸ್ಕಾಂ ಎ.ಇ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹ 3.80 ಲಕ್ಷ ಲಂಚ ಪಡೆದ ಬೆಸ್ಕಾಂನ ಕಗ್ಗಲಿಪುರ ಉಪ ವಿಭಾಗದ ಅಗರ ಕಾರ್ಯಾಚರಣೆ ಮತ್ತು ನಿರ್ವಹಣಾ ವಿಭಾಗದ ಸಹಾಯಕ ಎಂಜಿನಿಯರ್ ಯತೀಶ್ ಪಾಳೇಗಾರ್ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಚಂದನ್ ಕುಮಾರ್ ಎಸ್. ಎಂಬುವವರು ಕಟ್ಟಡವೊಂದಕ್ಕೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದ್ದರು. ವಿದ್ಯುತ್ ಸಂಪರ್ಕ ಕಲ್ಪಿಸಲು ₹ 5 ಲಕ್ಷ ಲಂಚ ಕೊಡುವಂತೆ ಸಹಾಯಕ ಎಂಜಿನಿಯರ್ (ಎ.ಇ) ಬೇಡಿಕೆ ಇಟ್ಟಿದ್ದರು. ನಂತರ ಚೌಕಾಸಿ ನಡೆಸಿದಾಗ ₹ 3.80 ಲಕ್ಷ ಲಂಚ ಕೊಟ್ಟರೆ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿ ಹೇಳಿದ್ದರು.

ಈ ಕುರಿತು ಅರ್ಜಿದಾರರು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–1ಕ್ಕೆ ದೂರು ಸಲ್ಲಿಸಿದ್ದರು. ಆರೋಪಿಯ ಸೂಚನೆಯಂತೆ ಚಂದನ್ ಕುಮಾರ್ ಅವರು ಸೋಮವಾರ ಸಹಾಯಕ ಎಂಜಿನಿಯರ್ ಅವರನ್ನು ಭೇಟಿಮಾಡಿ ₹ 3.80 ಲಕ್ಷ ಲಂಚದ ಹಣ ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸ್ ವಿಭಾಗದ ಡಿವೈಎಸ್‌ಪಿ ಗಿರೀಶ್ ರೋಡ್ಕರ್ ಮತ್ತು ತಂಡ ಆರೋಪಿಯನ್ನು ಬಂಧಿಸಿದೆ ಎಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–1ರ ಎಸ್‌ಪಿ ಶ್ರೀನಾಥ್ ಜೋಶಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲು

ಸರ್ಕಾರಕ್ಕೆ ಹೈಕೋರ್ಟ್ ಬರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಾಲಯಗಳ ಆದೇಶ ಪಾಲಿಸಲು ಸರ್ಕಾರ ಮತ್ತು ಸಕ್ಷಮ ಪ್ರಾಧಿಕಾರಗಳು ಅಸೀಮ ನಿರ್ಲಕ್ಷ್ಯ ತೋರುತ್ತಿವೆ ಹಾಗೂ ವಿಳಂಬ ಧೋರಣೆ ಅನುಸರಿಸುತ್ತಿವೆ’ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ಈ ಕುರಿತಂತೆ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿದೆ.

ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್‌.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಅರ್ಜಿ ದಾಖಲಿಸಿಕೊಂಡಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಹಾಗೂ ಕರ್ನಾಟಕ ಕೈಗಾರಿಕಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಕ್ಷಮ ಪ್ರಾಧಿಕಾರಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

‘ನ್ಯಾಯಾಲಯದ ಆದೇಶಗಳನ್ನು ನಿರ್ಲಕ್ಷಿಸುತ್ತಿರುವ ಕಾರಣ ವ್ಯವಸ್ಥೆ ದುರ್ಬಲಗೊಂಡಿದೆ. ನ್ಯಾಯಾಲಯಗಳು ತಮ್ಮ ಅಧಿಕಾರ ಕಳೆದುಕೊಳ್ಳುತ್ತಿವೆ. ಕೋರ್ಟ್ ಆದೇಶಗಳು ಸರ್ಕಾರಿ ಅಧಿಕಾರಿಗಳ ಮೇಲೆ ಯಾವುದೇ ಪರಿಣಾಮ ಬೀರುತ್ತಿಲ್ಲ ಎಂಬುದು ಇದನ್ನು ನೋಡಿದರೆ ವೇದ್ಯವಾಗುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿರುವ ನ್ಯಾಯಪೀಠ, ‘ನ್ಯಾಯಾಲಯದ ಆದೇಶಗಳನ್ನು ಪಾಲಿಸದೇ ಇರುವ ಸರ್ಕಾರದ ಎಲ್ಲಾ ಇಲಾಖೆಗಳನ್ನು ಪ್ರತಿವಾದಿಗಳಾಗಿ ಮಾಡಬೇಕು’ ಎಂದು ರಿಜಿಸ್ಟ್ರಾರ್ ಅವರಿಗೆ ಸೂಚಿಸಿದೆ.

> **ಕೋರ್ಟ್ ಆದೇಶಗಳು ಪಾಲನೆ ಆಗದಿರಲು ಸರ್ಕಾರದ ಜೊತೆಗೆ ಸಕ್ಷಮ ಪ್ರಾಧಿಕಾರಗಳು, ಶಾಸನಾತ್ಮಕ ಸಂಸ್ಥೆಗಳು, ಮಹಾನಗರ ಪಾಲಿಕೆಗಳೂ ಸಮಾನ ಜವಾಬ್ದಾರಿ ಹೊಂದಿವೆ.**
>
> **ಎನ್‌.ವಿ.ಅಂಜಾರಿಯಾ**
> ಮುಖ್ಯ ನ್ಯಾಯಮೂರ್ತಿ

‘ಕೋರ್ಟ್ ಆದೇಶಗಳನ್ನು ಪಾಲಿಸಲು ಸರ್ಕಾರ ಹಾಗೂ ಸಕ್ಷಮ ಪ್ರಾಧಿಕಾರಗಳು ಯಾವ ಕಾರ್ಯವಿಧಾನಗಳನ್ನು ಅಳವಡಿಸಿಕೊಳ್ಳಬೇಕು? ಆದೇಶ ಪಾಲನೆ ವಿಚಾರಗಳನ್ನು ನಿರ್ವಹಿಸಲು ವಿಶೇಷ ಶಾಖೆ, ಸಕ್ಷಮ ಅಧಿಕಾರಿಗಳನ್ನು ನೇಮಿಸಲಾಗಿದೆಯೇ? ಇದಕ್ಕಾಗಿ ಯಾವುದಾದರೂ ವ್ಯವಸ್ಥೆ ರೂಪಿಸಲಾಗಿದೆಯೇ? ಕೋರ್ಟ್ ಆದೇಶಗಳನ್ನು ಜಾರಿಗೊಳಿಸಲು, ಅದನ್ನು ಮೇಲ್ವಿಚಾರಣೆ ನಡೆಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ? ಕೋರ್ಟ್ ಆದೇಶಗಳ ಬಗ್ಗೆ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ವ್ಯವಸ್ಥೆ ರೂಪಿಸಲಾಗಿದೆಯೇ? ಈತನಕ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? ಎಂಬುದರ ಬಗ್ಗೆ ಸರ್ಕಾರ ಮತ್ತು ಅರೆ-ಸರ್ಕಾರಿ ಸಂಸ್ಥೆಗಳು ಉತ್ತರ ನೀಡಬೇಕು’ ಎಂದು ನ್ಯಾಯಪೀಠ ನಿರ್ದೇಶಿಸಿದೆ. ವಿಚಾರಣೆಯನ್ನು ಜೂನ್ 5ಕ್ಕೆ ಮುಂದೂಡಲಾಗಿದೆ.

‘ಮೂಲಭೂತ ಹಕ್ಕಿನ ಉಲ್ಲಂಘನೆ’

‘ಕೋರ್ಟ್ ಮೊರೆಹೋಗುವುದು ಜನರ ಮೂಲಭೂತ ಹಕ್ಕು. ಆದರೆ, ಕೋರ್ಟ್ ಆದೇಶಗಳನ್ನು ಅಧಿಕಾರಿಗಳು ಪಾಲಿಸದೇ ಇರುವುದು ಜನರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ’ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಪೀಠ, ‘ನ್ಯಾಯಾಲಯಗಳ ಆದೇಶ ಪಾಲಿಸಲು ಅಧಿಕಾರಿಗಳು ತೋರುತ್ತಿರುವ ನಿರ್ಲಕ್ಷವನ್ನು ಸಹಿಸಲಾಗದು. ಕೋರ್ಟ್ ಆದೇಶ ಜಾರಿಯ ವಿಳಂಬದಿಂದ ನ್ಯಾಯ ವಂಚಿಸಿದಂತಾಗಲಿದೆ’ ಎಂದು ಹೇಳಿದೆ.

ಶಾಖಾಘಾತ: 569 ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ಮತ್ತಷ್ಟು ಏರುತ್ತಿದ್ದು, ವಿವಿಧ ಜಿಲ್ಲೆಗಳಲ್ಲಿ ಶಾಖಾಘಾತ ಪ್ರಕರಣಗಳು ವರದಿಯಾಗುತ್ತಿದೆ. ಶಾಖಾಘಾತಕ್ಕೆ ಒಳಗಾದ ಜನರು, ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿದ್ದಾರೆ.

ಏಪ್ರಿಲ್ 7ರ ವರೆಗೆ ಒಟ್ಟು 569 ಶಾಖಾಘಾತ ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

‘ಬಿಜೆಪಿಗೆ ಸೇರಿದರೆ ಒಂದೇ ದಿನದಲ್ಲಿ ಕೇಜ್ರಿವಾಲ್ ಬಿಡುಗಡೆ’

ಡಿಬ್ರೂಗಢ (ಅಸ್ಸಾಂ) (ಪಿಟಿಐ): ಅರವಿಂದ ಕೇಜ್ರಿವಾಲ್ ಅವರು ಬಿಜೆಪಿ ಸೇರಿದರೆ ಒಂದೇ ದಿನದಲ್ಲಿ ಜೈಲಿನಿಂದ ಬಿಡುಗಡೆ ಆಗುತ್ತಾರೆ ಎಂದು ಎಎಪಿ ನಾಯಕಿ ಆತಿಶಿ ಹೇಳಿದರು.

ಡಿಬ್ರೂಗಢ ಕ್ಷೇತ್ರದ ದುಲಿಯಾಜಾನ್‌ನಲ್ಲಿ ಸೋಮವಾರ ಎಎಪಿ ಅಭ್ಯರ್ಥಿ ಪರ ನಡೆದ ರೋಡ್ ಶೋನಲ್ಲಿ ಅವರು ಮಾತನಾಡಿದರು.

‘ಒಳ್ಳೆಯ ಶಾಲೆ,-ಆಸ್ಪತ್ರೆ ಕಟ್ಟಿಸಿದ್ದಕ್ಕೆ, ದಿಟ್ಟತನದಿಂದ ಇರುವುದಕ್ಕೆ ಕೇಜ್ರಿವಾಲ್ ಬಂಧನವಾಗಿದೆ’ ಎಂದರು.

ಕ್ಷೇಮ ಕುಶಲ

ಇಮ್ಯುನೋಥೆರಪಿ ಕ್ಯಾನ್ಸರ್‌ರೋಗಿಗಳ ಆಶಾಕಿರಣ



ಡಾ. ಮುರಲೀ ಮೋಹನ್ ಚೂಂತಾರು

ಇಮ್ಯುನೋಥೆರಪಿ. ಇದೊಂದು ಹೊಸತಾದ ಚಿಕಿತ್ಸಾ ವಿಧಾನವಾಗಿದ್ದು, ಹೆಚ್ಚಾಗಿ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುತ್ತಾರೆ. ಈ ಚಿಕಿತ್ಸಾ ಪದ್ಧತಿಯ ಮೂಲಕ ನಮ್ಮ ದೇಹದ ರಕ್ಷಣಾ ವ್ಯವಸ್ಥೆಯನ್ನು ಶಕ್ತಿಯುತವಾಗಿ ಮಾಡಿ, ಕ್ಯಾನ್ಸರ್‌ಕಾರಕ ಜೀವಕೋಶಗಳನ್ನು ಪತ್ತೆ ಹಚ್ಚಿ, ಅದನ್ನು ನಾಶ ಮಾಡುವಂತೆ ಪ್ರಚೋದಿಸುತ್ತಾರೆ. ಹಲವಾರು ರೀತಿಯ ಕ್ಯಾನ್ಸರ್‌ಗಳ ಚಿಕಿತ್ಸೆಯಲ್ಲಿ ಇದನ್ನು ಬಳಸುತ್ತಾರೆ. ಇಮ್ಯುನೋಥೆರಪಿಯನ್ನು ಕೆಲವೊಮ್ಮೆ ಕಿಮೋಥೆರಪಿ ಜೊತೆಗೆ ಅಥವಾ ಇನ್ನಾವುದೇ ಕ್ಯಾನ್ಸರ್ ಚಿಕಿತ್ಸೆ ಜೊತೆಗೂ ಬಳಸುತ್ತಾರೆ. ಇದು ಕೆಲವರು ವ್ಯಕ್ತಿಗಳಲ್ಲಿ ಫಲಿತಾಂಶ ನೀಡುತ್ತದೆ ಮತ್ತು ಕೆಲವರಿಗೆ ಯಾವುದೇ ಪರಿಣಾಮ ಬೀರದೇ ಇರಬಹುದು. ಒಟ್ಟಿನಲ್ಲಿ ಈ ಚಿಕಿತ್ಸಾ ಪದ್ಧತಿಯ ಯಶಸ್ಸಿನ ಅನುಪಾತ ಶೇ 15ರಿಂದ 20.

ಹೆಚ್ಚಿನ ಸಂದರ್ಭಗಳಲ್ಲಿ ಇಮ್ಯುನೋಥೆರಪಿಯನ್ನು ಮುಂದುವರಿದ ಹಂತದ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಮಾತ್ರ ಬಳಸಲಾಗುತ್ತದೆ. ಸರ್ಜರಿ ಸಾಧ್ಯವಾಗದ ರೋಗಗಳಲ್ಲಿ ಅಥವಾ ಸರ್ಜರಿಯನ್ನು ಮಾಡಿಯೂ ಧನಾತ್ಮಕ ಫಲಿತಾಂಶ ದೊರಕದೆ ಇರಬಹುದಾದ ರೋಗಿಗಳಿಗೆ ಹೆಚ್ಚಾಗಿ ಈ ಚಿಕಿತ್ಸಾ ಪದ್ಧತಿಯನ್ನು ರೋಗವನ್ನು ನಿಯಂತ್ರಿಸಲು ಒಳಸಲಾಗುತ್ತದೆ. ಇಮ್ಯುನೋಥೆರಪಿಯಿಂದ ಪೂರ್ತಿಯಾಗಿ ಕ್ಯಾನ್ಸರ್ ರೋಗದಿಂದ ವಿಮುಕ್ತಗೊಳಿಸಲು ಸಾಧ್ಯವಿಲ್ಲ. ಆದರೆ ಕೆಲವೊಂದು ರೀತಿಯ ಕ್ಯಾನ್ಸರ್‌ಗಳಲ್ಲಿ ಆಶಾದಾಯಕ ಫಲಿತಾಂಶ ದೊರಕಿದೆ. ಈ ನಿಟ್ಟಿನಲ್ಲಿ ಹೆಚ್ಚಿನ ಪ್ರಯೋಗಗಳು ಮತ್ತು ಪ್ರಾರಂಭಿಕ ಚಿಕಿತ್ಸೆಗಳು ನಡೆಯುತ್ತಿದ್ದು, ವೈದ್ಯರಿಗೆ ಮತ್ತು ಕ್ಯಾನ್ಸರ್ ರೋಗಿಗಳಿಗೆ ಆಶಾದಾಯಕ ದಾರಿಯನ್ನು ತೆರೆದಿದೆ.

ನಾಲ್ಕನೇ ಹಂತದ ಕ್ಯಾನ್ಸರ್ ಇರುವ ರೋಗಿಗಳಿಗೆ ಇಮ್ಯುನೋಥೆರಪಿಯಿಂದ ಉತ್ತಮ ಜೀವನಶೈಲಿ ಮತ್ತು ರೋಗದ ಲಕ್ಷಣಗಳಿಂದ ಒಂದಷ್ಟು ಮುಕ್ತಿ ದೊರಕಿರುವುದಂತೂ ನಿಜ. ಹಾಗೆಂದ ಮಾತ್ರಕ್ಕೆ ಕಿಮೋಥೆರಪಿಗಿಂತ ಇಮ್ಯುನೋಥೆರಪಿ ಒಳ್ಳೆಯದು ಎಂಬರ್ಥವಲ್ಲ. ಕಿಮೋಥೆರಪಿಯಲ್ಲಿ ಕೆಲವೊಂದು ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳುವುದುಂಟು. ಕೂದಲು ಉದುರುವಿಕೆ, ವಾಕರಿಕೆ, ರಕ್ತಕಣಗಳ ಸಂಖ್ಯೆ ವಿಪರೀತವಾಗಿ ಕಡಿಮೆಯಾಗುವುದು ಕಿಮೋಥೆರಪಿಯಲ್ಲಿ ಸಾಮಾನ್ಯ. ಇದಕ್ಕೆ ಹೋಲಿಸಿದಲ್ಲಿ ಇಮ್ಯುನೋಥೆರಪಿಯು ಕಿಮೋಥೆರಪಿಗಿಂತ ಉತ್ತಮ ಎಂಬ ಅಭಿಪ್ರಾಯ ವೈದ್ಯರಲ್ಲಿ ಮತ್ತು ರೋಗಿಗಳಲ್ಲಿ ಇದೆ. ಆದರೆ ಯಾವ ರೀತಿಯ ಚಿಕಿತ್ಸೆ ಯಾವಾಗ ಹೇಗೆ ಕೊಡಬೇಕು ಎಂಬುದನ್ನು ವೈದ್ಯರು ರೋಗಿಯ ಪರಿಸ್ಥಿತಿಯನ್ನು ಗಮನಿಸಿ ನಿರ್ಧರಿಸುತ್ತಾರೆ.

ಯಾವಾಗ ಬಳಸುತ್ತಾರೆ?

1. ಯಕೃತ್ತಿನ ಕ್ಯಾನ್ಸರ್, ಮಿದುಳಿನ ಕ್ಯಾನ್ಸರ್
2. ಮೂತ್ರಪಿಂಡದ ಕ್ಯಾನ್ಸರ್, ಮೂತ್ರಚೀಲದ ಕ್ಯಾನ್ಸರ್
3. ಶ್ವಾಸಕೋಶ, ಬಾಯಿ ಮತ್ತು ಗಂಟಲು, ಹೊಟ್ಟೆ, ಗರ್ಭಾಶಯದ ಕ್ಯಾನ್ಸರ್
4. ಮರುಕಳಿಸಿದ ಕ್ಯಾನ್ಸರ್ ಮತ್ತು ಕಿಮೋಥೆರಪಿ

ಈ ಎಲ್ಲ ಕ್ಯಾನ್ಸರ್‌ಗಳಲ್ಲಿ ಆರಂಭಿಕ ಹಂತದಲ್ಲಿ ಸರ್ಜರಿಯನ್ನು ಮುಖ್ಯವಾಗಿ ಬಳಸುತ್ತಾರೆ. ಆದರೆ ಮುಂದುವರಿದ 4ನೇ ಹಂತದಲ್ಲಿ ಇಮ್ಯುನೋಥೆರಪಿಯನ್ನು ಬಳಸುತ್ತಾರೆ.

ಯಾವುದು ಉತ್ತಮ?

ಕಿಮೋಥೆರಪಿಯಲ್ಲಿ ಬಳಸುವ ಔಷಧಗಳು ಕ್ಯಾನ್ಸರ್‌ಕಾರಕ ಜೀವಕೋಶಗಳನ್ನು ಗುರುತಿಸಿ ನಾಶಪಡಿಸುತ್ತದೆ. ಆದರೆ ಇಮ್ಯುನೋಥೆರಪಿಯಲ್ಲಿ ಕ್ಯಾನ್ಸರ್ ರೋಗಿಗಳ ದೇಹದ ರಕ್ಷಣಾ ವ್ಯವಸ್ಥೆಯನ್ನು ಸದೃಢಗೊಳಿಸಿ ದೇಹವೇ ಕ್ಯಾನ್ಸರ್ ಜೀವಕೋಶಗಳನ್ನು ಎದುರಿಸಿ ಹೋರಾಡುವ ಶಕ್ತಿಯನ್ನು ನೀಡುತ್ತದೆ. ಒಂದಕ್ಕಿಂತ ಇನ್ನೊಂದು ಉತ್ತಮ ಎಂಬುದಕ್ಕಿಂತ ಕೆಲವೊಮ್ಮೆ ಎರಡನ್ನೂ ಬಳಸಿ ರೋಗಿಯ ದೇಹಸ್ಥಿತಿಯನ್ನು ಉತ್ತಮಪಡಿಸಲಾಗುತ್ತದೆ. ಈ ಮೊದಲೆಲ್ಲಾ 4ನೇ ಹಂತದ ಕ್ಯಾನ್ಸರ್‌ಗಳಲ್ಲಿ (ಸರ್ಜರಿ ಮಾಡಲು ಸಾಧ್ಯವಿಲ್ಲದ ಹಂತ) ಕೇವಲ ಕಿಮೊಥೆರಪಿ ನೀಡಲಾಗುತ್ತಿತ್ತು. ಇಮ್ಯುನೋಥೆರಪಿಯಿಂದಾಗಿ ಕ್ಯಾನ್ಸರ್ ರೋಗಿಗಳ ಬದುಕಿ ಉಳಿಯುವ ಸಾಧ್ಯತೆಯನ್ನು ಹೆಚ್ಚಿಸಿದೆ.

ಸಮಸ್ಯೆ ಏನು?

1. ಇಮ್ಯುನೋಥೆರಪಿ ಚಿಕಿತ್ಸೆ ಬಹಳ ದುಬಾರಿ ಆರೋಗ್ಯ. ಪ್ರತಿ ಸಲದ ಚುಚ್ಚುಮದ್ದನ್ನು ಕನಿಷ್ಠ ಒಂದೂವರೆ ಲಕ್ಷದಿಂದ ಐದು ಲಕ್ಷದವರೆಗೆ ಆಗುತ್ತದೆ. ಸುಮಾರು ಒಂದರಿಂದ ಎರಡು ವರುಷಗಳವರೆಗೆ ಈ ಚುಚ್ಚುಮದ್ದನ್ನು ನಿರಂತರವಾಗಿ ನೀಡಬೇಕಾಗುತ್ತದೆ.
2. ಎಲ್ಲ ಕೇಂದ್ರಗಳಲ್ಲಿ ಈ ಚಿಕಿತ್ಸೆ ದೊರಕುವುದಿಲ್ಲ. ನುರಿತ ತಜ್ಞ ಮತ್ತು ಪರಿಣತವೈದ್ಯರ ಮಾರ್ಗದರ್ಶನದಲ್ಲಿ ಈ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕಾಗುತ್ತದೆ.
3. ಕಿಮೊಥೆರಪಿಯಷ್ಟು ಅಡ್ಡಪರಿಣಾಮ ಇಲ್ಲದಿದ್ದರೂ ಇಮ್ಯುನೋಥೆರಪಿಯಲ್ಲಿ ಕೆಲವೊಮ್ಮೆ ಥೈರಾಯ್ಡ್ ತೊಂದರೆ, ಚರ್ಮದಲ್ಲಿ ಗುಳ್ಳೆಗಳು, ಅತಿಸಾರ ಮುಂತಾದ ಸಮಸ್ಯೆಗಳು ಕಂಡುಬರುತ್ತವೆ.
4. ಇಮ್ಯುನೋಥೆರಪಿ ಚಿಕಿತ್ಸೆ ನಿಲ್ಲಿಸಿದ ಬಳಿಕ ಕ್ಯಾನ್ಸರ್ ಜೀವಕೋಶಗಳು ಮತ್ತೆ ಕ್ರಿಯಾಶೀಲವಾಗುವ ಸಾಧ್ಯತೆ ಇರುತ್ತದೆ.

ಕೊನೆಮಾತು: ಹೆಚ್ಚಿನ ಸಂದರ್ಭಗಳಲ್ಲಿ ರೋಗಿಗಳು ಕ್ಯಾನ್ಸರ್ ಬಂದಿದೆ ಎಂದು ತಿಳಿದ ಕೂಡಲೇ ಮಾನಸಿಕವಾಗಿ ಕುಗ್ಗಿ, ಅರ್ಧಜೀವವನ್ನು ಬಿಟ್ಟಿರುತ್ತಾರೆ. ಕ್ಯಾನ್ಸರ್ ಜೀವಕೋಶಗಳನ್ನು ಕೊಲ್ಲಬಹುದು. ಆದರೆ ನಮ್ಮ ಕನಸುಗಳನ್ನು, ಆಸೆಗಳನ್ನು ಮತ್ತು ಆತ್ಮವಿಶ್ವಾಸವನ್ನು ಕೊಲ್ಲಲು ಕ್ಯಾನ್ಸರ್ ಸಾಧ್ಯವಿಲ್ಲ ಎಂಬುದನ್ನು ಜನರು ಅರಿತುಕೊಳ್ಳಬೇಕು.

ಇತ್ತೀಚಿನ ವರದಿಗಳ ಪ್ರಕಾರ, ಆರಂಭಿಕ ಹಂತದ ಎದೆಗೂಡಿನ ಕ್ಯಾನ್ಸರ್‌ಗೆ ಇಮ್ಯುನೋಥೆರಪಿ ನೀಡಿ ಐದು ವರ್ಷಗಳು ಬದುಕಿ ಉಳಿಯುವ ಸಾಧ್ಯತೆ ಶೇ 80ರಷ್ಟಾಗಿದೆ ಆಗಿದೆ ಎಂಬುದು ಆಶಾದಾಯಕ ವಿಚಾರ. ಈ ನಿಟ್ಟಿನಲ್ಲಿ ಇಮ್ಯುನೋಥೆರಪಿ ಜನರಲ್ಲಿ, ವೈದ್ಯರಲ್ಲಿ ಮತ್ತು ರೋಗಿಗಳಲ್ಲಿ ಹೊಸ ಆಶಾವಾದ ಮೂಡಿಸಿದೆ.

ಸಮಯಸಾಧಕ ಸೋಂಕುಗಳು

ಡಾ. ಕಿರಣ್ ವಿ. ಎಸ್.

ಸಮಯಸಾಧಕರು ಅಥವಾ ಅವಕಾಶವಾದಿಗಳ ಬಗ್ಗೆ ಎಚ್ಚರದಿಂದ ಇರಬೇಕು ಎನ್ನುವ ಕಿವಿಮಾತನ್ನು ಚಿಕ್ಕಂದಿನಿಂದ ಕೇಳಿರುತ್ತೇವೆ. ಒಳ್ಳೆಯ ಕಾಲದಲ್ಲಿ ಹಿತೈಷಿಗಳ ಸೋಗಿನಲ್ಲಿ ಇದ್ದು, ಕೆಟ್ಟ ಕಾಲ ಬಂದಾಗ ಅದರ ಲಾಭವನ್ನು ಪಡೆದು, ಈಗಾಗಲೇ ನೊಂದಿರುವವರನ್ನು ಮತ್ತಷ್ಟು ತುಳಿದು ಸಂತಸ ಪಡುವ ಮಂದಿಯನ್ನು ಒಂದಲ್ಲ ಒಂದು ಬಾರಿಯಾದರೂ ಕಂಡಿರುತ್ತೇವೆ. ಸೋಂಕುಗಳ ವಿಷಯದಲ್ಲೂ ಹೀಗೆ ಆಗುತ್ತದೆ. ನಮ್ಮ ಶರೀರದಲ್ಲಿ ಹಲವಾರು ಪರೋಪಜೀವಿಗಳು ಸದಾ ಇರುತ್ತವೆ. ನಮ್ಮ ಆರೋಗ್ಯ ಚೆನ್ನಾಗಿರುವಾಗ ಈ ಪರೋಪಜೀವಿಗಳು ಯಾವುದೇ ಅಪಾಯ ಮಾಡುವುದಿಲ್ಲ. ಆದರೆ ಯಾವುದಾದರೂ ಕಾರಣಕ್ಕೆ ರೋಗನಿರೋಧಶಕ್ತಿ ಕುಗ್ಗಿದಾಗ ಇವು ತಮ್ಮ ಪ್ರಭಾವ ತೋರುತ್ತವೆ. ಇಂತಹ ಕಾಯಿಲೆಗಳಿಗೆ ಸಮಯಸಾಧಕ ಸೋಂಕುಗಳು ಎನ್ನಬಹುದು. ಇಂತಹ ಸೋಂಕುಗಳನ್ನು ಉಂಟುಮಾಡುವ ಪರೋಪಜೀವಿಗಳು ಅನೇಕ ಬಗೆಯವು; ಬ್ಯಾಕ್ಟೀರಿಯಾ, ಫಂಗಸ್, ಏಕಾಣುಕೋಶಗಳು, ವೈರಸ್ ಇದರಲ್ಲಿ ಪ್ರಮುಖವಾದುವು. ಕರುಳಿನ ಕಾಯಿಲೆ, ಶ್ವಾಸಕೋಶಗಳ ಸೋಂಕು, ಚರ್ಮದ ಸಮಸ್ಯೆ, ರಕ್ತದ ನಂಜು, ಮೊದಲಾದುವು ಈ ಸಮಯಸಾಧಕ ಪರೋಪಜೀವಿಗಳ ಪರಿಣಾಮ.

ಸಮಯಸಾಧಕ ಸೋಂಕುಗಳು ಯಾರಲ್ಲಿ ಉಂಟಾಗುತ್ತವೆ? ಮುಖ್ಯವಾಗಿ ಶರೀರದ ರೋಗನಿರೋಧಶಕ್ತಿ ಕುಂಠಿತವಾದಾಗ ಅದರ ಅವಕಾಶ ಪಡೆದು ಇಂತಹ ಸೋಂಕು ತಗುಲುತ್ತದೆ. ಅಪೌಷ್ಟಿಕತೆ, ವೃದ್ಧಾಪ್ಯ, ಮಧುಮೇಹ, ಭೌತಿಕ ಹಾಗೂ ಮಾನಸಿಕ ದಣಿವು, ಖಿನ್ನತೆ, ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಯ ವೇಳೆ ಬಳಸುವ ಔಷಧಗಳ ಬಳಕೆ, ಎಚ್.ಐ.ವಿ. ವೈರಸ್ ಸೋಂಕಿನಿಂದ ಉಂಟಾಗುವ ಏಡ್ಸ್ ಕಾಯಿಲೆ, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಔಷಧಗಳ ಪರಿಣಾಮ, ರೋಗನಿರೋಧ ಪ್ರಕ್ರಿಯೆಗೆ ಅಡ್ಡಿ ಮಾಡಬಲ್ಲ ಜೆನೆಟಿಕ್ ದೋಷಗಳು, ಚರ್ಮ ಸೀಳುವಂಥ ಸಂದರ್ಭಗಳು, ಹೆಚ್ಚು ಆ್ಯಂಟಿಬಯಾಟಿಕ್ ಬಳಕೆ, ಸುಟ್ಟ ಗಾಯಗಳು, ಗರ್ಭಿಣಿಯರು, ಶಸ್ತ್ರಚಿಕಿತ್ಸೆಗಳ ನಂತರದ ಕಾಲ, ಜನ್ಮಜಾತವಾಗಿ ಬರುವ ರೋಗನಿರೋಧಶಕ್ತಿಯ ದೌರ್ಬಲ್ಯ ಮೊದಲಾದ ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ರೋಗನಿರೋಧಶಕ್ತಿ ನಿತ್ರಾಣವಾಗುತ್ತದೆ. ಈ ಎಲ್ಲ ಸಂದರ್ಭಗಳಲ್ಲೂ ಸಮಯಸಾಧಕ ಪರೋಪಜೀವಿಗಳು ಆಕ್ರಮಣ ಮಾಡಿ ಸೋಂಕು ಉಂಟುಮಾಡಬಲ್ಲವು. ಸಣ್ಣ ವಯಸ್ಸಿನಲ್ಲಿ ಬಹುತೇಕ ಎಲ್ಲರನ್ನೂ ಕಾಡುವ ಸೀತಾಳೆ ಸಿಡುಬು (ಚಿಕನ್ ಪಾಕ್ಸ್) ಮೂಲತಃ ವೈರಸ್ ಕಾಯಿಲೆ. ಇದು ಗುಣವಾದ ನಂತರವೂ ಅದರ ವೈರಸ್ ನಮ್ಮ ಬೆನ್ನುಹುರಿಯ ನರಗಳ ಗಂಟುಗಳಲ್ಲಿ ಸುಪ್ತವಾಗಿ ಕುಳಿತಿರುತ್ತದೆ. ರೋಗನಿರೋಧಶಕ್ತಿ ಇಳಿದ ಅವಕಾಶ ದೊರೆತಾಗ ಈ ವೈರಸ್ ಪುನಃ ಆಕ್ರಮಣಶೀಲವಾಗಿ ಆಯಾ ನರದ ಮೂಲಕ ಸಾಗುತ್ತಾ ಚರ್ಮದ ಮೇಲೆ ಒಂದು ನಿರ್ದಿಷ್ಟ ಪಟ್ಟಿಯಂತೆ ಸೋಂಕು ಕಾಣುತ್ತದೆ. ಇದನ್ನು 'ಸರ್ಪಸುತ್ತು' ಅಥವಾ 'ಹರ್ಪಿಸ್ ಝೋಸ್ಟರ್' ಎನ್ನುತ್ತಾರೆ. ವೃದ್ಧಾಪ್ಯದಲ್ಲಿ ಶರೀರವನ್ನು ಬಹಳ ಕಂಗಾಲು ಮಾಡುವ ಸಮಯಸಾಧಕ ಸೋಂಕುಗಳಲ್ಲಿ ಸರ್ಪಸುತ್ತು ಕೂಡ ಒಂದು.

ಸಮಯಸಾಧಕ ಸೋಂಕುಗಳನ್ನು ಗುಣಪಡಿಸುವುದು ಸುಲಭವಲ್ಲ. ರೋಗನಿರೋಧಶಕ್ತಿ ಈ ಮೊದಲೇ ಕುಂಠಿತವಾಗಿರುವುದರಿಂದ ಇಂತಹ ಸೋಂಕುಗಳ ವಿರುದ್ಧ ಹೋರಾಡಲು ಶರೀರ ಸಮರ್ಥವಾಗಿರುವುದಿಲ್ಲ. ಹೀಗಾಗಿ, ಸಮಯಸಾಧಕ ಸೋಂಕುಗಳು ಶರೀರದ ಮೇಲೆ ವಿಪರೀತ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ. ಅದರಲ್ಲೂ ಫಂಗಸ್ ಸೋಂಕುಗಳಿಂದ ಕೆಲವೊಮ್ಮೆ ಪ್ರಾಣಾಪಾಯವೂ ಆಗಬಹುದು. ಕೋವಿಡ್-19 ಎಂಬ ಜಾಗತಿಕ ವಿಪತ್ತಿನ ಸಂದರ್ಭದಲ್ಲಿ ಹಲವಾರು ಸಮಯಸಾಧಕ ಸೋಂಕುಗಳಿಂದ ಪ್ರಾಣ ತೆತ್ತವರು ಬಹಳ ಸಂಖ್ಯೆಯಲ್ಲಿ ಇದ್ದರು. ಈ ಕಾರಣಕ್ಕೆ ಸಮಯಸಾಧಕ ಸೋಂಕುಗಳನ್ನು ಬಾರದಂತೆ ಎಚ್ಚರ ವಹಿಸುವುದು ಅವುಗಳ ಚಿಕಿತ್ಸೆಗಿಂತಲೂ ಹೆಚ್ಚು ಫಲದಾಯಕ.

ರೋಗನಿರೋಧಶಕ್ತಿ ನಿತ್ರಾಣವಾಗಬಹುದಾದ ಸಂದರ್ಭಗಳಲ್ಲಿ ಅವು ಯಾವ ಸೋಂಕಿಗೆ ಕಾರಣವಾಗಬಹುದು ಎಂಬ ಅಂದಾಜುಗಳನ್ನು ತಜ್ಞವೈದ್ಯರು ಮಾಡುತ್ತಾರೆ. ಅದಕ್ಕೆ ಪ್ರತಿಯಾಗಿ ಸೋಂಕು ಕಾಡುವ ಮುನ್ನವೇ ಔಷಧೋಪಚಾರ ಆರಂಭಿಸುತ್ತಾರೆ. ಈ ಮಾರ್ಗವನ್ನು 'ನಿಯಂತ್ರಕ ಚಿಕಿತ್ಸೆ' ಎನ್ನಲಾಗುತ್ತದೆ. ಇದು ಪ್ರತಿಯೊಂದು ಸೋಂಕಿನ ವಿರುದ್ಧವೂ ಕೆಲಸ ಮಾಡುತ್ತದೆ ಎನ್ನುವ ಖಚಿತವಾದ ಭರವಸೆ ಇಲ್ಲವಾದರೂ, ಬಹುತೇಕ ಸಂದರ್ಭಗಳಲ್ಲಿ ಸೋಂಕು ಬಾರದಂತೆ ಕಾಯಬಲ್ಲವು. ಅಂತೆಯೇ, ಮೂಲರೋಗವನ್ನು ಶೀಘ್ರವಾಗಿ ತಹಬಂದಿಗೆ ತಂದು ರೋಗನಿರೋಧಶಕ್ತಿ ಯಥಾಸ್ಥಿತಿಗೆ ಮರಳುವಂತೆ ಮಾಡುವುದು ಕೂಡ ಸಮಯಸಾಧಕ ಸೋಂಕುಗಳನ್ನು ತಡೆಗಟ್ಟುವ ಪ್ರಮುಖ ಮಾರ್ಗ. ಉದಾಹರಣೆಗೆ, ಮಧುಮೇಹಿಗಳಲ್ಲಿ ರಕ್ತದಲ್ಲಿನ ಸಕ್ಕರೆಯ ಅಂಶದ ನಿಯಂತ್ರಣ ಎಷ್ಟು ಕಟ್ಟುನಿಟ್ಟಾಗಿದ್ದರೆ, ಸಮಯಸಾಧಕ ಸೋಂಕುಗಳ ಸಾಧ್ಯತೆ ಅಷ್ಟು ಕಡಿಮೆ. ಎಚ್.ಐ.ವಿ. ಸೋಂಕಿತರಲ್ಲಿ ಪ್ರಾಥಮಿಕ ಚಿಕಿತ್ಸೆಯ ಮೂಲಕ ರಕ್ತದಲ್ಲಿನ ವೈರಸ್ ಪ್ರಮಾಣವನ್ನು ಮಿತಿಯಲ್ಲಿ ಇಟ್ಟುಕೊಂಡರೆ ಇತರೆ ಸೋಂಕುಗಳ ಸಾಧ್ಯತೆಯನ್ನು ಗಣನೀಯವಾಗಿ ನಿಯಂತ್ರಿಸಬಹುದು.

ಶರೀರದ ಸಹಜ ರೋಗನಿರೋಧಶಕ್ತಿಯನ್ನು ಜಾಗೃತಗೊಳಿಸಬಲ್ಲ ರಾಸಾಯನಿಕ ಸಂಯುಕ್ತಗಳು ಪ್ರಸ್ತುತ ಲಭ್ಯವಿವೆ. ಆದರೆ ಕೆಲವು ಆಯ್ದ ರೋಗಿಗಳಲ್ಲಿ ಮಾತ್ರ ಈ ಅತ್ಯಂತ ದುಬಾರಿ ಔಷಧಗಳ ಬಳಕೆ ಪ್ರಯೋಜನಕಾರಿಯಾಗಬಲ್ಲವು. ಮತ್ತೆ ಕೆಲವರಲ್ಲಿ ನಿಯಮಿತವಾಗಿ ಆ್ಯಂಟಿಬಯಾಟಿಕ್ ಔಷಧಗಳನ್ನು ಬಳಸುತ್ತಾ ಕೆಲವೊಂದು ಸಮಯಸಾಧಕ ಸೋಂಕು ಆಗದಂತೆ ತಡೆಯಬಹುದು. ಇಂತಹ ಸೋಂಕುಗಳ ಸಾಧ್ಯತೆ ಹೆಚ್ಚಾಗಿರುವವರು ಮಾಸ್ಕ್ ಬಳಕೆ, ಅಶುಚಿಯುತ ಆಹಾರವನ್ನು ಸೇವಿಸದಿರುವುದು, ಇತರ ರೋಗಿಗಳಿಂದ ದೂರವಿರುವುದು, ಸಾಕುಪ್ರಾಣಿಗಳನ್ನು ಮುದ್ದಾಡದಿರುವುದು, ಕೊಳಕಾದ ಸ್ಥಳಗಳಿಗೆ ಹೋಗದಿರುವುದು, ಲೈಂಗಿಕ ಸಂಪರ್ಕದಲ್ಲಿ ಎಚ್ಚರಿಕೆ ಮೊದಲಾದ ವಿಧಾನಗಳನ್ನು ಪಾಲಿಸಿ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕು. ಇವೆಲ್ಲವನ್ನೂ ಮೀರಿ ಸಮಯಸಾಧಕ ಸೋಂಕು ಕಾಡಿದರೆ ತಡಮಾಡದೆ ತಜ್ಞವೈದ್ಯರನ್ನು ಕಾಣಬೇಕು. ಇಂತಹ ಸೋಂಕುಗಳ ಚಿಕಿತ್ಸೆಯನ್ನು ಎಷ್ಟು ಬೇಗ ಆರಂಭಿಸಿದರೆ ಅಷ್ಟೇ ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸಬಹುದು. ಇದರ ಬಗೆಗಿನ ಜ್ಞಾನ ಮತ್ತು ಎಚ್ಚರಗಳು ಜೀವರಕ್ಷಕವಾಗಬಲ್ಲವು.

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

NEET CHEMISTRY

9) Terylene is NOT a ………………

a) Copolymer b) Polyester fiber
c) Chain growth polymer
d) Step growth polymer

Ans:- c; Chain growth polymer.

10) What amount of dioxygen (in gram) contains 1.8×10^{22} molecules?

(a) 0.960 (b) 96.0
(c) 0.0960 (d) 9.60

Ans: (a) 0.960

Expln:- 6.022×10^{23} molecules are present in 32g.

$\therefore$ 1.8×10^{22} molecules are present in

$$\frac{1.8\times10^{22}\times32}{6.022\times10^{23}} = 0.960.$$

11) Intermolecular forces are forces of attraction and repulsion between interacting particles that will include:

A. dipole-dipole forces.
B. dipole - induced dipole forces,
C. hydrogen bonding.
D. covalent bonding.
E. dispersion forces.

Choose the most appropriate answer from the options given below:

a) A, C, D, E are correct.
b) B, C, D, E are correct.
c) A, B, C, D are correct.
d) A, B, C, E are correct

Ans:- (d) Covalent bonding is NOT an intermolecular force while rest all are considered as intermolecular forces.

12) The IUPAC name of the complex ion formed when gold dissolves in aqua regia is

a) tetrachloridoaurate (III)
b) tetrachloridoaurate (I)
c) tetrachloridoaurate (II)
d) tetrachloridoaurate (III).

Ans:- a; When gold dissolve sin aqua regia, it gives tetrachloridoaurate (III) anion.

$2Au + 3HNO_3 + 11HCl \rightarrow 2H[AuCl_4] + 3NOCl + 6H_2O$

13) Benzaldehyde and acetone can be best distinguished using …………

a) Sodium hydroxide solution
b) Fehling's solution
c) Tollen's reagent d) 2, 4- DNPH

Ans:- c;

14) Arrange the following compounds in the increasing order of their acidic strength:

i) m-nitrophenol, ii) m-cresol,
iii) phenol, iv) m-chlorophenol.

(a) ii < iv < iii < i **(b) ii < iii < i < iv**
(c) iii < ii < i < iv **(d) ii < iii < iv < i**

Ans: (d) ii < iii < iv < i

Expln:- m-cresol has electron-releasing group (CH_3). Hence it decreases the acidic strength. Both nitro and chloro have –I effect. Hence they show higher acidic strength. But nitro is a stronger –I group than chloro group. Hence m-minitro phenol is more acidic than m-chlorophenol.

15) Which of the following statements are NOT correct?

A) Hydrogen is used to reduce heavy metal oxides to metals.
B). Heavy water is used to study reaction mechanism.
C) Hydrogen is used to make saturated fats from oils.
D) The H-H bond dissociation enthalpy is lowest as compared to a single bond between two atoms of any element.
E) Hydrogen reduces oxides of metals that are more active than iron.

Choose the most appropriate answer from the options given below:

a) A, B, C only **b) B, C, D, E only**
c) B, D only **d) D, E only**

Ans:- (d) A, B and C are correct statements.

Expln:- The H-H bond dissociation enthalpy is highest for a single bond between two atoms of any element. Hydrogen does not reduce oxides of metals that are more active than iron.

16) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

17) For freundlich isotherm a graph of log(x/m) is plotted against log P. the slope of the line and its y-axis intercept, respectively corresponds to

a) $\frac{1}{n}$, k b) $\log\frac{1}{n}$, k
c) $\frac{1}{n}$, log k d) $\log\frac{1}{n}$, logk

Ans:- c; Freundlich adsorption isotherm can be written as,

$$\log\frac{x}{m} = \log k + \frac{1}{n}\log P$$



18) Which of the following is not true?

(a) Ampicillin is not a natural antibiotic.
(b) Vancomycin is a broad spectrum antibiotic.
(c) Erythromycin is a bacteriostatic antibiotic.
(d) Prontosil is not converted into sulphanilamide in the body.

Ans: (d)

II PUC PHYSICS

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

41) A point charge +q, is placed at a distance d from an isolated conducting plane. The field at a point p on the other side of the plane is

a) Directed perpendicular to the plane and away from the plane.
b) Directed perpendicular to the plane but towards the plane.
c) Directed radially away from the point charge.
d) Directed radially towards the point charge.

Ans:- (a)

42) A particle shows the distance-time curve as shown in the figure. The maximum instantaneous velocity of the particle is around the point.



a) P b) S
c) R d) Q

Ans: (c)

Expln:- $V_m ax = dx/dt$ = maximum slope

From the figure, at point R the slope is maximum, hence at this point velocity is maximum.

$\therefore$ The maximum instantaneous velocity of the particle is around the point 'R'.

43) A solenoid length 0.4 cm, radius 1 cm and 400 turns of wire. If a current of 5 A is passed through this solenoid, what is the magnetic field inside the solenoid?

(a) 6.28×10^{-7} T (b) 6028×10^{-4} T
(c) 6.28×10^{-1} T (d) 6.28×10^{-3} T

Soln: (C): Here

Length, $l = 0.4$ cm $= 0.4 \times 10^{-2}$ m

Radius, $r = 1$ cm $= 10^{-2}$ m

Number of turns per unit length is

$$n = \frac{N}{l} = \frac{400}{0.4\times10^{-2}} = 10^5 \text{ turns/m}$$

Magnetic field inside the solenoid is

$$B = \mu_0 nI = 4\pi \times 10^{-7} \times 10^5 \times 5$$
$$= 62.8 \times 10^{-2}\text{ T} = 6.28 \times 10^{-1}\text{ T}$$

44) The fig given shows electric field lines in which an electric dipole p is placed. Which of the following statements is correct?

a) The dipole will not experience force.
b) The dipole will experience a force towards right.
c) The dipole will experience a force towards left.
d) The dipole will experience a force upwards.



Ans:- c

45) A gyromagnetic ratio of the electron revolving in a circular orbit of hydrogen atom is 8.8×10^{10} Ckg^{-1}. What is the mass of the electron? Given charge of the electron=1.6×10^{-19} C.

(a) 1.1×10^{-29} kg (b) 1×10^{-29} kg
(c) $\frac{1}{11}\times10^{-29}$ kg (d) 0.1×10^{-29} kg

Soln: (c) Gyromagnetic ratio of an electron

46) What is the value of shunt resistance required to convert a galvanometer of resistance 100 Ω into an ammeter of range 1 A?

Given : Full scale deflection of the galvanometer is 5 m A.

a) 0.5 Ω (b) $\frac{5}{9.95}$ Ω
c) 0.05Ω (d) $\frac{9.95}{5}$ Ω

Soln: (b): Here,

Resistence of galvanometer, $G = 100\Omega$

Full scale deflection current, $I_8 = 5$ mA
$= 5 \times 10^{-3}$ A



To convert the galvanometer into an ammeter of range 1 A, a shunt resistance of value S is connected in parallel with it such that,

$(I - I_8)\,S = I_8 G$

$$S = \frac{I_g G}{I - I_g} = \frac{5\times10^{-3}\times100}{1-5\times10^{-3}} = \frac{5\times10^{-1}}{1-0.005}$$
$$= \frac{0.5}{0.995} = \frac{5}{9.95}\Omega$$

47) Electric field intensity due to an infinitely long straight uniformly charged wire at a distance *r* from the wire varies as

a) r b) r^{-1}
c) r^2 d) r^{-2}

Ans:-b

ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
ಯುಗಾದಿ SALE
UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ
1 ಇ.ಎಮ್.ಐ ಉಚಿತ
Upto 70% ಕಡಿತ*
UPTO ₹25,000 ಕಡಿತ ಎಕ್ಸ್ಚೇಂಜ್ ಮೇಲೆ*
14 ಗಂಟೆಗಳ ತಡೆರಹಿತ ಶಾಪಿಂಗ್
(ಮಳಿಗೆಗಳು ಬೆಳಿಗ್ಗೆ 9 ರಿಂದ ರಾತ್ರಿ 11 ಗಂಟೆ ವರೆಗೆ ತೆರೆದಿರುತ್ತದೆ)
DAIKIN 2.02 TON 3 STAR INVERTER
ಗಿರಿಯಾಸ್ ರಿಯಾಯಿತಿ ₹14,260
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಕ್ಸ್ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹86,800
ಎಫೆಕ್ಟಿವ್ ಪ್ರೈಸ್ ₹64,540
ಪ್ರತಿ ದಿನ ಇಎಂಐ ₹179
BLUE STAR 1.5 TON 3 STAR INVERTER
ಗಿರಿಯಾಸ್ ರಿಯಾಯಿತಿ ₹21,580
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 3,000
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಕ್ಸ್ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹63,500
ಎಫೆಕ್ಟಿವ್ ಪ್ರೈಸ್ ₹30,920
ಪ್ರತಿ ದಿನ ಇಎಂಐ ₹86
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
LG 1.5 TON 3 STAR INVERTER TS-Q18YNXE2
ಗಿರಿಯಾಸ್ ರಿಯಾಯಿತಿ ₹35,080
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಕ್ಸ್ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹78,990
ಎಫೆಕ್ಟಿವ್ ಪ್ರೈಸ್ ₹34,410
ಪ್ರತಿ ದಿನ ಇಎಂಐ ₹96
Godrej 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹ 9,480
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,000
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಂ.ಆರ್.ಪಿ ₹41,900
ಎಫೆಕ್ಟಿವ್ ಪ್ರೈಸ್ ₹23,420
ಪ್ರತಿ ದಿನ ಇಎಂಐ ₹65
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
VOLTAS 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹22,620
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಕ್ಸ್ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹56,990
ಎಫೆಕ್ಟಿವ್ ಪ್ರೈಸ್ ₹24,820
ಪ್ರತಿ ದಿನ ಇಎಂಐ ₹69
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
LLOYD 1.0 TON 3 STAR INVERTER
ಗಿರಿಯಾಸ್ ರಿಯಾಯಿತಿ ₹16,440
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್ ₹ 1,500
ಎಕ್ಸ್ಚೇಂಜ್ ಹಳೆಯ ಎಸಿ ₹ 4,000
ಎಕ್ಸ್ಚೇಂಜ್ ಸಬ್ಸಿಡಿ ₹ 4,000
ಎಂ.ಆರ್.ಪಿ ₹49,990
ಎಫೆಕ್ಟಿವ್ ಪ್ರೈಸ್ ₹24,050
ಪ್ರತಿ ದಿನ ಇಎಂಐ ₹67
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
SAMSUNG 653 ಲೀ ಸೈಡ್ ಬೈ ಸೈಡ್ RS76CG8113SLHL
ಇ.ಎಮ್.ಐ ₹6,033
LG 650 ಲೀ ಸೈಡ್ ಬೈ ಸೈಡ್ GL-B257DBM3
ಇ.ಎಮ್.ಐ ₹4,990
5% INSTANT DISCOUNT* SBI card
*Min. Trxn.: ₹15,000; Max. Discount: ₹2,500 per card. Valid only on EMI Trxn. Validity: 14 Mar - 28 Apr 2024. T&C Apply.
24 HOURS ಎಕ್ಸ್‌ಪ್ರೆಸ್ ಡೆಲಿವರಿ*
Paytm FIRST
AN EXCLUSIVE FREE MEMBERSHIP WITH BENEFITS WORTH ₹75,000*
ON AC'S, MOBILES AND LAPTOPS. T&C APPLY
FINANCE POWERED BY Groww
0% EMI
MIN PRODUCT VALUE ₹10,000
MobiKwik
4% ಕ್ಯಾಶ್ ಬ್ಯಾಕ್* on UPI
MINIMUM TRANSACTION ₹1000
MAXIMUM CASHBACK UPTO ₹750
LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER
INDUCTION COOKER
STEAM IRON
KETTLE
DRY IRON
Haier 531 ಲೀ ಸೈಡ್ ಬೈ ಸೈಡ್
ಇ.ಎಮ್.ಐ ₹6,866
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Panasonic 280 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹2,724
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
Whirlpool 235 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹2,542
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
iPhone 14/15
₹58,900 ONWARDS
₹81 ಪ್ರತಿ ದಿನ ಇಎಂಐ
70% OFF ON DAMAGE PROTECTION
SAMSUNG S24/ S24Plus/ S24Ultra
₹70,999 ONWARDS
₹98 ಪ್ರತಿ ದಿನ ಇಎಂಐ
PAY ₹199 AND GET 1YR COMPLETE DAMAGE PROTECTION + WATCH WORTH ₹17,999
5G mela 5G PHONE
₹9,999 ONWARDS
PAY ₹99 AND GET FREE 1 YEAR COMPLETE DAMAGE PROTECTION + BT NECKBAND WORTH UPTO ₹9999*
mi vivo ONEPLUS oppo
LG 77 ಒಎಲ್ಇಡಿ 4K SMART TV OLED77B3PSA
ಇ.ಎಮ್.ಐ ₹4,999
SAMSUNG 55 ಒಎಲ್ಇಡಿ 4K SMART TV 55S90C
ಇ.ಎಮ್.ಐ ₹10,050
SONY 55 4K ULTRA HD SMART ಒಎಲ್ಇಡಿ GOOGLE TV XR-55A80L
ಇ.ಎಮ್.ಐ ₹5,500
DELL INS 3520
12TH GEN I5
16 GB RAM
512 GB SSD
15.6 FHD
WIN 11 MSO 21
OFFER PRICE ₹53,990
ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್
hp VICTUS- GAMING
RYZEN 5 5600H
16GB RAM
512GB SSD
4 GB GFX
15.6" FHD
WIN 11
OFFER PRICE ₹53,490
ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್
UPTO 2500 CASH BACK* + ADDITIONAL BENEFIT WORTH ₹10,999 @ ₹1999
Lenovo (Slim 1)
Ryzen 3 7320
8GB, 512GB
15.6 FHD
Win11 MSO 21
OFFER PRICE ₹36,490
ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್
BOSCH 9 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,925
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್
WIDEST RANGE OF AIRCOOLERS & FANS
Crompton orient USHA V-GUARD KENSTAR Symphony VOLTAS BAJAJ HAVELLS
Prestige
MIXER GRINDERS ENDURA 1000W MIXER GRINDER + PRESSURE COOKERS: SS Popular3 LTR
OFFER PRICE: ₹8,190
COMBI MRP: ₹13,385
OZONE DIGITAL LOCKERS
₹2,190 ONWARDS
AVAILABLE @ SELECTED STORES
Prestige
GAS STOVES:SVACHH DUO / NEO 3 BURNER + PRESSURE COOKERS: SS POPULAR3 LTR
OFFER PRICE: ₹8,190
COMBI MRP: ₹13,385
EUREKA FORBES NIRLEP
AQUAGUARD SUPERIO RO+UV+MTDS+SS + NON STICK COOKWARE: ASPA 4 Pc SET
OFFER PRICE: ₹18,990
COMBI MRP: ₹31,990
LG SAMSUNG SONY Panasonic Haier NY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 । ಅತ್ತಿಬೆಲೆ 99009 77747 । ಆರ್.ಟಿ.ನಗರ 91080 65665 । ಇಂದಿರಾನಗರ 9035499255 । ಉತ್ತರಹಳ್ಳಿ 90362 89563 । ಎಲೆಕ್ಟ್ರಾನಿಕ್ ಸಿಟಿ 9591103536 । ಕತ್ರಿಗುಪ್ಪೆ 9035499288 । ಕನಕಪುರ ಮುಖ್ಯ ರಸ್ತೆ 90082 20739 । ಕುಣಿಗಲ್ 90362 89546 । ಕೆಂಗೇರಿ 99009 77712 । ಕೆಆರ್ ಪುರಂ 9019929881 । ಕೋರಮಂಗಲ 90354 11200 । ಕೋಲಾರ 90082 20791 । ಗಾಂಧಿನಗರ 9035499311 । ಗೌರಿಬಿದನೂರು 90354 99244 । ಚನ್ನಪಟ್ಟಣ 9035023186 । ಚಿಂತಾಮಣಿ 90362 89552 । ಚಿಕ್ಕಜಾಲ 95918 32080 । ಚಿಕ್ಕಬಳ್ಳಾಪುರ 9591561669 । ಜಯನಗರ 90354 99077 । ಜಾಲಹಳ್ಳಿ ಕ್ರಾಸ್ 9008220804 । ಜೆ.ಪಿ.ನಗರ 9606922698 । ತಿಪಟೂರು 90362 89548 । ತುಮಕೂರು 90082 18009 । ದೊಡ್ಡಬಳ್ಳಾಪುರ 77602 12888 । ನಾಗರಭಾವಿ 90354 99191 । ನೆಲಮಂಗಲ 9606922798 । ಬನಶಂಕರಿ 9035499199 । ಬನ್ನೇರುಘಟ್ಟ ರೋಡ್ 9035422500 । ಬಸವನಗುಡಿ 90354 99244 । ಬಾಗೇಪಲ್ಲಿ 9036289562 । ಭಾರ್ತಿಯಾ ಮಾಲ್ 70900 00981 । ಮಾದನಾಯಕನಹಳ್ಳಿ 90362 89550 । ಮಂತ್ರಿ ಮಾಲ್ 95919 25353 । ಮತ್ತಿಕೆರೆ 90352 22377 । ಮಲ್ಲೇಶ್ವರಂ 90354 99233 । ಮಾಗಡಿರಸ್ತೆ 90362 89557 । ಮಾರತ್‌ಹಳ್ಳಿ 90354 99011 । ಮಾಲೂರು 9036984484 । ಮೈಸೂರು ರಸ್ತೆ 90354 99188 । ಯಲಹಂಕ 9036001315 । ರಾಜಾಜಿನಗರ 9035499144 । ರಾಮನಗರ 9606922697 । ವಿಜಯನಗರ 96069 22795 । ಶಿರಾ 9035023188 । ಸದಾಶಿವನಗರ 9035499088 । ಸಹಕಾರನಗರ 90199 29882 । ಹಿರಿಯೂರು 9035023185 । ಹೆಚ್‌ಆರ್‌ಬಿಆರ್ ಲೇಔಟ್ 90354 99177 । ಹೆಬ್ಬಗೋಡಿ 90350 50023 । ಹೆಸರಘಟ್ಟ ಮುಖ್ಯ ರಸ್ತೆ 90362 89551 । ಹೊಸಕೋಟೆ 90362 89545 । ಹೊಸೂರು 04344 243633 । ಹೊಸೂರು ರಸ್ತೆ 9035499022
STORE LOCATOR
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. EMI offers the above products based on 9,12,18,24 & fixed emi schemes.*Exchange offer valid on MRP and Product as to be in good working condition.Exchange value will differ based on the condition of old product. Flat Rs.8000 off for exchange of old split AC Free smart watch valid on 20000 & above Purchase on select models & brands. Offer valid till stock last.Free installation valid on selected Brands & Models of AC's.
156 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಬೇವು–ಬೆಲ್ಲದ ಹಬ್ಬಕ್ಕೆ ಭರದ ಸಿದ್ಧತೆ • ಹೂಗಳು ಸೊಪ್ಪಿನ ಬೆಲೆ ಏರಿಕೆ

ಯುಗಾದಿ ಹಬ್ಬ: ಖರೀದಿ ಸಂಭ್ರಮ

• ಖಲೀಲಅಹ್ಮದ ಶೇಖ

ಬೆಂಗಳೂರು: ಯುಗಾದಿ ಹಬ್ಬದ ಆಚರಣೆಗೆ ನಗರದ ಜನ ಸಜ್ಜಾಗಿದ್ದು, ಸೋಮವಾರ ವಿವಿಧ ಮಾರುಕಟ್ಟೆಗಳಲ್ಲಿ ಹಣ್ಣು–ಹೂವು ಸೇರಿದಂತೆ ಹಬ್ಬಕ್ಕೆ ಬೇಕಾದ ವಸ್ತುಗಳ ಖರೀದಿಯ ಭರಾಟೆ ಜೋರಾಗಿತ್ತು.

ಮಾವು ಮತ್ತು ಬೇವಿನ ಸೊಪ್ಪನ್ನು ತಂದು ರಸ್ತೆ ಬದಿಗಳಲ್ಲಿ ರಾಶಿ ಹಾಕಿ ಮಾರಾಟ ಮಾಡಲಾಗುತ್ತಿದ್ದು, ಗ್ರಾಹಕರು ಖರೀದಿಗೆ ಮುಗಿಬಿದ್ದರು.

ನಗರದ ಬಟ್ಟೆ ಅಂಗಡಿಗಳು, ಆಭರಣದ ಮಳಿಗೆಗಳಲ್ಲೂ ಖರೀದಿ ಜೋರಾಗಿತ್ತು. ಹಬ್ಬದ ಹಿನ್ನೆಲೆಯಲ್ಲಿ ಎರಡು–ಮೂರು ದಿನಗಳಿಂದ ಹೂವಿನ ವ್ಯಾಪಾರ ಗರಿಗೆದರಿದ್ದು, ದರಗಳು ಏರಿಕೆಯಾಗಿವೆ.

ಕೆ.ಆರ್.ಮಾರುಕಟ್ಟೆ, ಯಶವಂತಪುರ, ಗಾಂಧಿಬಜಾರ್, ಮಲ್ಲೇಶ್ವರ, ಬಸವನಗುಡಿ, ಜಯನಗರ, ವಿಜಯನಗರ, ಮಡಿವಾಳ, ಕೆ.ಆರ್.ಪುರ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ವಿವಿಧೆಡೆ ಮಾರುಕಟ್ಟೆಯಲ್ಲಿ ಜನಜಂಗುಳಿ ಇತ್ತು.

ಹೂಗಳ ಬೆಲೆ ಗಗನಮುಖಿ: ‘ಹಬ್ಬದ ಹಿನ್ನೆಲೆಯಲ್ಲಿ ಹೂವಿಗೆ ಬೇಡಿಕೆ ಹೆಚ್ಚಾಗಿದೆ. ಕನಕಾಂಬರ, ಮಲ್ಲಿಗೆ, ಗುಲಾಬಿ, ಸುಗಂಧರಾಜ, ಸೇವಂತಿಗೆ ಸೇರಿದಂತೆ ಹೂವಿನ ದರಗಳು ಏರಿಕೆಯಾಗಿವೆ’ ಎಂದು ಕೆ.ಆರ್. ಮಾರುಕಟ್ಟೆ ಹೂವಿನ ವ್ಯಾಪಾರಿ ಸುಹಾಸ್ ಮಾಹಿತಿ ನೀಡಿದರು.

‘ಕನಕಾಂಬರ ಪ್ರತಿ ಕೆ.ಜಿಗೆ ₹1,000, ಮಲ್ಲಿಗೆ ಕೆ.ಜಿಗೆ ₹800 ಇದೆ. ಸೇವಂತಿಗೆ ಕೆ.ಜಿಗೆ ₹300, ಗುಲಾಬಿ ಕೆ.ಜಿಗೆ ₹200, ಸುಗಂಧರಾಜ ಕೆ.ಜಿಗೆ ₹240 ರಂತೆ ಮಾರಾಟವಾಗುತ್ತಿದೆ’ ಎಂದರು.

ಯುಗಾದಿ ಹಬ್ಬದ ಅಂಗವಾಗಿ ಸೋಮವಾರ ಗಾಂಧಿಬಜಾರ್‌ನಲ್ಲಿ ಸಾರ್ವಜನಿಕರು ಮಾವಿನ ಸೊಪ್ಪು ಖರೀದಿಸಿದರು

–ಪ್ರಜಾವಾಣಿ ಚಿತ್ರ

ಯುಗಾದಿ ಹಬ್ಬಕ್ಕೆ ತಟ್ಟಿದ ಬರದ ಬಿಸಿ

ದಾಬಸ್‌ಪೇಟೆ: ಬರದ ಛಾಯೆ, ಬಿಸಿಲಿನ ತಾಪ ಹಾಗೂ ಬೆಲೆ ಏರಿಕೆಯ ಬಿಸಿಯಿಂದ ತತ್ತರಿಸಿರುವ ಜನರಲ್ಲಿ ಹಬ್ಬದ ಸಡಗರ, ಸಂಭ್ರಮ ಕಾಣಿಸುತ್ತಿಲ್ಲ.

‘ಈ ಬಾರಿ ಮಳೆಯಿಲ್ಲದೇ ಬೆಳೆ ಇಲ್ಲದೇ ಜನರು ಕಂಗಾಲಾಗಿದ್ದರು. ಅದರ ನಡುವೆ ನೀರಿನ ಅಭಾವ ತಲೆದೋರಿದೆ. ಹಬ್ಬಕ್ಕೆ ಬೇಕಾದ ಹಣ್ಣು, ತರಕಾರಿ, ಹೂವಿನ ಬೆಲೆಯೂ ಹೆಚ್ಚಾಗಿದೆ. ಹಬ್ಬ ಮಾಡುವುದಕ್ಕೆ ಮನಸ್ಸೇ ಇಲ್ಲ’ ಎಂದು ಗೃಹಿಣಿ ಗಂಗಮ್ಮ ಹೇಳುತ್ತಾರೆ.

‘ಬಿಸಿಲಿನಿಂದ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಕೈನಲ್ಲಿ ಕಾಸಿಲ್ಲ. ಮಕ್ಕಳಿಗೆ ಬಟ್ಟೆ ಕೊಡಿಸಲು, ಆಗುತ್ತಿಲ್ಲ. ಹಬ್ಬದ ನೆಪ ಇಟ್ಟುಕೊಂಡು ಹೂವು ಹಣ್ಣು, ತರಕಾರಿ ವ್ಯಾಪಾರಸ್ಥರು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ’ ಎಂದು ಎಂದು ಕಾರ್ಮಿಕ ಗಂಗಣ್ಣ ಬೇಸರ ವ್ಯಕ್ತಪಡಿಸಿದರು.

ಯುಗಾದಿ ಹಬ್ಬದಂದು ಗ್ರಾಮೀಣ ಭಾಗದ ಜನರು ಹೊಸ ಬಟ್ಟೆ ಖರೀದಿಸಿ, ಮನೆಗೆ ಬೇಕಾದ ದಿನಸಿ, ತರಕಾರಿ, ಹೂವು ಹಣ್ಣು ತೆಗೆದುಕೊಂಡು ಹೋಗುತ್ತಾರೆ. ಹಬ್ಬದ ಅಂಗವಾಗಿ ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದರು. ಆದರೆ ಈ ಬಾರಿ ಜನರಲ್ಲಿ ಆ ಬಿರಿಸು ಕಾಣಿಸುತ್ತಿಲ್ಲ’ ಎಂದು ವರ್ತಕರು ಹೇಳುತ್ತಾರೆ.

‘ಯುಗಾದಿ ಎರಡು ದಿನಗಳ ಹಬ್ಬ. ಮೊದಲ ದಿನ ಸಿಹಿ ಖಾದ್ಯಗಳನ್ನು ಸವಿಯುತ್ತಾರೆ. ಎರಡನೇ ದಿನ ಹೊಸ ತೊಡಕು ಅಂಗವಾಗಿ ಮಾಂಸದ ತರಹೇವಾರಿ ಖಾದ್ಯಗಳೊಂದಿಗೆ ಹಬ್ಬ ಸಂಪನ್ನಗೊಳಿಸುತ್ತಾರೆ. ಬೆಂಗಳೂರು, ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಯುಗಾದಿಯು ಹೊಸ ತೊಡಕು ವಿಜೃಂಭಣೆಯಿಂದ ನಡೆಯುತ್ತದೆ. ಈ ವೇಳೆ ಮಾಂಸದ ಬೆಲೆ ಗಗನಕ್ಕೇರುತ್ತದೆ. ತರಕಾರಿಗಳ ದರಗಳು ಸ್ಥಿರವಾಗಿವೆ’ ಎಂದು ತರಕಾರಿ ವರ್ತಕ ಸುಹೇಲ್ ತಿಳಿಸಿದರು.

ಯುಗಾದಿ ವಿಶೇಷ (ದರ ಪಟ್ಟಿ)	
ಬೇವು	₹20 (ಪ್ರತಿ ಕಟ್ಟಿಗೆ)
ಮಾವಿನ ತೋರಣ	₹20
ತುಳಸಿ	ಮಾರಿಗೆ ₹50
ತೆಂಗಿನ ಕಾಯಿ	4ಕ್ಕೆ ₹100
ಬಾಳೆ ಕಂಬ	50 (ಜೋಡಿಗೆ)

ಹೂವಿನ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)		
ಕನಕಾಂಬರ	400	1,000
ಮಲ್ಲಿಗೆ	400	800
ಗುಲಾಬಿ	120	200
ಸುಗಂಧರಾಜ	50	240
ಸೇವಂತಿಗೆ	300	

ಕೆ.ಆರ್. ಮಾರುಕಟ್ಟೆಯಲ್ಲಿ (ಪ್ರತಿ ಕೆ.ಜಿಗೆ ₹ಗಳಲ್ಲಿ)

ತರಕಾರಿ	ಕಳೆದ ವಾರದ ದರ	ಈ ವಾರದ ದರ
ಬೀನ್ಸ್	60	80
ಕ್ಯಾಪ್ಸಿಕಮ್	50	60
ಕ್ಯಾರೆಟ್	50	60
ಹೀರೆಕಾಯಿ	40	60
ಬೆಂಡೇಕಾಯಿ	40	50
ಚವಳಿಕಾಯಿ	40	60
ಮೆಣಸಿನಕಾಯಿ	60	80
ಬಟಾಣಿ	80	200
ಆಲೂಗಡ್ಡೆ	30	20
ಟೊಮೆಟೊ	20	20
ಈರುಳ್ಳಿ	15	20
ಹೂಕೋಸು	50	30
ಬದನೆಕಾಯಿ	40	60
ಕ್ಯಾಬೇಜ್	30	40
ತೊಂಡೆಕಾಯಿ	50	60
ಸೌತೆಕಾಯಿ	40	60
ಬೀಟ್‌ರೂಟ್	50	40
ಮೂಲಂಗಿ	30	40
ಹಾಗಲಕಾಯಿ	40	60
ಕುಂಬಳಕಾಯಿ	20	30
ಬೆಳ್ಳುಳ್ಳಿ	180	200
ಶುಂಠಿ	80	180

ಹಣ್ಣುಗಳ ದರ (ಪ್ರತಿ ಕೆ.ಜಿಗೆ ₹ಗಳಲ್ಲಿ)		
ಸೇಬು	100	120
ದಾಳಿಂಬೆ	80	100
ಕಿತ್ತಳೆ	80	100
ದ್ರಾಕ್ಷಿ	80	80
ಏಲಕ್ಕಿ ಬಾಳೆ	50	50
ಪಚ್ಚಬಾಳೆ	40	40

ಸೊಪ್ಪು	ಚಿಲ್ಲರೆ ದರ (ಪ್ರತಿ ಕಟ್ಟಿಗೆ ₹ಗಳಲ್ಲಿ)	
ಕೊತ್ತಂಬರಿ	20	30
ಮೆಂತ್ಯ	20	30
ಸಬ್ಬಿಗೆ	15	20
ಪಾಲಕ್	10	20
ಪುದೀನ	10	30

ಕನಕಾಂಬರ ಬೇಡಿಕೆಗಿಂತ ಪೂರೈಕೆ ಹೆಚ್ಚಾಗಿದೆ. ಹೀಗಾಗಿ ಬೆಲೆ ಸ್ವಲ್ಪ ಕಡಿಮೆಯಾಗಿದೆ.

ಸುರೇಶ್, ಗಂಗಾ
ಹೂವಿನ ವ್ಯಾಪಾರಿಗಳು, ಕೆ.ಆರ್. ಮಾರುಕಟ್ಟೆ

ವಿವಿಧ ಸಮುದಾಯಗಳ ಪ್ರಮುಖರ ‘ಕೈ’ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನಾಯಕ, ನಿವೃತ್ತ ಐಎಎಸ್ ಅಧಿಕಾರಿ ದಿವಂಗತ ಕೆ.ಶಿವರಾಂ ಅವರ ಪತ್ನಿ ವಾಣಿ ಶಿವರಾಂ, ಪಾಲಿಕೆ ಮಾಜಿ ಸದಸ್ಯೆ, ಆರ್.ಆರ್. ನಗರದ ರೂಪಾ ಲಿಂಗೇಶ್, ಮಡಿವಾಳ ಸಮುದಾಯದ ಮುಖಂಡ ಗೋಪಿಕೃಷ್ಣ ಅವರು ಸೋಮವಾರ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಎಲ್ಲರಿಗೂ ಕಾಂಗ್ರೆಸ್ ಧ್ವಜ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು.

ಶಿವಕುಮಾರ್ ಮಾತನಾಡಿ, ‘ನಿಧನರಾಗುವ ಕೆಲವು ದಿನಗಳ ಮೊದಲೇ ಶಿವರಾಂ ಅವರು ಕಾಂಗ್ರೆಸ್ ಪಕ್ಷ ಸೇರುವ ಇಂಗಿತ ವ್ಯಕ್ತಪಡಿಸಿದ್ದರು. ಅವರ ಕುಟುಂಬದವರು ಹಾಗೂ ಅನುಯಾಯಿಗಳು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾರೆ. ಜೊತೆಗೆ, ಛಲವಾದಿ ಮಹಾಸಭಾದ ಪ್ರಮುಖ ನಾಯಕರೂ ಪಕ್ಷ ಸೇರಿದ್ದರಿಂದ ಶಕ್ತಿ ಬಂದಂತಾಗಿದೆ’ ಎಂದರು.

ಮತ್ತೆ ಕೇರಳಕ್ಕೆ: ‘ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲು ಇದೇ 16ರಂದು ಕೇರಳ ಪ್ರವಾಸ ಮಾಡಲಿದ್ದೇನೆ. ನಂತರ ನಮ್ಮ ರಾಜ್ಯದ ಚುನಾವಣೆ ಮುಗಿದ ಬಳಿಕ ತೆಲಂಗಾಣ ಮತ್ತು ಆಂಧ್ರ ಪ್ರದೇಶಕ್ಕೆ ತೆರಳುತ್ತಿದ್ದೇನೆ. ಮುಖ್ಯಮಂತ್ರಿ ಜತೆಯಲ್ಲಿ ಉತ್ತರ ಪ್ರದೇಶಕ್ಕೆ ತೆರಳುವಂತೆ ಪಕ್ಷದ ನಾಯಕರು ಸೂಚನೆ ನೀಡಿದ್ದಾರೆ’ ಎಂದರು.

ಪ್ರಚಾರಕ್ಕೆ ರಾಹುಲ್, ಪ್ರಿಯಾಂಕಾ: ‘ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಒಂದೆರಡು ದಿನ ರಾಜ್ಯದಲ್ಲಿ ಪ್ರಚಾರ ಮಾಡುವಂತೆ ದಿನಾಂಕಗಳನ್ನು ನೀಡಿದ್ದೇವೆ. ಪ್ರಚಾರಕ್ಕೆ ಬರುವಂತೆ ಮಲ್ಲಿಕಾರ್ಜುನ ಖರ್ಗೆಯವರಿಗೂ ಮನವಿ ಮಾಡಿದ್ದೇವೆ. ಉತ್ತರ ಭಾರತದಲ್ಲಿ ಖರ್ಗೆ ಅವರಿಗೆ ಬಹಳ ಬೇಡಿಕೆ ಇದೆ’ ಎಂದರು.

‘ಗ್ಯಾರಂಟಿ ನೋಡಿ ಮತ ಹಾಕಿದರೆ ಕುಕ್ಕರ್ ಬ್ಲಾಸ್ಟ್ ಸಂಭವಿಸಲಿದೆ’ ಎಂಬ ಸಿ.ಟಿ. ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಗ್ಯಾರಂಟಿ ಬಗ್ಗೆ ಮಾತನಾಡಿ ಅವರೂ ಬ್ಲಾಸ್ಟ್ ಆಗಿದ್ದಾರೆ. ಶೋಭಕ್ಕನಿಗೆ ಗೋಬ್ಯಾಕ್ ಎಂದು ಸದಾನಂದ ಗೌಡರನ್ನು ಅವರು ಬ್ಲಾಸ್ಟ್ ಮಾಡಿದ್ದಾರೆ. ಸಿ.ಟಿ. ರವಿಯನ್ನು ನಮ್ಮ ತಮ್ಮಣ್ಣ ಬ್ಲಾಸ್ಟ್ ಮಾಡಿದ್ದಾರೆ’ ಎಂದು ಲೇವಡಿ ಮಾಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ದಿವಂಗತ ಕೆ. ಶಿವರಾಂ ಅವರ ಪತ್ನಿ ವಾಣಿ ಶಿವರಾಂ, ಬಿಬಿಎಂಪಿ ಮಾಜಿ ಸದಸ್ಯೆ ರೂಪಾ ಲಿಂಗೇಶ್, ಮಡಿವಾಳ ಸಮುದಾಯದ ಮುಖಂಡ ಗೋಪಿಕೃಷ್ಣ ಅವರು ಸೋಮವಾರ ಕಾಂಗ್ರೆಸ್ ಪಕ್ಷ ಸೇರಿದರು

ಕಾಂಗ್ರೆಸ್ ವಕ್ತಾರರಾಗಿ ತೇಜಸ್ವಿನಿ ಗೌಡ

ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಇತ್ತೀಚೆಗೆ ಸೇರಿರುವ ವಿಧಾನ ಪರಿಷತ್ ಮಾಜಿ ಸದಸ್ಯೆ ತೇಜಸ್ವಿನಿ ಗೌಡ ಅವರನ್ನು ಕಾಂಗ್ರೆಸ್ ವಕ್ತಾರರಾಗಿ ನೇಮಿಸಲಾಗಿದೆ. ‘ತೇಜಸ್ವಿನಿಯವರು ಕಾಂಗ್ರೆಸ್ ಮೂಲದವರು. ಹಿಂದೆ ಕಾಂಗ್ರೆಸ್‌ನಿಂದ ಸಂಸದರಾಗಿದ್ದರು. ಕಾಂಗ್ರೆಸ್ ಪಕ್ಷದಿಂದ ಮಾತ್ರ ಈ ದೇಶಕ್ಕೆ ಒಳ್ಳೆಯದಾಗಲಿದೆ ಎಂದು ಪಕ್ಷಕ್ಕೆ ಮರಳಿದ್ದಾರೆ. ಸೋಮವಾರದಿಂದ ಅವರು ಪಕ್ಷದ ಅಧಿಕೃತ ವಕ್ತಾರರಾಗಿರುತ್ತಾರೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಎಸ್.ಎಂ. ಕೃಷ್ಣ ಬೆಂಬಲ ಕೋರಿದ ಎಚ್‌ಡಿಕೆ

ಬೆಂಗಳೂರು: ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಅವರನ್ನು ಸೋಮವಾರ ಸಂಜೆ ಭೇಟಿ ಮಾಡಿ, ಬೆಂಬಲ ಕೋರಿದರು.

ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ ಮತ್ತು ಉಮೇಶ್ ಅವರೊಂದಿಗೆ ಸದಾಶಿವನಗರದಲ್ಲಿರುವ ಕೃಷ್ಣ ಮನೆಗೆ ಭೇಟಿ ನೀಡಿದ ಕುಮಾರಸ್ವಾಮಿ, ಕೆಲಕಾಲ ಚರ್ಚೆ ನಡೆಸಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿ ಕಾಂಗ್ರೆಸ್ ನಾಯಕರ ನಿಯೋಗವು ಕಳೆದ ವಾರ ಕೃಷ್ಣ ಅವರನ್ನು ಭೇಟಿ ಮಾಡಿ, ಬೆಂಬಲಕ್ಕೆ ಮನವಿ ಮಾಡಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

Public Notice

Notice is hereby given that the share certificate(s) for the Under-mention equity shares of the company **ZEN TECHNOLOGIES LIMITED** as per the following details, has/have been reported lost/misplaced and the holder(s)/ Purchaser(s) of he said Equity shares have applied to the company to issue duplicate share certificate(s)

Any person who has a claim respect of the said shares should lodge the same with the company at its registered office within 21 days from this date else the company will proceed to issue duplicate certificates(s) to the aforesaid applicants without any further intimation

Name of the Share Holder	Folio no	Share Certificate No(S)	No of shares	Distinctive
K. VENUGOPAL K.V. KUMARI	0001037	3650	1000	77117051-77118050

Name & Registered office address of company
B-42, INDUSTRIAL ESTATE
SANATH NAGAR
HYDERABAD
TELANGANA- 500018

PUBLIC NOTICE

This is to inform the General Public that my clients **Sri.B.R.Radhakrishna** S/o Late.B.S.Ramaswamy Iyengar and Late.H.N.Keshava Murthy residents of No. 11/C, 8th Cross, 2nd Stage, Udayagiri,Kalyangiri, Mysore-570019 have purchased the Property bearing Old No-1355 and 1356 and later No-as 1725/1726 Municipal No-155, PID No-6-21-155 situated at Coconut Avenue, Malleshwaram, Bangalore measuring East to West 45 Feet and North to South 30½ Feet in all measuring 1372.5 Square Feet together with RCC Roofed House, and bounded on **East by :** Swamy Chidananda Ashtrama/Conservaney, **West by :** Coconut Avenue Road, **North by :** Property No-154, **South by:** Property No-156 from Smt.Kanchana Muralidhar represented by her GPA Holder Smt. M.Bhagyalakshmi. That effect Smt. Kanchana Muralidhar has executed a unregistered General Power of Attorney (GPA) in favour of **Smt. M. Bhagyalakshmi** dated 19/08/2004 to register the above said property in favour of my client and handed over the original GPA to my client Sri.B.R.Radhakrishna at the time of registration and the same is lost on transit. And given police complent on dated,.02/042024. In Mysore City Police station (Report No.1000001/2024). Hence if any general public found the same please return to the address mentioned above **within 15 days.**

BHAGEERATHI.V
ADVOCATE

Teachers/ Professors

MVM COLLEGE OF ARTS, SCIENCE & MANAGEMENT (CASM)
REQUIRED
faculties for
MBA, MCA and BHM
Qualification:
As per AICTE norms
Kindly mail your resume to
principalcasm@mvmedu.in
by 15th April, 2024.
Selection is based on Merit.
Salary based on experience
Sd/- Principal

Wanted

WANTED
A Leading Layout Real Estate developer is **looking for Experienced/ Retired / Senior /** Independent capacity & 100% Dedicated Revenue/Legal/Advocate/ Liaison **candidates for Bangalore office.** Mail resumes to **associates.blr10 @gmail.com**

JOB OPPORTUNITIES

General

REQUIRE FEMALE ASSISTANT. MUST SPEAK KANNADA/ENGLISH.SALARY 8000. BTM LAYOUT. CALL 8088672897

Part-Time Jobs

TOP MNC Company Licensed from Central Government Hiring Retired VRS, House wife's age 35 above Minimum Monthly Earnings 75k above: 9916197616

PERSONAL

Lost

I, DHRUV Gupta have lost my 10th Std ICSE Statement of Marks card vide unique id no. 7218918 & Reg .no. 1206327/151, Cathedral High School, year 2020, while travelling. Finders please contact:- 6364547117.

I, EFIOGBE Abla Dorcas, have lost my original Degree Certificate vide Reg. no. 10W9C18010/ 0031874. Bachelor of Business Management, East Point Degree College, year 2013, while travelling by bus. If anybody finds it, please contact:- Chancellor (Evaluator), Education Board, Bangalore University, Gandhibhavana Road, Gnanabharathi, Bangalore.- 560056.

Change of Name

CHANGE OF NAME
I, **RAJU CHIKKOPPA VARADARAJU** alias **RAJU. CV** S/o. Varadaraju R/a #561, 2nd B Main, 11th Block, Nagarabhavi 2nd Stage, Bangalore- 560072 Declare that in my Passport my father Name wrongly mentioned as **VARADARAJA** instead of **VARADARAJU.** And have changed my Name from **RAJU CHIKKOPPA VARADARAJA** to **RAJU CHIKKOPPA VARADARAJU** vide affidavit dated: 02.04.2024 Sworn before Notary H.R. Karunakara, Bengaluru.

I, SHARATH Kumar Shetty K./ Sharath Kumar Shetty S/o Raghurama Shetty Barkuru, residing at 58 'Vishaka' 3rd Main Kalyananagar Nagarabhavi Main Road Bengaluru- 560072 have changed my name to SHARATH KUMAR SHETTY vide affidavit dated 06-04-2024 sworn before Notary H.S. Sakalesh Aradhya Bengaluru.

CHANGE OF NAME
I, **AMMU A,** Residing at # 623, 11th Cross, Indiranagar,Rajajinagar, VTC, Bengaluru -560010, have changed my name to **AMMU V** vide affidavit dated 08.04.2024, before notary G.B. Turamari, Bengaluru. Henceforth I shall be called **AMMU V** only.

I, MAHALAKSHMI R, residing at #FF-05, Abhi Akshay Mansion, Kalashreenagar 1st cross T.Dasarahalli Bengaluru-57 have changed my name as Mahalakshmi R Devadiga, vide affidavit dated 6/4/2024 before Notary V.Anjanappa, Bengaluru

I, THOLIA PREM SINGH S/o.DAYANAND Residing at#883 Monika Nilaya 13th Cross, Havnoor Extension, Nagasandra Post, Bangalore- 560057 have changed my name to PREM SINGH vide`affidavit dated:5.4.2024 before Notary TV.Bhadravijaya Bangalore.

CHANGE OF NAME



I, **ALEEM PASHA,** S/o SHAIK ABDULLA, aged about 51 years, residing at No. 542, 14th Main, 22nd Cross, MHTB Area J P Nagar, 2nd Phase, Bangalore- 560 078. I state that, in my Aadhaar Card, Pan Card & Voters identity Card etc., my name has been entered as **ALEEM PASHA** & in my School Records. Transfer Certificate my name has been mentioned as **ALEEM PASHA S.** Hereby declare that, **ALEEM PASHA** & **ALEEM PASHA S** names are one & the same and it refers to me only, vide Affidavit dated 28.03.2024. Sworn before Advocate and Notary Fahim Unnisa, Bengaluru

I, NIRMALA, Residing at Thirumalashettyhalli, Samethanahalli post, Bengaluru- 560067, have changed my Name to GANGU AGASAR, vide Affidavit dated 08-04-2024, sworn before Notary Veena. J, Bangalore.

JOB
To Place your Classified Ads Contact:
9886213331

DH ಪ್ರಜಾವಾಣಿ
Wishes you all Readers & Advertisers a Happy Ugadi

For Advertisement Booking contact
Ph: 9845114560 | 9731810277
9901641752 | 9886213331

ಕ್ಲಾಸಿಫೈಡ್ಸ್
ADMISSION CORNER

BHARATH EDUCATION SOCIETY ®
B.E.S. DEGREE COLLEGE
IV Block, Jayanagar, Bengaluru - 560011
Recognised by UGC. Affiliated to Bengaluru City University.
Reaccredited B++ by NAAC.
080 - 2663 7295 / 94488 48416
Email: besddcol@yahoo.co.in
Website: www.besinstitutions.edu.in
www.besdegreecollege.in



Sri S.T. Somashekhar
Hon. President, Bharath Education Society
MLA, Yashwantpur Constituency,
Former Minister, Govt of Karnataka

SHAPE YOUR CAREER WITH INTEGRATED SKILL ENHANCEMENT PROGRAMMES



Sri B.L. Lakkegowda
Founder
B.E.S Institutions

PROGRAMMES OFFERED FOR : 2024-25
B.Com | B.B.A. | B.C.A.
B.A. | HEP | HES | HEK
Languages Offered: English, Kannada, Hindi & Sanskrit
As per Bengaluru City University Syllabus

B.E.S. EVENING DEGREE COLLEGE
080-26638415 / 94800 69705 E-mail: besedceve@gmail.com
Reaccredited B by NAAC.
PROGRAMMES OFFERED FOR : 2024-25
B.Com | B.A. | HEP | HES | HEK

Sri..Nirmal Kumar K.R., President, Bharath Education Society
Prof N.S. Vijaya, Vice President, Bharath Education Society
Sri M. Krishna Das, Secretary, Bharath Education Society
Prof N. Ashok Kumar, Principal, BES Degree College
Dr. K.S. Gopalakrishna, Principal, BES Evening Degree College
HOSTEL FACILITY AVAILABLE FOR GIRLS
BES-24509

ಕ್ಲಾಸಿಫೈಡ್ಸ್
CONNECT



ಮೀನಾ ಬಜಾರ್
Meena BAZAR
Arts, Crafts, Handlooms and Lifestyle Exhibition
5th to 14th April 2024
11 AM - 7 PM
10 Days Exhibition
Karnataka Chitrakala Parishath Bengaluru
100+ Stalls | Live Performance
Entry Free



For Details Contact : 6364685716 / 9036658774
HANDLOOMS | HOME DECOR | HANDICRAFTS | CLOTHING | JEWELLERY

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.50 Crores. Party going out of station, Immediate Registration, Contact: 9845765559/ 9845043282

Out-Station

VIJAY NAGAR, HUBBALLI In Prime Locality. North Facing Three Floors each 1960 Sqft. Built in 5700 Sqft. PLOT with all amenities, Lift, Car Parking & Garden Contact: SR Hosamani 9148391939, 9449929655

BUSINESS

Business Offers

General

DRY FRUITS (more than 50 varieties), Flavoured Cashews, Dry Fruits Gift boxes, Attractive Price, Excellent Quality, Free Home Delivery. Contact Farms India 8095059460/ 6360940295

Business to Business

Business

A LEADING BANKING SERVICE Company Looking Business Partners/Investors, Preferable Rajajinagar, Malleshwaram, Vijayanagar, Yeshwanthpura Located & Retired Persons.Contact: 8861438101.

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಚುನಾವಣೆಗಷ್ಟೇ ಸೀಮಿತವಾಗುವ ಆಶ್ವಾಸನೆ • ಜನರ ಕೂಗಿಗೆ ಜನಪ್ರತಿನಿಧಿಗಳ ನಿರ್ಲಕ್ಷ್ಯ

ಬೆಂಗಳೂರು: 'ಸ್ಮಾರ್ಟ್' ಆಗದ ಪಾರ್ಕಿಂಗ್

• ಸಂತೋಷ ಜಿಗಳಿಕೊಪ್ಪ

ಮತ ಮಂಥನ

ಬೆಂಗಳೂರು: ನಗರದಲ್ಲಿ ನೋಂದಣಿಯಾದ ವಾಹನಗಳ ಸಂಖ್ಯೆ ಕೋಟಿ ಗಡಿ ದಾಟಿದೆ. ಮಾರುಕಟ್ಟೆಗೆ ಲಗ್ಗೆ ಇರಿಸುತ್ತಿರುವ ಹೊಸ ವಾಹನಗಳ ನೋಂದಣಿಯೂ ವರ್ಷದಿಂದ ವರ್ಷಕ್ಕೆ ಏರಿಕೆ ಆಗುತ್ತಿದೆ. ವಾಹನ ಖರೀದಿಸುವವರಿಗೆ ನಗರದಲ್ಲಿ ನಿಲುಗಡೆಯದ್ದೇ (ಪಾರ್ಕಿಂಗ್) ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಪ್ರತಿ ಚುನಾವಣೆಯಲ್ಲೂ 'ಸ್ಮಾರ್ಟ್ ಪಾರ್ಕಿಂಗ್' ಆಶ್ವಾಸನೆ ನೀಡುವ ಪಕ್ಷಗಳು ಹಾಗೂ ಜನಪ್ರತಿನಿಧಿಗಳು, ಚುನಾವಣೆ ಮುಗಿಯುತ್ತಿದ್ದಂತೆ ಮೌನವಾಗುತ್ತಾರೆ.

ಅತಿ ವೇಗವಾಗಿ ಬೆಳೆಯುತ್ತಿರುವ ನಗರದ ಬಹುತೇಕ ಪ್ರದೇಶಗಳಲ್ಲಿ ಸಮರ್ಪಕವಾದ ಪಾರ್ಕಿಂಗ್ ವ್ಯವಸ್ಥೆ ಇಲ್ಲ. ಮನೆಯಿಂದ ವಾಹನಗಳಲ್ಲಿ ಹೊರಗೆ ಬರುವ ಜನ, 'ಜಾಗ ಯಾವುದಯ್ಯಾ ವಾಹನ ನಿಲ್ಲಿಸಲು?' ಎನ್ನುತ್ತಾ ಪಾರ್ಕಿಂಗ್‌ಗಾಗಿ ಹುಡುಕಾಡುವ ಸ್ಥಿತಿ ಸಾಮಾನ್ಯವಾಗಿದೆ. ಎಲ್ಲೆಂದರಲ್ಲಿ ವಾಹನ ನಿಲ್ಲಿಸಿದರೆ, ಸಂಚಾರ ಪೊಲೀಸರಿಂದ ದಂಡ ಬೀಳುವ ಭಯವೂ ಕಾಡುತ್ತಿದೆ.

ಸಾರಿಗೆ ಇಲಾಖೆ ಮಾಹಿತಿ ಪ್ರಕಾರ, 2022–23ರ ಅಂತ್ಯಕ್ಕೆ ನಗರದಲ್ಲಿ 1,10,48,537 (1 ಕೋಟಿ 10 ಲಕ್ಷಕ್ಕೂ ಹೆಚ್ಚು) ವಾಹನಗಳು ನೋಂದಣಿ ಆಗಿವೆ. ಈ ಪೈಕಿ ಬಹುತೇಕ ವಾಹನಗಳು ನಗರದಲ್ಲಿ ನಿತ್ಯವೂ ಸಂಚರಿಸುತ್ತವೆ. ಜೊತೆಗೆ, ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಸಾವಿರಾರು ಸಂಖ್ಯೆಯಲ್ಲಿ ವಾಹನಗಳು ನಗರಕ್ಕೆ ಬಂದು ಹೋಗುತ್ತವೆ. ಇಂಥ ವಾಹನಗಳ ನಿಲುಗಡೆಗೆ ಕೆಲವು ಕಡೆ ಮಾತ್ರ ಪಾರ್ಕಿಂಗ್ ಸ್ಥಳಗಳನ್ನು ನಿಗದಿಪಡಿಸಲಾಗಿದೆ. ಆದರೆ, ಬಹುತೇಕ ಕಡೆ ರಸ್ತೆ ಅಕ್ಕ-ಪಕ್ಕ ಹಾಗೂ ಸಾರ್ವಜನಿಕ ಸ್ಥಳಗಳೇ ಅನಧಿಕೃತ ಪಾರ್ಕಿಂಗ್ ತಾಣಗಳಾಗಿವೆ.

ಬಿಬಿಎಂಪಿಯಿಂದ ಪಾರ್ಕಿಂಗ್ ನೀತಿ ಜಾರಿಯಾಗಿದೆ. ವಾಹನಗಳ ಮಾಲೀಕರು ಸ್ವಂತ ಜಾಗಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿಕೊಳ್ಳುವಂತೆ ನಿಯಮ ರೂಪಿಸಲಾಗಿದೆ. ಜೊತೆಗೆ, ಸುಸಜ್ಜಿತ ಸ್ಮಾರ್ಟ್ ಪಾರ್ಕಿಂಗ್ ಕಲ್ಪಿಸುವ ಬಗ್ಗೆ ನೀತಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಜನರ ವಾಹನಗಳ ನಿಲುಗಡೆ ಸಮಸ್ಯೆಗೆ ಇದುವರೆಗೂ ಶಾಶ್ವತ ಪರಿಹಾರ ಸಿಕ್ಕಿಲ್ಲ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೂ ಈ ವಿಷಯದಲ್ಲಿ ಮೌನ ವಹಿಸಿದ್ದಾರೆ.

ಪಾರ್ಕಿಂಗ್ ನೀತಿಯನ್ನು ಬಹುತೇಕ ಕಟ್ಟಡಗಳು ಸರಿಯಾಗಿ ಪಾಲಿಸುತ್ತಿಲ್ಲ. ಇದು ಸಹ ಪಾರ್ಕಿಂಗ್ ಸಮಸ್ಯೆ ಮತ್ತಷ್ಟು ಬಿಗಡಾಯಿಸಲು ಕಾರಣವಾಗಿದೆ. ಹಲವೆಡೆ ಪಾದಚಾರಿ ಮಾರ್ಗ ಮತ್ತು ರಸ್ತೆಯ ಅಕ್ಕ-ಪಕ್ಕ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ರಸ್ತೆಯ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ, ಇತರೆ ವಾಹನಗಳ ಸಂಚಾರಕ್ಕೆ ಇಕ್ಕಟ್ಟಾಗುತ್ತಿದೆ. ಪಾದಚಾರಿ ಸಂಚಾರಕ್ಕೂ ಹಲವು ರಸ್ತೆಗಳಲ್ಲಿ ಜಾಗವೇ ಇಲ್ಲದಂತಾಗಿದೆ.

ಕೈಕೊಟ್ಟ ಕಂಪನಿ, ಪಾರ್ಕಿಂಗ್ ನೀತಿಗೆ ಹಿನ್ನಡೆ: ನಗರದ ಕಸ್ತೂರಬಾ ರಸ್ತೆಯಲ್ಲಿ 2019ರಲ್ಲಿ ಮೊದಲ ಬಾರಿಗೆ ಸ್ಮಾರ್ಟ್ ಪೇ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ತರಲಾಗಿತ್ತು. ಇದಾದ ನಂತರ, ಬಿಬಿಎಂಪಿ ವತಿಯಿಂದ ನಗರದ 87 ಪ್ರಮುಖ ರಸ್ತೆಗಳಲ್ಲಿ 'ಸ್ಮಾರ್ಟ್ ಪೇ ಪಾರ್ಕಿಂಗ್' ಜಾರಿಗೆ ಕ್ರಮ ಕೈಗೊಳ್ಳಲಾಗಿತ್ತು. ನಿರ್ವಹಣೆ ಹೊಣೆಯನ್ನು ಕಂಪನಿಯೊಂದಕ್ಕೆ ವಹಿಸಲಾಗಿತ್ತು.

ಎಂ.ಜಿ. ರಸ್ತೆ, ಮಲ್ಯ ಆಸ್ಪತ್ರೆ ರಸ್ತೆ, ಕನ್ನಿಂಗ್‌ಹ್ಯಾಮ್ ರಸ್ತೆ, ರೆಸಿಡೆನ್ಸಿ, ಚರ್ಚ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ ಸೇರಿದಂತೆ ಕೆಲ ಪ್ರಮುಖ ಪ್ರದೇಶಗಳಲ್ಲಿ ಮಾತ್ರ ಹಣ ಪಾವತಿಸಿ ವಾಹನ ನಿಲ್ಲಿಸುವ (ಪೇ ಪಾರ್ಕಿಂಗ್) ವ್ಯವಸ್ಥೆ ಜಾರಿಗೆ ತರಲಾಗಿತ್ತು. ಪೇ ಪಾರ್ಕಿಂಗ್‌ನಿಂದ ಬಿಬಿಎಂಪಿಗೆ ವಾರ್ಷಿಕ ₹ 31.56 ಕೋಟಿ ಆದಾಯ ನಿರೀಕ್ಷಿಸಲಾಗಿತ್ತು. ಪಾರ್ಕಿಂಗ್ ಹೆಸರಿನಲ್ಲಿ ಹಣ ವಸೂಲಿ ಮಾಡಿದ್ದ ಕಂಪನಿಯಿಂದ ಬಿಬಿಎಂಪಿಗೆ ಇದುವರೆಗೂ ಹಣ ಪಾವತಿಯಾಗಿಲ್ಲವೆಂಬುದು ಗೊತ್ತಾಗಿದೆ.

ಪಾರ್ಕಿಂಗ್ ನೀತಿ 2.0 ಅಡಿ ನಗರದ 723 ರಸ್ತೆಗಳಲ್ಲಿ ಪೇ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ತರಲು ಬಿಬಿಎಂಪಿ ಟೆಂಡರ್ ಕರೆದಿತ್ತು. ಆದರೆ, ಯಾರೂ ಟೆಂಡರ್‌ನಲ್ಲಿ ಭಾಗವಹಿಸಿರಲಿಲ್ಲ. ಪಾರ್ಕಿಂಗ್ ನೀತಿಯಲ್ಲಿರುವ ಕೆಲ ಅವೈಜ್ಞಾನಿಕ ನಿಯಮಗಳೇ ಇದಕ್ಕೆ ಕಾರಣ ಎಂಬ ಆರೋಪಗಳೂ ಇವೆ. ಶಾಂತಿನಗರ ಬಸ್ ನಿಲ್ದಾಣ ಹಾಗೂ ಇತರೆಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಅಲ್ಲೆಲ್ಲ ಮೂಲಸೌಕರ್ಯ ಕೊರತೆಯೂ ಎದ್ದು ಕಾಣುತ್ತಿದೆ.

ದುಬಾರಿ ದರ ವಸೂಲಿ: ಕೆಲ ಉದ್ಯಾನಗಳು, ಶಾಪಿಂಗ್ ಮಾಲ್‌ಗಳು, ಬಿಬಿಎಂಪಿ ಬಸ್ ನಿಲ್ದಾಣ, ಮೆಟ್ರೊ ನಿಲ್ದಾಣ, ರೈಲು ನಿಲ್ದಾಣ ಸೇರಿದಂತೆ ಹಲವು ಸಾರ್ವಜನಿಕ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಟೆಂಡರ್ ಪಡೆದಿರುವ ಏಜೆನ್ಸಿಯವರು ದುಬಾರಿ ಶುಲ್ಕ ಸಂಗ್ರಹಿಸುತ್ತಿದ್ದಾರೆ ಎಂಬ ಆರೋಪವಿದೆ. ಇದರಿಂದ ಬೇಸತ್ತ ಜನ, ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದು ಕಂಡುಬರುತ್ತಿದೆ.

ನಗರದ ಬಹುತೇಕ ಕಡೆ ಖಾಸಗಿಯವರು ನಿಗದಿತ ಜಾಗದಲ್ಲಿ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಿದ್ದಾರೆ. ಗಂಟೆ ಲೆಕ್ಕದಲ್ಲಿ ದರ ನಿಗದಿ ಮಾಡಿದ್ದಾರೆ. ಇದಕ್ಕೆ ಮಾನದಂಡ ಏನು ಎಂದೇ ತಿಳಿಯುವುದಿಲ್ಲ ಎನ್ನುತ್ತಾರೆ ನಾಗರಿಕರು. ಹೀಗೆ ದರ ನಿಗದಿ ವಿಚಾರದಲ್ಲೂ ಜನಪ್ರತಿನಿಧಿಗಳು ಮೌನವಾಗಿದ್ದಾರೆ. ಖಾಸಗಿಯವರ ವರ್ತನೆಯಿಂದ ಜನರ ಜೇಬಿಗೆ ಕತ್ತರಿ ಬೀಳುತ್ತಿದೆ.

'ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಖಾಸಗಿ ಜಾಗದಲ್ಲಿ ವಾಹನ ನಿಲುಗಡೆ ಮಾಡುತ್ತೇನೆ. ಪ್ರತಿ ಗಂಟೆಗೆ ₹ 40 ಪಡೆಯುತ್ತಿದ್ದಾರೆ. ವಾರಾಂತ್ಯದಲ್ಲಿ ₹ 60 ವಸೂಲಿ ಮಾಡುತ್ತಾರೆ. ದರದ ಬಗ್ಗೆ ಪ್ರಶ್ನೆ ಮಾಡಿದರೆ, 'ಬೇಕಾದರೆ ವಾಹನ ನಿಲ್ಲಿಸಿ. ಇಲ್ಲದಿದ್ದರೆ ಹೋಗಿ' ಎನ್ನುತ್ತಾರೆ' ಎಂದು ಕಂಪನಿಯೊಂದರ ಉದ್ಯೋಗಿ ಎನ್.ಆರ್. ಸಾಗರ್ ದೂರಿದರು.

'ಜನರ ವಾಹನಗಳಿಗೆ ವ್ಯವಸ್ಥಿತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಸರ್ಕಾರದಿಂದ ಆಗುತ್ತಿಲ್ಲ. ಹೀಗಾಗಿ, ಖಾಸಗಿಯವರ ಆರ್ಭಟವೂ ಜೋರಾಗಿದೆ. ದರಕ್ಕೆ ಲಗಾಮು ಹಾಕಬೇಕಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು, ಜನರಿಗೆ ಹೊರೆಯಾಗದಂತೆ ದರ ನಿಗದಿಪಡಿಸಬೇಕು. ಹೆಚ್ಚು ದರ ವಸೂಲಿ ಮಾಡುವ ಖಾಸಗಿಯವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿದರು.

ಶಾಶ್ವತ ಪರಿಹಾರಕ್ಕೆ ಆಗ್ರಹ: 'ಪ್ರತಿ ಚುನಾವಣೆಯಲ್ಲೂ ಮತ ಕೇಳಿಕೊಂಡು ಮನೆಗೆ ಬರುವ ಜನಪ್ರತಿನಿಧಿಗಳು, 'ಬೆಂಗಳೂರು ಅಭಿವೃದ್ಧಿ ಮಾಡುತ್ತೇವೆ. ಸ್ಮಾರ್ಟ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ತರುತ್ತೇವೆ' ಎನ್ನುತ್ತಿದ್ದಾರೆ. ಚುನಾವಣೆಗಳು ಕಳೆದು ಹೊಸ ಚುನಾವಣೆಗಳು ಬಂದರೂ ಭರವಸೆಗಳು ಈಡೇರುತ್ತಿಲ್ಲ' ಎಂದು ಜನರು ದೂರುತ್ತಿದ್ದಾರೆ.

ನಗರದ ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಮಾಡಿರುವುದು –ಪ್ರಜಾವಾಣಿ ಚಿತ್ರ

ಅಂಕಿ ಅಂಶಗಳು

87 ಸ್ಮಾರ್ಟ್ ಪೇ ಪಾರ್ಕಿಂಗ್ ಅಳವಡಿಸಲು ನಿಗದಿಪಡಿಸಿದ್ದ ರಸ್ತೆಗಳು

₹31.56 ಕೋಟಿ ಬಿಬಿಎಂಪಿ ಪೇ ಪಾರ್ಕಿಂಗ್‌ನಿಂದ ನಿರೀಕ್ಷಿಸಿದ್ದ ವಾರ್ಷಿಕ ಆದಾಯ

1.10 ಕೋಟಿ ಬೆಂಗಳೂರಿನಲ್ಲಿ ನೋಂದಣಿಯಾದ ಒಟ್ಟು ವಾಹನಗಳು (2022–23ರ ಅಂಕಿ–ಅಂಶ)

73.55 ಲಕ್ಷ ದ್ವಿಚಕ್ರ ವಾಹನಗಳು

23.54 ಲಕ್ಷ ಕಾರುಗಳ ಸಂಖ್ಯೆ

2.60 ಲಕ್ಷ ನಾಲ್ಕು–ಮೂರು ಚಕ್ರಗಳ ಗೂಡ್ಸ್ ವಾಹನಗಳ ಸಂಖ್ಯೆ

3.01 ಲಕ್ಷ ಆಟೊರಿಕ್ಷಾ

ಲಭ್ಯವಾಗದ ಬಹುಮಹಡಿ ಕಟ್ಟಡ

'ಸ್ಮಾರ್ಟ್ ಪಾರ್ಕಿಂಗ್' ಉದ್ದೇಶಕ್ಕಾಗಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ 'ಬಹುಮಹಡಿ ಕಟ್ಟಡ' ನಿರ್ಮಿಸಲಾಗಿದೆ. ವಾಹನಗಳ ನಿಲುಗಡೆಗೆ ಅಗತ್ಯವಿರುವ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿದೆ. ಆದರೆ, ಈ ಕಟ್ಟಡ ಇದುವರೆಗೂ ಜನರ ಸೇವೆಗೆ ಲಭ್ಯವಾಗಿಲ್ಲ.

'ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್ ಕಂಪನಿ'ಗೆ ನಿರ್ವಹಣೆ ಜವಾಬ್ದಾರಿ ವಹಿಸಲಾಗಿದೆ. ಕಾಳಿದಾಸ ರಸ್ತೆ, ಕನಕದಾಸ ರಸ್ತೆ, ಶೇಷಾದ್ರಿ ರಸ್ತೆ, ಗಾಂಧಿನಗರ, ಮೆಜೆಸ್ಟಿಕ್, ವಿಧಾನಸೌಧ ಹಾಗೂ ಸುತ್ತಮುತ್ತ ಸ್ಥಳಕ್ಕೆ ಬಂದು ಹೋಗುವವರಿಗೆ ಈ ಕಟ್ಟಡದಿಂದ ಅನುಕೂಲವಾಗಲಿದೆ.

'ಬಿಬಿಎಂಪಿಯ ನಗರೋತ್ಥಾನ ಯೋಜನೆಯಡಿ 2017ರಲ್ಲಿ ಕಟ್ಟಡದ ಕಾಮಗಾರಿ ಆರಂಭವಾಗಿತ್ತು. ಕಟ್ಟಡ ನಿರ್ಮಾಣ ಕೆಲಸ ಎರಡು ವರ್ಷಗಳ ಹಿಂದೆಯೇ ಮುಗಿದಿದೆ. ಇಷ್ಟಾದರೂ ಕಟ್ಟಡದ ಬಳಕೆಗೆ ಇದುವರೆಗೂ ಅವಕಾಶ ಸಿಕ್ಕಿಲ್ಲ' ಎಂದು ಚಾಲಕರು ದೂರಿದರು.

ನಿಲುಗಡೆ ವಿಚಾರಕ್ಕೆ ಮಾರಾಮಾರಿ

ಎಚ್‌ಎಎಲ್ ಠಾಣೆ ವ್ಯಾಪ್ತಿಯ ದೊಡ್ಡನೆಕ್ಕುಂದಿಯಲ್ಲಿ ಕಾರು ನಿಲುಗಡೆ ವಿಚಾರವಾಗಿ ಅಕ್ಕ-ಪಕ್ಕದ ಮನೆಯವರ ನಡುವೆ ಮಾರಾಮಾರಿ ನಡೆದಿತ್ತು. ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಎಂಜಿನಿಯರ್ ದಂಪತಿ ಮೇಲೆ ಹಲ್ಲೆ ಸಹ ಮಾಡಲಾಗಿತ್ತು. ಈ ಸಂಬಂಧ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದರು.

ಪಾರ್ಕಿಂಗ್ ವಿಚಾರಕ್ಕೆ ಜನರ ನಡುವೆಯೇ ಪದೇ ಪದೇ ಗಲಾಟೆಗಳು ನಡೆಯುತ್ತಿವೆ. ಕೊಲೆ ಯತ್ನದಂಥ ಪ್ರಕರಣಗಳೂ ವರದಿಯಾಗುತ್ತಿವೆ.

ಲೋಕಸಭಾ ಚುನಾವಣೆ | ಮತದಾರರು ಏನಂತಾರೆ?

ಸಮಸ್ಯೆಗೆ ಕಿವಿಯಾಗದ ಜನಪ್ರತಿನಿಧಿಗಳು



ಚಿಕ್ಕಪೇಟೆಯು ಬೆಂಗಳೂರಿನ ಹೃದಯ ಭಾಗದಲ್ಲಿದೆ ಮತ್ತು ನಗರದ ಹಳೆಯ ಭಾಗವಿದು. ಆದರೆ, ಇಲ್ಲಿ ಮೂಲಸೌಕರ್ಯಗಳ ಕೊರತೆ ಹೆಚ್ಚಾಗಿದೆ. ಈ ಎಲ್ಲ ಸಮಸ್ಯೆಗಳು ಆಯ್ಕೆಯಾಗಿ ಹೋದ ಜನಪ್ರತಿನಿಧಿಗಳ ಕಣ್ಣಿಗೆ ಕಾಣಿಸುವುದಿಲ್ಲ. ಒಟಿಸಿ ರಸ್ತೆ, ಬಳೆಪೇಟೆ ಚೌಕ, ಸುಲ್ತಾನ್ ಪೇಟೆ, ಮಾಮೂಲ್ ಪೇಟೆ, ಕೆ.ಆರ್. ಮಾರುಕಟ್ಟೆ ಸಂಪರ್ಕಿಸುವ ಬಿವಿಕೆ ಅಯ್ಯಂಗಾರ್ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಚುನಾವಣೆ ಮುಂಚಿತವಾಗಿ ರಸ್ತೆ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುವ ಜನಪ್ರತಿನಿಧಿಗಳು ಮತ್ತೆ ಇತ್ತ ಸುಳಿಯುವುದೇ ಇಲ್ಲ. ಇಲ್ಲಿನ ಸಮಸ್ಯೆಗಳನ್ನು ಪರಿಹರಿಸುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. ಲೋಕಸಭಾ ಚುನಾವಣೆಯಲ್ಲಿ ಆಯ್ಕೆ ಆಗುವ ಅಭ್ಯರ್ಥಿ ಕ್ಷೇತ್ರ ಮತದಾರರೊಂದಿಗೆ ನಿಕಟ ಸಂಪರ್ಕ ಹೊಂದಿರಬೇಕು.

ಶಿವಪ್ರಸಾದ್ ಎಸ್., ಚಿಕ್ಕಪೇಟೆ

ಮೂಲಸೌಲಭ್ಯಗಳದ್ದೇ ಕೊರತೆ

ದಾಸರಹಳ್ಳಿ ವಿಧಾನಸಭಾ ಕ್ಷೇತ್ರವು ವಲಸಿಗರ ನೆಲೆಯಾಗಿದೆ. ಈ ಕ್ಷೇತ್ರದಲ್ಲಿ ಮೂಲಸೌಲಭ್ಯಗಳ ಕೊರತೆ ಇದೆ. ಲೋಕಸಭೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ನಮ್ಮ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ವಲಸಿಗರು, ಮಧ್ಯಮವರ್ಗದವರು, ಕಾರ್ಮಿಕರು ವಾಸಿಸುತ್ತಿರುವ ದಾಸರಹಳ್ಳಿ ಕ್ಷೇತ್ರದ ಚಿಕ್ಕಸಂದ್ರ, ಮೇದರಹಳ್ಳಿ, ಚಿಕ್ಕಬಾಣವಾರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೊಳಿಸಬೇಕು. ಇಲ್ಲಿನ ಸರ್ಕಾರಿ ಶಾಲೆಗಳನ್ನು ಉನ್ನತೀಕರಿಸಬೇಕು. ಉದ್ಯಾನಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ವೈ.ಬಿ.ಎಚ್. ಜಯದೇವ್, ಚಿಕ್ಕಸಂದ್ರ

ಭ್ರಷ್ಟಾಚಾರ ಕಿತ್ತುಹಾಕಲು ಶ್ರಮಿಸಲಿ

ಮತದಾರರ ಮತಗಟ್ಟೆಯಲ್ಲಿ ಹುಟ್ಟುವ ಪ್ರಜಾಪ್ರತಿನಿಧಿಯು, ಜನರ ಕಷ್ಟಗಳಿಗೆ ಸ್ಪಂದಿಸಬೇಕು. ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರವನ್ನು ಬೇರು ಸಮೇತ ಕಿತ್ತುಹಾಕಬೇಕು. ಕ್ಷೇತ್ರದಲ್ಲಿ ಜನಸಂಪರ್ಕ ಸಭೆಗಳನ್ನು ಆಯೋಜಿಸುವ ಮೂಲಕ ಮತದಾರರ ಕುಂದು ಕೊರತೆಗಳನ್ನು ಆಲಿಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗೆ ಬೇಕಾಗುವ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಪೂರೈಕೆ ಮಾಡಬೇಕು.

ಪವನ ಬಿ., ವಿಜಯನಗರ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

ಪಿ.ಸಿ.ಮೋಹನ್, ತೇಜಸ್ವಿ ಪ್ರಚಾರ

'ನಗರದ ಸಮಗ್ರ ಅಭಿವೃದ್ಧಿಗೆ ಕೇಂದ್ರದಿಂದ ₹1.30 ಲಕ್ಷ ಕೋಟಿ ಅನುದಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಮೋಹನ್ ಅವರು ಸೋಮವಾರ ತಮ್ಮ ಕ್ಷೇತ್ರದ ಹಲವು ಕಡೆ ಬಿರುಸಿನ ಪ್ರಚಾರ ನಡೆಸಿದರು.

ಉದ್ಯಾನ, ಅಪಾರ್ಟ್‌ಮೆಂಟ್ ಸೇರಿದಂತೆ ನಾನಾ ಕಡೆ ತೆರಳಿ ಮತದಾರರ ಬೆಂಬಲ ಕೋರಿದರು. ಇದೇ ವೇಳೆ ಕರಪತ್ರ ಹಂಚಿಕೆ ಮಾಡಿದರು.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಬಾಣಸವಾಡಿಯ ಬಂಡೆ ಪಾರ್ಕ್, ಗ್ರೀನ್ ಪಾರ್ಕ್ ಮತ್ತು ಒಎಂಬಿಆರ್ ಲೇಔಟ್ ಪಾರ್ಕ್‌ಗಳಲ್ಲಿ ಸಾರ್ವಜನಿಕರೊಂದಿಗೆ ಸಮಾಲೋಚನೆ ನಡೆಸಿ, ಬೆಂಬಲ ಕೋರಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಶ್ರೀರಾಮ್ ಲಕ್ಸರ್ ಅಪಾರ್ಟ್‌ಮೆಂಟ್ ಸಂಘದ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿದರು. ಈ ವೇಳೆ, ಸಾರ್ವಜನಿಕರ ಕುಂದುಕೊರತೆ ಆಲಿಸಿದರು.

ಬ್ರೂನಾ ವಿಸ್ತಾ ಅಪಾರ್ಟ್‌ಮೆಂಟ್ ಸಂಘದ ಸದಸ್ಯರ ಜತೆಗೆ ಸಮಾಲೋಚನೆ ನಡೆಸಿ ಬೆಂಬಲ ಕೋರಿದರು.

ಶ್ರೀರಾಮ್ ಗ್ರೀನ್‌ಫೀಲ್ಡ್ ಅಪಾರ್ಟ್‌ಮೆಂಟ್ ಸಂಘದ ಸದಸ್ಯರನ್ನೂ ಭೇಟಿ ಮಾಡಿ, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಸಾಧನೆಗಳನ್ನು ವಿವರಿಸಿದರು.

ಬೊಮ್ಮನಹಳ್ಳಿಯಲ್ಲಿ ಪ್ರಚಾರ: ಮತ್ತೊಂದೆಡೆ ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರೂ ಪ್ರಚಾರ ನಡೆಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಇಬ್ಬಲೂರಿನ ಸನ್ ಸಿಟಿ ಅಪಾರ್ಟ್‌ಮೆಂಟ್ ನಿವಾಸಿಗಳೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದ ತೇಜಸ್ವಿ ಸೂರ್ಯ, 'ಐದು ವರ್ಷಗಳಲ್ಲಿ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದಿಂದ ₹1.30 ಲಕ್ಷ ಕೋಟಿ ಅನುದಾನ ಬಂದಿದೆ' ಎಂದು ಹೇಳಿದರು.

'ಕೇಂದ್ರ ಸರ್ಕಾರದ ಅನೇಕ ಪ್ರಮುಖ ಯೋಜನೆಗಳು ಬೆಂಗಳೂರಿನಲ್ಲಿ ಜಾರಿಗೊಂಡಿವೆ. ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಮೆಟ್ರೊ ಮಾರ್ಗಗಳ ವಿಸ್ತರಣೆ, ಉಪನಗರ ರೈಲು ಯೋಜನೆ, ಉಪನಗರ ವರ್ತುಲ ರಸ್ತೆ ಯೋಜನೆಗಳಿಗೆ ಕೇಂದ್ರದಿಂದ ಮಂಜೂರಾತಿ ದೊರೆತಿದೆ. ಬಿಎಂಟಿಸಿಗೆ 1,600 ಎಲೆಕ್ಟ್ರಿಕ್ ಬಸ್‌ಗಳನ್ನು ಕೇಂದ್ರ ಸರ್ಕಾರ ಒದಗಿಸಿದೆ' ಎಂದು ಹೇಳಿದರು.

'ರಕ್ತದ ಒತ್ತಡ, ಮಧುಮೇಹದಂತಹ ಕಾಯಿಲೆಗಳಿಂದ ಬಳಲುತ್ತಿರುವ ಕ್ಷೇತ್ರದ ನಾಗರಿಕರಿಗೆ ಉಚಿತ ಔಷಧ ಒದಗಿಸುವ ಸಲುವಾಗಿ ನಮೋ ಆರೋಗ್ಯ ನಿಧಿ ಯೋಜನೆ ಆರಂಭಿಸಲಾಗಿದೆ. ಈ ಯೋಜನೆ ಅಡಿ 1,000ಕ್ಕೂ ಅಧಿಕ ಹಿರಿಯರಿಗೆ ಪ್ರತಿ ತಿಂಗಳು ಔಷಧ ನೀಡಲಾಗುತ್ತಿದೆ. ದಕ್ಷಿಣ ಕ್ಷೇತ್ರದಲ್ಲಿ 5 ವರ್ಷಗಳ ಹಿಂದೆ ಶೇ 14ರಷ್ಟಿದ್ದ ಜನೌಷಧಿ ಕೇಂದ್ರಗಳ ಸಂಖ್ಯೆ ಇದೀಗ ಶೇ 120ಕ್ಕೆ ಏರಿಕೆಯಾಗಿವೆ. ಇಡೀ ದೇಶದಲ್ಲೇ ಅತಿಹೆಚ್ಚು ಜನೌಷಧಿ ಕೇಂದ್ರಗಳನ್ನು ಹೊಂದಿರುವ ಕ್ಷೇತ್ರ ಎನಿಸಿದೆ' ಎಂದು ಹೇಳಿದರು.

ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ, ಸನ್ ಸಿಟಿ ಅಪಾರ್ಟ್‌ಮೆಂಟ್‌ನ ಪ್ರಸಾದ್ ಜೋಶಿ ಉಪಸ್ಥಿತರಿದ್ದರು.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಮೋಹನ್ ತಮ್ಮ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರು.

'ರಾಹುಲ್ ಪ್ರಧಾನಿ: ತಪ್ಪಿಸಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಅಭಿವೃದ್ಧಿ ಕುರಿತು ಮಾತನಾಡುವುದಿಲ್ಲ. ಕೇವಲ ಹಿಂದೂ– ಮುಸ್ಲಿಂ ಎಂದುಕೊಂಡು ಮತ ಪಡೆಯಲು ಹವಣಿಸುತ್ತಿದೆ' ಎಂದು ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಆರೋಪಿಸಿದರು.

ಬೆಂಗಳೂರು ಕೇಂದ್ರ ಲೋಕಸಭೆ ಕ್ಷೇತ್ರ ವ್ಯಾಪ್ತಿಯ ಚಾಮರಾಜಪೇಟೆಯಲ್ಲಿ ಸೋಮವಾರ ನಡೆದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಜಾತಿ- ಧರ್ಮದ ಹೆಸರಿನಲ್ಲಿ ಜನರನ್ನು ವಿಭಜನೆ ಮಾಡುವುದು ಬಿಜೆಪಿ ಚಾಳಿ. ಆದರೆ, ಕಾಂಗ್ರೆಸ್ ಜಾತ್ಯತೀತ ತತ್ವದಲ್ಲಿ ನಂಬಿಕೆಯಿಟ್ಟು ಎಲ್ಲ ವರ್ಗದ ಅಭಿವೃದ್ಧಿ ಬಯಸುತ್ತದೆ' ಎಂದು ತಿಳಿಸಿದರು.

'ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿ ಜಾರಿ ಮಾಡಿ ಆರನೇ ಗ್ಯಾರಂಟಿಯಾಗಿ 1.82 ಲಕ್ಷ ಬಡ ಕುಟುಂಬಗಳಿಗೆ ಮನೆ ಕೊಡುವ ತೀರ್ಮಾನ ಮಾಡಿ ಏಕಕಾಲದಲ್ಲಿ 36 ಸಾವಿರ ಮನೆ ಹಂಚಿಕೆ ಮಾಡಲಾಗಿದೆ' ಎಂದು ಹೇಳಿದರು.

'ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿ ಕೂಟ ಅಧಿಕಾರಕ್ಕೆ ಬಂದರೆ ಪ್ರತಿ ನಿರುದ್ಯೋಗಿ ಯುವಕರಿಗೆ ವರ್ಷಕ್ಕೆ ₹1 ಲಕ್ಷ, ಪ್ರತಿ ಬಡ ಕುಟುಂಬದ ಮಹಿಳೆಗೆ ₹ 1 ಲಕ್ಷ ನೀಡುವ ಘೋಷಣೆ ಮಾಡಿದ್ದೇವೆ. ರಾಹುಲ್ ಗಾಂಧಿ ಅವರು ದೇಶದ ಪ್ರಧಾನಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂದರು.

'70 ಸಾವಿರ ಲೀಡ್ ಕೊಡಿ': 'ಈ ಚುನಾವಣೆ ಅತ್ಯಂತ ಮಹತ್ವದ್ದು. ದೇಶದಲ್ಲಿ ನೆಮ್ಮದಿ, ಬಡುವರ ಕಲ್ಯಾಣಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಿದೆ. ನಮ್ಮ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ವಿದ್ಯಾವಂತರಾಗಿದ್ದು, ಅವರಿಗೆ ನಮ್ಮ ಕ್ಷೇತ್ರದಲ್ಲಿ 70 ಸಾವಿರ ಲೀಡ್ ಕೊಡಬೇಕು' ಎಂದು ಕಾರ್ಯಕರ್ತರಿಗೆ ಮನವಿ ಮಾಡಿದರು.

ಅಭ್ಯರ್ಥಿ ಮನ್ಸೂರ್ ಅಲಿ ಖಾನ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ರಾಜ್ಯಸಭೆ ಸದಸ್ಯ ಜಿ.ಸಿ.ಚಂದ್ರಶೇಖರ್, ಶಾಸಕ ರಿಜ್ವಾನ್ ಅರ್ಷದ್, ಮುಖಂಡರಾದ ಫೈಸ್, ಅಲ್ತಾಫ್ ಖಾನ್, ಅಪ್ಪೋಡ, ಗೌಸಿ, ರಮೇಶ್, ವಿನಾಯಕ್ ಉಪಸ್ಥಿತರಿದ್ದರು.

ಇದೇ ವೇಳೆ ಶಫಿವುಲ್ಲಾ, ಆನಂದ್, ಕುಮಾರ್ ಸೇರಿ ಹಲವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದರು.

'ಕೆಲಸ ಮಾಡದವರಿಗೆ ವಿಶ್ರಾಂತಿ ಕೊಡಿ': ಅಭ್ಯರ್ಥಿ ಮನ್ಸೂರ್ ಅಲಿಖಾನ್ ಪರವಾಗಿ ರಾಜಾಜಿನಗರ, ತಿಮ್ಮಯ್ಯ ರಸ್ತೆ ಸೇರಿದಂತೆ ಹಲವು ಕಡೆ ಬಿರುಸಿನ ಪ್ರಚಾರ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಪಿ.ಸಿ. ಮೋಹನ್ ಮೂರು ಬಾರಿ ಗೆದ್ದಿದ್ದರೂ ಕ್ಷೇತ್ರಕ್ಕೆ ಹಾಗೂ ನಗರಕ್ಕೆ ಮೂರು ಕಾಸಿನ ಕೆಲಸ ಮಾಡಿಲ್ಲ. ಹೀಗಾಗಿ, ಇವರನ್ನು ಈ ಬಾರಿ ಮನೆಗೆ ಕಳುಹಿಸಿ ವಿಶ್ರಾಂತಿ ಕೊಡಿ' ಎಂದು ಹೇಳಿದರು.

'ಮೋಹನ್ ಅವರು ಸಂಸತ್ತಿನಲ್ಲಿ ಮೂರು ದಿನವಾದರೂ ಬೆಂಗಳೂರಿನ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆಯೇ? ರಾಜ್ಯಕ್ಕೆ ಕೇಂದ್ರದಿಂದ ಆಗುತ್ತಿರುವ ಅನ್ಯಾಯವನ್ನು ಒಂದು ದಿನವೂ ಅವರು ಪ್ರಶ್ನಿಸಿಲ್ಲ' ಎಂದು ಹೇಳಿದರು.

'ರಾಜ್ಯದ ಎಲ್ಲ ಕಡೆ ಬದಲಾವಣೆಯ ಗಾಳಿ ಜೋರಾಗಿ ಬೀಸುತ್ತಿದೆ. ಮೋದಿ ಗಾಳಿ ಎಲ್ಲೂ ಇಲ್ಲ. ಹೀಗಾಗಿ, ಈ ಬಾರಿ ಮನ್ಸೂರ್ ಅಲಿ ಖಾನ್ ಅವರು ಗೆಲ್ಲುತ್ತಾರೆ. ಮನ್ಸೂರ್ ಅಲಿಖಾನ್ ಅಪ್ಪಟ ಜಾತ್ಯತೀತ ವ್ಯಕ್ತಿ. ನಿಮ್ಮ ಆಶೀರ್ವಾದ ಇರಲಿ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು.

ಚಾಮರಾಜಪೇಟೆಯಲ್ಲಿ ಸೋಮವಾರ ನಡೆದ ಕಾರ್ಯಕರ್ತರ ಸಮಾವೇಶದಲ್ಲಿ ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ಮುಖಂಡರೊಬ್ಬರಿಗೆ ಹಸ್ತಲಾಘವ ನೀಡಿದರು.

ವಿಧಾನಸಭೆ ಚುನಾವಣೆ: ಮತ ಕೇಳಲು ಬರಲ್ಲ-ರಮೇಶ್ ಕುಮಾರ್

ಶ್ರೀನಿವಾಸಪುರ: 'ಶ್ರೀನಿವಾಸಪುರ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ, ನಿಯತ್ತು ಹಾಗೂ ನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಆದರೆ, ನನಗೆ ಮೋಸವಾಯಿತು. ನನ್ನ ಜೀವನದಲ್ಲಿ ಮುಂದೆಂದೂ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಬಳಿ ಬಂದು ಮತ ಕೇಳಲ್ಲ' ಎಂದು ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಭಾವುಕರಾಗಿ ನುಡಿದರು. ತಾಲ್ಲೂಕಿನ ಅಡ್ಡಗಲ್‌ನ ಸ್ವಗೃಹದಲ್ಲಿ ಭಾನುವಾರ ನಡೆದ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

'ಶ್ರೀನಿವಾಸಪುರ ಕ್ಷೇತ್ರಕ್ಕಾಗಿ ನನ್ನ ಜೀವನವನ್ನೇ ಅರ್ಪಿಸಿದ್ದೇನೆ. ಯಾರ ಮುಂದೆಯೂ ಕೈ ಚಾಚಿಲ್ಲ. ಆದರೆ, ಕೆಲವರು ನನ್ನ ಬೆನ್ನಿಗೆ ಚೂರಿ ಹಾಕಿದರು. ಪುತ್ರನಿಗೆ ರಾಜಕೀಯ ಅವಶ್ಯವಿಲ್ಲ' ಎಂದರು.

ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ರಮೇಶ್ ಕುಮಾರ್ ಲಭ್ಯರಾಗಲಿಲ್ಲ. ಆದರೆ, ಅವರ ಆಪ್ತರು ಹಾಗೂ ಕುಟುಂಬದವರು ಪ್ರತಿಕ್ರಿಯಿಸಿ, 'ಮತ ಕೇಳಲು ಬರಲ್ಲ ಎಂದಷ್ಟೇ ಅವರು ನುಡಿದರು. ಎಲ್ಲೂ ರಾಜಕೀಯ ನಿವೃತ್ತಿ ಬಗ್ಗೆ ಪ್ರಸ್ತಾಪಿಸಲಿಲ್ಲ' ಎಂದರು.

ದಾರಕೇಶ್ವರಯ್ಯಗೆ ಹೈಕೋರ್ಟ್ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಡ ಜಂಗಮ ಜಾತಿ ಪ್ರಮಾಣಪತ್ರ ಬಳಸಿಕೊಂಡು ಪರಿಶಿಷ್ಟ ಜಾತಿಗೆ ಮೀಸಲಾದ ಚಿತ್ರದುರ್ಗ ಕ್ಷೇತ್ರದಲ್ಲಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಮುಂದಾಗಿದ್ದ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರ ಖಾಸಾ ಅಣ್ಣ ಎಂ.ಪಿ.ದಾರಕೇಶ್ವರಯ್ಯ ಅವರ ಪ್ರಯತ್ನಕ್ಕೆ ಹೈಕೋರ್ಟ್ ತಡೆ ಒಡ್ಡಿದೆ.

ಈ ಸಂಬಂಧ ದಾಸರಹಳ್ಳಿಯ ಎಂ.ಚಂದ್ರ ಬಿನ್ ಮುನಿಯಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲೆ ಕಾವ್ಯಶ್ರೀ, 'ದಾರಕೇಶ್ವರಯ್ಯ ಈ ಮೊದಲು ಬೆಂಗಳೂರು ಉತ್ತರ ತಹಶೀಲ್ದಾರ್ ಅವರಿಂದ ಪಡೆದ ಬೇಡ ಜಂಗಮ ಜಾತಿ ಪ್ರಮಾಣಪತ್ರ ರದ್ದಾಗಿತ್ತು. ಈಗ ಬೆಂಗಳೂರು ದಕ್ಷಿಣ ತಹಶೀಲ್ದಾರ್ ಅವರಿಂದ ಇದೇ ರೀತಿಯ ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ಇದು ಸಂಪೂರ್ಣ ಕಾನೂನುಬಾಹಿರ ಮತ್ತು ದುರ್ಬಳಕೆ' ಎಂದು ಆಕ್ಷೇಪಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಮುಂದಿನ ವಿಚಾರಣೆ ವರೆಗೂ ಬೇಡ ಜಂಗಮ ಜಾತಿ ಪ್ರಮಾಣ ಪತ್ರವನ್ನು ಬಳಸದಂತೆ ದಾರಕೇಶ್ವರಯ್ಯ ಅವರಿಗೆ ನಿರ್ಬಂಧ ವಿಧಿಸಿ ಆದೇಶಿಸಿತು.

ಪ್ರತಿವಾದಿಗಳಾದ ಬೆಂಗಳೂರು ನಗರ ಜಿಲ್ಲಾಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಪರವಾಗಿ ಹಿರಿಯ ವಕೀಲ ಸಿ.ಜಗದೀಶ್ ಅವರು ನೋಟಿಸ್ ಪಡೆಯಲು ನ್ಯಾಯಪೀಠ ಆದೇಶಿಸಿತು.

ವಿಚಾರಣೆಯನ್ನು ಇದೇ 10ಕ್ಕೆ ಮುಂದೂಡಲಾಗಿದೆ.

ದಿನೇಶ ಗುಂಡೂರಾವ್ ವಿರುದ್ಧ ದೂರು

ವಿಜಯಪುರ: 'ಸಚಿವ ದಿನೇಶ ಗುಂಡೂರಾವ್ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಗ್ಗೆ ಅಲ್ಲದೇ ಅವುಗಳ ಕಾರ್ಯಕರ್ತರ ಬಗ್ಗೆ ಅವಹೇಳನಕಾರಿಯಾಗಿ ಟ್ವೀಟ್ ಮಾಡುವುದರ ಜೊತೆಗೆ ಹೇಳಿಕೆಯೂ ನೀಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ವಿಜಯಪುರದ ಆಶ್ರಮ ಬಡಾವಣೆ ನಿವಾಸಿ ಪ್ರಕಾಶ ಚವ್ಹಾಣ ಎಂಬುವರು ಸೋಮವಾರ ಗಾಂಧಿ ಚೌಕ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ದಿನೇಶ್ ಗುಂಡೂರಾವ್ ಮನೆಯಲ್ಲೇ ಅರ್ಧ ಪಾಕಿಸ್ತಾನ ಇದೆ' ಎಂಬ ಶಾಸಕ ಯತ್ನಾಳ ಅವರ ಹೇಳಿಕೆ ವಿರುದ್ಧ ಗುಂಡೂರಾವ್ ಪತ್ನಿ ಟಬು ರಾವ್ ದೂರು ದಾಖಲಿಸಿದ ಬೆನ್ನಲ್ಲೇ, ಶಾಸಕ ಯತ್ನಾಳ ಕಡೆಯವರು ಪ್ರತಿದೂರು ನೀಡಿದ್ದಾರೆ.

'ಇಂಡಿಯಾ' ಮಿತ್ರ ಪಕ್ಷಗಳ ಸಮಿತಿ ರಚನೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಪರಸ್ಪರ ಸಹಕಾರದಿಂದ ಕೆಲಸ ಮಾಡಲು ರಾಜ್ಯದಲ್ಲಿಯೂ ಕಾಂಗ್ರೆಸ್ ನೇತೃತ್ವದಲ್ಲಿ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ. ರಾಜ್ಯಸಭೆಯ ಕಾಂಗ್ರೆಸ್ ಸದಸ್ಯ ಜಿ.ಸಿ. ಚಂದ್ರಶೇಖರ್ ಅವರು ಈ ಸಮಿತಿಯ ಅಧ್ಯಕ್ಷರಾಗಿದ್ದು, ಕೆಪಿಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಸಂಚಾಲಕರು.

ಸಿಪಿಐ ಕಾರ್ಯದರ್ಶಿ ಸಾತಿ ಸುಂದರೇಶ್, ಸಿಪಿಎಂ ಕಾರ್ಯದರ್ಶಿ ಬಸವರಾಜು, ಆಮ್ ಆದ್ಮಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನಿ, ಸಮಾಜವಾದಿ ಪಕ್ಷದ ಅಧ್ಯಕ್ಷ ಮಂಜಪ್ಪ ಯಾದವ್, ಡಿಎಂಕೆ ಕಾರ್ಯದರ್ಶಿ ರಾಮಸ್ವಾಮಿ ನಟೇಶನ್ ಸೇರಿದಂತೆ ಇತರರು ಸಮಿತಿಯ ಸದಸ್ಯರಾಗಿದ್ದಾರೆ.

ಶಾಸಕ ಯತ್ನಾಳ ವಿರುದ್ಧ ಎಫ್‌ಐಆರ್

ಬೆಂಗಳೂರು: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಅವರ ಕುಟುಂಬದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದ ಆರೋಪದಡಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ವಿರುದ್ಧ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ದಿನೇಶ್ ಗುಂಡೂರಾವ್ ಪತ್ನಿ ಟಬು ರಾವ್ ಅವರು ಠಾಣೆಗೆ ದೂರು ನೀಡಿದ್ದರು. ದ್ವೇಷ ಭಾವನೆ ಹೆಚ್ಚಿಸುವ (ಐಪಿಸಿ 153 ಬಿ) ಆರೋಪದಡಿ ಯತ್ನಾಳ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೃತ್ಯ ನಡೆದ ಆಧಾರದಲ್ಲಿ ಪ್ರಕರಣವನ್ನು ವಿಜಯಪುರ ಠಾಣೆಗೆ ವರ್ಗಾಯಿಸಲು ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯತ್ನಾಳ ಅವರ ಹೇಳಿಕೆಯಿಂದ ಮನಸ್ಸಿಗೆ ನೋವುಂಟಾಗಿದೆ. ರಾಜಕೀಯ ಕಾರಣಕ್ಕಾಗಿ ನಮ್ಮ ಕುಟುಂಬವನ್ನು ಅವಹೇಳನ ಮಾಡಿ ನಿಂದಿಸಿರುವ ಯತ್ನಾಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ದೂರಿನಲ್ಲಿ ಆಗ್ರಹಿಸಿದ್ದರು.

ಪ್ರಲ್ಹಾದ ಜೋಶಿ ವಿರುದ್ಧ ದಿಂಗಾಲೇಶ್ವರ ಸ್ವಾಮೀಜಿ ಆಕ್ರೋಶ

ದುರಾಡಳಿತದ ವಿರುದ್ಧ ಸ್ವಾಭಿಮಾನದ ಯುದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೋಶಿಯವರ ದುರಾಡಳಿತ ಬಗ್ಗೆ ಹೈಕಮಾಂಡ್ ನಾಯಕರು ಗಮನಹರಿಸುತ್ತಿಲ್ಲ. ಅವರಿಗೆ ಅದೇ ಬೇಕಾಗಿದೆ ಅನಿಸುತ್ತಿದೆ. ಹೀಗಾಗಿ ಈ ದಿಂಗಾಲೇಶ್ವರ ರಾಜಕೀಯ ಪ್ರವೇಶ ಮಾಡಬೇಕಾಯಿತು. ಈ ಚುನಾವಣೆ ಎರಡು ರಾಷ್ಟ್ರೀಯ ಪಕ್ಷಗಳ ವಿರುದ್ಧ ಸ್ವಾಭಿಮಾನದ ಯುದ್ಧ ಆಗಿದೆ...'

ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಗದಗ ಜಿಲ್ಲೆಯ ಶಿರಹಟ್ಟಿಯ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಈ ರೀತಿ ಘೋಷಿಸಿದ್ದಾರೆ. ಆ ಮೂಲಕ, ಹಾಲಿ ಸಂಸದ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ತೊಡೆತಟ್ಟಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ದಿಂಗಾಲೇಶ್ವರ ಶ್ರೀ, 'ಅಧಿಕಾರದ ಮತ್ತು ಸಂಪತ್ತಿನ ಮದದಲ್ಲಿ ಪ್ರಲ್ಹಾದ ಜೋಶಿ ಬದುಕುತ್ತಿದ್ದಾರೆ. ಅವರ ಚೇಲಾಗಳು ಸಾಮಾಜಿಕ ಜಾಲತಾಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನನ್ನ ವಿರುದ್ಧ ಷಡ್ಯಂತ್ರ ಮಾಡುತ್ತಿದ್ದಾರೆ. ಜೋಶಿಯವರೇ, ನಿಮ್ಮ ಯಾವುದೇ ಕುತಂತ್ರ ನಮ್ಮ ಮುಂದೆ ನಡೆಯಲ್ಲ' ಎಂದು ಕಿಡಿಕಾರಿದರು.

ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಬಿ.ಎಸ್. ಯಡಿಯೂರಪ್ಪ ಮತ್ತು ಜಗದೀಶ ಶೆಟ್ಟರ್ ಮನವಿ ಮಾಡಿದ್ದಾರೆ. ಆದರೆ, ಕೆಲವರು ನನ್ನ ಸ್ಪರ್ಧೆ ಹಿಂದೆ ಯಡಿಯೂರಪ್ಪ ಹಾಗೂ ಶೆಟ್ಟರ್ ಕೈವಾಡ ಇದೆಯೆಂದು ಹೇಳುತ್ತಿದ್ದಾರೆ. ಇದೆಲ್ಲಾ ಸುಳ್ಳು. ನನ್ನ ವಿರುದ್ಧ ಯಾರೇ ಮಠಾಧೀಶರು ಹೇಳಿಕೆ ನೀಡಿದ್ದರೂ ಅದು ಜೋಶಿಯವರ ಭಯಕ್ಕಷ್ಟೇ ಕೊಟ್ಟ ಹೇಳಿಕೆಯಾಗಿರುತ್ತದೆ' ಎಂದರು.

'ಪ್ರಧಾನಿ ಮೋದಿ ಭೇಟಿಗೆ ರಾಜ್ಯದ ಬಿಜೆಪಿ ಸಂಸದರಿಗೆ ಅವಕಾಶ ಕೊಡಲಿಲ್ಲ. ಮೋದಿ ಅವರಿಂದ ತಾನು ದೂರ ಆಗಬಹುದೆಂಬ ಭಯ ಜೋಶಿ ಅವರಿಗೆ ಇದೆ. ನನ್ನ ಗುರಿ ಮುಟ್ಟುವವರೆಗೂ ಇನ್ನು ಮುಂದೆ ಮಾಲೆಯನ್ನು ಧರಿಸಲ್ಲ. ಹೂ ಮಾಲೆ ಸ್ವೀಕರಿಸುವುದಿಲ್ಲ' ಎಂದು ಶಪಥ ಮಾಡಿದರು.

'ಎರಡೂ ರಾಷ್ಟ್ರೀಯ ಪಕ್ಷಗಳು ಲಿಂಗಾಯತರಿಗೆ ಅನ್ಯಾಯ ಮಾಡಿವೆ. ನಾನು ಬ್ರಾಹ್ಮಣ ವಿರೋಧಿಯಲ್ಲ, ನಾನು ಬ್ರಾಹ್ಮಣ ಸಮುದಾಯದ ಅಭಿಮಾನಿ. ನಾನು ಭಾವೈಕ್ಯ ಪೀಠದ ಸ್ವಾಮೀಜಿ ಆಗಿರುವುದರಿಂದ ಯಾವುದೇ ಜಾತಿಯನ್ನು ನಾನು ಟೀಕಿಸುವುದಿಲ್ಲ. ಯಾವುದೇ ಜಾತಿಗೂ ಅಭಿಮಾನ ತೋರಿಸುವುದಿಲ್ಲ' ಎಂದರು.

ಹಾವೇರಿ ಟಿಕೆಟ್ ಬಗ್ಗೆಯೂ ಮಾತನಾಡಿದ ದಿಂಗಾಲೇಶ್ವರ ಶ್ರೀ, 'ಕೆ.ಎಸ್. ಈಶ್ವರಪ್ಪ ಅವರ ಪುತ್ರ ಕಾಂತೇಶ್ ಕಳೆದ ಒಂದೂವರೆ ವರ್ಷದಿಂದ ಹಾವೇರಿಯಲ್ಲಿ ಸಕ್ರಿಯರಾಗಿದ್ದರು. ಅವರಿಗೆ ಟಿಕೆಟ್ ತಪ್ಪಿಸಿರುವುದು ಜೋಶಿ. ಜೋಶಿಯನ್ನು ನಂಬಬೇಡಿ ಎಂದು ನಾನು ಹಿಂದೆಯೇ ಈಶ್ವರಪ್ಪ ಮತ್ತು ಅವರ ಪುತ್ರನಿಗೆ ಹೇಳಿದ್ದೆ. ಆದರೆ, ಅವರು ನನ್ನ ಮಾತು ಕೇಳಲಿಲ್ಲ' ಎಂದು ಹೇಳಿದರು.

ಧಾರವಾಡ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಾಗಿ ಘೋಷಿಸಿದ ಗದಗ ಜಿಲ್ಲೆ ಶಿರಹಟ್ಟಿಯ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಶ್ರೀಗಳಿಗೆ ವಿವಿಧ ಮಠಾಧೀಶರು ಬೆಂಬಲ ವ್ಯಕ್ತಪಡಿಸಿದರು –ಪ್ರಜಾವಾಣಿ ಚಿತ್ರ

'ನಾನೊಬ್ಬನೇ ತೀರ್ಮಾನಿಸಲು ಆಗಲ್ಲ'

'ಧಾರವಾಡದಿಂದ ದಿಂಗಾಲೇಶ್ವರ ಶ್ರೀ ಅವರಿಗೆ ಪಕ್ಷದಿಂದ ಟಿಕೆಟ್ ನೀಡುವ ವಿಚಾರದಲ್ಲಿ ನಾನು ಏಕಾಂಗಿಯಾಗಿ ತೀರ್ಮಾನಿಸಲು ಆಗುವುದಿಲ್ಲ. ಎಐಸಿಸಿ ಅಧ್ಯಕ್ಷರು, ಚುನಾವಣಾ ಸಮಿತಿ, ಮುಖ್ಯಮಂತ್ರಿ, ರಾಜ್ಯ ಉಸ್ತುವಾರಿ, ಜಿಲ್ಲಾ ಉಸ್ತುವಾರಿ ಸಚಿವರನ್ನು ವಿಶ್ವಾಸಕ್ಕೆ ಪಡೆಯಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

'ನೀವು ದಿಂಗಾಲೇಶ್ವರ ಶ್ರೀಗಳನ್ನು ಸಂಪರ್ಕಿಸಿದ್ದೀರಾ' ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಸ್ವಾಮೀಜಿ ಮೊದಲಿನಿಂದಲೂ ಹೋರಾಟ ಮಾಡಿಕೊಂಡು ಬಂದವರು. ಮೊದಲೇ ಈ ವಿಚಾರ ನಮಗೆ ಗೊತ್ತಿದ್ದರೆ ಸುಲಭವಾಗುತ್ತಿತ್ತು. ಈ ಕುರಿತು ಸ್ಥಳೀಯ ನಾಯಕರ ಜತೆ ಚರ್ಚಿಸುತ್ತಿದ್ದೇನೆ' ಎಂದರು.

'ಅಲ್ಲಿ ವಿನೋದ್ ಅಸೂಟಿಗೆ ನಾವು ಈಗಾಗಲೇ ಬಿ ಫಾರಂ ನೀಡಿದ್ದೇವೆ. ಸ್ವಾಮೀಜಿಗೆ ಪಕ್ಷದಿಂದ ಟಿಕೆಟ್ ನೀಡುವಂತೆ ಕೆಲವರು ಸಲಹೆ ನೀಡಿದ್ದಾರೆ' ಎಂದೂ ಹೇಳಿದರು.

ಈದ್‌ಉಲ್‌-ಫಿತ್ರ್: ಸಾಮಾಜಿಕ ನ್ಯಾಯ ಸಾರುವ ಹಬ್ಬ

● ಅಬ್ದುಲ್ ರಹಿಮಾನ್

ಈದ್ ಪ್ರಾರ್ಥನೆಗಾಗಿ ಪ್ರವಾದಿ ಮುಹಮ್ಮದರು ಹಾಗೂ ಅವರ ಅನುಯಾಯಿಗಳು ಮದೀನಾದ ಮಸೀದಿಯಲ್ಲಿ ಸೇರಿದ್ದರು. ಎಲ್ಲೆಲ್ಲೂ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಈದ್ ನಮಾಜಿಗೆ ಸಿದ್ಧರಾಗುತ್ತಿದ್ದ ವೇಳೆ, ಮಸೀದಿಯ ಮೂಲೆಯೊಂದರಲ್ಲಿ ಕುಳಿತು ಅಳುತ್ತಿದ್ದ ಬಾಲಕ ಹಝ್ರತ್ ಮುಹಮ್ಮದರ ಕಣ್ಣಿಗೆ ಬಿದ್ದ. ವಿಚಾರಿಸಿದಾಗ, ಆತ ಅನಾಥನೆಂದೂ, ಧರಿಸಲು ಹೊಸ ಬಟ್ಟೆ ಇರಲಿಲ್ಲವೆಂದೂ, ಹಬ್ಬದ ಸಂಭ್ರಮ ತನಗಿಲ್ಲವೆಂದೂ ಅಳುತ್ತಿದ್ದ ಎನ್ನುವ ವಿಚಾರ ತಿಳಿಯಿತು. ಪೈಗಂಬರರು ಬಾಲಕನನ್ನು ಆಲಿಂಗಿಸಿ, ಹಣೆಗೆ ಮುತ್ತಿಟ್ಟು, ತಮ್ಮ ಮನೆಗೆ ಕರೆದೊಯ್ದು, ಸ್ನಾನ ಮಾಡಿಸಿ, ಹೊಸ ವಸ್ತ್ರವನ್ನು ಕೊಟ್ಟು, ತಮ್ಮ ಮಕ್ಕಳೊಂದಿಗೆ ಊಟಕ್ಕೆ ಕೂರಿಸಿದರು. ಅನಾಥನಾಗಿದ್ದ ಆ ಬಾಲಕ ಎಲ್ಲರೊಂದಿಗೆ ಸೇರಿ ಸಂತೋಷದಿಂದ ಈದ್ ಆಚರಿಸಿದನು. ಇಂತಹ ಶುದ್ಧ ಮಾನವೀಯ ಹಾಗೂ ಸಾಮಾಜಿಕ ಕಾಳಜಿಗಳೇ ಈದ್–ಉಲ್–ಫಿತ್ರ್ ಆಶಯ.

ಒಂದು ತಿಂಗಳ ಉಪವಾಸದ ಬಳಿಕ ಮುಸಲ್ಮಾನರು ಆಚರಿಸುವ ಈದ್–ಉಲ್–ಫಿತ್ರ್ ಹಬ್ಬದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆ ಇದೆ. ಹಬ್ಬಾಚರಣೆಯಲ್ಲಿ ಆಧ್ಯಾತ್ಮಿಕ ಚಟುವಟಿಕೆಗಳ ಜೊತೆಗೆ ಸಾಮಾಜಿಕ ಕಳಕಳಿಯೂ ಇದೆ. ಕಠಿಣ ಉಪವಾಸದ ಮೂಲಕ ದೇಹವನ್ನು ದಂಡಿಸಿ, ಸ್ವಾರ್ಥ, ಸ್ವೇಚ್ಛೆ ರಹಿತವಾಗಿ, ಸರಳವಾಗಿ ಬದುಕಿ, ಕಡ್ಡಾಯ ದಾನ ನೀಡುವ ಮೂಲಕ ದಮನಿತರ ಕಷ್ಟಕ್ಕೆ, ಬಡವರ ನೋವಿಗೆ ಸ್ಪಂದಿಸುವ ಸಾಮಾಜಿಕ ನ್ಯಾಯದ ಸಂದೇಶವಿದೆ.

ಈದ್‌ನ ದಿನ ಧಾನ್ಯಗಳನ್ನು ದಾನ ಮಾಡುವುದು ಕಡ್ಡಾಯ. ಆ ಊರಿನಲ್ಲಿ ಬಳಕೆಯಲ್ಲಿರುವ ಧಾನ್ಯಗಳನ್ನು ಮನೆಯ ಪ್ರತಿ ಸದಸ್ಯನ ಹೆಸರಿನಲ್ಲಿ, ತಲಾ 2600 ಗ್ರಾಂನಷ್ಟು ಬಡವರಿಗೆ ದಾನ ನೀಡಬೇಕು. ಹಾಗಿದ್ದರೆ ಮಾತ್ರ ಉಪವಾಸ ದೇವನ ಬಳಿ ಸ್ವೀಕಾರವಾಗುತ್ತದೆ ಎನ್ನುವುದು ನಂಬಿಕೆ. ಆ ದಿನ ಬಟ್ಟೆ, ಹಣವನ್ನು ದಾನವಾಗಿ ನೀಡುತ್ತಾರೆ.

ಹಬ್ಬದ ದಿನದಂದು ಉಪವಾಸ ಹಿಡಿಯುವುದನ್ನು ನಿಬಂಧಿಸಲಾಗಿದೆ. ಮನೆಯಲ್ಲಿ ತಯಾರಿಸಿದ ಭಕ್ಷ್ಯಗಳನ್ನು ನೆರೆಹೊರೆಯವರೊಂದಿಗೆ, ಬಡವರೊಂದಿಗೆ, ವೃದ್ಧರೊಂದಿಗೆ, ನಿರ್ಗತಿಕರೊಂದಿಗೆ, ವಿಧವೆಯರೊಂದಿಗೆ, ಅನಾಥರೊಂದಿಗೆ ಹಂಚಿ ತಿಂದು ಅವರನ್ನೂ ಖುಷಿಪಡಿಸಬೇಕು. ಈದ್‌ನ ದಿನದ ಖರ್ಚಿಗೆ ಬೇಕಾದ ವಸ್ತು ಉಪಯೋಗಿಸಿ ಬೇರೆಯವರಿಗಾದರೂ ಉಳಿದರೆ ದಾನ ನೀಡುವುದು ಕಡ್ಡಾಯವಾಗುತ್ತದೆ. ಆ ದಿನ ಯಾರೂ ಉಪವಾಸ ಇರಕೂಡದು ಎನ್ನುವುದು ಉದ್ದೇಶ. 'ನೆರೆಹೊರೆಯವ ಹಸಿದಿರುವಾಗ ಹೊಟ್ಟೆತುಂಬಾ ಉಣ್ಣುವವನು ನಮ್ಮವನಲ್ಲ' ಎನ್ನುವುದು ಪ್ರವಾದಿ ನುಡಿ. ಇಸ್ಲಾಮ್‌ನ ಐದು ಕಡ್ಡಾಯ ಕಾರ್ಯಗಳಲ್ಲಿ 'ಝಕಾತ್' (ದಾನ) ಕೂಡ ಒಂದು. ಶ್ರೀಮಂತರು ತಮ್ಮ ಒಟ್ಟು ಆಸ್ತಿಯ ಶೇ 2.5ರಷ್ಟು ದಾನ ನೀಡಬೇಕು. ಈದ್–ಉಲ್–ಫಿತ್ರ್ ದಿನದಂದೇ ಹೆಚ್ಚಿನ ಮಂದಿ ತಮ್ಮ ಸ್ವತ್ತಿನ ನಿಗದಿತ ದಾನ ನೀಡುತ್ತಾರೆ. ಈ ವೇಳೆ ಅನಾಥರು, ನಿರ್ಗತಿಕರು, ಬಡವರನ್ನು ವಿಶೇಷವಾಗಿ ಪರಿಗಣಿಸುತ್ತಾರೆ. ಆ ದಿನ ನೆರೆಹೊರೆಯವರೊಂದಿಗೆ, ಮನೆಯವರೊಂದಿಗೆ ಧಾರಾಳತನ ತೋರಬೇಕು ಎನ್ನುವುದು ಪ್ರವಾದಿ ಮುಹಮ್ಮದರ ಸಂದೇಶ.

ಹಬ್ಬದ ದಿನ 'ಈದಿ' (ಉಡುಗೊರೆ) ಕೊಡುವ ಪದ್ಧತಿಯೂ ಕೂಡ ಇದೆ. ಉಳ್ಳವರು ಇಲ್ಲದವರಿಗೆ ಹಣದ ರೂಪದಲ್ಲಿ ಕೊಡುವ ದಾನವೇ ಈದಿ. ಇದರಲ್ಲಿ ಕುಟುಂಬದೊಳಗಿನ ಅನಾಥಮಕ್ಕಳಿಗೆ, ವಿಧವೆಯರಿಗೆ, ವೃದ್ಧರಿಗೆ ಹೆಚ್ಚಿನ ಪ್ರಾಶಸ್ತ್ಯ. ಮಸೀದಿ ಹಾಗೂ ಈದ್ಗಾಗಳಲ್ಲಿ ಆರ್ಥಿಕ, ಸಾಮಾಜಿಕ, ವರ್ಣಗಳ ಭೇದ ಇಲ್ಲದೆ ಭುಜಕ್ಕೆ ಭುಜ ತಾಗಿಸಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಎಲ್ಲರೂ ಪರಸ್ಪರ ಕೈ–ಮೈ ಜೋಡಿಸಿ ಪ್ರೀತಿ, ಸ್ನೇಹವನ್ನು ಹಂಚಿಕೊಳ್ಳುತ್ತಾರೆ. ದ್ವೇಷ, ಹಗೆ, ಅಸೂಯೆ, ಮತ್ಸರ ನಂಟು ಮರೆತು, ಎಲ್ಲವನ್ನೂ ಮಾಫಿ ಮಾಡಿ ಖುಷಿಯಿಂದ ಎಲ್ಲರೊಂದಿಗೆ ಬೆರೆಯುತ್ತಾರೆ. ಹಬ್ಬದ ದಿನ ಎಲ್ಲರೂ ಒಂದೆಡೆ ಸೇರಿ ಗುಂಪಾಗಿ ಪ್ರಾರ್ಥಿಸಬೇಕು ಎನ್ನುವ ಪ್ರವಾದಿ ಸಂದೇಶದಲ್ಲಿ ಒಗ್ಗಟ್ಟಿನ ಪಾಠವೂ ಇದೆ.

ನಾಗತಿಹಳ್ಳಿ ಸಂಸ್ಕೃತಿ ಹಬ್ಬದಲ್ಲಿ ಚಿತ್ರನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ವೈದ್ಯಕೀಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿದರು

'ಸಮುದಾಯ ಕೇಂದ್ರಿತ ಹಬ್ಬ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): '20 ವರ್ಷ ಪೂರೈಸಿರುವ ನಾಗತಿಹಳ್ಳಿ ಸಂಸ್ಕೃತಿ ಹಬ್ಬ ವ್ಯಕ್ತಿಕೇಂದ್ರಿತವಾದ ಕಾರ್ಯಕ್ರಮವಲ್ಲ, ಇದು ಸಮುದಾಯದ ಪ್ರತಿಯೊಬ್ಬರ ಸಹಕಾರದಿಂದ ನಡೆಯುತ್ತಿರುವ ಸಮುದಾಯ ಕೇಂದ್ರಿತ ಹಬ್ಬವಾಗಿದೆ' ಎಂದು ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹೇಳಿದರು.

ತಾಲ್ಲೂಕಿನ ಎ.ನಾಗತಿಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ರಂಗಮಂದಿರದಲ್ಲಿ ಸೋಮವಾರ ಆರಂಭವಾದ 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ದಲ್ಲಿ ಮಾತನಾಡಿದ ಅವರು, 'ನಾವು ಹುಟ್ಟಿ ಬೆಳೆದ ಹಳ್ಳಿಗೆ ಪ್ರೀತಿ, ಶ್ರದ್ಧೆಯಿಂದ ಕೊಡುಗೆ ನೀಡಬೇಕೆಂಬ ಉದ್ದೇಶದಿಂದ ನಡೆಸುತ್ತಿರುವ ಪ್ರಯತ್ನ ಇದು. ಎಂದಿಗೂ ಸರ್ಕಾರವನ್ನು ಅವಲಂಬಿಸಿಲ್ಲ. ಗ್ರಾಮದ ಒಳಗಿನವರ ಮತ್ತು ಹೊರಗಿನವರೆಲ್ಲರೂ ಸಹಕಾರ ನೀಡಿರುವುದಕ್ಕೆ ಚಿರಋಣಿಯಾಗಿದ್ದೇನೆ. ಬಾಲ್ಯದಲ್ಲಿ ನಾವು ನೋಡಿದ ಸನ್ನಿವೇಶವನ್ನು ಉತ್ತಮಪಡಿಸುವ ಪ್ರಯತ್ನ ನಮ್ಮದು. ಇದಕ್ಕೆ ನಾಡಿನ ಚಿಂತಕರು, ಕಲಾವಿದರು, ರಾಜಕೀಯ ಚಿಂತಕರು, ಕೃಷಿತಜ್ಞರು ಸೇರಿದಂತೆ ಎಲ್ಲರ ಬೆಂಬಲ ದೊರೆತಿರುವುದು ಸಂತಸ ತಂದಿದೆ' ಎಂದರು.

ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆ, ಬೆಂಗಳೂರು ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರಿನ ಎಂಡೋಕ್ರಿನಾಲಜಿ ಮತ್ತು ಮಧುಮೇಹ ಚಿಕಿತ್ಸಾ ಸಂಶೋಧನಾ ಕೇಂದ್ರ, ಜಯದೇವ ಹೃದ್ರೋಗ ಆಸ್ಪತ್ರೆಯ ವತಿಯಿಂದ ಉಚಿತ ವೈದ್ಯಕೀಯ ಶಿಬಿರ ನಡೆಯಿತು. ಮಿಂಟೋ ಕಣ್ಣಿನ ಆಸ್ಪತ್ರೆಯ ಡಾ.ಮೇಘನಾ, ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪವತಿ, ಸಹ ಪ್ರಾಧ್ಯಾಪಕ ಡಾ.ಸಾರಾಂಶ್ ಜೈನ್ ಇದ್ದರು.

'ಸರ್ವಾಧಿಕಾರಿ ಕೆಳಗಿಳಿಸಿ'

'ದೇಶ ಉಳಿಸಿ ಸಂಕಲ್ಪ ಸಮಾವೇಶ'ದಲ್ಲಿ ಪ್ರಕಾಶ ರಾಜ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಒಂದೇ ಪಕ್ಷ, ಒಂದೇ ಭಾಷೆ ಎನ್ನುವ ಮಹಾಪ್ರಭು ಎರಡು ನಾಲಿಗೆ ಹಾವು ಇದ್ದಂತೆ. ಸುಳ್ಳುಗಳ ಮಹಾಪುರಾಣ ಹೇಳುವ ಈ ದುರಹಂಕಾರಿ ಮತ್ತು ಸರ್ವಾಧಿಕಾರಿಯನ್ನು ಕೆಳಗಿಳಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ' ಎಂದು ನಟ ಪ್ರಕಾಶ ರಾಜ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪರೋಕ್ಷವಾಗಿ ಟೀಕಿಸಿದರು.

ಕರ್ನಾಟಕದ ಸಮಸ್ತ ಜನಪರ ಸಂಘಟನೆಗಳು ಸೋಮವಾರ ಹಮ್ಮಿಕೊಂಡಿದ್ದ 'ದೇಶ ಉಳಿಸಿ ಸಂಕಲ್ಪ ಸಮಾವೇಶ'ದಲ್ಲಿ ಮಾತನಾಡಿದ ಅವರು, 'ದೇಶ ಅಭಿವೃದ್ಧಿಗೊಂಡಿದೆ. ವಿಮಾನ ನಿಲ್ದಾಣ ಬದಲಾಗಿವೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಆದರೆ, ವಾಸ್ತವವಾಗಿ ಅದಾನಿಯ ಕೈಬಲಿಷ್ಠವಾಗಿದೆ. ರಸ್ತೆಗಳನ್ನು ನಿರ್ಮಿಸಲಾಗಿದೆ. ಆದರೆ, ಟೋಲ್ ಗೇಟ್‌ನಲ್ಲಿ ಮಾಫಿಯಾ ನಿಂತಿಲ್ಲ' ಎಂದರು.

'ಸರ್ವಾಧಿಕಾರಿಯ ಮೊದಲ ಲಕ್ಷಣವೇ ಸುಂದರ ಕಾಣುವುದು. ಈ ಮಹಾಪ್ರಭು ಅಹಂಕಾರವನ್ನು ತುತ್ತ ತುದಿಗೆ ತಂದು ನಿಲ್ಲಿಸಿದ್ದಾರೆ. ಎಲೆಕ್ಟೊರಲ್ ಬಾಂಡ್ ಈ ಮಹಾಪ್ರಭುವಿಗೆ ಮುಳುವಾಗಬೇಕು. ಬಿಜೆಪಿ ಸರ್ಕಾರದಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿದೆ. ಕೊರೊನಾ ಕಾಲಘಟ್ಟದಲ್ಲೂ ಕಳಪೆ ಔಷಧ ಕಂಪನಿಗಳಿಂದ ನೂರಾರು ಕೋಟಿ ಪಡೆಯಲಾಗಿದೆ. ಭ್ರಷ್ಟಾಚಾರ ಮಾಡಿದವರು ಆ ಪಕ್ಷಕ್ಕೆ ಸೇರಿ ಸಾಚಾಗಳಾಗಿದ್ದಾರೆ' ಎಂದು ಟೀಕಿಸಿದರು.

ಬೆಳಗಾವಿಯ ಗಾಂಧಿ ಭವನದಲ್ಲಿ ಕರ್ನಾಟಕದ ಸಮಸ್ತ ಜನಪರ ಸಂಘಟನೆಗಳು ಸೋಮವಾರ ಹಮ್ಮಿಕೊಂಡಿದ್ದ 'ದೇಶ ಉಳಿಸಿ ಸಂಕಲ್ಪ ಸಮಾವೇಶ'ದಲ್ಲಿ ಪ್ರಮುಖರಾದ ಬಡಗಲಪುರ ನಾಗೇಂದ್ರ, ಬಿ.ಟಿ.ಲಲಿತಾ ನಾಯಕ್, ಪ್ರಕಾಶ ರಾಜ್, ಎಸ್‌.ಆರ್‌.ಹಿರೇಮಠ ಪ್ರತಿಜ್ಞಾವಿಧಿ ಸ್ವೀಕರಿಸಿದರು

– ಪ್ರಜಾವಾಣಿ ಚಿತ್ರ

ಸಮಾವೇಶದ ಅಧ್ಯಕ್ಷ ಎಸ್.ಆರ್. ಹಿರೇಮಠ ಮಾತನಾಡಿ, 'ಈ ಬಾರಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ, ಸಂವಿಧಾನ ನಾಶವಾಗಲಿದೆ. ಪ್ರಜಾತಾಂತ್ರಿಕ ಮಾದರಿ ಪತನವಾಗಲಿದೆ. ದೇಶದಲ್ಲಿ ಅಘೋಷಿತ ತುರ್ತುಸ್ಥಿತಿ ನಿರ್ಮಾಣವಾಗಿದೆ. ಈ ಚುನಾವಣೆ ಐದು ವರ್ಷ ನಮ್ಮನ್ನು ಯಾರು ಆಳಬೇಕು ಎಂಬುದು ಅಷ್ಟೇ ಅಲ್ಲ, ಭಾರತ ಪ್ರಜಾಪ್ರಭುತ್ವ ದೇಶವಾಗಿ ಉಳಿಯಬೇಕಾ ಅಥವಾ ಸರ್ವಾಧಿಕಾರಿ ದೇಶವಾಗಿ ಮಾರ್ಪಡಬೇಕಾ ಎಂಬುದನ್ನು ತೀರ್ಮಾನಿಸಲಿದೆ' ಎಂದರು.

ಅಭ್ಯರ್ಥಿಗೆ ತಲೆನೋವಾದ ನಾಯಕರ ಭಿನ್ನಮತ

ಕೊಪ್ಪಳ: ಜಿಲ್ಲೆಯ ಗಂಗಾವತಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕರ ತಿಕ್ಕಾಟ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕೆ. ರಾಜಶೇಖರ ಹಿಟ್ನಾಳ ಅವರಿಗೆ ತಲೆನೋವಾಗಿದೆ.

ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ವಪಕ್ಷೀಯರಿಂದಲೇ ನನಗೆ ಸೋಲಾಗಿದೆ ಎಂದು ಹೇಳುತ್ತಿದ್ದರೆ, ಇನ್ನೊಂದು ಬಣದಲ್ಲಿರುವ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಚ್‌.ಆರ್. ಶ್ರೀನಾಥ್ ಸ್ವಂತ ತಪ್ಪು ಮತ್ತು ಅಹಂಕಾರದಿಂದ ಅನ್ಸಾರಿಗೆ ಸೋಲಾಗಿದೆ ಎಂದು ಟೀಕಿಸುತ್ತಿದ್ದಾರೆ.

ಹೀಗಾಗಿ ಈ ಇಬ್ಬರೂ ನಾಯಕರು ಪರಸ್ಪರ ಪ್ರತ್ಯೇಕವಾಗಿಯೇ ಪಕ್ಷದ ಸಭೆಗಳನ್ನು ನಡೆಸುತ್ತಿದ್ದಾರೆ. ಶ್ರೀನಾಥ್ ನಡೆಸುವ ಸಭೆಗೆ ಹೋಗದಂತೆ ಅನ್ಸಾರಿ ತಮ್ಮ ಬೆಂಬಲಿಗರಿಗೆ ಸಂದೇಶ ನೀಡಿದ್ದಾರೆ. ಹೀಗಾಗಿ ಗಂಗಾವತಿ ಕ್ಷೇತ್ರದಲ್ಲಿ ಕಾಂಗ್ರೆಸ್ ಒಡೆದ ಮನೆಯಾಗಿದ್ದು ಅಭ್ಯರ್ಥಿ ಎರಡೂ ಕಡೆಗೂ ಸಭೆಗೆ ಹಾಜರಾಗಬೇಕಾದ ಅನಿವಾರ್ಯತೆ ಎದುರಾಗಿದೆ.

ಗಂಗಾವತಿಯಲ್ಲಿ ಸೋಮವಾರ ಎಚ್‌.ಆರ್. ಶ್ರೀನಾಥ್ ಪಾಲ್ಗೊಂಡಿದ್ದ ಸಭೆಗೆ ಅನ್ಸಾರಿ ಗೈರಾಗಿದ್ದರು. ಇದರಿಂದ ವಾಗ್ದಾಳಿ ನಡೆಸಿರುವ ಶ್ರೀನಾಥ್ 'ಅನ್ಸಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅವರಿಂದಲೇ ಕಾಂಗ್ರೆಸ್ ಹಾಳಾಗುತ್ತಿದೆ' ಎಂದು ಟೀಕಿಸಿದ್ದಾರೆ.

ಸುದ್ದಿ 2 ನಿಮಿಷ

ಲಕ್ಷ್ಮಿ ಹೆಬ್ಬಾಳಕರ ಲಿಂಗಾಯತ ಪಂಚಮಸಾಲಿಯಲ್ಲ: ನಿರಾಣಿ

ಬೆಳಗಾವಿ: 'ಸಚಿವೆ ಲಕ್ಷ್ಮಿ ಹೆಬ್ಬಾಳಕರ ಲಿಂಗಾಯತ ಬಣಜಿಗರೇ ಹೊರತು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಸೇರಿದವರಲ್ಲ. ಕಿತ್ತೂರು ರಾಣಿ ಚನ್ನಮ್ಮನಿಗೆ ಹೋಲಿಕೆ ಮಾಡಿಕೊಳ್ಳುವ ಅಧಿಕಾರ ಅವರಿಗೂ ಮತ್ತು ನನಗೂ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮುರುಗೇಶ ನಿರಾಣಿ ಹೇಳಿದರು.

ತಾವು ರಾಣಿ ಚನ್ನಮ್ಮ ವಂಶಸ್ಥೆ ಮತ್ತು ತಮ್ಮ ಮೈಯಲ್ಲಿ ಹರಿದಿರುವುದು ಪಂಚಮಸಾಲಿ ರಕ್ತ ಎಂಬ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿಕೆಗೆ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಸಚಿವೆಯಾದ ಕಾರಣಕ್ಕೆ ಲಕ್ಷ್ಮಿ ಹೆಬ್ಬಾಳಕರ ಜೋರಾಗಿ ಮಾತನಾಡಬಾರದು' ಎಂದರು.

'ಮದುವೆಗೆ ಮುನ್ನ ಪಂಚಮಸಾಲಿ ಸಮುದಾಯಕ್ಕೆ ಸೇರಿದ್ದ ಲಕ್ಷ್ಮಿ ನಂತರ ಬಣಜಿಗ ಸಮುದಾಯದ ರವೀಂದ್ರ ಹೆಬ್ಬಾಳಕರಗೆ ವಿವಾಹವಾದರು. ಹಿಂದೂ ಪರಂಪರೆಯಂತೆ ಹೆಣ್ಣುಮಕ್ಕಳು ಪತಿಯ ಜಾತಿಗೆ ಸೇರುತ್ತಾರೆ. ಹೀಗಾಗಿ ಲಕ್ಷ್ಮಿ ಬಣಜಿಗ ಸಮಾಜದವರು ಆಗಿದ್ದಾರೆ' ಎಂದು ಅವರು ತಿಳಿಸಿದರು.

'ಬೆಳಗಾವಿ ಲೋಕಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಸಹ ಬಣಜಿಗರು. ಈ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಪಂಚಮಸಾಲಿ ಸಮುದಾಯದ ಮತಗಳನ್ನು ಸೆಳೆಯಲು ಲಕ್ಷ್ಮಿ ಅಪ್ಪಟ ಸುಳ್ಳು ಹೇಳುತ್ತಿದ್ದಾರೆ. ಮೃಣಾಲ್ ಪಂಚಮಸಾಲಿ ಆಗಲು ಸಾಧ್ಯವೇ ಇಲ್ಲ' ಎಂದು ಅವರು ಹೇಳಿದರು.

ಲಕ್ಷ್ಮಿ ಹೆಬ್ಬಾಳಕರ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲಿ. ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಸಿಕ್ಕ ಬಳಿಕ ಸಂಪುಟ ಸೇರಲಿ. ಮೀಸಲಾತಿ ಸಿಕ್ಕರೆ, ಹೆಬ್ಬಾಳಕರ ಅವರಿಗೆ 1 ಕೆಜಿ ಚಿನ್ನಾಭರಣ ನೀಡಿ ಸನ್ಮಾನಿಸುತ್ತೇವೆ ಎಂದರು

ಚಿಕ್ಕಬಳ್ಳಾಪುರ ಕಣದಲ್ಲಿ ಮೂವರು ಸುಧಾಕರ್!

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರೊಂದಿಗೆ ಈ ಬಾರಿ ಅದೇ ಹೆಸರಿನ ಇನ್ನೂ ಇಬ್ಬರು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಸುಧಾಕರ್ ಎನ್. ಮತ್ತು ಡಿ.ಸುಧಾಕರ ಹೆಸರಿನ ಮತ್ತಿಬ್ಬರು ಪಕ್ಷೇತರ ಅಭ್ಯರ್ಥಿಗಳಾಗಿ ಕಣದಲ್ಲಿದ್ದಾರೆ. ಸುಧಾಕರ್ ಎನ್. ಚಿಕ್ಕಬಳ್ಳಾಪುರ ತಾಲ್ಲೂಕಿನ ಪೋಶೆಟ್ಟಹಳ್ಳಿ ಗ್ರಾಮದವರು. ಡಿ.ಸುಧಾಕರ ದೇವನಹಳ್ಳಿ ತಾಲ್ಲೂಕಿನ ಕುರುಬರಕುಂಟೆ ಗ್ರಾಮದವರು.

11 ತಿಂಗಳ ಹಿಂದೆ ನಡೆದ ವಿಧಾನಸಭೆ ಚುನಾವಣೆಯಲ್ಲಿಯೂ ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಡಾ.ಕೆ.ಸುಧಾಕರ್ ಸ್ಪರ್ಧಿಸಿದ್ದರೆ, ಪಕ್ಷೇತರ ಅಭ್ಯರ್ಥಿಯಾಗಿ ಸುಧಾಕರ್ ಎನ್. ಸ್ಪರ್ಧೆ ಮಾಡಿದ್ದರು.

ಮತದಾರರನ್ನು ಗೊಂದಲಕ್ಕೆ ಸಿಲುಕಿಸಲು ಒಂದೇ ಹೆಸರಿನ ಹಲವರಿಂದ ನಾಮಪತ್ರ ಹಾಕಿಸುವ ತಂತ್ರಗಾರಿಕೆ ಇತ್ತೀಚಿನ ವರ್ಷಗಳಲ್ಲಿ ಮುನ್ನೆಲೆಗೆ ಬಂದಿದೆ.

ಕೊಳಗಲ್ಲು ಘರ್ಷಣೆ ಪೊಲೀಸರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಕೊಳಗಲ್ಲು ಗ್ರಾಮದಲ್ಲಿ ಎರ್ರೆಪ್ಪ ತಾತ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಎರಡು ಗುಂಪುಗಳ ನಡುವೆ ಭಾನುವಾರ ರಾತ್ರಿ ಘರ್ಷಣೆ ನಡೆದಿದೆ. ಪರಿಸ್ಥಿತಿ ನಿಭಾಯಿಸುವಾಗ, ಗ್ರಾಮಾಂತರ ಠಾಣೆಯ ನಾಲ್ವರು ಪೊಲೀಸ್ ಅಧಿಕಾರಿಗಳಿಗೆ ಕಲ್ಲೇಟು ಬಿದ್ದಿದೆ.

ಘಟನೆಯಲ್ಲಿ ಸಿಪಿಐ ಮುಸ್ತಫಾ, ಪಿಐ ಸತೀಶ್, ಪಿಎಸ್‌ಐ ಸಂತೋಷ್ ಡಬ್ಬಿನ್ ಮತ್ತು ಎಎಸ್‌ಐ ಕರಿವೀರಪ್ಪ ಎಂಬುವರಿಗೆ ಗಾಯಗಳಾಗಿವೆ. ಘಟನೆಗೆ ಸಂಬಂಧಿಸಿದಂತೆ 25 ಮಂದಿಯನ್ನು ವಶಕ್ಕೆ ಪಡೆದು, ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಕೊಳಗಲ್ಲು ಗ್ರಾಮದಲ್ಲಿ ಪವಾಡ ಪುರುಷ ಎರ್ರಿತಾತ ದೇವಾಲಯವಿದೆ. ಎರ್ರಿತಾತ ಅವರ ಶಿಷ್ಯ ಎರ್ರೆಪ್ಪ ತಾತಾ ಅವರು ಕೆಲ ವರ್ಷದ ಹಿಂದೆ ನಿಧನರಾಗಿದ್ದರು. ಅವರ ಹೆಸರಲ್ಲೂ ದೇವಾಲಯದ ಆವರಣದಲ್ಲಿ ಗುಡಿ ಇದೆ. ಅದರಲ್ಲಿ ಎರ್ರೆಪ್ಪ ತಾತಾ ಮೂರ್ತಿ ಪ್ರತಿಷ್ಠಾಪನೆ ವಿಚಾರವಾಗಿ ಗ್ರಾಮದಲ್ಲಿ ಆಗಾಗ್ಗೆ ಘರ್ಷಣೆಗಳು ನಡೆದಿದ್ದವು. ಈ ಮಧ್ಯೆ ಫೆಬ್ರುವರಿ 23ರಂದು ದೇವಾಲಯದಲ್ಲಿ ಎರ್ರೆಪ್ಪ ತಾತ ಮೂರ್ತಿಯನ್ನು ಗ್ರಾಮಸ್ಥರು ಪ್ರತಿಷ್ಠಾಪಿಸಿದ್ದರೂ ಇದನ್ನು ಪ್ರಶ್ನಿಸಿ ಕೆಲವರು ಧಾರವಾಡದ ಹೈಕೋರ್ಟ್ ಪೀಠದ ಮೊರೆ ಹೋಗಿದ್ದರು.

ಗುಡಿಯಿಂದ ಎರ್ರೆಪ್ಪ ತಾತಾ ಮೂರ್ತಿ ತೆರವು ಹೈಕೋರ್ಟ್ ಪೀಠ ನೀಡಿದ ಆದೇಶದ ಹಿನ್ನೆಲೆಯಲ್ಲಿ ಏಪ್ರಿಲ್ 5ರಂದು ಮೂರ್ತಿ ತೆರವು ಮಾಡಲಾಗಿತ್ತು. ಆದರೆ, ದೇವಾಲಯದಲ್ಲಿ ಮೂರ್ತಿಯ ಮರು ಪ್ರತಿಷ್ಠಾಪನೆಗೆ ಕೆಲವರು ಪಟ್ಟು ಹಿಡಿದರು. ಈ ವಿಷಯದಲ್ಲಿ ಭಾನುವಾರ ರಾತ್ರಿ ಎರಡು ಗುಂಪುಗಳ ನಡುವೆ ಘರ್ಷಣೆ ಉಂಟಾಗಿ, ಪೊಲೀಸರಿಗೂ ಗಾಯಗಳಾದವು. 'ಘರ್ಷಣೆಯಲ್ಲಿ ಭಾಗಿಯಾಗಿದ್ದ ಬಹುತೇಕ ಮಂದಿ ಗ್ರಾಮ ತೊರೆದಿದ್ದಾರೆ.

'ಸಿದ್ದರಾಮಯ್ಯ ಸೌಂಡ್ ಬಾಕ್ಸ್ ಅಷ್ಟೇ'

ಮಡಿಕೇರಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಕೇವಲ 'ಸೌಂಡ್ ಬಾಕ್ಸ್' ಅಷ್ಟೇ. ಚೆನ್ನಾಗಿ ಮಾತನಾಡುವುದನ್ನು ಕಲಿತರೇ ಹೊರತು ಕೆಲಸ ಮಾಡುವುದನ್ನು ಕಲಿಯಲಿಲ್ಲ. ತಮ್ಮ ಪಕ್ಷದವರೇ ಪಲ್ಟಿ ಹೊಡೆಸುತ್ತಾರೆಂಬ ಭಯ ಅವರನ್ನು ಕಾಡುತ್ತಿದೆ' ಎಂದು ಬಿಜೆಪಿ ಮುಖಂಡ ಡಾ.ಸಿ.ಎನ್.ಅಶ್ವತ್ಥನಾರಾಯಣ ಹರಿಹಾಯ್ದರು.

'ಅವರು ರಾಜ್ಯದ ವಿಫಲ ಮುಖ್ಯಮಂತ್ರಿ. ಗ್ಯಾರಂಟಿ, ಗ್ಯಾರಂಟಿ ಎಂದು ಸಾಲದ ಗ್ಯಾರಂಟಿ ಕೊಡುತ್ತಿದ್ದಾರೆ. ಹಾಗಾಗಿಯೇ ಭ್ರಮನಿರಸನಗೊಂಡು, ತಾವೇ ಅಭ್ಯರ್ಥಿಯಾಗಿದ್ದು, ಮತ ಕೊಟ್ಟು ಮರ್ಯಾದೆ ಉಳಿಸಿ ಎಂದು ಜನರಿಗೆ ಹೇಳುತ್ತಿದ್ದಾರೆ. ಅವರ ಮಾತುಗಳನ್ನು ನಂಬಬಾರದು' ಎಂದು ಅವರು ಸೋಮವಾರಪೇಟೆಯಲ್ಲಿ ಸುದ್ದಿಗಾರರಿಗೆ ತಿಳಿಸಿದರು. 'ಬಿಜೆಪಿ ನಾಯಕ ಕೆ.ಎಸ್. ಈಶ್ವರಪ್ಪ ಅವರು ಕೋಪ, ತಾಪ ವ್ಯಕ್ತ ಪಡಿಸುತ್ತಿದ್ದಾರೆ. ನಾವು ಅದನ್ನು ಗಂಭೀರವಾಗಿ ಪರಿಗಣಿಸಬಾರದು. ಅವರು ಪಕ್ಷದ ವಿರುದ್ಧವಾಗಿಯೇ ಸ್ಪರ್ಧಿಸಬಾರದಿತ್ತು' ಎಂದು ಪ್ರತಿಕ್ರಿಯಿಸಿದರು.

ಕಾಡುಕೋಣ ತಿವಿದು ವೃದ್ಧೆ ಸಾವು

ಖಾನಾಪುರ (ಬೆಳಗಾವಿ ಜಿಲ್ಲೆ): ಅಮಟೆ ಗ್ರಾಮದ ಹೊರವಲಯದಲ್ಲಿ ಸೋಮವಾರ ಕಾಡುಕೋಣ ತಿವಿದ ಪರಿಣಾಮ ಗ್ರಾಮದ ಸರಸ್ವತಿ ಅರ್ಜುನ ಗಾವಡೆ (80) ಮೃತಪಟ್ಟಿದ್ದಾರೆ. 'ಹೊಲಕ್ಕೆ ಗೋಡಂಬಿ ಕಾಯಿಗಳನ್ನು ಕೀಳಲು ಹೊರಟ ಸಂದರ್ಭದಲ್ಲಿ ಸರಸ್ವತಿ ಅವರ ಹೊಟ್ಟೆಗೆ ಕಾಡುಕೋಣ ಕೋಡಿನಿಂದ ತಿವಿದಿದೆ. ಗಂಭೀರವಾಗಿ ಗಾಯಗೊಂಡ ಅವರನ್ನು ತಕ್ಷಣವೇ ಬೆಳಗಾವಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅಖಾಡಕ್ಕೆ ದಿಂಗಾಲೇಶ್ವರ ಸ್ವಾಮೀಜಿ

ಒಂದನೇ ಪುಟದಿಂದ...

'ರಾಜಕೀಯ ಅಲ್ಲದೇ, ವೈಯಕ್ತಿಕವಾಗಿಯೂ ಜೋಶಿ ಅವರ ನಡೆ ಬಗ್ಗೆ ಸ್ವಾಮೀಜಿಗೆ ಅಸಮಾಧಾನವಿದೆ. ಮೂರು ವರ್ಷಗಳ ಹಿಂದೆ ಯಾವುದೋ ಕೆಲಸಕ್ಕಾಗಿ ಸ್ವಾಮೀಜಿ ದೂರವಾಣಿ ಕರೆ ಮಾಡಿದಾಗ, ಜೋಶಿ ಸಕಾರಾತ್ಮಕವಾಗಿ ಸ್ಪಂದಿಸಿರಲಿಲ್ಲ. ಅಲ್ಲದೇ, ನಿಮ್ಮಲ್ಲಿ ಲಿಂಗಾಯತ ಮುಖಂಡರು ಯಾರು ಇಲ್ಲವೇ? ಅವರ ಬಳಿ ಹೋಗಿ ಎಂದಿದ್ದು ಸ್ವಾಮೀಜಿಗೆ ಬೇಸರ ಉಂಟು ಮಾಡಿತ್ತು' ಎಂದು ಮೂಲಗಳು ತಿಳಿಸಿವೆ.

'ಸಂಸದರು ಒಂದು ಜಾತಿಗೆ ಸೀಮಿತರಾದವರಲ್ಲ. ಎಲ್ಲ ಜಾತಿ, ಸಮುದಾಯದವರು ಮತ ಹಾಕಿರುತ್ತಾರೆ. ಎಲ್ಲರ ಅಹವಾಲು ಆಲಿಸಬೇಕು. ಎಲ್ಲರ ಅಭಿವೃದ್ಧಿಗಾಗಿ ದುಡಿಯಬೇಕು. ಹೀಗೆ ಮಾಡದ ಅವರನ್ನು ಚುನಾವಣಾ ಕಣದಿಂದ ಬದಲಿಸಿ, ಬೇರೊಬ್ಬ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಸ್ವಾಮೀಜಿ ಅವರು ಪಕ್ಷದ ವರಿಷ್ಠ ಬಿ.ಎಸ್. ಯಡಿಯೂರಪ್ಪ ಅವರ ಮೇಲೆ ಒತ್ತಡ ಹೇರಿದ್ದರು. ಆದರೆ, ಇದಕ್ಕೆ ಯಡಿಯೂರಪ್ಪ ಒಪ್ಪಲಿಲ್ಲ. ಹೀಗಾಗಿ ಸ್ವಾಮೀಜಿ ಚುನಾವಣಾ ಕಣಕ್ಕೆ ಇಳಿದಿದ್ದಾರೆ. ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ಪಣತೊಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ಚುನಾವಣೆಗೆ ಎರಡನೇ ಧರ್ಮಗುರು

ಧಾರವಾಡ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವವರಲ್ಲಿ ದಿಂಗಾಲೇಶ್ವರ ಸ್ವಾಮೀಜಿ ಎರಡನೇ ಧರ್ಮಗುರುಗಳು. 2004ರಲ್ಲಿ ಕನ್ನಡ ನಾಡು ಪಕ್ಷದಿಂದ ಜಗದ್ಗುರು ಮಾತೆ ಮಹಾದೇವಿ ಸ್ಪರ್ಧಿಸಿದ್ದರು. ಉದ್ಯಮಿ ವಿಜಯ ಸಂಕೇಶ್ವರ 2004ರಲ್ಲಿ ಬಿಜೆಪಿ ತೊರೆದು, ಕನ್ನಡ ನಾಡು ಪಕ್ಷ ಕಟ್ಟಿದ್ದರು. ಆಗ ಮೊದಲ ಸಲ ಬಿಜೆಪಿಯಿಂದ ಸ್ಪರ್ಧಿಸಿದ್ದ ಪ್ರಲ್ಹಾದ ಜೋಶಿ ಗೆಲುವು ಸಾಧಿಸಿದ್ದರು.

> ದಿಂಗಾಲೇಶ್ವರ ಸ್ವಾಮೀಜಿ ಸ್ಪರ್ಧೆ ಬಗ್ಗೆ ಪ್ರತಿಕ್ರಿಯೆ ನೀಡಲ್ಲ. ಅವರೇನೇ ಹೇಳಿದರೂ ನನಗೆ ಆಶೀರ್ವಾದ ಇದ್ದಂತೆ
>
> **ಪ್ರಲ್ಹಾದ ಜೋಶಿ,** ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

14 ಕ್ಷೇತ್ರ: 247 ಮಂದಿ ಕಣದಲ್ಲಿ

ಒಂದನೇ ಪುಟದಿಂದ...

ಬೆಂಗಳೂರು ಉತ್ತರ ಅತ್ಯಧಿಕ ಸಂಖ್ಯೆಯ ಮಹಿಳಾ ಅಭ್ಯರ್ಥಿಗಳು ಕಣದಲ್ಲಿರುವ ಕ್ಷೇತ್ರವೂ ಹೌದು.

ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಅತಿ ಕಡಿಮೆ (9) ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಉಡುಪಿ–ಚಿಕ್ಕಮಗಳೂರು, ಮಂಡ್ಯ ಮತ್ತು ಚಾಮರಾಜನಗರ ಕ್ಷೇತ್ರಗಳು ಅತಿ ಕಡಿಮೆ ಅಭ್ಯರ್ಥಿಗಳ ಪಟ್ಟಿಯಲ್ಲಿ ನಂತರದ ಸ್ಥಾನದಲ್ಲಿವೆ.

ನೇರ ಸ್ಪರ್ಧೆಯೇ ಹೆಚ್ಚು: 14 ಕ್ಷೇತ್ರಗಳಲ್ಲೂ ಕಾಂಗ್ರೆಸ್‌ನ ಅಭ್ಯರ್ಥಿಗಳಿದ್ದಾರೆ. ಬಿಜೆಪಿ 11 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದರೆ, ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್ ಮೂರು ಕ್ಷೇತ್ರಗಳಲ್ಲಿ ಕಣದಲ್ಲಿದೆ.

11 ಕ್ಷೇತ್ರಗಳಲ್ಲಿ ಕಾಂಗ್ರೆಸ್–ಬಿಜೆಪಿ ಸ್ಪರ್ಧೆ ಇದ್ದರೆ, ಉಳಿದ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್– ಜೆಡಿಎಸ್ ನೇರ ಪೈಪೋಟಿಯಲ್ಲಿವೆ.

ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ

ಕ್ಷೇತ್ರ	ಪುರುಷರು	ಮಹಿಳೆಯರು	ಒಟ್ಟು
ಉಡುಪಿ– ಚಿಕ್ಕಮಗಳೂರು	10	00	10
ಹಾಸನ	15	00	15
ದಕ್ಷಿಣ ಕನ್ನಡ	08	01	09
ಚಿತ್ರದುರ್ಗ	18	02	20
ತುಮಕೂರು	17	01	18
ಮಂಡ್ಯ	13	01	14
ಮೈಸೂರು	17	01	18
ಚಾಮರಾಜನಗರ	13	01	14
ಬೆಂಗಳೂರು ಗ್ರಾಮಾಂತರ	14	01	15
ಬೆಂಗಳೂರು ಉತ್ತರ	15	06	21
ಬೆಂಗಳೂರು ಕೇಂದ್ರ	21	03	24
ಬೆಂಗಳೂರು ದಕ್ಷಿಣ	19	03	22
ಚಿಕ್ಕಬಳ್ಳಾಪುರ	28	01	29
ಕೋಲಾರ	18	00	18
ಒಟ್ಟು	226	21	247

ಕಣದಲ್ಲಿ ಇಬ್ಬರು ಮಂಜುನಾಥ್, ಮೂವರು ಸುರೇಶ್!

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯದ ಗಮನ ಸೆಳೆದಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಚುನಾವಣಾ ಕ್ಷೇತ್ರದಲ್ಲಿ ಮಂಜುನಾಥ್ ಹೆಸರಿನ ಇಬ್ಬರು ಮತ್ತು ಸುರೇಶ್ ಹೆಸರಿನ ಮೂವರು ಅಭ್ಯರ್ಥಿಗಳು ಅಂತಿಮವಾಗಿ ಕಣದಲ್ಲಿ ಉಳಿದಿದ್ದಾರೆ.

ನಾಮಪತ್ರ ಸಲ್ಲಿಸಿದ್ದ ಮಂಜುನಾಥ್ ಹೆಸರಿನ ಐವರು ಅಭ್ಯರ್ಥಿಗಳಲ್ಲಿ ಮೂವರು ಸೋಮವಾರ ನಾಮಪತ್ರ ವಾಪಸ್ ಪಡೆದರು. ಇದರೊಂದಿಗೆ ಬಿಜೆಪಿಯ ಡಾ.ಸಿ.ಎನ್. ಮಂಜುನಾಥ್ ಮತ್ತು ಬಹುಜನ ಭಾರತ ಪಕ್ಷದ ಅಭ್ಯರ್ಥಿ ಸಿ.ಎನ್.ಮಂಜುನಾಥ ಕಣದಲ್ಲಿ ಉಳಿದು ಕೊಂಡಿದ್ದಾರೆ.

ಅದೇ ರೀತಿ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್, ಕರುನಾಡ ಪಾರ್ಟಿಯ ಸುರೇಶ್ ಎಸ್. ಮತ್ತು ಪಕ್ಷೇತರ ಅಭ್ಯರ್ಥಿ ಸುರೇಶ್ ಎಂ.ಎನ್. ಸೇರಿದಂತೆ ನಾಮಪತ್ರ ಸಲ್ಲಿಸಿದ್ದ ಎಲ್ಲ ಮೂವರು ಅಭ್ಯರ್ಥಿಗಳೂ ಸ್ಪರ್ಧೆಯಲ್ಲಿದ್ದಾರೆ.

ಅಂಗವಿಕಲ ನೌಕರರಿಗೆ ಚುನಾವಣಾ ಕರ್ತವ್ಯ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಂಗವೈಕಲ್ಯ ಇರುವ ಸರ್ಕಾರಿ ನೌಕರರಿಗೆ ಚುನಾವಣಾ ಕರ್ತವ್ಯದಿಂದ ವಿನಾಯಿತಿ ನೀಡಬೇಕು ಎಂಬ ಭಾರತೀಯ ಚುನಾವಣಾ ಆಯೋಗದ ಪತ್ರ ಇದ್ದರೂ, ಇದನ್ನು ಮೀರಿ ಹಲವರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ ಎಂದು ಅಂಗವಿಕಲರು ಆರೋಪಿಸಿದ್ದಾರೆ.

'ಚುನಾವಣಾ ಆಯೋಗದ ಪತ್ರ, ಅಂಗವಿಕಲ ಹಕ್ಕುಗಳ ಕಾಯ್ದೆ 2016 ಅನ್ನು ಉಲ್ಲಂಘಿಸಿ, ಸಾವಿರಾರು ಅಂಗವಿಕಲ ಸರ್ಕಾರಿ ನೌಕರರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಅಂಗವಿಕಲರಿಗೆ ಕರ್ತವ್ಯದಿಂದ ತಪ್ಪಿಸಿಕೊಳ್ಳುವ ಉದ್ದೇಶ ಇಲ್ಲ. ಆದರೆ, ಮತಗಟ್ಟೆಗಳಲ್ಲಿ ಅಂಗವಿಕಲ ಸ್ನೇಹಿ ಸೌಲಭ್ಯ ಇಲ್ಲದಿದ್ದರೆ, ಅವರು ಕಾರ್ಯನಿರ್ವಹಿಸುವುದು ಕಷ್ಟವಾಗುತ್ತದೆ' ಎಂದು ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ಅಧ್ಯಕ್ಷ ಇಂದ್ರೇಶ್ ಆರ್. ಹೇಳಿದ್ದಾರೆ.

'ಚುನಾವಣಾ ಆಯೋಗಕ್ಕೆ ಮನವರಿಕೆ ಮಾಡಿಕೊಟ್ಟ ಪರಿಣಾಮ ಹಿಂದಿನ ಚುನಾವಣೆಯಲ್ಲಿ ಅಂಗವಿಕಲ ಸರ್ಕಾರಿ ನೌಕರರಿಗೆ ಚುನಾವಣಾ ಕರ್ತವ್ಯದಿಂದ ವಿನಾಯಿತಿ ದೊರೆತಿತ್ತು' ಎನ್ನುತ್ತಾರೆ ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿಯ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ.

'ಅಂಗವಿಕಲರಿಗೂ ಸಮಾನ ಅವಕಾಶ ದೊರೆಯಬೇಕು, ಚುನಾವಣಾ ಕರ್ತವ್ಯ ಅವರಿಗೆ ವಿಭಿನ್ನ ಅನುಭವ ನೀಡುತ್ತದೆ. ಕರ್ತವ್ಯ ನಿರ್ವಹಿಸಲು ಸಾಧ್ಯವಾಗದ ಅಂಗವಿಕಲರು ನನಗೆ ಪತ್ರ ಬರೆಯಬಹುದು' ಎಂದು ರಾಜ್ಯ ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮದ ಆಯುಕ್ತ ದಾಸ್ ಸೂರ್ಯವಂಶಿ ಪ್ರತಿಕ್ರಿಯಿಸಿದರು.

ಮಲೆನಾಡು, ಕರಾವಳಿಯಲ್ಲಿ ಇಂದಿನಿಂದ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲೆನಾಡು, ಕರಾವಳಿ ಸೇರಿದಂತೆ ರಾಜ್ಯದ ಹಲವೆಡೆ ಏಪ್ರಿಲ್ 9ರಿಂದ 14ರ ನಡುವೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

9ರಂದು ಕೊಡಗು, ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳಲ್ಲಿ ಹಗುರವಾಗಿ ಮಳೆಯಾಗುವ ಸಾಧ್ಯತೆಯಿದೆ. ಅಂದು ರಾಜ್ಯದ ಉಳಿದೆಡೆ ಒಣಹವೆ ಇರಲಿದೆ ಎಂದು ಸೂಚನೆ ನೀಡಿದೆ.

'14ರಂದು ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ಗದಗ, ಹಾವೇರಿ, ಕಲಬುರಗಿ, ವಿಜಯಪುರ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ಶಿವಮೊಗ್ಗ ಜಿಲ್ಲೆಯ ಅಲ್ಲಲ್ಲಿ ಮಳೆಯಾಗುವ ಸಾಧ್ಯತೆಯಿದೆ' ಎಂದು ತಿಳಿಸಿದೆ.ಮಂಗಳವಾರ ಉತ್ತರ ಕನ್ನಡ, ಬಾಗಲಕೋಟೆ, ಕಲಬುರಗಿ, ರಾಯಚೂರು, ಯಾದಗಿರಿ, ಬಳ್ಳಾರಿ ಜಿಲ್ಲೆಗಳಲ್ಲಿ ಬಿಸಿಗಾಳಿ ವಾತಾವರಣ ಇರಲಿದೆ ಎಂದು ಸೂಚಿಸಿದೆ.

ಬೆಂಗಳೂರು ನಗರದಲ್ಲಿ ಸೋಮವಾರ ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್, ದೇವನಹಳ್ಳಿಯಲ್ಲಿ 37.6, ಎಚ್‌ಎಎಲ್ ಸುತ್ತಮುತ್ತ 36.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಒಂದು ದಿನದ ಗಂಡು ಮಗುವು ದಿನಾಂಕ:07–04–2024ರಂದು ಕುಣಿಗಲ್ ತಾಲ್ಲೂಕಿನ ಭಕ್ತರಹಳ್ಳಿ, ವಾಣಿಗೆರೆ ಗ್ರಾಮದ ಸೆಂಟ್ ಗ್ರೆಗೋರಿಯಸ್ ದಯಾಭವನ ಸಂಸ್ಥೆಯ ಆವರಣದಲ್ಲಿರುವ ಮಮತೆಯ ತೊಟ್ಟಿಲಲ್ಲಿ ದೊರೆತಿದ್ದು, ಸದರಿ ಮಗುವು ಬಿಳಿಬಣ್ಣ, ಕೋಲು ಮುಖವುಳ್ಳದ್ದಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ, ಎಂ.ಜಿ ರಸ್ತೆ, ತುಮಕೂರು ದೂರವಾಣಿ ಸಂಖ್ಯೆ: 0816–2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು
ದಿನಾಂಕ:08.04.2024

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/3/KSMCA/2024-25

ಕಲ್ಲಡ್ಕ ಪ್ರಭಾಕರ ಭಟ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್

ವಿಶೇಷ ಪ್ರಾಸಿಕ್ಯೂಟರ್ ನೇಮಕಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವೇಷ ಭಾಷಣ ಮಾಡಿದ ಆರೋಪದಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖಂಡ ಡಾ.ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಲು ಎಸ್.ಬಾಲಕೃಷ್ಣನ್ ಅವರನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಿದ್ದ ರಾಜ್ಯ ಸರ್ಕಾರದ ಅಧಿಸೂಚನೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಅಧಿಸೂಚನೆ ರದ್ದುಪಡಿಸುವಂತೆ ಕೋರಿ ಡಾ.ಕಲ್ಲಡ್ಕ ಪ್ರಭಾಕರ ಭಟ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಭಾಕರ ಭಟ್ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ರಾಜ್ಯ ಸರ್ಕಾರ ಮಾರ್ಚ್ 7ರಂದು ಹೊರಡಿಸಿರುವ ಅಧಿಸೂಚನೆ ವಿವೇಚನಾರಹಿತ, ಏಕಪಕ್ಷೀಯ ಮತ್ತು ಸ್ವೇಚ್ಛೆಯಿಂದ ಕೂಡಿದೆ. ಬಾಲಕೃಷ್ಣನ್ ಒಂದೆಡೆ ದೂರುದಾರರಾದ ನಜ್ಮಾ ನಜೀರ್ ಪರ ವಕಾಲತ್ತು ವಹಿಸಿದ್ದಾರೆ. ಇತ್ತ ಸರ್ಕಾರ ಅವರನ್ನು ವಿಶೇಷ ಪ್ರಾಸಿಕ್ಯೂಟರ್ ಎಂದು ನೇಮಕ ಮಾಡಿದೆ. ಹಾಲಿ ಪ್ರಾಸಿಕ್ಯೂಟರ್ ಅನ್ನು ಏಕೆ ಬದಲಾವಣೆ ಮಾಡಲಾಗುತ್ತಿದೆ ಎಂಬುದಕ್ಕೆ ಸಕಾರಣ ನೀಡಿಲ್ಲ' ಎಂದು ಆಕ್ಷೇಪಿಸಿದರು.

'ಅಂತೆಯೇ, ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಲಿಕ್ಕೂ ಕಾರಣ ಏನೆಂಬುದನ್ನು ತಿಳಿಸಿಲ್ಲ. ಈ ಪ್ರಕರಣದಲ್ಲಿ ಅಂತಹ ಸಾರ್ವಜನಿಕ ಹಿತಾಸಕ್ತಿ ಏನಿದೆ ಮತ್ತು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಕ ಮಾಡಲು ಆ ರೀತಿಯ ವಿಶೇಷ ಸಂದರ್ಭ ಹೇಗೆ ನಿರ್ಮಾಣವಾಗಿದೆ ಎಂಬುದನ್ನೂ ತಿಳಿಸಲಾಗಿಲ್ಲ. ಆದ್ದರಿಂದ, ಸರ್ಕಾರದ ಆದೇಶವನ್ನು ವಜಾ ಮಾಡಬೇಕು' ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಸರ್ಕಾರದ ಆದೇಶಕ್ಕೆ ತಡೆ ನೀಡಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸುಯೋಗ್ ಹೇರಳೆ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: 'ಶ್ರೀರಂಗಪಟ್ಟಣದಲ್ಲಿ ಹಿಂದೂ ಜಾಗರಣಾ ವೇದಿಕೆಯು, ಹನುಮ ಜಯಂತ್ಯುತ್ಸವದ ಅಂಗವಾಗಿ 2023ರ ಡಿಸೆಂಬರ್ 24ರಂದು ಆಯೋಜಿಸಿದ್ದ ಸಂಕೀರ್ತನಾ ಯಾತ್ರೆಯಲ್ಲಿ ಡಾ.ಪ್ರಭಾಕರ್ ಭಟ್ ಪಾಲ್ಗೊಂಡಿದ್ದರು. ಈ ಸಮಯದಲ್ಲಿ ಅವರು ಮಾಡಿದ್ದ ಭಾಷಣದಲ್ಲಿ ಮುಸ್ಲಿಮರ ವಿರುದ್ಧ ದ್ವೇಷಕಾರಕ ಮಾತುಗಳನ್ನು ಆಡಿದ್ದಾರೆ' ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತೆ ನಜ್ಮಾ ನಜೀರ್ ದೂರು ನೀಡಿದ್ದರು.

ಇದನ್ನು ಆಧರಿಸಿ ಶ್ರೀರಂಗಪಟ್ಟಣ ಟೌನ್ ಠಾಣೆ ಪೊಲೀಸರು ಪ್ರಭಾಕರ್ ಭಟ್ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಹೈಕೋರ್ಟ್‌ನಲ್ಲಿ ಇತಿಹಾಸ ಸೃಷ್ಟಿಸಿದ ಸಾರಾ ಸನ್ನಿ

ಪ್ರಜಾವಾಣಿ ವಾರ್ತೆ

ಸಾರಾ ಸನ್ನಿ

ಬೆಂಗಳೂರು: ದುಭಾಷಿಯ ನೆರವಿನಿಂದ ಸಂಕೇತ ಭಾಷೆ ಬಳಸಿ ವಾದ ಮಂಡಿಸುವ ಮೂಲಕ ವಾಕ್ ಮತ್ತು ಶ್ರವಣದೋಷವುಳ್ಳ ವಕೀಲೆ ಸಾರಾ ಸನ್ನಿ ಸೋಮವಾರ ಹೈಕೋರ್ಟ್‌ನಲ್ಲಿ ಇತಿಹಾಸ ಸೃಷ್ಟಿಸಿದರು.

ಸ್ಕಾಟ್ಲೆಂಡ್‌ನಲ್ಲಿರುವ ಪತಿ ಮತ್ತು ಬೆಂಗಳೂರಿನಲ್ಲಿರುವ ಪತ್ನಿಯ ನಡುವಿನ ಕೌಟುಂಬಿಕ ವ್ಯಾಜ್ಯವೊಂದರಲ್ಲಿ ಪತಿಗೆ ಲುಕ್ ಔಟ್ (ಎಲ್‌ಒಸಿ) ನೋಟಿಸ್ ಜಾರಿಗೊಳಿಸಿದ್ದು, ಇದನ್ನು ರದ್ದುಗೊಳಿಸಬೇಕು ಎಂದು ಕೋರಿ ಪತಿ ಸಲ್ಲಿಸಿರುವ ಅರ್ಜಿಯಲ್ಲಿ ಸಾರಾ ಸನ್ನಿ ಅರ್ಜಿದಾರರ ಪತ್ನಿಯ ಪರವಾಗಿ ಹಾಜರಾಗಿದ್ದರು.

ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸಾರಾ ಅವರು ಆಂಗಿಕ ಸಂಜ್ಞೆಗಳ ಮೂಲಕ ದುಭಾಷಿಯ ನೆರವಿನಲ್ಲಿ ವಿಷಯ ಮಂಡಿಸಿದರು. ಇದಕ್ಕೆ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಮೆಚ್ಚುಗೆ ಸೂಚಿಸಿದರು. ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರ ಪತಿಯ ಪರ ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿದರು. ಕೇಂದ್ರ ಸರ್ಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್ ಮತ್ತು ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಹಾಜರಿದ್ದರು.

ಸಾರಾ ಅವರು ದುಭಾಷಿಯ ನೆರವಿನಿಂದ ಸಂಕೇತ ಭಾಷೆ ಬಳಸಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಂಡಿಸಿ ಇತಿಹಾಸ ಸೃಷ್ಟಿಸಿದ್ದರು. ಇದೀಗ ಇದೇ ಪ್ರಥಮ ಬಾರಿಗೆ ಹೈಕೋರ್ಟ್‌ನಲ್ಲೂ ಅವರು ವಾದ ಮಂಡಿಸುವ ಮೂಲಕ ಕರ್ನಾಟಕ ಹೈಕೋರ್ಟ್‌ನ ಮತ್ತೊಂದು ಹೊಸ ಮಜಲಿಗೆ ಕಾರಣೀಭೂತರಾದರು.

ಯುಗಾದಿ: ನೋವು ನಲಿವುಗಳ ಹಬ್ಬ

• ಎಸ್. ಸೂರ್ಯಪ್ರಕಾಶ ಪಂಡಿತ್

ಇಂದು ಯುಗಾದಿ

ಜೀವನದಲ್ಲಿ ಸಿಹಿ-ಕಹಿ – ಎರಡೂ ಸಹಜ; ಹೀಗಾಗಿ ಎರಡನ್ನೂ ಸಮಾನವಾಗಿ, ಸಮಚಿತ್ತದಿಂದ ಸ್ವೀಕರಿಸಬೇಕು ಎಂಬುದೇ ಯುಗಾದಿಯ ಸಂದೇಶ. ಆದರೆ ಈ ಸಲ ಸದ್ಯ ನಮ್ಮ ಪಾಲಿಗೆ 'ಕಹಿ'ಯೇ ಹೆಚ್ಚಾಗುವಂತಿದೆ. ರಾಜ್ಯಕ್ಕೆ ಬರ ಎದುರಾಗಿದೆ. ಎಲ್ಲೆಲ್ಲೂ ಬಿಸಿಲಿನ ಧಗೆ; ಜೊತೆಗೆ ಜಗತ್ತಿನಾದ್ಯಂತ ದ್ವೇಷದ ಹೊಗೆ. ಈ ಆತಂಕಗಳನ್ನು ಎದುರಿಸುವ ಬಗೆಯನ್ನೂ ಯುಗಾದಿಯ ಸಂದೇಶದಲ್ಲಿಯೇ ಕಾಣಬಹುದೆನ್ನಿ! ಬದಲಾವಣೆಯು ಸೃಷ್ಟಿಯ ನಿರಂತರ ನಿಯಮ; ಎಲೆಯೊಂದು ಚಿಗುರುವುದು, ಕೊಂಬೆಯಲ್ಲಿ ಹೂವೊಂದು ಕೊನರುವುದು, ಹೂವಾಗಿರುವುದು ಕಾಯಾಗುವುದು, ಕಾಯಿ ಹಣ್ಣಾಗುವುದು, ಹಣ್ಣು ಮಣ್ಣು ಸೇರುವುದು, ನಳನಳಿಸುತ್ತಿದ್ದ ಮರ ಬೋಳಾಗುವುದು, ಮಣ್ಣಿನಲ್ಲಿ ಸೇರಿದ ಜೀವರಸದಿಂದ ಮತ್ತೆ ಆ ಮರ ಚಿಗುರುವುದು, ಹೂವಾಗಿ ಅರಳುವುದು, ಹೂವು ಕಾಯಾಗುವುದು, ... – ಇದು ನಿಸರ್ಗದ ನಿತ್ಯನಿಯಮ. ಯುಗಾದಿಯ ಸಂದೇಶವೂ ಇದೇ ಹೌದು. ಬರ, ಧಗೆ, ಹಗೆ – ಇವೆಲ್ಲವೂ ಬದಲಾವಣೆಯನ್ನು ಕಾಣಲೇಬೇಕು; ಒಣಗಿದ ಮರದಲ್ಲಿ ಚಿಗುರು ಮೂಡುವಂತೆ ಆತಂಕದ ಮನದಲ್ಲಿ ನೆಮ್ಮದಿಯೂ ಮೂಡಲೇಬೇಕು. ಇದೇ ಜೀವನಚಕ್ರ. ಇಂಥ ಭರವಸೆಯನ್ನು ಪ್ರಕೃತಿಯು ಪ್ರತಿ ಕ್ಷಣವೂ ಕೊಡುತ್ತಲೇ ಇರುತ್ತದೆ. ಇದರ ಸಾಂಕೇತಿಕತೆಯನ್ನೇ ಯುಗಾದಿಯ ಹಬ್ಬದಲ್ಲಿ ನಾವು ಕಾಣುವುದು, ಕಾಣಬೇಕಾದದ್ದು ಕೂಡ.

ಚೈತ್ರಮಾಸದ ಮೊದಲನೆಯ ದಿನ, ಶುಕ್ಲ ಪ್ರತಿಪದೆಯಂದು ಯುಗಾದಿಯನ್ನಾಗಿ ಆಚರಿಸಲಾಗುತ್ತದೆ. ಈ ದಿನ ಬ್ರಹ್ಮನು ಇಡಿಯ ಜಗತ್ತನ್ನು ಸೃಷ್ಟಿಸಿದ ಎಂಬುದು ನಮ್ಮ ನಂಬಿಕೆ. ಇಂಥ ಒಕ್ಕಣೆಯನ್ನು ನಾವು ಪುರಾಣಗಳಲ್ಲಿ ಕಾಣುತ್ತೇವೆ. ಬ್ರಾಹ್ಮಪುರಾಣದಲ್ಲಿ ಇಂಥದೊಂದು ಮಾತನ್ನು ಕಾಣಬಹುದು:

ಚೈತ್ರೇ ಮಾಸಿ ಜಗದ್ ಬ್ರಹ್ಮಾ
ಸಸರ್ಜ ಪ್ರಥಮೇಽಹನಿ
ಶುಕ್ಲಪಕ್ಷೇ ಸಮಗ್ರಂ ತು
ತದಾ ಸೂರ್ಯೋದಯೇ ಸತಿ

'ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನ ಸೂರ್ಯೋದಯದೊಡನೆ ಬ್ರಹ್ಮನು ಸಂಪೂರ್ಣ ಜಗತ್ತನ್ನು ಸೃಷ್ಟಿಸಿದನು' – ಎಂಬುದು ಇದರ ತಾತ್ಪರ್ಯ.

ಸೃಷ್ಟಿ ಎಂದರೆ ಕಾಲದ ಆರಂಭವೂ ಹೌದು. ಕಾಲದಲ್ಲಿಯೇ ನಮ್ಮ ಪ್ರಪಂಚ ಹರಡಿರುವುದು; ನಮ್ಮ ಜೀವನವೂ ಹರಡಿರುವುದು. ಹೀಗಾಗಿ ಕಾಲಕ್ಕೂ ನಮಗೂ ನೇರ ನಂಟು. ಕಾಲದ ವ್ಯಾಪ್ತಿಯಲ್ಲಿಯೇ ಸೃಷ್ಟಿ-ಪ್ರಲಯ, ಹಗಲು-ಇರುಳು, ಕತ್ತಲು-ಬೆಳಕು, ಹುಟ್ಟು-ಸಾವುಗಳು ಇರುವಂಥದ್ದು. ಇವೇ ನಮ್ಮ ಸುಖ-ದುಃಖಗಳೂ ನೋವು-ನಲಿವುಗಳೂ. ಇವು ನಿರಂತರವಾಗಿ ಸುತ್ತುತ್ತಲೇ ಇರುತ್ತವೆ. ಸೃಷ್ಟಿಯಾಗಿರುವ ವಿಶ್ವ ಅದು ಒಂದು ದಿನ ಪ್ರಳಯವಾಗಲೇ ಬೇಕು; ಪ್ರಳಯವಾದದ್ದು ಮತ್ತೆ ಕಾಣಿಸಿಕೊಳ್ಳುತ್ತದೆ ಕೂಡ. ಈ ಸತ್ಯ ನಮ್ಮಲ್ಲಿ ಗಟ್ಟಿಯಾಗಿ ಮನೆಮಾಡಿದಾಗ ಜೀವನವೂ ನಿತ್ಯವೂ ವಸಂತವಾಗಬಹುದು, ಚೈತ್ರಮಾಸದಂತೆ ನಮ್ಮ ಪ್ರಕೃತಿಯೂ ನಳನಳಿಸಬಹುದು – ಎಂಬ ಧ್ವನಿ ಯುಗಾದಿಯ ಆಚರಣೆಯಲ್ಲಿದೆ.

'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ' – ಎಂಬ ಮಾತೊಂದಿದೆ. ನಾವು ಯಾವುದನ್ನಾದರೂ ಹೆಚ್ಚಿನ ಕಾಲ ಪಡೆಯಲು ಉದ್ದೇಶಿಸಿದ್ದಾದರೆ, ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಬಹಳ ಬೇಗ, ಸರಿಯಾದ ಸಮಯದಲ್ಲಿ ಆರಂಭಿಸಬೇಕು ಎಂಬುದು ಈ ಮಾತಿನ ತಾತ್ಪರ್ಯ. ನಾವು ವರ್ಷ ಪೂರ್ತಿ ಸಂತೋಷವಾಗಿರಬೇಕು ಎಂದರೆ ವರ್ಷದ ಆರಂಭದಲ್ಲಿ ಇದಕ್ಕೆ ಪ್ರಯತ್ನಗಳೂ ಆರಂಭವಾಗಬೇಕಷ್ಟೆ. ಹೀಗೆ ಇಡೀ ವರ್ಷ ನಮ್ಮ ಪಾಲಿಗೆ ಹಬ್ಬವಾಗಬೇಕಾದರೆ ವರ್ಷದ ಮೊದಲನೆಯ ದಿನವೇ ಹಬ್ಬವಾಗಬೇಕು.

ಈ ಹಬ್ಬವಾದರೂ ಕೇವಲ ಮೈಮರೆತು ಕುಣಿದು ಕುಪ್ಪಳಿಸುವುದಕ್ಕೆ ಸೀಮಿತವಾದುದಲ್ಲ,ಜೀವನದ ಗಹನ ಸತ್ಯವನ್ನು ಮೈಗೂಡಿಸಿಕೊಳ್ಳುವ ಸಂಕಲ್ಪವಾಗತಕ್ಕದ್ದು. ಇದನ್ನೇ ನಾವು ಯುಗಾದಿಯ ಆಚರಣೆಯಲ್ಲಿ ಕಾಣುವುದು. ಜೀವನದಲ್ಲಿ ಸೋಲು-ಗೆಲುವು, ಸುಖ-ಕಷ್ಟ, ಸಿಹಿ-ಕಹಿ ಅನಿವಾರ್ಯ; ಆದರೆ ಯಾವುದು ಎದುರಾದರೂ ಅದನ್ನು ಧೈರ್ಯದಿಂದ, ಸಮಾಧಾನದಿಂದ, ಸಂತೋಷದಿಂದ, ವಿವೇಕದಿಂದ ಎದುರಿಸಬೇಕು. ಆಗ ಜೀವನವೇ ಹಬ್ಬವಾಗುತ್ತದೆ, ಸಂತೋಷದ ಚಿಲುಮೆಯಾಗುತ್ತದೆ. ಇದೇ ಯುಗಾದಿ; ಎಂದರೆ, ಇದೇ ನಮ್ಮ ಯುಗದ ಆದಿಯಾಗಬೇಕು; ಜೀವನದ ಮೊದಲ ಕ್ಷಣವಾಗಬೇಕು. ಯುಗಾದಿಯ ದಿನ ಭವಿಷ್ಯವನ್ನು ಕೇಳುವುದಾದರೂ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಅವಕಾಶ ನಮ್ಮಲ್ಲಿ ಇದೆ ಎಂದು ಎಚ್ಚರಿಸುವ ಉದ್ದೇಶದಿಂದಲೇ ಹೌದು. ಬೇವು-ಬೆಲ್ಲಗಳನ್ನು ಸೇವಿಸುತ್ತ ನಾವು ಇಂದು ಪ್ರಾರ್ಥಿಸಿಕೊಳ್ಳುವುದು – ನೂರು ವರ್ಷಗಳ ಆರೋಗ್ಯಪೂರ್ಣ ಜೀವನಕ್ಕಾಗಿ, ಎಲ್ಲ ಸಂಪತ್ತುಗಳ ಪ್ರಾಪ್ತಿಗಾಗಿ ಎಂಬುದನ್ನು ಮರೆಯಬಾರದು.

ಕೇಂದ್ರ ತನಿಖಾ ಸಂಸ್ಥೆಗಳ ಮುಖ್ಯಸ್ಥರ ಬದಲಾವಣೆಗೆ ಒತ್ತಾಯಿಸಿ ದೆಹಲಿಯಲ್ಲಿ ಚುನಾವಣಾ ಆಯೋಗದ ಕಚೇರಿ ಎದುರು ಟಿಎಂಸಿ ನಾಯಕರಾದ ಡೆರೆಕ್ ಒಬ್ರಾಯನ್, ಡೋಲಾ ಸೇನ್, ಸಾಕೇತ್ ಗೋಖಲೆ, ಸಾಗರಿಕಾ ಘೋಷ್, ಅಬಿರ್ ರಂಜನ್ ಬಿಸ್ವಾಸ್ ಸೋಮವಾರ ಧರಣಿ ನಡೆಸಿದರು –ಪಿಟಿಐ ಚಿತ್ರ

'ಬಂಧಿಸಿದರೆ ಬೀದಿಗೆ ಇಳಿಯಿರಿ'

ಮುಖಂಡರ ಪತ್ನಿಯರಿಗೆ ಮುಖ್ಯಮಂತ್ರಿ ಮಮತಾ ಕರೆ

ಬಾಂಕುಡಾ, ಪಶ್ಚಿಮ ಬಂಗಾಳ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಚುನಾವಣೆ ಬಳಿಕ ಪ್ರತಿಪಕ್ಷಗಳ ನಾಯಕರನ್ನು ಜೈಲಿಗೆ ಕಳುಹಿಸುವುದೇ 'ಮೋದಿ ಕೀ ಗ್ಯಾರಂಟಿ' ಎಂಬುದರ ಅರ್ಥ ಇರುವಂತಿದೆ' ಎಂದಿದ್ದಾರೆ.

ಇಲ್ಲಿ ಲೋಕಸಭೆ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ದೇಶವನ್ನೇ ಜೈಲಾಗಿ ಪರಿವರ್ತಿಸುತ್ತಿದೆ. ಟಿಎಂಸಿ ನಾಯಕರನ್ನು ಚುನಾವಣೆಗೆ ಮುನ್ನ ಬಂಧಿಸಿದ್ದೇ ಆದಲ್ಲಿ ಅವರ ಪತ್ನಿ, ಬೆಂಬಲಿಗರು ಬೀದಿಗಿಳಿಯಬೇಕು ಎಂದು ಕರೆ ನೀಡಿದರು.

ಸ್ಥಳೀಯ ಪೊಲೀಸರಿಗೂ ಮಾಹಿತಿ ನೀಡದೇ ಎನ್‌ಐಎ ಅಧಿಕಾರಿಗಳು ಇತ್ತೀಚೆಗೆ ಪೂರ್ವ ಮೇದಿನಿಪುರ ಜಿಲ್ಲೆಯ ಭೂಪತಿನಗರಕ್ಕೆ ದಾಳಿಗೆ ತೆರಳಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

'ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಚುನಾವಣೆಯ ಬಳಿಕ ವಿರೋಧಪಕ್ಷಗಳ ನಾಯಕರ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳುತ್ತೇವೆ ಎಂಬ ಅವರ ಹೇಳಿಕೆ ಪ್ರಜಾಪ್ರಭುತ್ವದಲ್ಲಿ ಸ್ವೀಕಾರಾರ್ಹವಲ್ಲ' ಎಂದು ಮಮತಾ ಅವರು ಹೇಳಿದರು.

ಭಾನುವಾರ ಜಲ್‌ಪಾಯೀಗುಡಿಯಲ್ಲಿ ರ‍್ಯಾಲಿಯಲ್ಲಿ ಮಾತನಾಡಿದ್ದ ಪ್ರಧಾನಿ ಉಲ್ಲೇಖಿಸಿದ ಮಮತಾ ಅವರು, 'ಪ್ರಧಾನಿ ಹೀಗೆ ಮಾತನಾಡಬಹುದೇ? ಬಿಜೆಪಿ ನಾಯಕರನ್ನು ಜೈಲಿಗೆ ಹಾಕುತ್ತೇನೆ ಎಂದು ನಾನು ಹೇಳಿದರೆ ಹೇಗಿರುತ್ತದೆ.? ಪ್ರಜಾಪ್ರಭುತ್ವದಲ್ಲಿ ಇದು ಸ್ವೀಕಾರಾರ್ಹವಲ್ಲ' ಎಂದರು.

'ನಿಮ್ಮ ಒಂದು ಜೇಬಿನಲ್ಲಿ ಇ.ಡಿ., ಸಿಬಿಐ ಇದ್ದರೆ, ಇನ್ನೊಂದರಲ್ಲಿ ಎನ್‌ಐಎ, ಆದಾಯ ತೆರಿಗೆ ಇಲಾಖೆ ಇದೆ. ಅವರು ನಿಮ್ಮ ಪಕ್ಷದ ಮೈತ್ರಿಗಳು. ಈ ಸಂಸ್ಥೆಗಳನ್ನು ಬಳಸಿಕೊಂಡು ವಿರೋಧಪಕ್ಷಗಳನ್ನು ಬೆದರಿಸಲಾಗುತ್ತಿದೆ. ಆದರೆ, ನಮ್ಮನ್ನು ಹೆದರಿಸಲು ಬಿಜೆಪಿಗೆ ಆಗದು' ಎಂದು ಪ್ರತಿಪಾದಿಸಿದರು.

'ತನಿಖಾ ಸಂಸ್ಥೆಗಳ ಮುಖ್ಯಸ್ಥರ ಬದಲಾಯಿಸಿ'

ನವದೆಹಲಿ (ಪಿಟಿಐ): ತನಿಖಾ ಸಂಸ್ಥೆಗಳಾದ ಸಿಬಿಐ, ಎನ್‌ಐಎ, ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಆದಾಯ ತೆರಿಗೆ ಇಲಾಖೆಯ ಮುಖ್ಯಸ್ಥರನ್ನು ಬದಲಾಯಿಸಬೇಕು ಎಂದು ತೃಣಮೂಲ ಕಾಂಗ್ರೆಸ್ ಪಕ್ಷವು (ಟಿಎಂಸಿ), ಚುನಾವಣಾ ಆಯೋಗಕ್ಕೆ ಆಗ್ರಹಿಸಿದೆ.

ಈ ಕುರಿತು ಗಮನಸೆಳೆಯಲು ಇಲ್ಲಿ, ಚುನಾವಣಾ ಆಯೋಗದ ಕಚೇರಿ ಎದುರು ಟಿಎಂಸಿ ಮುಖಂಡರು ಧರಣಿ ನಡೆಸಿದರು. ಬಳಿಕ ಪಕ್ಷದ ನಿಯೋಗವು ಮುಖ್ಯ ಚುನಾವಣಾ ಆಯುಕ್ತರ ನೇತೃತ್ವದ ಪೂರ್ಣಪೀಠವನ್ನು ಭೇಟಿಯಾಗಿ ಚರ್ಚಿಸಿತು.

ಟಿಎಂಸಿ ನಾಯಕರೂ ಆದ ಡೆರೆಕ್ ಒಬ್ರಿಯಾನ್, ಡೋಲಾ ಸೇನ್, ಸಾಕೇತ್ ಗೋಖಲೆ, ಸಾಗರಿಕಾ ಘೋಷ್ ಅವರು ಈ ನಿಯೋಗದಲ್ಲಿದ್ದರು.

'ತನಿಖಾ ಸಂಸ್ಥೆಗಳನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಎನ್‌ಐಎ, ಇ.ಡಿ ಸೇರಿದಂತೆ ತನಿಖಾ ಸಂಸ್ಥೆಗಳ ಕಾರ್ಯವೈಖರಿಯು ನಾಚಿಕೆಗೇಡಿತನದು' ಎಂದು ಭೇಟಿ ಬಳಿಕ ಡೋಲಾ ಸೇನ್ ಸುದ್ದಿಗಾರರಿಗೆ ತಿಳಿಸಿದರು.

ಧರಣಿ –ಮುಖಂಡರ ಬಂಧನ: ಚುನಾವಣಾ ಆಯೋಗದ ಕಚೇರಿ ಎದುರು ಧರಣಿ ನಡೆಸುತ್ತಿದ್ದ ಟಿಎಂಸಿ ನಾಯಕರನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದರು. ಆಯೋಗದ ಪೂರ್ಣಪೀಠದ ಭೇಟಿ ಬಳಿಕ 10 ಸದಸ್ಯರಿದ್ದ ಟಿಎಂಸಿ ನಿಯೋಗವು, ಆಯೋಗದ ಕಚೇರಿ ಎದುರು 24 ಗಂಟೆ ಧರಣಿ ನಡೆಸಲಾಗುವುದು ಎಂದು ಪ್ರಕಟಿಸಿದ್ದರು.

ಯೂಟ್ಯೂಬರ್‌ಗೆ ಮತ್ತೆ ಜಾಮೀನು ನೀಡಿದ ಸುಪ್ರೀಂ ಕೋರ್ಟ್

'ಆರೋಪ ಮಾಡಿದವರನ್ನೆಲ್ಲ ಜೈಲಿಗಟ್ಟಲಾಗದು'

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳ ಮೂಲಕ ಆರೋಪ ಮಾಡುವವರನ್ನೆಲ್ಲ ಜೈಲಿಗೆ ಕಳುಹಿಸಲು ಆಗದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಬಗ್ಗೆ 2021ರಲ್ಲಿ ಅವಹೇಳನಕಾರಿಯಾಗಿ ಮಾತನಾಡಿದ ಆರೋಪ ಎದುರಿಸುತ್ತಿರುವ ಯೂಟ್ಯೂಬರ್ ಒಬ್ಬರಿಗೆ ಜಾಮೀನನ್ನು ಪುನಃ ನೀಡಿದೆ.

'ಯೂಟ್ಯೂಬ್ ಮೂಲಕ ಆರೋಪ ಮಾಡಿದವರನ್ನೆಲ್ಲ ಚುನಾವಣೆಗೂ ಮೊದಲು ನಾವು ಜೈಲಿಗೆ ಕಳುಹಿಸಲು ಆರಂಭಿಸಿದರೆ, ಎಷ್ಟು ಜನ ಜೈಲು ಪಾಲಾಗುತ್ತಾರೆ ಎಂಬುದನ್ನು ಕಲ್ಪಿಸಿಕೊಳ್ಳಿ' ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಉಜ್ವಲ್ ಭುಇಯಾಂ ಅವರು ಇದ್ದ ವಿಭಾಗೀಯ ಪೀಠವು ತಮಿಳುನಾಡು ಸರ್ಕಾರದ ಪರ ವಕೀಲ ಮುಕುಲ್ ರೋಹಟಗಿ ಅವರನ್ನು ಉದ್ದೇಶಿಸಿ ಹೇಳಿತು.

ಯೂಟ್ಯೂಬರ್ ದೊರೈಮುರುಗನ್ ಸಟ್ಟೈ ಅವರ ಜಾಮೀನು ರದ್ದುಮಾಡಿದ್ದ ಆದೇಶವನ್ನು ಪೀಠವು ಅಸಿಂಧುಗೊಳಿಸಿದೆ. ತಮ್ಮ ಅನಿಸಿಕೆಗಳನ್ನು ಹೇಳಿಕೊಂಡ ದೊರೈಮುರುಗನ್ ಅವರು ತಮ್ಮ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಂಡಿಲ್ಲ ಎಂದು ಪೀಠ ಹೇಳಿದೆ. ಜಾಮೀನಿನ ಮೇಲೆ ಹೊರಗಿದ್ದ ಸಂದರ್ಭದಲ್ಲಿ ಅವಹೇಳನಕಾರಿಯಾಗಿ ಮಾತನಾಡಬಾರದು ಎಂದು ದೊರೈಮುರುಗನ್ ಅವರಿಗೆ ಷರತ್ತು ವಿಧಿಸಬೇಕು ಎಂದು ಸರ್ಕಾರ ಮಾಡಿಕೊಂಡಿದ್ದ ಮನವಿಯನ್ನು ನ್ಯಾಯಪೀಠವು ತಿರಸ್ಕರಿಸಿದೆ.

ನ್ಯಾಯಾಲಯಕ್ಕೆ ನೀಡಿದ್ದ ಮಾತನ್ನು ಉಲ್ಲಂಘಿಸಿ ದೊರೈಮುರುಗನ್ ಅವರು ಸ್ಟಾಲಿನ್ ಅವರನ್ನು ಉದ್ದೇಶಿಸಿ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಅವರಿಗೆ ನೀಡಿದ್ದ ಜಾಮೀನನ್ನು ಮದ್ರಾಸ್ ಹೈಕೋರ್ಟ್ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ದೊರೈಮುರುಗನ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಪ್ರಕರಣ ಒಂದರಲ್ಲಿ ಜಾಮೀನು ಕೋರುವ ಸಂದರ್ಭದಲ್ಲಿ ದೊರೈಮುರುಗನ್ ಅವರು ತಾವು ಯಾರ ವಿರುದ್ಧವೂ ಅವಹೇಳನಕಾರಿಯಾಗಿ ಮಾತನಾಡುವುದಿಲ್ಲ ಎಂದು ಕೋರ್ಟ್‌ಗೆ ಮಾತುಕೊಟ್ಟಿದ್ದರು.

ಕೋರ್ಟ್ ಸುದ್ದಿಗಳು

ವಿಚಾರಣೆಗೆ ತಡೆ

ತಮಿಳುನಾಡಿನ ಗ್ರಾಮೀಣ ಅಭಿವೃದ್ಧಿ ಸಚಿವ ಐ. ಪೆರಿಯಸಾಮಿ ಅವರ ವಿರುದ್ಧ ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರು ಇದ್ದ ವಿಭಾಗೀಯ ಪೀಠವು, ತಮ್ಮ ವಿರುದ್ಧ ವಿಚಾರಣೆ ಶುರುಮಾಡುವುದಕ್ಕೆ ವಿಚಾರಣಾ ನ್ಯಾಯಾಲಯಕ್ಕೆ ಮದ್ರಾಸ್ ಹೈಕೋರ್ಟ್ ಆದೇಶಿಸಿದ್ದನ್ನು ಪ್ರಶ್ನಿಸಿ ಪೆರಿಯಸಾಮಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಆಲಿಸಲು ಸುಪ್ರೀಂ ಕೋರ್ಟ್ ಒಪ್ಪಿದೆ.

'ಕನ್ಯಾದಾನ ಅನಿವಾರ್ಯ ಅಲ್ಲ'

ಲಖನೌ (ಪಿಟಿಐ): ಹಿಂದೂ ವಿವಾಹ ಕಾಯ್ದೆಯ ಪ್ರಕಾರ ವಿವಾಹ ಪ್ರಕ್ರಿಯೆಯು ಶಾಸ್ತ್ರೋಕ್ತವಾಗಿ ನಡೆಯಲು 'ಕನ್ಯಾದಾನ'ವು ಅನಿವಾರ್ಯವೇನೂ ಅಲ್ಲ, 'ಸಪ್ತಪದಿ' ಮಾತ್ರವೇ ಅನಿವಾರ್ಯವಾದ ಭಾಗ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿ ಸುಭಾಷ್ ವಿದ್ಯಾರ್ಥಿ ಅವರು ಇದ್ದ ಪೀಠವು, ಆಶುತೋಷ್ ಯಾದವ್ ಎನ್ನುವವರು ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಗೆ ಸಂಬಂಧಿಸಿದಂತೆ ಈ ಮಾತು ಹೇಳಿದೆ. ಕಾಯ್ದೆಯ ಅನ್ವಯ 'ಕನ್ಯಾದಾನ' ಪ್ರಕ್ರಿಯೆಯು ಆಗಬೇಕಿತ್ತು. ಆದರೆ ತಮ್ಮ ಮದುವೆಯಲ್ಲಿ ಇದು ಆಗಿಲ್ಲ ಎಂದು ಅವರು ಹೇಳಿದ್ದರು.

'ಸಪ್ತಪದಿ' ಮಾತ್ರವೇ ವಿವಾಹ ಕಾರ್ಯಕ್ರಮದ ಅತ್ಯಗತ್ಯ ಅಂಗ ಎಂದು ಹಿಂದೂ ವಿವಾಹ ಕಾಯ್ದೆ ಹೇಳುತ್ತದೆ ಎಂದು ಪೀಠವು ಮಾರ್ಚ್ 22ರಂದು ನೀಡಿರುವ ಆದೇಶದಲ್ಲಿ ಹೇಳಿದೆ.

ಹಿಂದೂ ವಿವಾಹವೊಂದು ಶಾಸ್ತ್ರೋಕ್ತವಾಗಿ ನಡೆದಿದೆ ಎನ್ನುವುದಕ್ಕೆ 'ಕನ್ಯಾದಾನ'ವು ಅನಿವಾರ್ಯವೇನೂ ಅಲ್ಲ ಎಂದು ಪೀಠವು ತಿಳಿಸಿದೆ.

ಕೇಜ್ರಿವಾಲ್ ಆಪ್ತ ಸಹಾಯಕನ ವಿಚಾರಣೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಹಾಗೂ ಎಎಪಿ ಶಾಸಕ ದುರ್ಗೇಶ್ ಪಾಠಕ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ವಿಚಾರಣೆಗೊಳಪಡಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಇವರ ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಈ ಮುಂಚೆಯೂ ಇವರಿಬ್ಬರನ್ನೂ ವಿಚಾರಣೆಗೊಳಪಡಿಸಲಾಗಿತ್ತು. ಪ್ರಕರಣದಲ್ಲಿ ಕೇಜ್ರಿವಾಲ್ ಅವರ ಪಾತ್ರದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಯಲು ಬಿಭವ್ ಕುಮಾರ್ ವಿಚಾರಣೆ ಅತ್ಯಗತ್ಯವಾಗಿತ್ತು ಎಂದಿದ್ದಾರೆ.

ಗೋವಾ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪ್ರಚಾರಕ್ಕೆ ಸಂಬಂಧಿಸಿದಂತೆ ಶಾಸಕ ದುರ್ಗೇಶ್ ಪಾಠಕ್ ಅವರನ್ನು ವಿಚಾರಣೆಗೊಳಪಡಿಸಲಾಗಿದೆ. 'ಸೌತ್ ಗ್ರೂಪ್' ನೀಡಿದ ₹ 100 ಕೋಟಿ ಲಂಚದಲ್ಲಿ ₹ 45 ಕೋಟಿಯನ್ನು ಎಎಪಿ ಚುನಾವಣಾ ಪ್ರಚಾರಕ್ಕೆ ಬಳಸಿಕೊಂಡಿದೆ ಎಂದು ಇ.ಡಿ ಆರೋಪಿಸಿದೆ.

ಹವಾಮಾನ ಬದಲಾವಣೆ– ಸಾಂವಿಧಾನಿಕ ಹಕ್ಕಿಗೆ ಧಕ್ಕೆ

ನವದೆಹಲಿ (ಪಿಟಿಐ): ಹವಾಮಾನ ಬದಲಾವಣೆಯು ಸಾಂವಿಧಾನಿಕ ಹಕ್ಕಾಗಿರುವ ಸಮಾನತೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಅವಸಾನದ ಅಂಚಿಗೆ ತಲುಪಿರುವ ಹೆಬ್ಬಕಗಳ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಪಕ್ಷಿಯ ಸಂರಕ್ಷಣೆ ಹಾಗೂ ರಾಜಸ್ಥಾನ, ಗುಜರಾತ್‌ನಲ್ಲಿ ನವೀಕರಿಸಬಹುದಾದ ಇಂಧನ ಮೂಲಸೌಕರ್ಯ ಕಲ್ಪಿಸುವುದರ ನಡುವೆ ಸಮತೋಲನ ಕಂಡುಕೊಳ್ಳಲು ಸಮಿತಿಯೊಂದನ್ನು ರಚಿಸಿದೆ.

ರಾಜಸ್ಥಾನ ಹಾಗೂ ಗುಜರಾತ್‌ನ 80 ಸಾವಿರ ಚದರ ಕಿ.ಮೀ.ಗಿಂತ ಹೆಚ್ಚಿನ ವ್ಯಾಪ್ತಿಯಲ್ಲಿ ವಿದ್ಯುತ್ ತಂತಿಗಳನ್ನು ನೆಲದ ಅಡಿಯಲ್ಲಿ ಅಳವಡಿಸುವ ಕೆಲಸ ಆಗಬೇಕು ಎಂದು 2021ರ ಏಪ್ರಿಲ್‌ನಲ್ಲಿ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರು ಇದ್ದ ಪೀಠವು ಹಿಂಪಡೆದಿದೆ.

'ಹವಾಮಾನ ಬದಲಾವಣೆಯು ಸಂವಿಧಾನ ನೀಡಿರುವ ಸಮಾನತೆಯ ಹಕ್ಕಿನ ಮೇಲೆ ಪರಿಣಾಮ ಉಂಟುಮಾಡಬಹುದು. ಸ್ವಚ್ಛವಾದ ಪರಿಸರ ಇಲ್ಲದಿದ್ದರೆ ಜೀವಿಸುವ ಸ್ವಾತಂತ್ರ್ಯವು ಪೂರ್ಣಪ್ರಮಾಣದಲ್ಲಿ ಸಾಕಾರಗೊಳ್ಳುವುದಿಲ್ಲ. ವಾಯುಮಾಲಿನ್ಯ, ತಾಪಮಾನ ಹೆಚ್ಚಳ, ಬರ, ಬೆಳೆ ಹಾನಿಯಿಂದಾಗಿ ಆಹಾರ ಪೂರೈಕೆಯಲ್ಲಿ ಕೊರತೆ, ಪ್ರವಾಹದಂತಹ ಪರಿಸ್ಥಿತಿಯಿಂದಾಗಿ ಆರೋಗ್ಯದ ಹಕ್ಕಿನ ಮೇಲೆ ಪರಿಣಾಮ ಉಂಟಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಹೆಬ್ಬಕಗಳು ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಅವು ವಿದ್ಯುತ್ ತಂತಿಗೆ ಡಿಕ್ಕಿ ಹೊಡೆದು ಸಾಯುತ್ತವೆ, ಇದು ಅವುಗಳ ಸಂಖ್ಯೆಯಲ್ಲಿ ಆಗಿರುವ ಕುಸಿತಕ್ಕೆ ಕಾರಣ ಎಂದು ಹೇಳಲಾಗಿದೆ. ಹೆಬ್ಬಕಗಳು ಹಾರುವಾಗ ವಿದ್ಯುತ್ ಪ್ರವಹಿಸುತ್ತಿರುವ ತಂತಿ ಎದುರಾದಲ್ಲಿ, ಅವುಗಳಿಗೆ ತಕ್ಷಣಕ್ಕೆ ತಮ್ಮ ಪಥ ಬದಲಿಸಿಕೊಳ್ಳುವುದು ಕಷ್ಟವಾಗುತ್ತದೆ.

'ಪ್ರತಿ ವ್ಯಕ್ತಿಯೂ ಸ್ವಚ್ಛವಾದ, ಸುರಕ್ಷಿತವಾದ ಹಾಗೂ ಆರೋಗ್ಯಕರ ಜೀವನಕ್ಕೆ ಪೂರಕವಾದ ಪರಿಸರದಲ್ಲಿ ಬದುಕು ಸಾಗಿಸುವ ಹಕ್ಕು ಹೊಂದಿದ್ದಾನೆ ಎಂಬ ತತ್ವವನ್ನು ಆರೋಗ್ಯಕರ ಪರಿಸರದ ಹಕ್ಕು ಒಳಗೊಳ್ಳುತ್ತದೆ. ಆರೋಗ್ಯಕರ ಪರಿಸರದ ಹಕ್ಕನ್ನು, ಹವಾಮಾನ ಬದಲಾವಣೆಯ ಕೆಟ್ಟ ಪರಿಣಾಮಗಳಿಂದ ಮುಕ್ತವಾಗಿರುವ ಹಕ್ಕನ್ನು ಗುರುತಿಸುವ ಮೂಲಕ ರಾಜ್ಯ ಸರ್ಕಾರಗಳು ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಬೇಕಾಗುತ್ತದೆ. ಆ ಮೂಲಕ ಅವು ಹವಾಮಾನ ಬದಲಾವಣೆಯ ಮೂಲ ಕಾರಣವನ್ನು ಸರಿಪಡಿಸ ಬೇಕಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

'ಅಂತರರಾಷ್ಟ್ರೀಯ ಕಾನೂನುಗಳ ಅಡಿಯಲ್ಲಿ ತನ್ನ ಮೇಲಿರುವ ಹೊಣೆಗಳನ್ನು ಭಾರತ ನಿರ್ವಹಿಸಬೇಕಾಗುತ್ತದೆ. ಹಸಿರುಮನೆ ಪರಿಣಾಮಕ್ಕೆ ಕಾರಣವಾಗುವ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವ, ಹವಾಮಾನ ಬದಲಾವಣೆಗಳಿಗೆ ತಕ್ಕಂತೆ ಬದಲಾವಣೆಗಳನ್ನು ತಂದುಕೊಳ್ಳುವ ಹಾಗೂ ಆರೋಗ್ಯರ ಮತ್ತು ಸುಸ್ಥಿರ ಪರಿಸರದಲ್ಲಿ ಬದುಕುವ ಎಲ್ಲರ ಹಕ್ಕುಗಳನ್ನು ರಕ್ಷಿಸುವ ಕೆಲಸ ಮಾಡಬೇಕಾಗುತ್ತದೆ' ಎಂದು ಪೀಠ ಹೇಳಿದೆ.

ಕೃತಿಚೌರ್ಯದ ವಿರುದ್ಧ ಎನ್‌ಸಿಇಆರ್‌ಟಿ ಎಚ್ಚರಿಕೆ

ನವದೆಹಲಿ (ಪಿಟಿಐ): ಶಾಲಾ ಪಠ್ಯಪುಸ್ತಕಗಳ ಕೃತಿಚೌರ್ಯದ ವಿರುದ್ಧ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಸೋಮವಾರ ಎಚ್ಚರಿಕೆ ನೀಡಿದೆ.

ಇದರಿಂದ ತಪ್ಪು ಮಾಹಿತಿ ಸಹ ದೊರೆಯುವ ಸಾಧ್ಯತೆಗಳಿವೆ ಎಂದು ತಿಳಿಸಿದೆ.

ತನ್ನ ಶೈಕ್ಷಣಿಕ ಪಠ್ಯಪುಸ್ತಕಗಳ ಕೃತಿಸ್ವಾಮ್ಯ ಹಕ್ಕನ್ನು ಉಲ್ಲಂಘಿಸುವುದು ಮತ್ತು ಎನ್‌ಸಿಇಆರ್‌ಟಿ ಶಾಲಾ ಪಠ್ಯಪುಸ್ತಕಗಳ ಅನಧಿಕೃತ ಮುದ್ರಣ ಮತ್ತು ವಾಣಿಜ್ಯ ಮಾರಾಟದ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಸೂಚಿಸಿದೆ.

'ಕೆಲ ನಿರ್ಲಜ್ಜ ಪ್ರಕಾಶಕರು ಎನ್‌ಸಿಇಆರ್‌ಟಿ ಶಾಲಾ ಪಠ್ಯಪುಸ್ತಕವನ್ನು ತಮ್ಮದೇ ಹೆಸರಿನಲ್ಲಿ ಮುದ್ರಿಸಿದ್ದಾರೆ. ಕೃತಿಸ್ವಾಮ್ಯ ಹಕ್ಕು ಪಡೆಯದೆ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಮುದ್ರಿಸುವುದು ಅಥವಾ ಮಾರಾಟ ಮಾಡುವುದು ಕಂಡುಬಂದರೆ ಅವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು' ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು' ಮಾಹಿತಿ ನೀಡಿದರು.

ಕೇಂದ್ರ–ರಾಜ್ಯ ಸಂಘರ್ಷ ಸಲ್ಲ: 'ಸುಪ್ರೀಂ'

ಒಂದನೇ ಪುಟದಿಂದ...

ಕರ್ನಾಟಕದ ಅರ್ಜಿ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಲಾಗುವುದು ಎಂದು ನ್ಯಾಯಮೂರ್ತಿಗಳು ಮೌಖಿಕವಾಗಿ ಹೇಳಿದರು. ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಗೂ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನೋಟಿಸ್ ನೀಡದಂತೆ ಮನವಿ ಮಾಡಿದರು. ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವುದಾಗಿ ತಿಳಿಸಿದರು.

'ಏಕೆ ಎಂದು ಹೇಳಲು ನಾನು ಬಯಸುವುದಿಲ್ಲ. ಆದರೆ, ಚುನಾವಣಾ ಸಮಯದಲ್ಲಿ ಇದು ಬೆಳೆಯುತ್ತಿರುವ ಪ್ರವೃತ್ತಿಯಾಗಿದೆ' ಎಂದು ತುಷಾರ್ ಮೆಹ್ತಾ ಅವರು ಹೇಳಿದರು. ನ್ಯಾಯಾಲಯವು ಔಪಚಾರಿಕ ನೋಟಿಸ್ ನೀಡಬಾರದು. ಅದು ಸಹ ಸುದ್ದಿಯಾಗುತ್ತದೆ. ಪ್ರತಿಕ್ರಿಯೆ ನೀಡಲು ನಾವು ಇಲ್ಲಿದ್ದೇವೆ' ಎಂದು ಅವರು ಮನವಿ ಮಾಡಿದರು. ಇದನ್ನು ಗಮನಿಸಿದ ಪೀಠವು, ಎರಡು ವಾರಗಳ ನಂತರ ಪ್ರಕರಣದ ವಿಚಾರಣೆ ನಡೆಸುವುದಾಗಿ ತಿಳಿಸಿತು.

ಕೇಂದ್ರಕ್ಕೆ ತರಾಟೆ: ಕೃಷ್ಣ ಬೈರೇಗೌಡ

'ಅರ್ಜಿ ವಿಚಾರಣೆ ವೇಳೆ ಪೀಠವು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಅರ್ಜಿ ಬಗ್ಗೆ ಎರಡು ವಾರಗಳಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳು ವಂತೆ ಕೇಂದ್ರಕ್ಕೆ ಸೂಚಿಸಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಕರಣದ ವಿಚಾರಣೆ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕಾಲಮಿತಿಯೊಳಗೆ ಕೇಂದ್ರ ಪರಿಹಾರ ಬಿಡುಗಡೆ ಮಾಡಬೇಕಿತ್ತು. ಇಂತಹ ಕೆಲಸದ ಬಗ್ಗೆ ತಕರಾರು ಅರ್ಜಿಯನ್ನು ಸಲ್ಲಿಸಿರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಕೇಂದ್ರ ಸೂಕ್ತ ಸಮಯದಲ್ಲಿ ತೀರ್ಮಾನ ತೆಗೆದುಕೊಂಡಿದ್ದರೆ ಈ ಅರ್ಜಿ ಸಲ್ಲಿಕೆ ಆಗುತ್ತಿರಲಿಲ್ಲ ಎಂದು ನ್ಯಾಯಪೀಠ ಅಭಿಪ್ರಾಯ ವ್ಯಕ್ತಪಡಿಸಿದೆ' ಎಂದರು.

'ರಾಜ್ಯದ ವಾದಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಗೆಲುವು ಸಿಕ್ಕಿದೆ. ಈಗಲಾದರೂ ಕೇಂದ್ರ ಸರ್ಕಾರ ಬರ ಪರಿಹಾರ ಬಿಡುಗಡೆ ಮಾಡಲಿದೆ ಎಂಬ ವಿಶ್ವಾಸ ಇಟ್ಟುಕೊಂಡಿದ್ದೇವೆ. ರಾಜ್ಯಕ್ಕೆ ಕೇಂದ್ರ ಸರ್ಕಾರ ಬರ ಪರಿಹಾರವಾಗಿ ₹4,663 ಕೋಟಿ ಬಿಡುಗಡೆ ಮಾಡಿದರೆ ಪ್ರತಿ ರೈತರಿಗೆ ₹14 ಸಾವಿರ ನೀಡಬಹುದು' ಎಂದರು.

ಕೇಂದ್ರದಿಂದ 'ಸುಪ್ರೀಂ'ಗೂ ತಪ್ಪು ಮಾಹಿತಿ– ಸಿ.ಎಂ

ಬೆಂಗಳೂರು: 'ಕರ್ನಾಟಕಕ್ಕೆ ನ್ಯಾಯಬದ್ಧವಾಗಿ ನೀಡಬೇಕಾಗಿರುವ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಕೂಡ ತಪ್ಪು ಮಾಹಿತಿ ನೀಡಿ, ನ್ಯಾಯಾಲಯದ ಹಾದಿ ತಪ್ಪಿಸುವ ಪ್ರಯತ್ನ ಮಾಡುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಸಿದ್ದರಾಮಯ್ಯ

'ಕರ್ನಾಟಕಕ್ಕೆ ನೀಡಬೇಕಾಗಿರುವ ಬರ ಪರಿಹಾರ ನೀಡದೆ 5–6 ತಿಂಗಳಿಂದ ಕೇಂದ್ರ ಸರ್ಕಾರ ಸತಾಯಿಸುತ್ತಿರುವುದರಿಂದ ಬೇರೆ ದಾರಿ ಇಲ್ಲದೆ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ನಡೆದ ವಿಚಾರಣೆಯಲ್ಲಿ ಕೇಂದ್ರ ಸರ್ಕಾರದ ಅಡ್ವೋಕೇಟ್ ಜನರಲ್ ತುಷಾರ್ ಮೆಹ್ತಾ ಅವರು, ಬರ ಪರಿಹಾರ ವಿಳಂಬಕ್ಕೆ ಕರ್ನಾಟಕ ಸರ್ಕಾರವೇ ಕಾರಣ. ಅದರ ಹಿಂದೆ ರಾಜಕೀಯ ಉದ್ದೇಶವಿದೆಯೆಂಬ ಅಭಿಪ್ರಾಯ ಮೂಡುವಂತೆ ವಾದ ಮಾಡಿದ್ದಾರೆ. ಇದು ಖಂಡನೀಯ' ಎಂದಿದ್ದಾರೆ. 'ಕರ್ನಾಟಕ ಸರ್ಕಾರ ವಿಳಂಬವಾಗಿ ಮನವಿ ಸಲ್ಲಿಸಿದೆ ಎಂದು ಕೇಂದ್ರ ಹಣಕಾಸು ಸಚಿವರು ಮತ್ತು ಗೃಹ ಸಚಿವರು ಸುಳ್ಳು ಹೇಳುತ್ತಾ ಬಂದಿದ್ದಾರೆ. ಅದೇ ಸುಳ್ಳನ್ನು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಮುಂದೆಯೂ ಹೇಳಿದೆ. ಕೇಂದ್ರ ಸರ್ಕಾರದ ಅಡ್ವೋಕೇಟ್ ಜನರಲ್ ಅವರ ಹೇಳಿಕೆಯನ್ನು ಪುರಸ್ಕರಿಸಿದ ಸುಪ್ರೀಂ ಕೋರ್ಟ್, ಸದ್ಯಕ್ಕೆ ಪ್ರಕರಣವನ್ನು ಎರಡು ವಾರಗಳ ಕಾಲ ಮುಂದೂಡಿದೆ' ಎಂದಿದ್ದಾರೆ.

'ಬರ ಪರಿಹಾರ ನೀಡಿಕೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡಿರುವ ಅನ್ಯಾಯದ ವಿರುದ್ಧದ ಬೀದಿಗಳಲ್ಲಿ ಮಾತ್ರವಲ್ಲ, ನ್ಯಾಯಾಲಯದಲ್ಲಿಯೂ ನಮ್ಮ ಹೋರಾಟ ಮುಂದುವರಿಯಲಿದೆ' ಎಂದೂ ಮುಖ್ಯಮಂತ್ರಿ ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಬೇಸರವೇ ಇಲ್ಲ ಈ ನಿಸರ್ಗಕ್ಕೆ, ಸದಾ ಹೊಚ್ಚ ಹೊಸದಾಗಿ ಹೊಮ್ಮುವುದಕ್ಕೆ.

-ಜಿ.ಎಸ್.ಶಿವರುದ್ರಪ್ಪ

ಮತದಾರರ ಪಟ್ಟಿಯಲ್ಲಿ ನೋಂದಣಿ ಯುವಜನರ ನಿರುತ್ಸಾಹ ಸರಿಯಲ್ಲ

ಲೋಕಸಭಾ ಚುನಾವಣೆಯ ಮತದಾನವು ಕೆಲವೇ ವಾರಗಳಲ್ಲಿ ನಡೆಯಲಿದೆ. ಆದರೆ, ದೊಡ್ಡ ಸಂಖ್ಯೆಯ ಯುವಜನರು ಮತದಾನ ಮಾಡಲು ಆಸಕ್ತಿ ತೋರುತ್ತಿಲ್ಲ ಎಂಬುದು ಕಳವಳಕಾರಿ ಅಂಶ. ಚುನಾವಣಾ ಆಯೋಗದ ಮಾಹಿತಿಯ ಪ್ರಕಾರ, 18 ಮತ್ತು 19 ವರ್ಷ ವಯಸ್ಸಿನವರಲ್ಲಿ ಮತದಾನಕ್ಕೆ ಹೆಸರು ನೋಂದಣಿ ಮಾಡಿಕೊಂಡವರ ಪ್ರಮಾಣವು ಶೇ38 ಮಾತ್ರ. ಈ ಯುವ ಅರ್ಹ ಮತದಾರರು ಮೊದಲ ಬಾರಿ ಮತದಾನ ಮಾಡುವುದಕ್ಕೆ ಉತ್ಸಾಹ ಮತ್ತು ಹುಮ್ಮಸ್ಸು ತೋರಬೇಕಿತ್ತು. ಆಯೋಗದ ದತ್ತಾಂಶವು ಹೇಳುವ ಪ್ರಕಾರ, 1.8 ಕೋಟಿ ಯುವಜನರು ಮಾತ್ರ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಂಡಿದ್ದಾರೆ. ಮತದಾನಕ್ಕೆ ಅರ್ಹತೆ ಇರುವ ಯುವ ಮತದಾರರ ಸಂಖ್ಯೆ 4.9 ಕೋಟಿ. ಅರ್ಹ ಯುವ ಮತದಾರರ ಪೈಕಿ ಶೇ 38ರಷ್ಟು ಮಂದಿ ಮಾತ್ರ ಹೆಸರು ನೋಂದಾಯಿಸಿದ್ದಾರೆ. ಹೆಸರು ನೋಂದಣಿ ಮಾಡಿಕೊಂಡವರಲ್ಲಿ ಯುವತಿಯರು ಎಷ್ಟು ಮತ್ತು ಯುವಕರು ಎಷ್ಟು ಎಂಬ ದತ್ತಾಂಶ ಲಭ್ಯವಿಲ್ಲ.

ನೋಂದಣಿ ಪ್ರಮಾಣದಲ್ಲಿ ರಾಜ್ಯದಿಂದ ರಾಜ್ಯಕ್ಕೆ ಭಾರಿ ವ್ಯತ್ಯಾಸ ಇದೆ ಎಂಬುದು ಗಮನಾರ್ಹ. ಆದರೆ, ಇದನ್ನು ವಿಶ್ಲೇಷಣೆಗೆ ಒಳಪಡಿಸಿ, ತೀರ್ಮಾನವೊಂದಕ್ಕೆ ಬರುವುದು ಅಷ್ಟು ಸುಲಭದ ಕೆಲಸವಲ್ಲ. ತೆಲಂಗಾಣದ ಅರ್ಹ ಯುವ ಮತದಾರರ ಪೈಕಿ ಶೇ 66ರಷ್ಟು ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಬಿಹಾರದಲ್ಲಿ ಯುವಜನರ ಸಂಖ್ಯೆ ಹೆಚ್ಚು. ಆದರೆ, ಅಲ್ಲಿ ನೋಂದಣಿ ಮಾಡಿಕೊಂಡ ಯುವ ಮತದಾರರ ಪ್ರಮಾಣ ಶೇ 17ರಷ್ಟು ಮಾತ್ರ. ದೆಹಲಿ ಮತ್ತು ಉತ್ತರಪ್ರದೇಶಗಳಲ್ಲಿ ನೋಂದಣಿ ಕಡಿಮೆಯೇ ಇದೆ. ಇಲ್ಲಿ ಕ್ರಮವಾಗಿ ಶೇ 21 ಮತ್ತು ಶೇ 23ರಷ್ಟು ನೋಂದಣಿ ಆಗಿದೆ. ಬಿಹಾರ ಮತ್ತು ಉತ್ತರಪ್ರದೇಶದ ಯುವಜನರಲ್ಲಿ ಹಲವರು ಬೇರೆಡೆಗೆ ವಲಸೆ ಹೋಗಿರುವುದು ನೋಂದಣಿ ಪ್ರಮಾಣ ಕಡಿಮೆಯಾಗಲು ಕಾರಣವಾಗಿರಬಹುದು. ಆದರೆ, ವಲಸೆಯ ಪ್ರಮಾಣವು ಹೆಚ್ಚಾಗಿರುವ ಛತ್ತೀಸಗಢದಲ್ಲಿ ಶೇ 54ರಷ್ಟು ನೋಂದಣಿ ಆಗಿದೆ. ರಾಜಕೀಯ ಪ್ರಜ್ಞೆ ಗಾಢವಾಗಿರುವ ಕೇರಳದಲ್ಲಿ ಆಗಿರುವ ನೋಂದಣಿ ಪ್ರಮಾಣವು ಶೇ 38ರಷ್ಟು ಎಂಬುದು ಅಚ್ಚರಿಕರ. ಅತಿ ದೊಡ್ಡ ಐದು ರಾಜ್ಯಗಳಾದ ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಯುವ ಮತದಾರರ ನೋಂದಣಿ ಪ್ರಮಾಣವು ಶೇ 50ಕ್ಕೂ ಕಡಿಮೆ ಇದೆ. ಸಾಂಖ್ಯಿಕ ಅಂಶಗಳು ಮತ್ತು ಆಯಾ ರಾಜ್ಯಕ್ಕೆ ನಿರ್ದಿಷ್ಟವಾದ ವಿಚಾರಗಳು ನೋಂದಣಿಯ ಮೇಲೆ ಪರಿಣಾಮ ಬೀರಿರಬಹುದು. ಈ ಎಲ್ಲವನ್ನೂ ಗುರುತಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು.

ಮತದಾನದ ಹಕ್ಕು ಬಹಳ ಮಹತ್ವದ ಹಕ್ಕಾಗಿರುವುದರಿಂದ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಲು ಯುವಜನರನ್ನು ಪ್ರೋತ್ಸಾಹಿಸಬೇಕಾದುದು ಅತ್ಯಗತ್ಯ

ಈಗ ನೋಂದಣಿ ಮಾಡಿಕೊಂಡಿರುವವರಲ್ಲಿಯೂ ಬಹಳ ಮಂದಿ ಮತಗಟ್ಟೆಗೆ ಹೋಗಿ ಮತ ಹಾಕದಿರುವ ಸಾಧ್ಯತೆ ಇದೆ. ಹಾಗಾಗಿಯೇ ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಲು ಪ್ರೋತ್ಸಾಹಿಸಬೇಕು. ಮತದಾನದ ಹಕ್ಕು ಬಹಳ ಮಹತ್ವದ್ದು ಮತ್ತು ಅಷ್ಟೇ ಮುಖ್ಯವಾದುದು, ಇದು ಪ್ರಜಾಪ್ರಭುತ್ವದಲ್ಲಿ ಪೌರರ ಅಧಿಕಾರವೂ ಹೌದು. ಈ ಕುರಿತು ನಮ್ಮಲ್ಲಿ ಇರುವ ಅಜ್ಞಾನ ಮತ್ತು ಸಿನಿಕತನವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತವೆ. ಮತದಾರರ ಜಾಗೃತಿ ಮತ್ತು ಮತದಾನದಲ್ಲಿ ಭಾಗವಹಿಸುವಿಕೆಯ ವ್ಯವಸ್ಥಿತ ಕಾರ್ಯಕ್ರಮ (ಸ್ವೀಪ್) ಹಾಗೂ ಇಂತಹ ಇತರ ಕಾರ್ಯಕ್ರಮಗಳ ಮೂಲಕ ಚುನಾವಣಾ ಆಯೋಗವು ಯುವಜನರನ್ನು ಆಕರ್ಷಿಸಲು ಯತ್ನಿಸುತ್ತಿದೆ. ಕ್ರಿಕೆಟ್ ತಾರೆ ಸಚಿನ್ ತೆಂಡೂಲ್ಕರ್ ಅವರಂತಹ ಖ್ಯಾತನಾಮರ ಮೂಲಕ ಯುವಜನರಿಗೆ ಸಂದೇಶ ನೀಡಲು ಪ್ರಯತ್ನಿಸಲಾಗಿದೆ. ಸ್ವಯಂಸೇವಾ ಸಂಸ್ಥೆಗಳು, ಸಮುದಾಯ ಸಂಘಟನೆಗಳನ್ನು ಬಳಸಿಕೊಂಡು ಮತದಾನ ಯಾಕೆ ಮುಖ್ಯ ಎಂಬ ಕುರಿತು ಜಾಗೃತಿ ಮೂಡಿಸುವ ಕೆಲಸವೂ ನಡೆದಿದೆ. ತಳಮಟ್ಟದಲ್ಲಿ ವ್ಯವಸ್ಥಿತವಾದ ಜಾಲವನ್ನು ಹೊಂದಿರುವ ರಾಜಕೀಯ ಪಕ್ಷಗಳ ಮೂಲಕ ಯುವಜನರನ್ನು ಆಕರ್ಷಿಸುವುದು ಸುಲಭ. ಯುವಜನರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಮತ್ತು ಅವರು ಮತಗಟ್ಟೆಗೆ ಬಂದು ಮತ ಚಲಾಯಿಸುವಂತೆ ಮಾಡಲು ರಾಜಕೀಯ ಪಕ್ಷಗಳು ಸಹ ಪ್ರಯತ್ನಿಸಬೇಕು. ಪಕ್ಷಗಳ ಹಿತದೃಷ್ಟಿಯಿಂದಲೂ ಇದು ಮುಖ್ಯವಾಗಿದೆ.

ದಿನದ ಟ್ವೀಟ್

ಎಲ್ಲವೂ ರಾಜಕೀಯವಲ್ಲ!

ಅವರೀಗ 400 + ಬಗ್ಗೆ ಮಾತನಾಡುತ್ತಿದ್ದಾರೆ. ಮೇ ಅಂತ್ಯದವರೆಗೆ ಕಾಯಿರಿ, ಆಗ ಅದು 250ಕ್ಕೆ ಇಳಿಯುತ್ತದೆ. ಜೂನ್ ಮೊದಲ ವಾರದ ಹೊತ್ತಿಗೆ, ಅದು 175– 200ರ ಒಳಗೇ ಇರಬೇಕು. ನಾನೀಗ ಹೇಳುತ್ತಿರುವುದು ಅರ್ಧ ಡಜನ್ ಅಲ್ಫಾನ್ಸೊ ಮಾವಿನಹಣ್ಣಿನ ಬೆಲೆಯ ಬಗ್ಗೆ. ಪ್ರತಿಯೊಂದು ಸಂದೇಶವೂ ರಾಜಕೀಯದ ಬಗೆಗೇ ಇರಬೇಕೆಂದೇನಿಲ್ಲ. 😊

ಡಾ. ಎಸ್.ವೈ.ಖುರೇಷಿ, ನಿವೃತ್ತ ಮುಖ್ಯ ಚುನಾವಣಾ ಆಯುಕ್ತ

ಕಿಡಿನುಡಿ

ಸರ್ಕಾರಿ ಕೆಲಸ ದೇವರ ಕೆಲಸ ಎಂದು ಹೇಳುತ್ತಾರೆ. ಆದರೆ, ಕರ್ತವ್ಯ ಮಾಡುವ ಸಮಯದಲ್ಲಿ ಸ್ವಹಿತಾಸಕ್ತಿಗಾಗಿ ರಾಜಕಾರಣಿಗಳ ಚಾಕರಿ ಮಾಡುವ ಕೆಲಸಕ್ಕೆ ನಮ್ಮ ಸರ್ಕಾರಿ ನೌಕರರು ಇಳಿದಿರುವುದು ವೃತ್ತಿಪರತೆಯ ಕೊರತೆ, ಸರ್ಕಾರದ ನಿಯಮಾವಳಿಗಳ ಉಲ್ಲಂಘನೆ ಹಾಗೂ ತಟಸ್ಥರಾಗಿ ಇರಬೇಕಾದ ಸರ್ಕಾರಿ ನೌಕರರು ಯಾವುದೋ ಒಂದು ರಾಜಕೀಯ ಪಕ್ಷದ ನಾಯಕನ ಪರ ಕೆಲಸ ಮಾಡುವುದು ಸರ್ಕಾರಿ ನಿಯಮಗಳ ಸ್ಪಷ್ಟ ಉಲ್ಲಂಘನೆ. ಚುನಾವಣಾ ಆಯೋಗ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯು ಇವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

(ಸರ್ಕಾರಿ ನೌಕರರೊಬ್ಬರು ಕಚೇರಿ ಸಮಯದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಜೊತೆಗಿದ್ದು, ಅವರಿಗೆ ಊಟ ಬಡಿಸುವ ಕೆಲಸದಲ್ಲಿ ನಿರತರಾಗಿದ್ದರು ಎಂಬ ಆರೋಪಕ್ಕೆ ಪ್ರತಿಕ್ರಿಯೆ)

ಬಸನಗೌಡ ಪಾಟೀಲ ಯತ್ನಾಳ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶುಕ್ರವಾರ, 9-4-1999

● **ಕೊಯ್ದು ಮಾರುವ ಹಣ್ಣಿನಲ್ಲಿ ಸೋಂಕಿನ ಅಪಾಯ**

ಬೆಂಗಳೂರು, ಏ. 8– ಏಪ್ರಿಲ್ ಬಂದಿದೆ; ತನ್ನೊಂದಿಗೆ ಎಂದಿನಂತೆ ಉರಿ ಬಿಸಿಲನ್ನು ಹೊತ್ತು ತಂದಿದೆ. ಜೊತೆಯಲ್ಲಿ ಹಲವು ಬಗೆಯ ಸಾಂಕ್ರಾಮಿಕ ರೋಗಗಳು ಕಾಣಿಸಿವೆ. ರೋಗ ಹರಡಲು ಕಾರಣವಾದ ಬೀದಿ ಬದಿಯ ಹಣ್ಣು ಮಾರಾಟವನ್ನು ನಿಯಂತ್ರಿಸಲಾಗಿದೆ ಎಂದು ಮಹಾನಗರ ಪಾಲಿಕೆ ಹೇಳಿದರೂ, ಮಾರಾಟ ಮಾತ್ರ ವ್ಯಾಪಕವಾಗಿ ನಡೆಯುತ್ತಿದೆ.

ಈ ವರ್ಷ ಬೇಸಿಗೆ ಬಿಸಿಲಿನ ಬೇಗೆ ಹೇಳಲಾಗದು. ಬೇಸಿಗೆ ಆರಂಭದ ದಿನಗಳಲ್ಲೇ ಈ ರೀತಿ ತಾಳಲಾರದಷ್ಟು ಬಿಸಿಲು ಬಿದ್ದರೆ ನಂತರದ ದಿನಗಳಲ್ಲಿ ಏನು ಮಾಡುವುದು ಎಂದು ನಾಗರಿಕರು ಪ್ರಶ್ನಿಸುತ್ತಾರೆ; ಇದಕ್ಕೆ ಪ್ರಕೃತಿಯ ಮೇಲೆ ಸವಾರಿ ಮಾಡಲು ಹೊರಟಿರುವ ಜನರೇ ಕಾರಣ ಎಂದು ದೂಷಿಸುತ್ತಾರೆ.

● **ಜಮೀನು ವಿವಾದ ಇತ್ಯರ್ಥಕ್ಕೆ ಖಾಸಗಿ ಮೋಜಣಿದಾರರ ನೆರವು**

ಬೆಂಗಳೂರು, ಏ. 8– ಹದ್ದುಬಸ್ತು ತಕರಾರುಗಳಿಂದಾಗಿ ರಾಜ್ಯದಾದ್ಯಂತ ಬಹುದಿನಗಳಿಂದ ನನೆಗುದಿಯಲ್ಲಿರುವ ಸುಮಾರು ಮೂರು ಲಕ್ಷ ಭೂವಿವಾದಗಳನ್ನು (ಪೋಡಿ ಪ್ರಕರಣ) ಮುಂದಿನ ಮೂರು–ನಾಲ್ಕು ತಿಂಗಳೊಳಗೆ ಬಗೆಹರಿಸಲು ಸರ್ಕಾರ ಉದ್ದೇಶಿಸಿದ್ದು, ಇದಕ್ಕಾಗಿ ಪರವಾನಗಿ ಪಡೆದ ಖಾಸಗಿ ಭೂಮಾಪಕರ ನೆರವು ಪಡೆಯಲಿದೆ.

ಈ ವಿಷಯವನ್ನು ಕಂದಾಯ ಸಚಿವ ಬಿ.ಸೋಮಶೇಖರ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 9-4-1974

● **ಭದ್ರಾವತಿ ಉಕ್ಕು ಕಾರ್ಖಾನೆ ವೈಫಲ್ಯ ತನಿಖೆಗೆ ಮಾಜಿ ಮುಖ್ಯ ಕಾರ್ಯದರ್ಶಿ**

ಬೆಂಗಳೂರು, ಏ. 8– ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕೆಲವು ವಿಚಾರಗಳ ಬಗ್ಗೆ ಇನ್ನೂ ಕೂಲಂಕಷ ತನಿಖೆ ನಡೆಸಲು ಮತ್ತು ಕೆಲವು ವೈಫಲ್ಯಗಳ ಬಗ್ಗೆ ಜವಾಬ್ದಾರಿ ಗೊತ್ತುಪಡಿಸಲು ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಕೆ. ನಾರಾಯಣಸ್ವಾಮಿ ಅವರನ್ನು ಆರು ತಿಂಗಳ ಅವಧಿಗೆ ನೇಮಕ ಮಾಡಲಾಗಿದೆಯೆಂದು ಕೈಗಾರಿಕೆ ಸಚಿವ ಎಸ್.ಎಂ.ಕೃಷ್ಣ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಎಸ್.ಬಂಗಾರಪ್ಪ, ಬಿ.ಪುಟ್ಟಸ್ವಾಮಯ್ಯ ಮತ್ತು ಅನ್ವರ್ ಅಬ್ದುಲ್ ಖುದ್ದೂಸ್ ಅವರ ಪ್ರಶ್ನೆಗಳಿಗೆ ಉತ್ತರ ನೀಡಿದ ಅವರು, ಸಿಬ್ಬಂದಿ ಪ್ರಶ್ನೆ ಅವರ ವ್ಯಾಪ್ತಿಗೆ ಒಳಪಡಬಾರದೆಂಬುದು ತಮ್ಮ ಅಭಿಪ್ರಾಯವೆಂದರು.

● **ದೆಹಲಿ ತ್ರಿಪಕ್ಷ ಮಾತುಕತೆಯಲ್ಲಿ ಇತ್ಯರ್ಥ ಸನ್ನಿಹಿತ**

ನವದೆಹಲಿ, ಏ. 8– ಬಾಂಗ್ಲಾದೇಶದಲ್ಲಿ ಉಳಿದ ಪಾಕಿಸ್ತಾನೀಯರನ್ನು ಸ್ವದೇಶಕ್ಕೆ ರವಾನಿಸುವುದು ಮತ್ತು 195 ಯುದ್ಧ ಕೈದಿಗಳ ಬಗ್ಗೆ ಒಪ್ಪಂದವೊಂದು ಏರ್ಪಡುವ ಸಾಧ್ಯತೆಯು ಇಂದು ಬಹಳಮಟ್ಟಿಗೆ ಕಂಡುಬಂದಿದೆ.

ನೀರಿಗಾಗಿ ಜನ ಪಡುತ್ತಿರುವ ಬವಣೆಯು ಚುನಾವಣಾ ಚರ್ಚೆಯ ಸಂಗತಿಯಾಗಬೇಕಲ್ಲವೇ?

ಜನತಂತ್ರದ ಜಾತ್ರೆಯಲ್ಲಿ ಕಾಣೆಯಾದ ಪ್ರಜೆ!

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಉತ್ತರ ಕನ್ನಡ ಜಿಲ್ಲೆಯ ಸಹ್ಯಾದ್ರಿ ಸೆರಗಿನ ಮುಂಡಗೋಡು ಸೀಮೆಯಲ್ಲಿ ಇತ್ತೀಚೆಗೆ ವ್ಯಾಪಕವಾಗಿ ತಿರುಗಾಡುವ ಸಂದರ್ಭ ಬಂತು. ಸುದ್ದಿ ಹಾಗೂ ಸಾಮಾಜಿಕ ಮಾಧ್ಯಮಗಳಿಂದಾಗಿ ನಾಡೆಲ್ಲ ಈಗ ಚುನಾವಣಾ ಜ್ವರದಲ್ಲಿ ಮುಳುಗಿರುವಂತೆ ತೋರುವುದಾದರೂ, ಆ ಭ್ರಮೆಯ ತೆರೆ ಸರಿಸಿ ನೋಡಿದರೆ, ಅಲ್ಲಿ ಕಂಡ ಬದುಕಿನ ಬಿಸಿಯೇ ಬೇರೆ!

ಪ್ರತಿ ಮನೆಗೂ ದಿನವೂ ಕನಿಷ್ಠ 55 ಲೀಟರ್ ನೀರು ಒದಗಿಸುವ ಉದ್ದೇಶದೊಂದಿಗೆ 'ಜಲಜೀವನ ಮಿಷನ್' ಯೋಜನೆಯಡಿ ಜೋಡಿಸಿರುವ ಬಹುಪಾಲು ಕೊಳವೆಮಾರ್ಗಗಳಲ್ಲಿ ನೀರು ಬರುತ್ತಿಲ್ಲ. ನೂರಾರು ಕೋಟಿ ಹಣ ವೆಚ್ಚ ಮಾಡಿ ಕೈಗೊಂಡ 'ಕೆರೆ ತುಂಬಿಸುವ ಯೋಜನೆ'ಗಳಿಂದ ಕೆರೆಗಳಿಗೂ ನೀರು ಹರಿದಿಲ್ಲ. ಹೊಳೆ-ತೊರೆ, ಕೆರೆಗಳೆಲ್ಲ ಬೇಸಿಗೆಯ ಮುನ್ನವೇ ಬತ್ತಿವೆ. ಎಗ್ಗಿಲ್ಲದೆ ತೋಡಿರುವ ಬಹುಪಾಲು ಕೊಳವೆಬಾವಿಗಳಲ್ಲಿ ರಾಡಿಮಣ್ಣು ಬರತೊಡಗಿದೆ.

ಜಲಮೂಲಗಳೇ ಇಲ್ಲದ ಮೇಲೆ ನೀರು ತರುವುದಾದರೂ ಎಲ್ಲಿಂದ? ಮೇಲ್ಮಣ್ಣಿನಲ್ಲಿ ಕನಿಷ್ಠ ತೇವಾಂಶವೂ ಇಲ್ಲದೆ, ಹಣ್ಣು, ತರಕಾರಿ ತೋಟಗಾರಿಕೆ ಬೆಳೆಗಳೆಲ್ಲ ಒಣಗಿ ಕೆಂಪಾಗುತ್ತಿವೆ. ಹೊಲ, ಗೋಮಾಳಗಳ ನೀರು, ಮೇವೆಲ್ಲ ಬರಿದಾಗಿ, ಜಾನುವಾರುಗಳನ್ನು ಕೊಟ್ಟಿಗೆಯಲ್ಲೇ ಕಷ್ಟಪಟ್ಟು ಸಲಹಬೇಕಿದೆ. ನೀರಿನ ಬರ ಹಾಗೂ ಬಿಸಿಗಾಳಿಯ ತಾಪಕ್ಕೆ ಜನಜೀವನ ಸೋತು ಸುಕ್ಕಾಗುತ್ತಿದೆ. ನಾಡಿನ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಕಾಣುತ್ತಿರುವ ಚಿತ್ರಣವಿದು.

ನಗರ, ಪಟ್ಟಣಗಳ ಪರಿಸ್ಥಿತಿಯೂ ಭಿನ್ನವಾಗಿಲ್ಲ. ನಗರವಾಸಿಗಳಿಗೆ ಶುದ್ಧನೀರು ಒದಗಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ 'ಅಮೃತ್' ಯೋಜನೆಯು 2015ರಿಂದಲೇ ಜಾರಿಯಲ್ಲಿದೆ. ಆದರೆ, ಬರಿದಾಗುತ್ತಿರುವ ಜಲಾಶಯಗಳು, ಕೊಳಚೆಯಾಗುತ್ತಿರುವ ಕೆರೆಗಳು ಹಾಗೂ ಖಾಲಿಯಾಗುತ್ತಿರುವ ಕೊಳವೆಬಾವಿಗಳಿಂದಾಗಿ ಪಟ್ಟಣಿಗರ ನೀರಿನ ಬವಣೆಯೂ ನೀಗುತ್ತಿಲ್ಲ. ಆರ್ಥಿಕ ಅಭಿವೃದ್ಧಿಯ ಒಮ್ಮುಖ ಓಟದಲ್ಲಿ ನೈಸರ್ಗಿಕ ಜಲಚಕ್ರದ ಸಂರಚನೆಯನ್ನೇ ನಿರ್ಲಕ್ಷಿಸಿದ್ದರಿಂದ ಉಂಟಾದ ಗಂಭೀರ ಪರಿಣಾಮಗಳನ್ನು ಊರು-ಕೇರಿ, ನಗರ-ಪಟ್ಟಣಗಳ ಎಲ್ಲೆಡೆ ಇಂದು ಕಾಣಬಹುದು. ತಂತ್ರಜ್ಞಾನ ಹಾಗೂ ಸಂಪತ್ತಿನ ಎರಕದಂತಿರುವ ಬೆಂಗಳೂರಿನ ಜಲಬವಣೆಯಂತೂ ನಗರೀಕರಣದಲ್ಲಿನ ವೈರುಧ್ಯಗಳನ್ನು ಬಿಂಬಿಸುವ ರೂಪಕವೇ ಆಗಿದೆ!

ಇಂದು ಎಲ್ಲೆಡೆ ಕಾಣುವ ಕಟುಸತ್ಯಗಳ 'ಗೋಡೆಬರಹ'ಗಳಿವು. ಆದರೆ, ಅವನ್ನು ಅರ್ಥೈಸಿಕೊಂಡು ಜನರ ಸಂಕಷ್ಟಗಳಿಗೆ ದನಿಯಾಗಬೇಕಾದ ಚುನಾವಣೆಗಳು ಮಾತ್ರ ಅಧಿಕಾರವೇರಲು ತವಕಿಸುವವರ ಹುಸಿ ಆಶ್ವಾಸನೆ ಹಾಗೂ ಒಣಚರ್ಚೆಗಳ ಮಾರುಕಟ್ಟೆಗಳಾಗುತ್ತಿವೆ. ಪ್ರಜಾಪ್ರಭುತ್ವದ 'ಹಬ್ಬ', 'ಜಾತ್ರೆ' ಎಂದೆಲ್ಲ ವರ್ಣಿಸಲ್ಪಡುವ ಈ ಸಾಂವಿಧಾನಿಕ ಪ್ರಕ್ರಿಯೆಯು 'ಪ್ರಭು'ಗಳಾಗಲು ಹೊರಟವರ 'ದರ್ಬಾರ್' ಅಥವಾ 'ಮೋಜಿನ ಜಾತ್ರೆ'ಗಳಂತೆ ಆಗುತ್ತಿವೆ. ಇಂಥ ಮಾಯಾ ಬಜಾರಿನಲ್ಲೂ ಜನರ ಆಶೋತ್ತರಗಳು ಅರಳಬೇಕೆಂದರೆ, ನಾಗರಿಕರು ಕ್ರಿಯಾಶೀಲರಾಗುವುದೊಂದೇ ದಾರಿ. ನೀರಿನಂಥ ಮಹತ್ವದ ಸಂಗತಿಗಳನ್ನು ಆಗ ಸಾರ್ವಜನಿಕ ಚರ್ಚೆಯ ಕೇಂದ್ರಬಿಂದುವಿಗೆ ತರಲು ಸಾಧ್ಯ.

ಈ ಹಿನ್ನೆಲೆಯಲ್ಲಿ, ಜಲಸುರಕ್ಷತೆಯ ಮೂರು ಪ್ರಮುಖ ಆಯಾಮಗಳನ್ನು ಇಲ್ಲಿ ಗಮನಿಸಬಹುದು. ಮೊದಲಿನದು, ನೀರಿನ ನಿರ್ವಹಣೆಯ ಆಡಳಿತಾತ್ಮಕ ಸಂಗತಿ. ಜಲಸಂಗ್ರಹ ಹಾಗೂ ವಿತರಣೆಯ ಬಹುತೇಕ ಅಧಿಕಾರಗಳು ಸಾಂವಿಧಾನಿಕವಾಗಿ ರಾಜ್ಯ ಸರ್ಕಾರಗಳಿಗೇ ಸೇರಿವೆ. ಹೀಗಾಗಿಯೇ, ಅಂತರರಾಜ್ಯ ನದಿಗಳ ನೀರಿನ ಬಳಕೆ ಕುರಿತಾಗಿ ಕೇಂದ್ರ ಹಾಗೂ ವಿವಿಧ ರಾಜ್ಯ ಸರ್ಕಾರಗಳ ನಡುವೆ ಸದಾ ಸಂಘರ್ಷ ಏರ್ಪಡುವುದು. ನದಿಗಳ ಸಹಜ ಹರಿವಿಗಾಗಿ ಕೈಗೊಳ್ಳಲೇಬೇಕಾದ ಪುನರುಜ್ಜೀವನ ಕಾರ್ಯಗಳಿಗೂ ಈ ಅಧಿಕಾರ ಹಂಚಿಕೆ ರಾಜಕಾರಣವು ಹಲವು ಸಲ ತೊಡಕು ಉಂಟುಮಾಡುವುದಿದೆ. ನದಿಗಳೂ ಸೇರಿದಂತೆ ಜಲಚಕ್ರ ನಿರ್ವಹಣೆಯ ಎಲ್ಲ ಜವಾಬ್ದಾರಿಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂಕ್ತವಾಗಿ ಹಂಚಿಕೊಳ್ಳುವ ಸಮಗ್ರ ರಾಷ್ಟ್ರೀಯ ನೀತಿಯೊಂದರ ಜರೂರತ್ತಿದೆ ಈಗ.

ಆಡಳಿತದ ತಳಮಟ್ಟದಲ್ಲೂ ಪರಿಹರಿಸಬೇಕಾದ ಹಲವಾರು ಸಂಗತಿಗಳಿವೆ. ಉದಾಹರಣೆಗೆ, ಕಾಡಿನ ನದಿಮೂಲಗಳು ಹಾಗೂ ನಗರಗಳ ರಾಜಕಾಲುವೆಗಳು ಒತ್ತುವರಿಯಾಗುತ್ತಿವೆ. ಕೆರೆ ಮತ್ತು ನದಿಗಳ ಬಫರ್ ವಲಯಗಳಲ್ಲಿ ಅನಧಿಕೃತ ಸಾಗುವಳಿ ಹಾಗೂ ನಗರೀಕರಣ ಸಾಗಿದೆ. ನದಿಗಳಿಗೆ ನೀರುಣಿಸುವ ಜಲಾನಯನ ಪ್ರದೇಶದ ಗೋಮಾಳ ಹಾಗೂ ಅರಣ್ಯಪ್ರದೇಶಗಳು ವ್ಯಾಪಕವಾಗಿ ನಾಶವಾಗುತ್ತಿವೆ. ಕೊಳವೆಬಾವಿಯನ್ನಂತೂ ಯಾರು ಎಲ್ಲಿಯೂ ಯಾವ ಒಪ್ಪಿಗೆ ಇಲ್ಲದೆಯೇ ತೋಡಬಹುದು. ಕಂದಾಯ ಇಲಾಖೆಯೂ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಮನ್ವಯ ಹಾಗೂ ಉತ್ತರದಾಯಿತ್ವ ಇರದೆ ಉಂಟಾದ ಆಡಳಿತ ವೈಫಲ್ಯವಿದು. ನೀರಿನ ಸಮಗ್ರ ನಿರ್ವಹಣೆಗೆ ಪರಿಣಾಮಕಾರಿಯಾದ ಕಾರ್ಯನೀತಿ ಈಗಲಾದರೂ ರೂಪುಗೊಳ್ಳಲೇಬೇಕಿದೆ.

ಎರಡನೆಯದು, ಜಲಮೂಲ ರಕ್ಷಣೆಯ ವಿಧಾನಗಳ ಅನುಷ್ಠಾನದ ಸವಾಲು. ನೈಸರ್ಗಿಕ ಜಲಚಕ್ರದ ವಿಜ್ಞಾನ ಆಧರಿಸಿ, ನೀರಿನ ಸಂರಕ್ಷಣೆ ಹಾಗೂ ಶುದ್ಧೀಕರಿಸುವ ಅಸಂಖ್ಯ ಪಾರಂಪರಿಕ ಮಾದರಿಗಳು, ನವೀನ ತಂತ್ರಜ್ಞಾನಗಳು ಇಂದು ಲಭ್ಯವಿವೆ. ಅವನ್ನು ಆಧರಿಸಿ ನೀರಿನ ಸದ್ಬಳಕೆ ಮಾಡುತ್ತಿರುವ ಯಶೋಗಾಥೆಗಳೂ ಬಹಳಷ್ಟಿವೆ. ಮಳೆನೀರು ಸಂಗ್ರಹಿಸುವುದು, ಕೆರೆಗಳ ಹೂಳು ಶೇಖರಣೆ ಪ್ರಮಾಣ ತಗ್ಗಿಸುವುದು, ನದಿ, ಕೆರೆಗಳ ಬಫರ್ ವಲಯದ ಹಸಿರೀಕರಣ, ಬಳಸಿದ ನೀರಿನ ಸಂಸ್ಕರಣೆ ಎಲ್ಲಕ್ಕೂ ಯಶಸ್ವಿ ಮಾದರಿಗಳಿವೆ. ಬೆಂಗಳೂರಿನಂಥ ನಗರಗಳಲ್ಲಿ ದೊರಕುವ ಭಾರಿ ಪ್ರಮಾಣದ ಕೊಳಚೆಯನ್ನೂ ವಿಕೇಂದ್ರೀಕೃತ ಹಾಗೂ 'ಜೀವವೈಜ್ಞಾನಿಕ ತಂತ್ರ'ಗಳ ಮೂಲಕ ಯಶಸ್ವಿಯಾಗಿ ಶುದ್ಧೀಕರಿಸಲು ಸಾಧ್ಯವಿದೆ. ನೀರಿನ ಸಂರಕ್ಷಣೆ, ಮಿತಬಳಕೆ ಹಾಗೂ ಮರುಬಳಕೆ ಕ್ಷೇತ್ರವು ಪಾರದರ್ಶಕ ಆಡಳಿತ ನೀತಿ ಮತ್ತು ಕಾರ್ಯಕ್ಷಮತೆಯ ವೃತ್ತಿಪರರಿಗಾಗಿ ಕಾಯುತ್ತಿದೆ ಅಷ್ಟೆ!

ಅಂತಿಮವಾಗಿ, ನೀರಿನ ಮಿತವ್ಯಯದ ಬಗೆಗೆ. ಎಲ್ಲೆಡೆಯೂ ಸದಾ ನೀರು ಪೂರೈಸುತ್ತಲೇ ಇರಲು ಜಲಮಂಡಳಿಗಳು ಅಥವಾ ನೀರಾವರಿ ನಿಗಮಗಳಿಗೆ ಭವಿಷ್ಯದಲ್ಲಿ ಸಾಧ್ಯವಾಗದು. ಅಗತ್ಯವಿದ್ದೆಡೆ ಮಾತ್ರ ಸೂಕ್ತ ಪ್ರಮಾಣದ ನೀರು ಒದಗಿಸುವ ಕ್ರಮಗಳನ್ನು ಎಲ್ಲರೂ ಒಪ್ಪುವುದು ಅನಿವಾರ್ಯವಾಗುತ್ತದೆ. ನಗರಗಳಲ್ಲಿ ಕುಡಿಯುವ ನೀರಿನ ಹೊರತಾಗಿ ಉಳಿದೆಲ್ಲ ಗೃಹೋಪಯೋಗಿ ಹಾಗೂ ವಾಣಿಜ್ಯ ಬಳಕೆಗೆ ಬಳಸಿದ ನೀರನ್ನು ಸಂಸ್ಕರಿಸಿ ಪುನಃ ಬಳಸುವ ಆಯ್ಕೆ ಅನಿವಾರ್ಯ ಆಗುತ್ತದೆ. ಕೈಗಾರಿಕೆಗಳು ಹಾಗೂ ಉದ್ಯಮಗಳು ತಮ್ಮ ಕಾರ್ಯವಿಧಾನಗಳಲ್ಲಿ ನೀರನ್ನು ಮಿತವಾಗಿ ಬಳಸುವ ನೀತಿ ಹಾಗೂ ತಂತ್ರಗಳನ್ನು ಅನುಸರಿಸುವುದಂತೂ ತೀರಾ ಅಗತ್ಯ. ಇನ್ನು ಕೃಷಿ ಕ್ಷೇತ್ರದಲ್ಲಿ ಸೂಕ್ತ ನೆಲಬಳಕೆ ನೀತಿ, ಹನಿ ನೀರಾವರಿ, ಕಡಿಮೆ ನೀರು ಬೇಡುವ ಬೆಳೆಗಳಂತಹ ವಿಧಾನಗಳ ಅಳವಡಿಕೆ ಅನಿವಾರ್ಯ. ನೀರು ಸದಾ ಉಚಿತವಾಗಿ ದೊರೆಯುವ ವಸ್ತುವಲ್ಲ, ಬದಲಾಗಿ ವಿವೇಕದಿಂದ ಕಾಪಾಡಿಕೊಳ್ಳಬೇಕಾದ ನೈಸರ್ಗಿಕ ಸಂಪನ್ಮೂಲ ಎಂಬ 'ಜಲಸಾಕ್ಷರತೆ' ಸರ್ಕಾರಕ್ಕೆ ಮೊದಲು ಬರಬೇಕಿದೆ.

ಈ ಚುನಾವಣೆ ಬಳಿಕ ಚುಕ್ಕಾಣಿ ಹಿಡಿಯುವ ಸರ್ಕಾರವು ಇಂಥ ಮಹತ್ವದ ಸಂಗತಿಗಳ ಕುರಿತು ತ್ವರಿತ ನಿರ್ಣಯ ಕೈಗೊಳ್ಳಬೇಕಾಗುತ್ತದೆ. ಈ ಕಾರ್ಯದಲ್ಲಿ ರಾಜ್ಯ ಸರ್ಕಾರಗಳು ವಿಶ್ವಾಸದಿಂದ ತೊಡಗಿಕೊಳ್ಳುವ ಹಾಗೂ ನಾಗರಿಕರು ಉತ್ಸಾಹದಿಂದ ಪಾಲ್ಗೊಳ್ಳುವಂಥ ಪರಿಣಾಮಕಾರಿ ಹಾಗೂ ಪಾರದರ್ಶಕವಾದ 'ಸಮಗ್ರ ಜಲನೀತಿ'ಯನ್ನು ಕೇಂದ್ರ ಸರ್ಕಾರ ರೂಪಿಸಬೇಕಿದೆ. ಇಲ್ಲವಾದಲ್ಲಿ, 2030ರ ವೇಳೆಗೆ ದೇಶದ ಅರ್ಧಕ್ಕೂ ಹೆಚ್ಚಿನ ಜನರು ನೀರಿನ ತೀವ್ರ ಕೊರತೆ ಎದುರಿಸಬಹುದು ಹಾಗೂ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ (ಜಿಡಿಪಿ) ಕೃಷಿಯ ಪಾಲು ಶೇ 12ಕ್ಕಿಂತಲೂ ಕೆಳಕ್ಕೆ ಕುಸಿಯಬಹುದು ಎಂದು ಅಧ್ಯಯನಗಳು ಈಗಾಗಲೇ ಎಚ್ಚರಿಸಿವೆ! 'ಜಲ ಸುರಕ್ಷತೆ' ಹಾಗೂ 'ಆಹಾರ ಸುರಕ್ಷತೆ' ಇವೆರಡೂ ಭಂಗವಾದರೆ ಭವಿಷ್ಯವೇನಾದೀತು?

ನೀರಿನಂಥ ಮೂಲಭೂತ ವಿಷಯಗಳಿಗೆ ಚುನಾವಣಾ ಪ್ರಣಾಳಿಕೆಗಳಲ್ಲಿ ಆದ್ಯತೆ ದೊರಕಲಿ. ಕುಸಿಯುತ್ತಿರುವ ನಿಸರ್ಗದ ನೆಲೆಗಟ್ಟನ್ನು ಸುಸ್ಥಿರಗೊಳಿಸಬಲ್ಲ ಸಂಸದರನ್ನು ಆಯ್ಕೆ ಮಾಡುವ ಸಾಮರ್ಥ್ಯ 'ಪ್ರಜಾ-ಮತ'ಕ್ಕೆ ಬರಲಿ.

ಚುರುಮುರಿ



ಯುಗಾದಿ ವರ್ಷಭವಿಷ್ಯ

● ಲಿಂಗರಾಜು ಡಿ.ಎಸ್.

ಚಾಂದ್ರಮಾನ ಯುಗಾದಿಯು ಕ್ರೋಧಿ ಸಂವತ್ಸರದೊಂದಿಗೆ ಆರಂಭವಾಗಲಿದೆ. ತಂತ್ರಜ್ಞಾನದಲ್ಲಿ ಭಾರತ ಉನ್ನತ ಸ್ಥಾನ ತಲುಪುವ ಸಾಧ್ಯತೆಗಳಿವೆ. ನೆರೆ ದೇಶಗಳು ಎಂದಿನಂತೆ ಭಾರತಕ್ಕೆ ಹೊರೆ ಆಗಲಿವೆ. ಗುರುವು ರಾಜನಾಗಿ ಶನಿಯು ಮಂತ್ರಿಯಾಗಿದ್ದು, ಸಾಮಾನ್ಯ ಜನ ಭಯದಿಂದ ತೆರಿಗೆ ತುಂಬುವರು. ಹಣ ಎಂದಿನಂತೆ ದೇಶದ ಸಿರಿವಂತರ ಕಿಸೆಯನ್ನು ಸೇರಲಿದೆ. ಪಕ್ಷಗಳು ಚುನಾವಣೆಗಾಗಿ ನಿಂದನಾ ಕ್ಷೇತ್ರದಲ್ಲಿ ಬಾಯಿಬಲ ಪ್ರಯೋಗಿಸಲಿವೆ. ಪಕ್ಷದ ಟಿಕೆಟು ಸಿಗದ ನಾಯಕರು ಬೇಸರದಿಂದ ಬಿಂಕಸ್ಥಾಪನೆಯ ವ್ರತ ಕೈಗೊಳ್ಳಲಿದ್ದಾರೆ. ದೇಶದ ವಿಪಕ್ಷಗಳ ನಾಯಕರಲ್ಲಿ ಬಂಧನದ ಭೀತಿಯಿಂದ ನಿದ್ರಾನಾಶ.

ರಾಜ್ಯ ಸರ್ಕಾರಕ್ಕೆ ಗ್ಯಾರಂಟಿ ಯೋಗದಲ್ಲಿ ಆರ್ಥಿಕ ತೊಂದರೆಯು. ರಾಜ್ಯದಲ್ಲಿ ಅಧಿಕಾರ ಲುಪ್ತವಾಗಿ ಚಡಪಡಿಸುತ್ತಿರುವ ವಿರೋಧ ಪಕ್ಷಗಳ ಚಡಪಾಯಿಗಳಿಗೆ ಕೂಡಾವಳಿ ಯೋಗ ಇದ್ದು, ಕೆಲಕಾಲ ಸುಖ ಸಂಸಾರವಿರಲಿದೆ. ಕೃಷಿ ಮಂತ್ರಿಯಾಗುವ ಹಿಗ್ಗರಣೆಯಲ್ಲಿ ಮಣ್ಣಿನ ಮಕ್ಕಳ ಕಣ್ಣೀರು ಸ್ಫೋಟ. ರಾಜಕಾರಣಿಗಳಿಗೆ, ಬಂಡವಾಳಶಾಹಿಗಳಿಗೆ ಕಾಸಿನ ಆಸೆಯಲ್ಲಿ ಅಹೋರಾತ್ರಿ ನಿದ್ರೆಯಿಲ್ಲದೆ ನಾಯಿಕೆಮ್ಮಲು ಕಾಡಲಿದೆ. ಆದರೂ ಇವೆರಡು ರಾಶಿಗಳಿಗೆ ನಿರಂತರ ಧನಾಗಮದ ರಾಜಯೋಗದಿಂದ ಆಸ್ತಿ ಮೌಲ್ಯ ನೂರಾರು ಪಟ್ಟು ಏರಿಕೆ. ಈ ವರ್ಗಕ್ಕೆ ಐ.ಟಿ., ಇ.ಡಿ. ಭಯ ನಾಸ್ತಿ!

ಜನಸಾಮಾನ್ಯರಿಗೆ ಆಯ-2, ವ್ಯಯ-14. ಧನಕ್ಷಯ. ಅಕ್ಕಿಯ ಮೇಲೆ ಆಸೆಯಿಂದ ದುಡಿಯುವ ವರ್ಗಕ್ಕೆ ಕೆಲಸದ ಮೇಲೆ ಪ್ರೀತಿ ಇಲ್ಲವಾಗಲಿದೆ. ರಾಜಕೀಯ ಹುಯಿಲುದೊರೆಗಳ ಕುತಂತ್ರಜ್ಞಾನದಿಂದ ಜನರಲ್ಲಿ ಅಸಹನೆ, ಅತೃಪ್ತಿ, ಕರ್ಮಸಂಕಟಗಳು ಹೆಚ್ಚಲಿವೆ. ಜಲಕ್ಷಾಮವು ನೀರು ಉದ್ಯೋಗಿಗಳಿಗೆ ಶುಭ ಫಲ ನೀಡಲಿದೆ. ಬೀರು-ಬ್ರಾಂದಿಯ ಬಳಕೆ ಹೆಚ್ಚಿ ಜನ ಗುಂಡು-ಬಡಕರಾಗುವರು. ಎಣ್ಣೆ ದಾನದಿಂದ ಪರಸ್ಪರ ಸ್ನೇಹ ಹೆಚ್ಚಲಿದೆ. ಚುನಾವಣೆ ನಂತರ ಶನಿ ಪ್ರಭಾವದಿಂದ ಇಂಧನ, ಗ್ಯಾಸ್, ವಿದ್ಯುತ್, ತರಕಾರಿ, ದಿನಸಿ ದರಗಳು ತುಟ್ಟಿಯಾಗಲಿವೆ. ಪುರುಷರ ಆರ್‌ಸಿಬಿ ತಂಡದಲ್ಲಿ ಆಡುವವರು ಒಕ್ಕಾಲಾದರೆ ದುರದೃಷ್ಟ ಮುಕ್ಕಾಲು ಆಗಿರಲಿದೆ. ಮಹಿಳಾ ಕ್ರಿಕೆಟ್ ತಂಡದಿಂದ ಉತ್ತಮ ಫಲ ನಿರೀಕ್ಷಿಸಬಹುದು. ಸರ್ವಂ ಶುಷ್ಕೋಪಚಾರ ಲಭ್ಯತೇ!

ಸಂಗತ

ಸ್ವಚ್ಛ ರಾಜಕಾರಣ ಅಭಿಯಾನ!

'ಭ್ರಷ್ಟಾಚಾರಮುಕ್ತ ಭಾರತ' ಎಂಬುದು ಜನಸಾಮಾನ್ಯರ ಘೋಷವಾಕ್ಯವಾದರೆ, ನವಭಾರತವು ಬೌದ್ಧಿಕವಾಗಿ, ರಾಜಕೀಯವಾಗಿ ಸ್ವಚ್ಛವಾಗಲು ಸಾಧ್ಯ

● ನಾ.ದಿವಾಕರ

ಕೆಲವೇ ದಶಕಗಳ ಹಿಂದಿನ ರಾಜಕೀಯ ಚಿತ್ರಣವನ್ನು ಮತ್ತೆ ತೆರೆದು ನೋಡಿದರೆ ಸ್ಪಷ್ಟವಾಗಿ ಕಾಣಬಹುದಾದ ಒಂದು ದೃಶ್ಯ ಎಂದರೆ, ರಾಜಕೀಯ ಪಕ್ಷಗಳು ತಮ್ಮ ಪ್ರಾಮಾಣಿಕತೆ ಮತ್ತು ನೈತಿಕತೆಯ ಬಗ್ಗೆ ಎದೆ ಬಡಿದುಕೊಂಡು ಪ್ರಚಾರ ಮಾಡುತ್ತಿದ್ದುದು. ವೈಯಕ್ತಿಕ ನೈತಿಕತೆ, ವ್ಯಕ್ತಿಗತ ಪ್ರಾಮಾಣಿಕತೆ ಮತ್ತು ಆಡಳಿತ ನಿಷ್ಠೆ ಈ ಮೂರೂ ಮೌಲ್ಯಗಳನ್ನು ಹೊರನೋಟಕ್ಕಾದರೂ ಪ್ರದರ್ಶಿಸುವ ಮೂಲಕ ರಾಜಕೀಯ ನಾಯಕರು ತಮ್ಮ ಪಕ್ಷಗಳ ಬಲವೃದ್ಧಿಗಾಗಿ ಶ್ರಮಿಸುತ್ತಿದ್ದುದು ಸಾಮಾನ್ಯ ಸಂಗತಿಯಾಗಿತ್ತು. ಈ ಪ್ರಚಾರದಲ್ಲಿ ಜನರ ಮುಂದೆ ಇಡಬಹುದಾದ ಚಹರೆಗಳೂ ಪಕ್ಷಗಳಿಗೆ ಲಭ್ಯವಾಗುತ್ತಿದ್ದವು. ಅಟಲ್ ಬಿಹಾರಿ ವಾಜಪೇಯಿ ಇಂತಹ ಚಹರೆಗಳಲ್ಲಿ ಪ್ರಮುಖರಾಗಿದ್ದರು. ಬಿಜೆಪಿಯ ಹಿಂದುತ್ವ ಸಿದ್ಧಾಂತದ ಹೊರತಾಗಿಯೂ ಯುವ ರಾಜಕಾರಣಿಗಳು ಆ ಪಕ್ಷದ ಆಕರ್ಷಣೆಗೊಳಪಡಲು ವಾಜಪೇಯಿಯವರ ವ್ಯಕ್ತಿಗತ ಪ್ರಾಮಾಣಿಕತೆ ಆದರಣೀಯವಾಗಿತ್ತು.

ಸಂಸದೀಯ ಪ್ರಜಾತಂತ್ರದಲ್ಲಿ ಅಧಿಕಾರ ಗಳಿಸುವುದೇ ಮುಖ್ಯ ಗುರಿಯಾಗುವುದರಿಂದ ಪಕ್ಷದ ಬಲವರ್ಧನೆಯ ಹಾದಿಯಲ್ಲಿ ಸಂಖ್ಯಾಬಲ ಪ್ರಧಾನ ಆಗುತ್ತದೆ. ವ್ಯಕ್ತಿಗತವಾಗಿ ನೈತಿಕ ಗುಣಮಟ್ಟ ಮತ್ತು ನಾಯಕತ್ವದ ಪ್ರಾಮಾಣಿಕತೆಯ ಮಾನದಂಡಗಳು ಹಿಂಬದಿಗೆ ಸರಿಯುತ್ತವೆ. 'ತಿನ್ನುವುದೂ ಇಲ್ಲ, ತಿನ್ನಲು ಬಿಡುವುದೂ ಇಲ್ಲ' ಎಂಬ ಉದಾತ್ತ ಘೋಷಣೆಯೊಡನೆ ಅಧಿಕಾರಕ್ಕೆ ಬಂದ ಬಿಜೆಪಿ, ತಿಂದು ತೇಗಿದವರನ್ನೆಲ್ಲಾ ಇಂದು ತನ್ನ ಒಡಲಲ್ಲಿ ಸೇರಿಸಿಕೊಳ್ಳುತ್ತಿರುವುದನ್ನು ಗಮನಿಸಿದಾಗ, 'ಭ್ರಷ್ಟ ರಾಜಕಾರಣಿಗಳು' ಎಂಬ ಒಂದು ಪ್ರಭೇದವು ಸಂಸದೀಯ ಮಾನ್ಯತೆ ಪಡೆಯುತ್ತಿರುವುದು ಕಾಣುತ್ತದೆ. ಬಿಜೆಪಿಯು ಮೇಲೆ ಉಲ್ಲೇಖಿಸಿದ ಘೋಷಣೆಯೊಂದಿಗೆ 'ತಿಂದವರನ್ನು, ತಿನ್ನುವವರನ್ನು ಮುಟ್ಟುವುದಿಲ್ಲ' ಎಂದೇನೂ ಹೇಳಿಲ್ಲ. ಹಾಗಾಗಿ, ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿ, ಗಂಭೀರ ಆರೋಪ ಎದುರಿಸುತ್ತಿರುವವರೂ ಇಂದು 'ಸ್ವಚ್ಛವಾಗುವ ಸಲುವಾಗಿ' ಪಕ್ಷಾಂತರ ಮಾಡುತ್ತಿದ್ದಾರೆ.

ಭಾರತವನ್ನು ಬಯಲುಶೌಚ ಮುಕ್ತಗೊಳಿಸುವ ಸ್ವಚ್ಛ ಭಾರತ ಅಭಿಯಾನ ತಕ್ಕಮಟ್ಟಿಗೆ ಯಶಸ್ವಿಯಾಗಿದ್ದು, ದೇಶದ ಸಾರ್ವಜನಿಕ ವಾತಾವರಣ ಮತ್ತು ಪರಿಸರ ಸ್ವಚ್ಛವಾದಂತೆ ಕಾಣುತ್ತಿದೆ. ಆದರೆ ಈ ಸಾರ್ವಜನಿಕ ವಾತಾವರಣವನ್ನು ಬೌದ್ಧಿಕವಾಗಿ ಪ್ರಭಾವಿಸಬಹುದಾದ ರಾಜಕೀಯ ಚಟುವಟಿಕೆಗಳು ದಿನದಿಂದ ದಿನಕ್ಕೆ ಹೆಚ್ಚು ಕಲುಷಿತವಾಗುತ್ತಿರುವುದು ಚಿಂತೆಗೀಡುಮಾಡುವ ವಿಚಾರವಾಗಿದೆ. ಯುವಮನಸ್ಸುಗಳನ್ನು ಪ್ರಭಾವಿಸುವಂತಹ ಪ್ರಾಮಾಣಿಕ ವ್ಯಕ್ತಿತ್ವಗಳನ್ನು ಇಂದಿಗೂ ಇತಿಹಾಸದ ಬುಟ್ಟಿಯಿಂದಲೇ ಹೆಕ್ಕಿ ತೆಗೆಯಬೇಕಾದ ಸನ್ನಿವೇಶದಲ್ಲಿ ನವ ಭಾರತ ಮುನ್ನಡೆಯುತ್ತಿದೆ. ಸಮಕಾಲೀನ ರಾಜಕಾರಣದಲ್ಲಿ ಭವಿಷ್ಯದ ಪೀಳಿಗೆಗೆ ಆದರ್ಶಪ್ರಾಯವಾಗಬಹುದಾದ ಒಂದು ವ್ಯಕ್ತಿತ್ವವನ್ನು ಕಟ್ಟಿಕೊಡುವಲ್ಲಿ ವರ್ತಮಾನ ಭಾರತ ಸೋತಿರುವುದು ಒಪ್ಪಲೇಬೇಕಾದ ಸತ್ಯ.

ಈ ಸನ್ನಿವೇಶದಲ್ಲಿ ಭಾರತೀಯ ಸಮಾಜ ಮತ್ತು ರಾಜಕಾರಣವನ್ನು ಕಾಡುತ್ತಿರುವ ರಾಜಕೀಯ ಭ್ರಷ್ಟಾಚಾರ ಮತ್ತು ಭ್ರಷ್ಟ ರಾಜಕಾರಣದ ಮಾದರಿಗಳು ಪ್ರಜಾಪ್ರಭುತ್ವದ ಅಡಿಪಾಯವನ್ನೇ ಅಲುಗಾಡಿಸುವ ಸಾಧ್ಯತೆಗಳಿವೆ. ತಾವು ಅಥವಾ ತಮ್ಮ ಪಕ್ಷ ಅಥವಾ ತಮ್ಮ ಪಕ್ಷದ ನೇತೃತ್ವದ ಸರ್ಕಾರ ಪ್ರಾಮಾಣಿಕ ಎಂದು ಎದೆಯುಬ್ಬಿಸಿ ಹೇಳುವ ನೈತಿಕತೆಯನ್ನೇ ಕಳೆದುಕೊಂಡಿರುವ ರಾಜಕೀಯ ವ್ಯವಸ್ಥೆಯಲ್ಲಿ ಕಡು ಭ್ರಷ್ಟಾಚಾರವೂ ಸಾಪೇಕ್ಷತೆಯನ್ನು ಪಡೆದುಕೊಂಡಿದೆ. 'ನಾವು ಅವರಷ್ಟು ಭ್ರಷ್ಟರಲ್ಲ ಅಥವಾ ಅವರಿಗಿಂತಲೂ ಮೇಲು' ಎನ್ನುವ ನಿರೂಪಣೆ ಸಾಮಾನ್ಯವಾಗಿದೆ.

ಒಂದು ದಶಕದ ಹಿಂದೆ ಭ್ರಷ್ಟಾಚಾರದ ವಿರುದ್ಧ ಎರಡನೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರೆ ನೀಡಿದ ಅಣ್ಣಾ ಹಜಾರೆ ಅವರಂತಹ ಹಿರಿಯರೂ ಕೇಜ್ರಿವಾಲ್ ಅವರಿಗೆ ಶಿಕ್ಷೆಯಾದಾಗ 'ಮಾಡಿದ್ದುಣ್ಣೋ ಮಹರಾಯ' ಎಂಬ ಉಪಮೆಯನ್ನು ಬಳಸುತ್ತಾರೆ. ಆದರೆ ಕಣ್ಣೆದುರಿನಲ್ಲೇ ಅನಾವರಣವಾಗುತ್ತಿರುವ ಚುನಾವಣಾ ಬಾಂಡ್ ಸುತ್ತಲಿನ ಭ್ರಷ್ಟಾಚಾರದ ಕುರಿತು ಚಕಾರ ಎತ್ತುವುದಿಲ್ಲ.



ರಾಜಕೀಯ ವಲಯದಲ್ಲಿ ಭ್ರಷ್ಟತೆ, ಭ್ರಷ್ಟಾಚಾರ ಎನ್ನುವ ವಿದ್ಯಮಾನವು ಹೊಂದಾಣಿಕೆ, ಪರಸ್ಪರ ಹೋಲಿಕೆ ಅಥವಾ ದೋಷಾರೋಪದ ವಿಚಾರವಾಗಿ ಪ್ರಚಲಿತವಾಗಿದ್ದು, ಸಂಭಾವ್ಯ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಅತ್ಯಂತ ಕಡು ಭ್ರಷ್ಟರೂ 'ಸಮಾಜಸೇವೆ, ದೇಶಸೇವೆ, ಜನಸೇವೆ'ಯ ಹೆಸರಿನಲ್ಲಿ ಪಕ್ಷಾಂತರ ಮಾಡುತ್ತಿರುವುದು ನವ ಭಾರತದ ಹೊಸ ರಾಜಕೀಯ ಶಕೆಗೆ ನಾಂದಿ ಹಾಡಿದಂತಿದೆ. ಈ ವೇಳೆಗೆ ಪ್ರಬುದ್ಧತೆ ಪಡೆಯಬೇಕಿದ್ದ ಮತದಾರರೂ ಈ ಹೊಸ ಬೆಳವಣಿಗೆಯನ್ನು ಸ್ವೀಕರಿಸುತ್ತಾ, ನಾಯಕರೊಂದಿಗೆ ತಮ್ಮ ವೈಯಕ್ತಿಕ ನಿಷ್ಠೆಯನ್ನೂ ಬದಲಿಸುತ್ತಿರುವುದು ಇನ್ನೂ ಅಪಾಯಕಾರಿ ಬೆಳವಣಿಗೆ. ಮುಖ್ಯವಾಹಿನಿಯ ಹಲವು ಮಾಧ್ಯಮಗಳು ವೃತ್ತಿಪರತೆಯಿಂದ ದೂರ ಸರಿಯುತ್ತಿರುವ ಈ ಹೊತ್ತಿನಲ್ಲಿ, ಭಾರತದ ರಾಜಕಾರಣವನ್ನು ಸ್ವಚ್ಛಗೊಳಿಸುವ ಒಂದು ಅಭಿಯಾನ ಜನರ ಮಧ್ಯದಿಂದಲೇ ಆರಂಭವಾಗಬೇಕಿದೆ.

ರಾಜಕೀಯ ಪ್ರಣಾಳಿಕೆಗಳಲ್ಲಿ ಕಾಣಲಾಗದ 'ಭ್ರಷ್ಟಾಚಾರಮುಕ್ತ ಭಾರತ' ಎಂಬುದು ಜನಸಾಮಾನ್ಯರ ಘೋಷವಾಕ್ಯವಾದರೆ ನವಭಾರತವು ಬೌದ್ಧಿಕವಾಗಿ, ರಾಜಕೀಯವಾಗಿ ಸ್ವಚ್ಛವಾಗಲು ಸಾಧ್ಯ. ಭವಿಷ್ಯದ ಭಾರತಕ್ಕೆ ಬೇಕಿರುವುದು ಭ್ರಷ್ಟರನ್ನು ಸ್ವಚ್ಛವಾಗಿಸುವ ರಾಜಕೀಯ ಯಂತ್ರಗಳಲ್ಲ. ಪ್ರಜಾತಂತ್ರದ ಸಮೃದ್ಧ ಫಸಲಿನ ನಡುವೆ ಕಳೆಗಳಂತೆ ಇರುವ ಭ್ರಷ್ಟಾಚಾರದ ಬೇರುಗಳನ್ನು ಕಿತ್ತೊಗೆಯುವ ಬೌದ್ಧಿಕ ಯಂತ್ರಗಳು ಬೇಕಿವೆ. ಯುವಸಮೂಹ ಈ ದಿಸೆಯಲ್ಲಿ ಯೋಚಿಸಬೇಕಿದೆ.

ವಾಚಕರ ವಾಣಿ

ಪಠ್ಯಪುಸ್ತಕ ಮಾತ್ರವೇ ಇತಿಹಾಸವಲ್ಲ

ಎನ್‌ಸಿಇಆರ್‌ಟಿ ತನ್ನ ಪಠ್ಯಕ್ರಮದಲ್ಲಿ ಇತಿಹಾಸದ ಕೆಲವು ವಿಷಯಗಳನ್ನು ಕೈಬಿಡಲು ಮುಂದಾಗಿರುವುದಾಗಿ ವರದಿಯಾಗಿದೆ. ನಿಜ ಹೇಳಬೇಕೆಂದರೆ, ಪಠ್ಯಪುಸ್ತಕಗಳಲ್ಲಷ್ಟೇ ಇತಿಹಾಸ ಇರುವುದಿಲ್ಲ. ಹೀಗಾಗಿ, ಒತ್ತಾಯಪೂರ್ವಕವಾಗಿ ಯಾವ ಸಿದ್ಧಾಂತವನ್ನೂ ಯಾರ ಮೇಲೂ ಹೇರಲಾಗದು. 'ಪಂಥೀಯ' ಧೋರಣೆಯ 'ಬದಲಾವಣೆ' ಅಂಕ ಗಳಿಕೆಗಷ್ಟೇ ಅನಿವಾರ್ಯವಾಗಬಹುದೇ ವಿನಾ ಸತ್ಯ ಪ್ರತಿಪಾದನೆ ಆಗಲಾರದು.

ದೇಶ ವಿಭಜನೆ, ಸಾವರ್ಕರ್, ಬಾಬರಿ ಮಸೀದಿ ಧ್ವಂಸ ಪ್ರಕರಣ, ಗೋಧ್ರಾ ಹತ್ಯಾಕಾಂಡ, ಮಹಾತ್ಮ ಗಾಂಧಿ ಹತ್ಯೆಯಂತಹ ವಿಷಯಗಳ ಕುರಿತಂತೆ ವಿಭಿನ್ನ ಅಭಿಪ್ರಾಯದ ಹಲವಾರು ಪುಸ್ತಕಗಳು ಎಲ್ಲ ಭಾಷೆಗಳಲ್ಲಿ ಲಭ್ಯ ಇವೆ. ಯಾರಿಗೆ ಯಾವ ಪುಸ್ತಕಗಳು ಸತ್ಯವೆಂದು ಕಾಣಿಸುತ್ತವೆಯೋ ಅಥವಾ ಇಷ್ಟವಾಗುತ್ತವೆಯೋ ಅವುಗಳನ್ನು ಓದುತ್ತಾರೆ ಮತ್ತು ಆ ದಿಸೆಯಲ್ಲಿ ಇತಿಹಾಸವನ್ನು ಅರಿತುಕೊಳ್ಳುತ್ತಾರೆ. 'ಇದಮಿತ್ಥಂ' ಎನ್ನುವುದು ಇತಿಹಾಸಕ್ಕೆ ಸಂಬಂಧಿಸಿದಂತೆ ಸತ್ಯವಲ್ಲ. ಇತಿಹಾಸವು 'ಗಣಿತ'ವಲ್ಲ! ಸಿಲೆಬಸ್‌ನಿಂದ ಮಾತ್ರ ಜನರ ಮನಃಸ್ಥಿತಿ ಬದಲಾಯಿಸುತ್ತೇವೆ ಎನ್ನುವುದು ಹುಚ್ಚುತನವಾದೀತು.

ಶಿವಕುಮಾರ ಬಂಡೋಳಿ, ಹುಣಸಗಿ

ಯು-ಗಾದಿ

ರಂಗೇರಿದ ರಾಜಕೀಯದ
ವೇಳೆಯಲಿ ಬಂದಿದೆ
ಬೇವು ಬೆಲ್ಲದ ಯುಗಾದಿ
ಕಾದು ನೋಡಬೇಕು ಯಾರಿಗಿದೆ
ಕಹಿಯಾದ ಬೇವಿನ ಹಾದಿ
ಬೆಲ್ಲದಂಥ ಅಧಿಕಾರದ ಗಾದಿ?!

ಮಹಾಂತೇಶ ಮಾಗನೂರ
ಬೆಂಗಳೂರು

ಕೊಳವೆಬಾವಿ ಅವಘಡ: ಕ್ರಮ ಜರುಗಲಿ

ನೀತಿ– ನಿಯಮ ಪಾಲನೆ ಎನ್ನುವುದೇ ಕೆಲವೊಮ್ಮೆ ನಮ್ಮ ಭ್ರಷ್ಟತೆಗೆ ಮೂಲವಾಗುತ್ತದೆ ಎನ್ನುವುದಕ್ಕೆ, ವಿಜಯಪುರದ ಇಂಡಿ ತಾಲ್ಲೂಕಿನ ಲಚ್ಯಾಣ ಗ್ರಾಮದ ಕೊಳವೆಬಾವಿ ಅವಘಡ ನಿದರ್ಶನ. ಕೊಳವೆಬಾವಿ ಕೊರೆಯಲು ಅನುಮತಿ ಇದೆಯೇ ಎಂಬುದನ್ನು ಪರಿಶೀಲಿಸದೆ ಏಜೆನ್ಸಿಯು ಅದನ್ನು ಕೊರೆಯಲು ಹೇಗೆ ಮುಂದಾಯಿತು? ಹೋಗಲಿ, ಪ್ರತಿದಿನವೂ ಅಂದಿನ ಕೆಲಸ ಮುಗಿದ ನಂತರ ಸುರಕ್ಷಾ ಕ್ರಮವಾಗಿ ಕೊಳವೆಬಾವಿಯ ಬಾಯಿ ಮುಚ್ಚಬೇಕು ಎನ್ನುವ ಜವಾಬ್ದಾರಿ ಏಜೆನ್ಸಿಗೆ ಇರಲಿಲ್ಲವೇ? ಇಂತಹ ನಿಯಮಬಾಹಿರ ಕಾರ್ಯ ನಡೆದಿದ್ದರೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಏನು ಮಾಡುತ್ತಿದ್ದರು?

ಇಲ್ಲಿ ಮುಖ್ಯ ಆರೋಪಿಗಳು ಪಿಡಿಒ ಮತ್ತು ಏಜೆನ್ಸಿ. ಅಂಗೈ ಹುಣ್ಣಿಗೆ ಕನ್ನಡಿ ಬೇಡ ಎಂಬಂತೆ, ಈ ಇಬ್ಬರ ಕಾರಣದಿಂದ ಈ ಪ್ರಕರಣ ನಡೆದು, ಮಗುವನ್ನು ರಕ್ಷಿಸಲು ಸರ್ಕಾರದ ಲಕ್ಷಾಂತರ ರೂಪಾಯಿ ಕೊಚ್ಚಿಹೋಗಿದೆ. ಇದನ್ನು ಏಜೆನ್ಸಿಯ ಮಾಲೀಕ ಮತ್ತು ಪಿಡಿಒ ಅವರಿಂದ ವಸೂಲಿ ಮಾಡಿ, ನಂತರ ನಿಯಮಾನುಸಾರ ಅವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು.

ಸತ್ಯಬೋಧ, ಬೆಂಗಳೂರು

ಪದೇಪದೇ ದಾಖಲೆ ಕೇಳುವುದೇಕೆ?

ತುರ್ತಾಗಿ ಹಣದ ಅಗತ್ಯ ಇದ್ದುದರಿಂದ, ನನ್ನ ಖಾತೆಯಿಂದ ಹಣ ಪಡೆದುಕೊಳ್ಳಲು ರಾಷ್ಟ್ರೀಕೃತ ಬ್ಯಾಂಕಿಗೆ ತೆರಳಿದ್ದೆ. ಅಲ್ಲಿ 'ಕೆವೈಸಿ ಕೊಡಿ, ಆಮೇಲಷ್ಟೇ ಹಣ ಬಟವಾಡೆ' ಎಂಬ ಉತ್ತರ ಬಂತು. ನಾನು ಕೂಡ ನಿವೃತ್ತ ಬ್ಯಾಂಕ್ ನೌಕರನೇ ಆಗಿದ್ದು, ಈ ಎರಡು ವರ್ಷಗಳ ಅವಧಿಯಲ್ಲಿ ಇದು ಮೂರನೆಯ ಬಾರಿ ಕೆವೈಸಿ ನೀಡುತ್ತಿರುವುದು! ಹೀಗೆ ಪದೇಪದೇ ದಾಖಲೆ ಕೇಳುವ ಉದ್ದೇಶವಾದರೂ ಏನು? ಬ್ಯಾಂಕುಗಳ ವ್ಯವಹಾರ ಡಿಜಿಟಲೀಕರಣ ಆದಮೇಲಂತೂ, ಕೆವೈಸಿ ಬೇಡಿಕೆಯ ಕಾಟ, ಅಡಚಣೆ ಇನ್ನೂ ಹೆಚ್ಚಾಗಿದೆ. ಬರೀ ಆರೇಳು ತಿಂಗಳ ಹಿಂದಷ್ಟೇ ನೀಡಿರುವ ದಾಖಲೆಗಳು ನಮೂದಾಗಿರುವುದಿಲ್ಲವೇ? ವ್ಯವಹಾರ ಇಲ್ಲದ, ನಿಷ್ಕ್ರಿಯ ಎಸ್‌ಬಿ ಖಾತೆಗಳಿಗೆ (ಡಾರ್ಮೆಂಟ್ ಅಕೌಂಟ್) ಕೆವೈಸಿ ಕೇಳಲಿ. ಸಕ್ರಿಯವಾಗಿರುವ ಖಾತೆಗಳಿಗೆ ಈ ಥರದ ಅಸಹಕಾರ ಸಾಧುವೇ?

ಕೆವೈಸಿ ನಮೂದೀಕರಣ ಪ್ರಕ್ರಿಯೆಯಲ್ಲಿ ಏನೋ ದೋಷ ಇದ್ದಂತಿದೆ. ಇದನ್ನು ಸರಿಪಡಿಸುವ ಅಗತ್ಯ ಇದೆ. ಇತ್ತೀಚೆಗೆ ಬ್ಯಾಂಕುಗಳಿಂದ ಗ್ರಾಹಕರಿಗೆ ಸಿಗುವ ಸೇವೆಗಿಂತ, ಈ ಬಗೆಯ ಕಿರಿಕಿರಿಗಳೇ ಹೆಚ್ಚಾಗುತ್ತಿವೆ. ಸಂಬಂಧಪಟ್ಟವರು ಗಮನಿಸಬೇಕಾಗಿದೆ.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

ರಥದ ಎತ್ತರ: ನಿಯಮ ರೂಪಿಸಬೇಕಿದೆ

ಪ್ರತಿವರ್ಷವೂ ಮಾರ್ಚ್, ಏಪ್ರಿಲ್ ಬಂದರೆ ನಾಡಿನ ನೂರಾರು ಊರುಗಳಲ್ಲಿ ಜಾತ್ರೆ ಮತ್ತು ರಥೋತ್ಸವ ನಡೆಯುವುದು ವಾಡಿಕೆ. ಅಂತೆಯೇ ಆನೇಕಲ್ ತಾಲ್ಲೂಕಿನ ಹುಸ್ಕೂರಿನಲ್ಲಿ ಇತ್ತೀಚೆಗೆ ಜಾತ್ರೆ ಮತ್ತು ರಥೋತ್ಸವ ಆಯೋಜಿಸಲಾಗಿತ್ತು. ಸದರಿ ರಥದ ಎತ್ತರ ಸುಮಾರು 120 ಅಡಿಗಳಷ್ಟು ಇತ್ತು. ಅಂದರೆ ಸುಮಾರು 12 ಅಂತಸ್ತಿನ ಕಟ್ಟಡದಷ್ಟು ಎತ್ತರ. ರಥ ಎಳೆಯುವ ಸಂದರ್ಭದಲ್ಲಿ ಸಮತೋಲನ ತಪ್ಪಿ ಪ್ರಮಾದ ಜರುಗಿ, ಇಡೀ ರಥ ಧರಾಶಾಹಿಯಾಯಿತು. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಆಗಲಿಲ್ಲ.

ಇಂತಹ ರಥೋತ್ಸವದಲ್ಲಿ ಬೇರೆಯವರಿಗಿಂತ ತಮ್ಮದು ಚೆನ್ನಾಗಿರಬೇಕು, ಭವ್ಯವಾಗಿರಬೇಕು ಎಂಬ ಸದುದ್ದೇಶದ ಪೈಪೋಟಿ ಇರುತ್ತದೆ. ಹಾಗಾಗಿ, ಹೆಚ್ಚಿನ ಅಲಂಕಾರದೊಂದಿಗೆ ರಥದ ಎತ್ತರವೂ ಹೆಚ್ಚಾಗುತ್ತದೆ. ಇದು ಸಹಜ ಕೂಡ. ಎಷ್ಟೋ ಕಡೆ ಕಾಲ್ತುಳಿತ, ಕೆಂಡ ಹಾಯುವಿಕೆಯಲ್ಲಿ ಭಾರಿ ಗಾಯ, ಪ್ರಾಣಹಾನಿ ಆಗಿರುವುದು ಗಮನಾರ್ಹ. ಹಾಗಾಗಿ, ಸಂಬಂಧಪಟ್ಟ ಇಲಾಖೆಯು ಗ್ರಾಮದ ರಸ್ತೆಗಳ ಅಗಲಕ್ಕೆ ತಕ್ಕಂತೆ ರಥದ ಎತ್ತರಕ್ಕೆ ಗರಿಷ್ಠ ಮಿತಿಯನ್ನು ನಿಗದಿಪಡಿಸಲಿ. ಆಗ ಇಂತಹ ಅನಾಹುತಗಳು ಕಡಿಮೆಯಾಗುತ್ತವೆ. ಅನಾಹುತ ಆದ ನಂತರ ಪಶ್ಚಾತ್ತಾಪ ಪಡುವುದಕ್ಕಿಂತ ಮೊದಲೇ ಮುನ್ನೆಚ್ಚರಿಕೆ ವಹಿಸುವುದು ಸೂಕ್ತ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬೆಳಗಲಿ ಸಮರಸ

ವಸಂತ ಚೈತ್ರದ ಮುಂಬೆಳಕು
ತಾರದಿರಲಿ 'ಕ್ರೋಧಿ'ತನ
ಬೆಳಗಲಿ ಸಮರಸ, ಸಹಬಾಳ್ವೆ
ನವ ಸಂವತ್ಸರದಲಿ ಆಗಮಿಸಿಹ
ಮತದಾರರ ಹಬ್ಬ ಆಗದಿರಲಿ
ಎಂದೂ ಉಂಡಿದ್ದೇ ಉಗಾದಿ
ಎಂಬ ಮಾತಿನಂತೆ!

ಬಲ್ಲೇನಹಳ್ಳಿ ಮಂಜುನಾಥ್
ಕೆ.ಆರ್.ಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯುಗಾದಿ ರಾಶಿಭವಿಷ್ಯ 2024

• ಎಂ. ಎನ್ ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಯುಗಾದಿ ಅಂದರೆ ಯುಗದ ಆರಂಭಕಾಲ. ಬ್ರಹ್ಮ ತನ್ನ ಸೃಷ್ಟಿಯನ್ನು ಆರಂಭಿಸಿದ ದಿನ. ಹಿಂದೂ ಪಂಚಾಂಗದ ಪ್ರಕಾರ ಇದು ವರ್ಷದ ಆರಂಭದ ದಿನ. ಶಾಲಿವಾಹನ ಮಹಾರಾಜರು ತಮ್ಮ ಶಕ ವರ್ಷವನ್ನು ಆರಂಭಿಸಿದ ದಿನ. ಈ ಸಂದರ್ಭದಲ್ಲಿ ಪ್ರಕೃತಿ ಸಹ ಹಚ್ಚ ಹಸಿರಿನಿಂದ ಕಂಗೊಳಿಸುತ್ತಿರುತ್ತದೆ. ಎಲ್ಲೆಡೆಯೂ ಚಿಗುರು ಮತ್ತು ಹೂವುಗಳು ತುಂಬಿರುತ್ತವೆ. ಇಂತಹ ಪ್ರಕೃತಿಯ ಜೊತೆ ಹೊಂದಿಕೊಳ್ಳುವುದೇ ಜೀವನ ಕಲೆ. ಚೈತ್ರ ಮಾಸದ ಭಾಗ್ಯವನ್ನು ಯುಗಾದಿ ಎಂದು ಕರೆಯುತ್ತೇವೆ

ಸಂವತ್ಸರ ಫಲ

ಕ್ರೋಧಿ ನಾಮ ಸಂವತ್ಸರದಲ್ಲಿ ರಾಜರ ಯುದ್ಧದಿಂದ ಪ್ರಜೆಗಳು ದರಿದ್ರರಾಗುವವರು ಮತ್ತು ಕ್ಷಾಮದಿಂದ ಫಲ ಮೂಲಾದಿಗಳನ್ನು ತಿಂದು ಜೀವಿಸಬೇಕಾಗುತ್ತದೆ. ಈ ಸಂವತ್ಸರದಲ್ಲಿ ಮಳೆ ಬೆಳೆಗಳು ಮಧ್ಯಮವಾಗಿರುತ್ತವೆ. ಪದಾರ್ಥಗಳ ಬೆಲೆಗಳು ಒಂದೇ ರೀತಿ ಇರುತ್ತದೆ.

ಕೃಷಿ ವಿಚಾರ: ಹೈನು ಬೆಳೆ ಚೆನ್ನಾಗಿ ಆಗುತ್ತದೆ. ಬೆಳೆ ಫಸಲು ಮಧ್ಯಮವಾಗಿರುತ್ತದೆ. ಪಶುಗಳಿಗೆ ಮೇವಿನ ಕೊರತೆ ಕಾಣಿಸಬಹುದು. ಹೂವು–ಹಣ್ಣು ಮಾರುವವರಿಗೆ ಅಭಿವೃದ್ಧಿ ಇದೆ. ಜವಳಿ ವ್ಯಾಪಾರಿಗಳಿಗೆ ಹತ್ತಿ ಬೆಳಗಾರರಿಗೆ ಲಾಭವಿದೆ.

ರಾಷ್ಟ್ರದ ವಿಚಾರ: ರಾಷ್ಟ್ರದಲ್ಲಿ ರಾಜಕೀಯ ಸ್ಥಿರತೆ ಇದ್ದು, ರಾಷ್ಟ್ರದ ಗೌರವ ಹೆಚ್ಚುತ್ತದೆ. ದೃಢವಾದ ಆಡಳಿತವಿರುತ್ತದೆ. ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ.

ರಾಶಿ ಫಲಗಳು

ಮೇಷ ರಾಶಿ

ಗುರು ಮೇಷದಲ್ಲಿದ್ದು ಮೇ 1ನೇ ತಾರೀಖಿನಂದು ವೃಷಭಕ್ಕೆ ಬರುತ್ತಾನೆ. ಗುರುವಿನಿಂದ ಆರ್ಥಿಕ ಪರಿಸ್ಥಿತಿ ಉತ್ತಮ. ಆದರೆ, ದುಡ್ಡು ಉಳಿಯುವುದಿಲ್ಲ. ಕೋರ್ಟ್, ಕಚೇರಿ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ಗುರುಬಲ, ಶನಿ ಬಲ ಇರುತ್ತದೆ. ವೈವಾಹಿಕ ಜೀವನದಲ್ಲಿ ಉತ್ತಮ ಬದಲಾವಣೆ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲವಿರುತ್ತದೆ. ಶನಿಯಿಂದ ಸರ್ವಾಭೀಷ್ಟ ಫಲಪ್ರದವಾಗುತ್ತದೆ. ಮಾರಕ ದೋಷಗಳ ನಿವಾರಣೆಯಾಗುತ್ತದೆ. ಹೊಸ ಅಧಿಕಾರ ಪ್ರಾಪ್ತಿ ಆಗುತ್ತದೆ. ಉದ್ಯೋಗದಲ್ಲಿ ಅಭಿವೃದ್ಧಿ, ಆರೋಗ್ಯ ಸಮಸ್ಯೆಗಳು ದೂರವಾಗುತ್ತವೆ. ಕೋಪ ತಾಪಗಳನ್ನು ಕಡಿಮೆ ಮಾಡಿಕೊಳ್ಳಿರಿ. ಯಾರನ್ನೋ ನಂಬಿ ಹಣ ಹೂಡುವುದು ಒಳಿತಲ್ಲ. ಅರ್ಧಕ್ಕೆ ನಿಂತಿದ್ದ ಕೆಲಸಗಳು ಪೂರ್ಣವಾಗುತ್ತವೆ. ದೊಡ್ಡ ಹೂಡಿಕೆಗಳು ಬೇಡ, ಮೋಸವಾಗುವ ಸಾಧ್ಯತೆಗಳಿವೆ. ಡಿಜಿಟಲ್ ಮೀಡಿಯಾದವರಿಗೆ, ಟೆಲಿಕಾಂನವರಿಗೆ ಅಭಿವೃದ್ಧಿ ಕಡಿಮೆ. ಹಿರಿಯ ನಟರಿಗೆ ಆರೋಗ್ಯ ತೊಂದರೆ ಆಗಬಹುದು. ಹೆಚ್ಚಿನ ಒಳಿತಿಗಾಗಿ ಗುರು ಮತ್ತು ಈಶ್ವರರ ಧ್ಯಾನ ಮತ್ತು ದರ್ಶನ ಅಗತ್ಯ.

ವೃಷಭ ರಾಶಿ

ಈ ರಾಶಿಗೆ ಮೇ 1ನೇ ತಾರೀಖಿನ ನಂತರ ಗುರು ಪ್ರವೇಶ ಮಾಡುತ್ತಾನೆ. ರಾಶಿಯಲ್ಲಿ ಗುರುವಿದ್ದಾಗ ಗೌರವ ದೊರೆಯುತ್ತದೆ. ಸಜ್ಜನರ ಸುಸಂಸ್ಕೃತರ ಸಹವಾಸಗಳು ದೊರೆಯುತ್ತವೆ. ಅದೃಷ್ಟವನ್ನು ಕೊಡುತ್ತಾನೆ, ಆಸ್ತಿಕತೆಯತ್ತ ಒಲವು ಹೆಚ್ಚಾಗುತ್ತದೆ. ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚು ಎಚ್ಚರ ವಹಿಸಿರಿ, ಗರ್ಭಿಣಿಯರು ಹೆಚ್ಚು ಎಚ್ಚರದಿಂದ ಇರುವುದು ಒಳ್ಳೆಯದು. ಹೊಸ ಉದ್ಯೋಗ ದೊರೆಯುವ ಸಂದರ್ಭವಿದೆ. ವೃತ್ತಿಯಲ್ಲಿ ಸ್ಥಾನಮಾನದ ಏರಿಕೆ ಆಗುವ ಸಾಧ್ಯತೆಗಳಿವೆ. ಆರ್ಥಿಕ ಭಾಗ್ಯ ಇರುತ್ತದೆ. ಭೂಮಿಯನ್ನು ಹೊಂದುವ ಯೋಗವಿದೆ. ರೇಷ್ಮೆ ವ್ಯಾಪಾರಿಗಳು ಮತ್ತು ಕೃಷಿಕರಿಗೆ ಹೆಚ್ಚಿನ ಅನುಕೂಲವಿರುತ್ತದೆ. ನ್ಯಾಯಾಧೀಶರಿಗೆ ಉತ್ತಮ ನ್ಯಾಯದಾನ ಮಾಡುವ ಅವಕಾಶವಿದೆ. ಪತ್ರಕರ್ತರಿಗೆ, ವಿಜ್ಞಾನಿಗಳಿಗೆ ಹೆಚ್ಚು ಅನುಕೂಲವಿರುತ್ತದೆ. ರಾಜಕಾರಣಿಗಳಿಗೆ ಹೆಚ್ಚು ಅನುಕೂಲ ದೊರೆತು ಗುಂಪಿನ ನಾಯಕರಾಗಬಹುದು. ಹೆಚ್ಚಿನ ಒಳಿತಿಗಾಗಿ ಈಶ್ವರ ಧ್ಯಾನ ಮತ್ತು ದರ್ಶನ, ಗುರು ದತ್ತಾತ್ರೇಯರ ಧ್ಯಾನ ಅಗತ್ಯ.

ಮಿಥುನ ರಾಶಿ

ಈ ರಾಶಿಯಲ್ಲಿ ಮೇ 1ನೇ ತಾರೀಖಿನವರೆಗೆ ಲಾಭಕಾರಕನಾಗಿ ಗುರು ಇರುತ್ತಾನೆ. ಬಳಿಕ ವ್ಯಯಕಾರಕನಾಗುತ್ತಾನೆ. ವಿವಾಹ ವಿಳಂಬದ ಸಾಧ್ಯತೆ ಇದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಧಾನ ಗತಿ ಇರುತ್ತದೆ. ಪಾಲುದಾರರಲ್ಲಿ ಪರಸ್ಪರ ಅಪನಂಬಿಕೆ ಮೂಡುವ ಸಾಧ್ಯತೆಗಳಿವೆ. ಪ್ರಯಾಣದಲ್ಲಿ ಅಮೂಲ್ಯ ವಸ್ತುಗಳ ಕಳ್ಳತನ ಆಗಬಹುದು. ಭಾಗ್ಯಧಿಪತಿ ಶನಿಯು ನಿಮಗೆ ವೈರಾಗ್ಯವನ್ನು ಕೊಡುವರು. ತೀರ್ಥಯಾತ್ರೆಯ ಸೌಖ್ಯವನ್ನು ಕೊಡುತ್ತಾರೆ. ಆದಾಯ ವೃದ್ಧಿಯಾಗುತ್ತದೆ. ಪಿತೃ ದೋಷ ಇದ್ದವರಿಗೆ ಕಡಿಮೆಯಾಗುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ. ಆರೋಗ್ಯದಲ್ಲಿ ಸುಧಾರಣೆ ಇರುತ್ತದೆ. ಉದ್ಯೋಗದಲ್ಲಿ ಅಭಿವೃದ್ಧಿಯಾಗುತ್ತದೆ. ಉದ್ಯೋಗ ಬದಲಾವಣೆ ಮಾಡಬೇಕೆಂದಿರುವವರು ಮತ್ತು ಹಣವನ್ನು ಒಟ್ಟು ಮಾಡಬೇಕೆಂದಿರುವವರು ಮೇ 1ನೇ ತಾರೀಖಿನ ಒಳಗೆ ಮಾಡಿಕೊಳ್ಳುವುದು ಉತ್ತಮ. ಹಣದ ವಿಚಾರದಲ್ಲಿ ಹೆಚ್ಚು ಎಚ್ಚರ ವಹಿಸಿರಿ. ವಿದ್ಯಾರ್ಥಿಗಳಿಗೆ ಸಾಧಾರಣ ಅನುಕೂಲ ಇರುತ್ತದೆ. ತೆರಿಗೆ ತಜ್ಞರಿಗೆ ಬಹಳ ಅನುಕೂಲವಿರುತ್ತದೆ. ಕುಟುಂಬ ಸೌಖ್ಯ ಉತ್ತಮವಾಗಿರುತ್ತದೆ. ಭೂಮಿಯನ್ನು ಖರೀದಿಮಾಡುವ ಯೋಗವಿದೆ. ಹೆಚ್ಚಿನ ಒಳಿತಿಗಾಗಿ ಯಾವುದೇ ಗುರುವಿನ ಆರಾಧನೆ ಮತ್ತು ಶನಿ ದೇವರ ಆರಾಧನೆ ಬಹಳ ಮುಖ್ಯ.

ಕಟಕ ರಾಶಿ

ಮೇ 1ನೇ ತಾರೀಖಿನವರೆಗೆ ಗುರು ಕರ್ಮಭಾವದಲ್ಲಿ ಇರುತ್ತಾನೆ. ಅಲ್ಲಿಯವರೆಗೆ ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ. ನಂತರ ಗುರುವೂ ಲಾಭಕ್ಕೆ ಬರುತ್ತಾನೆ. ಆಗ ಸ್ವಲ್ಪ ಒದ್ದಾಟಗಳು ಕಡಿಮೆಯಾಗುತ್ತವೆ. ರಾಹು ಮತ್ತು ಕೇತುಗಳಿಂದ ಆರೋಗ್ಯವೃದ್ಧಿ ಮತ್ತು ಧನ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಹೊಸ ಐಷಾರಾಮಿ ವಸ್ತುಗಳನ್ನು ಖರೀದಿ ಮಾಡುವಿರಿ. ಸಂತಾನ ಸೌಖ್ಯ ಇರುತ್ತದೆ. ವಿವಾಹ ಸಂಬಂಧಗಳು ಒದಗುತ್ತವೆ. ಕೋರ್ಟ್–ಕಚೇರಿ ವ್ಯವಹಾರಗಳಲ್ಲಿ ಜಯ ಇರುತ್ತದೆ. ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಬೇಕೆನ್ನುವವರಿಗೆ ಅನುಕೂಲವಿರುತ್ತದೆ. ನೂತನ ಗೃಹ ನಿರ್ಮಾಣದ ಯೋಗ ಇರುತ್ತದೆ. ಉದ್ಯೋಗದಲ್ಲಿ ಬದಲಾವಣೆ ಆಗುವ ಯೋಗವಿದೆ. ಶತ್ರುಗಳು ಸಹ ನಿಮಗೆ ಅನುಕೂಲ ಮಾಡಿಕೊಡುವರು. ಅಷ್ಟಮ ಶನಿಯಿಂದ ಸ್ವಲ್ಪ ವ್ಯತ್ಯಾಸಗಳಿರುತ್ತವೆ. ಕೆಲಸ ಕಾರ್ಯಗಳಲ್ಲಿ ನಿಧಾನ ಗತಿ ಇರುತ್ತದೆ. ವಾಹನ ಸೌಖ್ಯವಿರುತ್ತದೆ. ವೃತ್ತಿಯಲ್ಲಿ ಮುನ್ನಡೆಯನ್ನು ಸಾಧಿಸಬಹುದು. ಅನಿರೀಕ್ಷಿತ ಧನ ಲಾಭವಾಗುವ ಸಾಧ್ಯತೆಗಳಿವೆ. ಹೆಚ್ಚಿನ ಒಳಿತಿಗಾಗಿ ಸುಬ್ರಹ್ಮಣ್ಯ ಸ್ವಾಮಿ ನರಸಿಂಹ ಸ್ವಾಮಿ ಶನೇಶ್ಚರ ಆರಾಧನೆ ಮಾಡಿರಿ.



ಸಿಂಹ ರಾಶಿ

ಕಳೆದ ವರ್ಷ ನಿಮಗೆ ಗುರುಬಲ ಇತ್ತು. ಮೇ 1ರಿಂದ ಗುರುಬಲ ಇರುವುದಿಲ್ಲ. ಗುರು ಕರ್ಮ ಭಾವದಲ್ಲಿ ಸಂಚರಿಸಿದಾಗ ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ. ಧಾರ್ಮಿಕ ಪ್ರವೃತ್ತಿ ಜಾಗೃತವಾಗುತ್ತದೆ. ಹಣದ ನಿರ್ವಹಣೆ ಸರಿಯಾಗಿ ಆಗುತ್ತದೆ. ಬೀಜೋತ್ಪಾದನೆಯನ್ನು ಮಾಡುವವರಿಗೆ ಮತ್ತು ಅರಿಶಿಣ ಬೆಳೆಯುವವರಿಗೆ ಹೆಚ್ಚಿನ ಲಾಭವಿರುತ್ತದೆ. ದಿನಸಿ ವ್ಯಾಪಾರಿಗಳಿಗೆ, ಕೃಷಿಕರಿಗೆ ಲಾಭವಿರುತ್ತದೆ. ಉಪನ್ಯಾಸಕರಿಗೆ ಮತ್ತು ಉಪಾಧ್ಯಾಯರುಗಳಿಗೆ ಅನುಕೂಲವಿರುತ್ತದೆ. ಈವೆಂಟ್ ಮ್ಯಾನೇಜ್‌ಮೆಂಟ್ ನಡೆಸುವವರಿಗೆ ಹೆಚ್ಚು ಸಂಪಾದನೆ ಇರುತ್ತದೆ. ಶನಿಯ ದೃಷ್ಟಿ ನಿಮ್ಮ ರಾಶಿಯ ಮೇಲಿದ್ದು ಕುಟುಂಬದಲ್ಲಿ ಶಾಂತತೆ, ಕೆಲಸಗಳು ಆಗುತ್ತದೆ. ಕೆಲವರಿಗೆ ವಿವಾಹ ವಿಳಂಬವಾಗಬಹುದು. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಭಾಗ್ಯೋದಯಗಳಿಗೆ ಸ್ವಲ್ಪ ಹೊಡೆತ ಬೀಳುತ್ತದೆ. ಸಮಸ್ಯೆಗಳನ್ನು ಶಾಂತ ರೀತಿಯಿಂದ ಪರಿಹರಿಸಿಕೊಳ್ಳಿರಿ. ಹೆಚ್ಚಿನ ಪರಿಹಾರಕ್ಕಾಗಿ ದಕ್ಷಿಣಾಮೂರ್ತಿಯ ಪ್ರಾರ್ಥನೆ ಮತ್ತು ಶನೇಶ್ಚರ ಪ್ರಾರ್ಥನೆ ಮಾಡಿರಿ.

ಕನ್ಯಾ ರಾಶಿ

ಮೇ 1ನೇ ತಾರೀಖಿನಿಂದ ಗುರು ತನ್ನ ಪಂಚಮ ದೃಷ್ಟಿಯಿಂದ ನಿಮ್ಮನ್ನು ನೋಡುತ್ತಾನೆ. ಈ ಗುರುವೂ 4ನೇ ಮತ್ತು 7ನೇ ಮನೆ ಅಧಿಪತಿ. ವಿವಾಹ ಸಂಬಂಧಗಳು ಒದಗುವ ಸಾಧ್ಯತೆ ಇದೆ. ಗುರುವು ನವಮಾಧಿಪತಿಯಾಗಿದ್ದು ಆ ದೃಷ್ಟಿಯಿಂದ ಸಂತಾನವೃದ್ಧಿ ಇರುತ್ತದೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭ ಮತ್ತು ಸಂತೋಷ ಹೆಚ್ಚುವುದು. ಉಪಾಧ್ಯಾಯರು ಮತ್ತು ಪಂಡಿತರಿಗೆ ಬಹಳ ಅನುಕೂಲ. ಸಾತ್ವಿಕ ಗುಣ ಹೆಚ್ಚುತ್ತದೆ. ಕೀರ್ತಿ ದೊರೆಯುವ ಸಾಧ್ಯತೆ ಇದೆ. ಪ್ರಕೃತಿ ಸಂಬಂಧಿತ ಕೆಲಸಗಳು ಕೃಷಿ, ಹೂವು ಮತ್ತು ಹಣ್ಣು ಬೆಳಗಾರರಿಗೆ ಲಾಭವಿರುತ್ತದೆ. ನೀರಿನ ವ್ಯಾಪಾರಿಗಳು, ಹೋಟೆಲ್ ಉದ್ಯಮದವರಿಗೆ ಮತ್ತು ಈವೆಂಟ್ ಮ್ಯಾನೇಜ್‌ಮೆಂಟ್ ನಡೆಸುವವರಿಗೆ ಆದಾಯ ಹೆಚ್ಚುತ್ತದೆ. ಐಟಿ–ಬಿಟಿ ಉದ್ಯೋಗಿಗಳಿಗೆ ಮತ್ತು ಫೈನಾನ್ಸಿಯಲ್ ಅಡ್ವೈಸರ್‌ಗಳಿಗೆ ಲಾಭವಿರುತ್ತದೆ. ಮಾಧ್ಯಮದವರಿಗೆ ಮತ್ತು ಹಿರಿಯ ಅಧಿಕಾರಿಗಳಿಗೆ ಅಭಿವೃದ್ಧಿ ಇರುತ್ತದೆ. ಆರಕ್ಷಕರಿಗೆ ಮತ್ತು ಸೈನಿಕರಿಗೆ ಪದೋನ್ನತಿಯ ಯೋಗವಿರುತ್ತದೆ. ಲೋಕೋಪಯೋಗಿ ಕೆಲಸ ಮಾಡುವವರಿಗೆ, ಗುತ್ತಿಗೆದಾರರಿಗೆ ಅನುಕೂಲವಿರುತ್ತದೆ. ಹೆಚ್ಚಿನ ಒಳಿತಿಗಾಗಿ ಗಣೇಶ ಮತ್ತು ದುರ್ಗೆಯರನ್ನು ಆರಾಧನೆ ಮಾಡಿರಿ.

ತುಲಾ ರಾಶಿ

ಮೇ 1ನೇ ತಾರೀಖಿನವರೆಗೆ ಮಾತ್ರ ಗುರುಬಲ. ಮೇ 1ನೇ ತಾರೀಖಿನಿಂದ ಅಷ್ಟಮ ಗುರುವಾಗಿ ಗುರು ಬಲ ಹೋಗುತ್ತದೆ. ಅಷ್ಟಮ ಗುರುವಿನಿಂದ ಆರೋಗ್ಯ ವ್ಯತ್ಯಾಸ, ವ್ಯಾಪಾರದಲ್ಲಿ ಹಿನ್ನಡೆ, ವ್ಯಾಪಾರದಲ್ಲಿ ಮೋಸ ಸಂಭವಿಸಬಹುದು. ಶನಿ ಶುಕ್ರರು ಮಿತ್ರರಾದ್ದರಿಂದ ತೊಂದರೆಗಳು ಸ್ವಲ್ಪ ಕಡಿಮೆಯಾಗುತ್ತವೆ. ಸಾಲಬಾಧೆ ಇರುತ್ತದೆ. ಖರ್ಚು ವಿಪರೀತ ಜಾಸ್ತಿ ಆಗುವ ಸಂದರ್ಭವಿದೆ. ವೃತ್ತಿಯಲ್ಲಿ ತೊಂದರೆ, ವಿದ್ಯೆಯಲ್ಲಿ ದ್ವಂದ್ವಗಳಿರುತ್ತವೆ. ಆಯಸ್ಸು ವೃದ್ಧಿಯಾಗುತ್ತದೆ. ವಿವಾಹ ವಿಚಾರದಲ್ಲಿ ಅನುಕೂಲಗಳು ಕಡಿಮೆ. ಅಡ್ಡ ದಾರಿಗಳಿಂದ ಧನ ಸಂಪಾದನೆ ಮಾಡುವ ಹಂಬಲ. ಮನೆ ಕಟ್ಟುವ ವಿಚಾರದಲ್ಲಿ ಸಾಕಷ್ಟು ಎಚ್ಚರ ವಹಿಸಿ. ಲೇವಾದೇವಿ ವ್ಯವಹಾರ ಮಾಡುವುದು, ಆಧಾರ ರಹಿತ ಸಾಲ ಕೊಡುವುದು, ಗ್ಯಾರಂಟಿ ಕೊಡುವುದು ಬಹಳ ದುಬಾರಿಯಾಗಬಹುದು. ಸಮೀಪದ ಬಂಧುಗಳೇ ಶತ್ರುಗಳಾಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಭಾವಿತರಿಗೆ ವಿವಾಹವಾಗಬಹುದು. ಹೆಚ್ಚಿನ ಅನುಕೂಲಕ್ಕಾಗಿ ಗುರುಗಳ ಆರಾಧನೆ ಮತ್ತು ಶಿವಾರಾಧನೆ, ಶನೇಶ್ಚರನ ಧ್ಯಾನ ಅಗತ್ಯ

ವೃಶ್ಚಿಕ ರಾಶಿ

ವರ್ಷದ ಆರಂಭದಲ್ಲಿ ಗುರುಬಲ ಇರುವುದಿಲ್ಲ ಮತ್ತು ಅರ್ಧಾಷ್ಟಮಶನಿ ಇರುತ್ತದೆ. ಮೇ 1ರಿಂದ ಗುರು ಸಪ್ತಮಕ್ಕೆ ಬಂದು ಗುರುಬಲ ಬರುತ್ತದೆ. ಗುರುವಿನಿಂದ ಹೊಸ ಜೀವನವನ್ನು ಕಂಡುಕೊಳ್ಳಬಹುದು. ಆರೋಗ್ಯದಲ್ಲಿ ವೃದ್ಧಿ ಇರುತ್ತದೆ. ಹಿರಿಯರ ಆಶೀರ್ವಾದಗಳು ಸಹಕಾರಗಳು ದೊರೆಯುತ್ತವೆ. ಕೆಲವರಿಗೆ ಸಂತಾನ ಭಾಗ್ಯವಿರುತ್ತದೆ. ಧನಾದಿಪತಿ ಗುರು ಧನ ಹೆಚ್ಚಿಸುತ್ತಾನೆ. ಅವಿವಾಹಿತರಿಗೆ ವಿವಾಹ ಭಾಗ್ಯವಿರುತ್ತದೆ. ವಿದ್ಯೆಯಲ್ಲಿ ಅಭಿವೃದ್ಧಿ ಇರುತ್ತದೆ. ಮನೆಯಲ್ಲಿ ಶುಭ ಕಾರ್ಯಗಳಾಗುತ್ತವೆ. ಪಾಲುದಾರಿಕೆ ವ್ಯವಹಾರಗಳಲ್ಲಿ ಲಾಭವಿದ್ದು, ವ್ಯವಹಾರ ವಿಸ್ತರಿಸುತ್ತದೆ. ಸಂತಸದ ಜೀವನ ಇರುತ್ತದೆ. ಉಪಯೋಗ ಪಡೆದು ದೂರುವವರು ಜಾಸ್ತಿಯಾಗುವರು. ಇಂತಹವರ ಮುಂದೆ ಎದ್ದು ನಿಲ್ಲುವ ಅವಕಾಶವಿರುತ್ತದೆ. ಪೊಲೀಸರಿಗೆ ಮತ್ತು ವಕೀಲರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಭೂಮಿಯನ್ನು ಕೊಳ್ಳುವ ಅವಕಾಶಗಳು ಇವೆ. ಆದರೆ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿರಿ. ವಿದೇಶಕ್ಕೆ ಹೋಗಿ ಬರುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಶುಭ, ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಅಭಿವೃದ್ಧಿ ಇರುತ್ತದೆ.

ಹೆಚ್ಚಿನ ಸಂತೋಷಕ್ಕಾಗಿ ದಕ್ಷಿಣಾಮೂರ್ತಿಯ ಪೂಜೆ ಮತ್ತು ಕಡಲೆ ಹಾರ ಹಾಕುವುದು, ಸರಸ್ವತಿ ಮತ್ತು ಶನೇಶ್ಚರ ಆರಾಧನೆ ಬಹಳ ಮುಖ್ಯ.

ಧನಸ್ಸು ರಾಶಿ

ಗುರು ಶನಿಗಳ ಪ್ರಭಾವಿರುತ್ತದೆ. ಮೇ 1ರಿಂದ ಗುರು ಆರನೆಯ ಮನೆಗೆ ಹೋಗುವುದರಿಂದ ದೇಹದಲ್ಲಿ ಅಸೌಖ್ಯ, ಅಜೀರ್ಣ ತೊಂದರೆ, ಕ್ಯಾಲ್ಸಿಯಂ ವ್ಯತ್ಯಾಸ ಆಗುವ ಸಾಧ್ಯತೆಗಳಿವೆ. ಕೆಲಸ ಕಾರ್ಯ ನಿಧಾನವಾಗುತ್ತದೆ. ದೈವಾನುಗ್ರಹ ಕಡಿಮೆ, ಮೂರನೇ ಮನೆಯಲ್ಲಿರುವ ಶನಿಯಿಂದ ಶನಿ ಬಲವಿರುತ್ತದೆ. ಶುಭ ಫಲ ದೊರೆಯುತ್ತದೆ. ಶತ್ರು ಧ್ವಂಸವಾಗುತ್ತದೆ. ರಾಜಕಾರಣಿಗಳಿಗೆ ಸ್ಥಾನಮಾನ ದೊರೆತು ಯಶಸ್ಸು ಇರುತ್ತದೆ. ರಾಜಕೀಯ ಮಾಡುವವರಿಗೆ ಸಾಕಷ್ಟು ಯಶಸ್ಸು ಇರುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವ್ಯವಹಾರಗಳಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗುತ್ತದೆ. ವಾಹನ ಲಾಭ, ಗೃಹ ನಿರ್ಮಾಣದಲ್ಲಿ ಸಫಲತೆ ಇರುತ್ತದೆ. ಕೆಲವು ಅಧಿಕಾರಿಗಳಿಗೆ ವರ್ಗಾವಣೆಯಿಂದ ಆನಂದ. ಧೈರ್ಯ ಹೆಚ್ಚಾಗುತ್ತದೆ, ಬುದ್ಧಿ ಚುರುಕಾಗುತ್ತದೆ. ಹಿರಿಯರ ಸಹಕಾರ ದೊರೆಯುತ್ತದೆ. ಸಹೋದರರಿಂದ ಸಹಾಯ ದೈವತಾರಾಧನೆಯಲ್ಲಿ ಅನುಕೂಲವಿರುತ್ತದೆ. ಹಳೆ ಬಾಕಿ ವಸೂಲಿ ಆಗುತ್ತದೆ. ಆಡಳಿತ ಅಧಿಕಾರಿಗಳಿಗೆ ಅನುಕೂಲ ಮತ್ತು ಆಡಳಿತಾತ್ಮಕ ಪರೀಕ್ಷೆ ತೆಗೆದುಕೊಳ್ಳುವವರಿಗೆ ಹೆಚ್ಚಿನ ಅನುಕೂಲ. ಇನ್ನೂ ಹೆಚ್ಚಿನ ಒಳಿತಿಗಾಗಿ ಶಿವನ ಆರಾಧನೆ ಮತ್ತು ಯಾವುದೇ ಗುರುವಿನ ಪೂಜೆ ಒಳ್ಳೆಯದು.

ಮಕರ ರಾಶಿ

ಮೇ 1ನೇ ತಾರೀಖಿನಿಂದ ಗುರು ಬದಲಾವಣೆಗೊಂಡು ಹೆಚ್ಚು ಅನುಕೂಲವಿರುತ್ತದೆ. ಗುರುಬಲ ಆರಂಭವಾಗುತ್ತದೆ. ಜೀವನದಲ್ಲಿ ಸಂತಸವಿರುತ್ತದೆ. ಗುರು 5ನೇ ಮನೆಯಲ್ಲಿ ಕುಳಿತು ಸಂತಾನವನ್ನು ಕೊಡುವನು. ವಿದೇಶ ಪ್ರಯಾಣಕ್ಕೆ ಬಹಳ ಅನುಕೂಲ. ಆಯನ, ಶಯನ ಭೋಗವಿರುತ್ತದೆ. ಸಹೋದರರಿಂದ ಹೆಚ್ಚು ಸಹಾಯ ದೊರೆಯುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಧಾರ್ಮಿಕ ಚಿಂತನೆಗಳು ಹೆಚ್ಚುತ್ತವೆ. ಶಾಸ್ತ್ರಾಭಿವೃದ್ಧಿಯಾಗುತ್ತದೆ, ಕುಟುಂಬದಲ್ಲಿ ಸಂತೋಷ ಇರುತ್ತದೆ. ಅದೃಷ್ಟ ಒದಗಿ ಬರುತ್ತದೆ. ಜೀವನ ಮತ್ತು ಮನಸ್ಸಿಗೆ ಬಲ ಇರುತ್ತದೆ. ಮಂತ್ರದೀಕ್ಷೆ ಆಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲವಿರುತ್ತದೆ. ಭಾಗ್ಯದ ಮೇಲೆ ದೃಷ್ಟಿ ಇದ್ದು, ಉದ್ಯೋಗ ವ್ಯಾಪಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ನೂತನ ವ್ಯಾಪಾರ ವ್ಯವಹಾರಗಳಿಂದ ಲಾಭವಿರುತ್ತದೆ. ಆರ್ಥಿಕ ಸದೃಢತೆ ಇರುತ್ತದೆ. ಉದ್ದಿಮೆದಾರರಿಗೆ ಹೆಚ್ಚು ಅನುಕೂಲ. ಅನಾರೋಗ್ಯದಿಂದ ವಿಮುಕ್ತಿ, ಆಸ್ತಿ ಖರೀದಿ ಮಾಡುವ ಯೋಗ, ಶನಿ ದ್ವಿತೀಯ ಭಾವದಲ್ಲಿದ್ದಾರೆ. ಹಾಗಾಗಿ ಧನಸಂಪತ್ತು, ಕುಟುಂಬ ಸೌಖ್ಯವಿರುತ್ತದೆ. ಹೆಚ್ಚಿನ ಗೌರವ ದೊರೆಯುತ್ತದೆ. ಇರುವ ಉದ್ಯೋಗವನ್ನು ಮುಂದುವರಿಸಿರಿ. ನಂತರ ಹೊಸ ಉದ್ಯೋಗಕ್ಕೆ ಪ್ರಯತ್ನಿಸಿರಿ. ಹೆಚ್ಚಿನ ಒಳಿತಿಗಾಗಿ ಆದಿತ್ಯ ಹೃದಯ ಪಠಣೆ ಮತ್ತು ಈಶ್ವರ, ಶನೇಶ್ಚರ ಧ್ಯಾನ ಮಾಡಿರಿ.

ಕುಂಭ ರಾಶಿ

ಸದ್ಯಕ್ಕೆ ಗುರುಬಲ ಶನಿ ಬಲ ಎರಡು ಸಹ ಇರುವುದಿಲ್ಲ. ಗುರು ದ್ವಿತೀಯ ಅಧಿಪತಿ ಮತ್ತು 11ನೇ ಅಧಿಪತಿ, ಈಗ ಮೇ 1ನೇ ತಾರೀಖಿನಿಂದ ಎಂಟನೇ ಮನೆ ಮತ್ತು ಹತ್ತನೇ ಮನೆಗೆ ದೃಷ್ಟಿ ಬರುತ್ತದೆ. ಇದರಿಂದ ಹಣಕಾಸಿನ ಅನುಕೂಲಗಳು ಸ್ವಲ್ಪ ಹೆಚ್ಚುತ್ತವೆ. ಹೊಸ ವ್ಯಾಪಾರದ ಆರಂಭ ಮತ್ತು ದೊಡ್ಡಮಟ್ಟದ ಹೂಡಿಕೆ ಖಂಡಿತ ಬೇಡ. ರಾಜಕೀಯದವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಸಿನಿಮಾದವರಿಗೆ ಸಹ ಅನುಕೂಲ. ಸ್ಥಿರಾಸ್ತಿ ಖರೀದಿ ಮಾಡುವ ಯೋಗವಿದೆ. ಉದ್ಯೋಗದಲ್ಲಿ ಬದಲಾವಣೆಯ ಸಾಧ್ಯತೆಗಳು ಕಾಣುತ್ತಿವೆ. ವಾಹನ ಸೌಖ್ಯದ ಯೋಗವಿದೆ. ಮಕ್ಕಳಿಂದ ನಿಮಗೆ ಗೌರವ ದೊರೆಯುತ್ತದೆ. ಹಿರಿಯ ಅಧಿಕಾರಿಗಳಿಗೆ ಉತ್ತಮ ಹೆಸರು ಲಭಿಸಿ ಇನ್ನೂ ಉನ್ನತ ಸ್ಥಾನಗಳು ದೊರೆಯಬಹುದು. ಪ್ರಯಾಣದಲ್ಲಿ ಅಮೂಲ್ಯ ವಸ್ತುಗಳು ಕಳವಾಗಬಹುದು. ವಿಶ್ವಕರ್ಮರಿಗೆ ಹೆಚ್ಚಿನ ಪ್ರಗತಿ ಇದೆ. ಬಲಿಷ್ಠವಾದ ರಾಶ್ಯಾಧಿಪತಿಯು ರಾಶಿಯಲ್ಲಿದ್ದರೆ ಬಹಳ ಒಳ್ಳೆಯದು. ಅವನೇ ರಾಶ್ಯಾಧಿಪತಿಯಾಗಿರುವುದರಿಂದ ಹೆಚ್ಚಿನ ಕೆಡುಕು ಇರುವುದಿಲ್ಲ.

ಇನ್ನೂ ಹೆಚ್ಚಿನ ಒಳಿತಿಗಾಗಿ ಶಿವ, ಸುಬ್ರಹ್ಮಣ್ಯ ಮತ್ತು ಆಂಜನೇಯ ಆರಾಧನೆ ಮಾಡಿರಿ.

ಮೀನ ರಾಶಿ

ಗುರು ಬಲ ಶನಿ ಬಲ ಇರುವುದಿಲ್ಲ. ಗುರುವೂ ಮೇಷ ರಾಶಿಯಲ್ಲಿ ಇರುವಾಗ ಧನ ವೃದ್ಧಿ ಇರುತ್ತದೆ. ಉದ್ಯೋಗದಲ್ಲಿ ಜಯವಿರುತ್ತದೆ, ಮಕ್ಕಳ ಬಗ್ಗೆ ಚಿಂತೆ ಹೆಚ್ಚಾಗುತ್ತದೆ. ಮೇ 1ನೇ ತಾರೀಖಿನ ನಂತರ ಗುರು ವೃಷಭ ರಾಶಿಗೆ ಬರುತ್ತಾನೆ. ಆಗ ಅನುಕೂಲಗಳು ಹೆಚ್ಚಾಗುತ್ತವೆ. ಸಾಲ–ಸೋಲದ ವ್ಯವಹಾರಗಳು ಖಂಡಿತ ಬೇಡ. ಸಾಲ ಕೊಟ್ಟಲ್ಲಿ ಮೋಸ ಹೋಗುವ ಸಾಧ್ಯತೆಗಳಿವೆ. ಒಡಹುಟ್ಟಿದವರಿಂದ ತೊಂದರೆ ಬರುವ ಸಾಧ್ಯತೆಗಳಿವೆ. ದಿಢೀರ್ ಧನ ಯೋಗವಿದೆ. ಕೆಲವರಿಂದ ಸಹಾಯಗಳು ದೊರೆಯುತ್ತವೆ. ಮೂರನೇ ಬಾರಿ ಸಾಡೇಸಾತಿ ಆಗಿರುವವರಿಗೆ ಶನಿಯು ಒಳಿತನ್ನು ಮಾಡುತ್ತಾನೆ. ವ್ಯಾಪಾರ ಮತ್ತು ವ್ಯವಹಾರಗಳು ಚೆನ್ನಾಗಿ ನಡೆಯುತ್ತವೆ. ಕಳೆದು ಹೋಗಿದ್ದ ವಸ್ತುಗಳು ಸಿಗುವ ಸಾಧ್ಯತೆಗಳಿವೆ. ಕೋರ್ಟ್– ಕಚೇರಿ ವ್ಯವಹಾರಗಳಲ್ಲಿ ನಿಧಾನಗತಿಯ ಜಯವಿರುತ್ತದೆ. ಧನ ನಷ್ಟ, ಸತ್ಕರ್ಮಗಳಿಗಾಗಿ ಹಣ ಖರ್ಚಾಗುತ್ತದೆ. ಸಜ್ಜನರ ಸಹವಾಸದಿಂದ ಅನುಕೂಲ. ಕುಟುಂಬದಲ್ಲಿ ಅಭಿವೃದ್ಧಿ ಇರುತ್ತದೆ. ಸುತ್ತಾಟಗಳು ಜಾಸ್ತಿ ಇರುತ್ತವೆ. ಇನ್ನೂ ಹೆಚ್ಚಿನ ಒಳಿತನ್ನು ಕಾಣಲು ಶನೇಶ್ಚರನಿಗೆ ತೈಲಾಭಿಷೇಕ, ಶನಿ ಧ್ಯಾನ ನರಸಿಂಹ ಧ್ಯಾನ ಮತ್ತು ಹಸಿದವರಿಗೆ ಊಟ ಕೊಡುವುದು ಉತ್ತಮ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಇಸ್ರೇಲ್ ಪ್ರಧಾನಿ** ಬೆಂಜಮಿನ್ ನೆತನ್ಯಾಹು ಅವರು ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿರುವ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಫೋಟೊವನ್ನು ಹಂಚಿಕೊಂಡ ಸಾವಿರಾರು ಜನರು, 'ಗೋ ಟು ಹೆಲ್' (ನರಕಕ್ಕೆ ಹೋಗು) ಎಂದು ಪೋಸ್ಟ್ ಮಾಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ಬೆಂಜಮಿನ್ ನೆತನ್ಯಾಹು** ಅವರು ಕಳೆದ ವಾರ ಹರ್ನಿಯಾ ಸಂಬಂಧಿಸಿದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಈ ಬಗ್ಗೆ ಇಸ್ರೇಲ್ ಪ್ರಧಾನಿಯವರ ಅಧಿಕೃತ 'ಎಕ್ಸ್' ಖಾತೆ ಮಾಹಿತಿ ನೀಡಿತ್ತು. ಆದರೆ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ರೀತಿಯ ಫೋಟೊವು ಪ್ರಧಾನಿ ಅವರ 'ಎಕ್ಸ್' ಖಾತೆಯಲ್ಲಿ ಇಲ್ಲ. ನಂತರ, ಕೃತಕ ಬುದ್ಧಿಮತ್ತೆ ಬಳಸಿ ಸೃಷ್ಟಿಸಲಾದ ಫೋಟೊಗಳನ್ನು ಪತ್ತೆ ಮಾಡುವ ತಂತ್ರಾಂಶವನ್ನು ಉಪಯೋಗಿಸಿ ಪರೀಕ್ಷಿಸಲಾಯಿತು. ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೋಟೊವು ಕೃತಕ ಬುದ್ಧಿಮತ್ತೆ ಬಳಸಿ ಸೃಷ್ಟಿಸಲಾದ ಫೋಟೊ ಎಂಬ ಫಲಿತಾಂಶ ಬಂದಿತು ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನುಡಿ ಬೆಳಗು

ಬಾಲ್ಯದಿಂದ ನಾವು ಕಲಿಯಬೇಕಾದ ಗುಣ



ಪಿ. ಚಂದ್ರಿಕಾ

ಆಲ್ಬರ್ಟ್ ಐನ್‌ಸ್ಟೀನ್ ಶಾಲೆಯಲ್ಲಿ ಒಳ್ಳೆಯ ವಿದ್ಯಾರ್ಥಿ ಎಂದು ಹೆಸರು ಪಡೆದಿದ್ದ. ಅವನು ಓದುತ್ತಿದ್ದ ಆ ಶಾಲೆಯನ್ನು ಕ್ಯಾಥೋಲಿಕ್ ಕ್ರಿಶ್ಚಿಯನ್ನರು ನಡೆಸುತ್ತಿದ್ದರು. ಅಲ್ಲಿ ಓದುವವರು ಹೆಚ್ಚಿನವರು ಅವರೇ ಆಗಿದ್ದರು. ಐನ್‌ಸ್ಟೀನ್ ಯಹೂದಿಯರ ಮನೆಯಲ್ಲಿ ಹುಟ್ಟಿದ್ದ. ಶಾಲೆಯಲ್ಲಿ ಕ್ರಿಸ್ತನ ವಿಷಯವನ್ನು ಪ್ರಸ್ತಾಪಿಸುವಾಗ ಯಹೂದಿಗಳು ಅವನನ್ನು ಶಿಲುಬೆಗೇರಿಸಿದ್ದನ್ನು ಅಭಿನಯಿಸಿ ತೋರಿಸುತ್ತಿದ್ದರೆ ಐನ್‌ಸ್ಟೀನ್‌ನ ಕಣ್ಣುಗಳು ತೇವಗೊಂಡಿದ್ದವು. ಅವನ ಸ್ನೇಹಿತರು, 'ನೀನಿವತ್ತು ಅಳುತ್ತಿದ್ದಿಯೆ, ಆದರೆ ಇದನ್ನು ಮಾಡಿದವರು ನಿಮ್ಮ ಯಹೂದ್ಯರೇ' ಎಂದಿದ್ದರು.

ಬಾಲಕನಿಗೆ ಅರ್ಥವಾಗದ ಮಾತೆಂದರೆ 'ನಿಮ್ಮವರು' ಎನ್ನುವುದು. ಮನೆಯಲ್ಲಿ ತಂದೆ ತಾಯಿಯರು ನಮ್ಮ ಮತ ಪರಮ ಪವಿತ್ರ, ಬೇರೆಯವರದ್ದು ನಮ್ಮಷ್ಟು ಅಲ್ಲ ಎಂದು ಹೇಳಿಕೊಡುವುದು ಸಹಜವಾದ್ದರಿಂದ ಎಂದೋ ನಡೆದ ದುಷ್ಕೃತ್ಯಕ್ಕೆ ಇಂದಿನವರು ನರಳುತ್ತಾರೆ. ಐನ್‌ಸ್ಟೀನ್‌ನ ವಿಷಯದಲ್ಲಿ ಆದದ್ದು ಅದೇ.

ಐನ್‌ಸ್ಟೀನ್ ಮನೆಗೆ ಬಂದವನೇ ತಾಯಿಯನ್ನು ಕೇಳಿದ, 'ಅಮ್ಮಾ ಎಲ್ಲರೂ ಹೇಳುತ್ತಿದ್ದಾರೆ ನಮ್ಮವರು ಯೇಸು ಕ್ರಿಸ್ತನನ್ನು ಮೊಳೆ ಜಡಿದು ಕೊಂದರಂತೆ ನಿಜವೇ?' ಎಂದು. ತಾಯಿಗೆ ಉತ್ತರಿಸಲಾಗಲಿಲ್ಲ, ಮಾತನ್ನು ಮರೆಸಲು ನೋಡುತ್ತಾಳೆ. ಆದರೆ ಬಾಲಕ ಐನ್‌ಸ್ಟೀನ್ ಬಿಕ್ಕುತ್ತಾ, 'ನನಗೆ ಕಬ್ಬಿಣದ ಚೂರೊಂದು ಸುಮ್ಮನೆ ತಾಕಿದರೆ ಎಷ್ಟು ನೋವಾಗುತ್ತೆ. ಅಂಥಾ ದೊಡ್ಡ ಮೊಳೆಗಳನ್ನು ಕೈಕಾಲಿಗೆ ಬಡಿದಾಗ ಪಾಪ ಯೇಸುವಿಗೆ ಎಂಥಾ ನೋವಾಗಿದ್ದೀತು ಎಂದು ಹೇಳಿಕೊಂಡಿದ್ದ. ಶಾಲೆಯಲ್ಲಿ ನಡೆದ ಘಟನೆ ಅವನ ಮನಸ್ಸನ್ನು ಆಳವಾದ ನೋವಿಗೆ ನೂಕಿತ್ತು. ಅವನ ಮನಸ್ಸಿನಲ್ಲಿನ ಆರದ ಗಾಯಕ್ಕೆ ಮದ್ದೆರೆಯುವಂತೆ ತಾಯಿ ಕಣ್ಣಲ್ಲಿ ನೀರು ತುಂಬಿ, 'ನಿನ್ನ ಮನಸ್ಸಿಗೆ ನೋವನ್ನಿಸಿತ್ತಲ್ಲ ಮಗೂ ಅದು ದೊಡ್ಡವರೆನ್ನಿಸಿಕೊಂಡ ಜನಕ್ಕೆ ಅನ್ನಿಸಿದ್ದರೆ ಯೇಸುವಿಗೆ ಮೊಳೆ ಹೊಡೆಯುತ್ತಿರಲಿಲ್ಲ. ಇತಿಹಾಸದಲ್ಲಿ ಒಂದು ಅಮಾನವೀಯ ಘಟನೆ ನಡೆಯುತ್ತಿರಲಿಲ್ಲ. ನೋವಿನ ಅರ್ಥ ಗೊತ್ತಾಗದವರು ಮಾತ್ರ ನೋವನ್ನು ಕೊಡುತ್ತಾರೆ' ಎಂದಿದ್ದಳು. ಆಗ ಪುಟ್ಟ ಐನ್‌ಸ್ಟೀನ್ ಹೇಳಿದ್ದ, 'ನಾನವತ್ತು ಅಲ್ಲಿ ಇರಬೇಕಿತ್ತು. ಅವರಿಗೆ ಸರಿಯಾಗಿ ಹೇಳುತ್ತಿದ್ದೆ' ಎಂದು.

ಸ್ವಲ್ಪ ದಿನಗಳ ಹಿಂದೆ ಬಾಲಮಂದಿರದ ಮಕ್ಕಳಿಗೆ ನಡೆದ ಕಥಾ ಕಮ್ಮಟದಲ್ಲಿ ಮಾತನಾಡಲು ಹೋಗಿದ್ದೆ. ನಾನು ಗಾಂಧಿಯಾಗಿದ್ದರೆ ಎನ್ನುವ ವಿಷಯ ಹಿಡಿದು ಐದರಿಂದ ಆರು ಸಾಲಲ್ಲಿ ಒಂದು ಕಥೆಯನ್ನು ಹೇಳಬೇಕು ಎನ್ನುವುದು ಅವತ್ತಿನ ಟಾಸ್ಕ್ ಆಗಿತ್ತು. ಹದಿಮೂರರ ಹುಡುಗಿ ಸಾತವ್ವ ಹೇಳಿದ ಕಥೆ, 'ನಾನು ಕಾಡಿನಲ್ಲಿ ಹೋಗ್ತಾ ಇದ್ದೆ. ಮುಳ್ಳೊಂದು ನನ್ನ ಕಾಲಿಗೆ ನಟ್ಟಿತು. ನೋವಾಯಿತು. ಆ ಮುಳ್ಳನ್ನು ತೆಗೆದು ಅದಕ್ಕೆ ಹೇಳಿದೆ ನನಗೆ ಚುಚ್ಚಿ ನೋವು ಮಾಡಿದ ಹಾಗೆ ಇನ್ನೊಬ್ಬರಿಗೆ ಮಾಡಬೇಡ' ಎಂದು. ಈ ಮಾತುಗಳನ್ನು ಕೇಳಿ ದಂಗಾದೆ. ನನ್ನ ಕಂಗಳು ತುಂಬಿಬಂದವು. ಮಕ್ಕಳ ತಿಳಿಮನಸ್ಸಿಗೆ ಮಾತ್ರ ನೋವು ಎಂದರೆ ಏನೆಂದು ಅರ್ಥವಾಗುತ್ತದೆ, ಮತ್ತು ಇನ್ನೊಬ್ಬರಿಗೆ ಆಗಬಹುದಾದ ನೋವಿನ ಅಂದಾಜೂ ಇರುತ್ತದೆ. ಅದಕ್ಕೆ ಅವರಲ್ಲಿ ಇನ್ನೊಬ್ಬರಿಗೆ ನೋವು ಕೊಡಬಾರದು ಎನ್ನುವ ತಿಳಿವಳಿಕೆ ಅಪ್ರಜ್ಞಾಪೂರ್ವಕವಾಗಿ ದಕ್ಕಿಬಿಡುತ್ತದೆ. ಬಾಲ್ಯವನ್ನು ಕಳೆದುಕೊಂಡ ನಾವು ಇದನ್ನು ರೂಢಿಸಿಕೊಂಡರೆ, ಮನುಷ್ಯರಾಗಿ ಬದುಕಲು ಇದಕ್ಕಿಂತ ದೊಡ್ಡ ಗುಣ ಯಾವುದೂ ಇಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಏಪ್ರಿಲ್ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಪ್ರತಿಪದ್ ಗಂ. 20-32 ನಕ್ಷತ್ರ: ರೇವತಿ ಗಂ. 07-32 ನಂತರ ಅಶ್ವಿನಿ ಗಂ. 29-07 ಯೋಗ: ವೈಧೃತಿ ಗಂ. 14-18 ಕರಣ: ಕಿಂಸ್ತುಘ್ನ ಗಂ. 10-09, ಮೀನ ಮಾಸದ 25 ನೇ ದಿನ, ಮಳೆನಕ್ಷತ್ರ: ರೇವತಿ 3. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-24 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 29 ರಂಜಾನ್,
ದಿನ ವಿಶೇಷ : ಯುಗಾದಿ, ವಸಂತ ನವರಾತ್ರಾರಂಭ
ಅದೃಷ್ಟ ಸಂಖ್ಯೆ : 7, 1

ಮೇಷ: ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ ಮೇಲಧಿಕಾರಿಗಳು ಒಪ್ಪಿಕೊಳ್ಳುವರು. ಗದ್ದೆ ಅಥವಾ ತೋಟದ ಕೆಲಸಗಳಿಗೆ ಮಗನಿಂದ ದೈಹಿಕ ಮತ್ತು ಆರ್ಥಿಕ ಸಹಾಯ ಸಿಗುವುದು. ರುಚಿಯಾದ ಭರ್ಜರಿ ಊಟ ಸವಿಯುವಿರಿ.

ವೃಷಭ: ಹಿರಿಯರ ಆಶೀರ್ವಾದದೊಂದಿಗೆ ಕಾರ್ಯವನ್ನು ಆರಂಭಿಸಿ. ಒಳ್ಳೆಯದಾಗುತ್ತದೆ. ಸಮಸ್ಯೆಗಳನ್ನು ಶೀಘ್ರವಾಗಿ ಬಗೆ ಹರಿಸಿಕೊಳ್ಳಲು ಪ್ರಯತ್ನಿಸುವಿರಿ. ಸ್ವ ಉದ್ಯೋಗಿಗಳಿಗೆ ಪರಿಶ್ರಮದಿಂದ ಅಧಿಕ ಸಂಪಾದನೆ ಇರುವುದು.

ಮಿಥುನ: ಪೂರ್ವ ಆಲೋಚನೆಯ ಕೌಟುಂಬಿಕ ಅಭಿವೃದ್ಧಿಯ ಕೆಲಸಗಳು ಮಂದಗತಿಯಲ್ಲಿ ಸಾಗಲಿದೆ. ಮಂಗಳ ಕಾರ್ಯಗಳು ಸುಗಮವಾಗಿ ನಡೆಯಲೆಂದು ಮನೆ ದೇವರಿಗೆ ಪೂಜೆ ಸಲ್ಲಿಸುವ ಬಗ್ಗೆ ವಿಚಾರ ಮಾಡಿ.

ಕರ್ಕಾಟಕ: ಉದ್ಯೋಗದಲ್ಲಿ ಬದಲಾವಣೆಯ ಸಂಭವವಿದೆ. ಆರ್ಥಿಕ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯುವುದು. ದುರ್ಗಾದೇವಿಯಲ್ಲಿ ಶರಣಾಗುವುದರಿಂದ ಸಂತೋಷ ಪ್ರಾಪ್ತಿ.

ಸಿಂಹ: ಮಗನಿಗೆ ಸಂಸ್ಥೆಯಿಂದ ವಿದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನೆರವು ಸಿಗುವುದು. ಖಾಸಗಿ ಗುಮಾಸ್ತ ಕೆಲಸದಲ್ಲಿದ್ದವರಿಗೆ ಬೇಜವಾಬ್ದಾರಿತನ ತೋರಿದಲ್ಲಿ ಪೂರ್ಣ ವಿರಾಮ ಸಿಗುವಂತಾಗಲಿದೆ.

ಕನ್ಯಾ: ಬಾಕಿ ಇರುವ ಕೆಲಸಗಳನ್ನು ಆದಷ್ಟು ಬೇಗ ಪೂರ್ತಿಗೊಳಿಸುವುದಕ್ಕೆ ಸಹೋದ್ಯೋಗಿ ನೆರವಾಗುವರು. ಕಾರ್ಯಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿವೆ.

ತುಲಾ: ಪೊಲೀಸ್ ವೃತ್ತಿಯಲ್ಲಿರುವವರಿಗೆ ಮಹತ್ವದ ಕಾರ್ಯಾಚರಣೆಗಾಗಿ ದೂರ ಸಂಚಾರ ಕಂಡುಬರಲಿದೆ. ಧೈರ್ಯದಿಂದ ಮತ್ತು ಅಧಿಕ ಪ್ರಯತ್ನ ಬಲದಿಂದ ಕಾರ್ಯದಲ್ಲಿ ಮುನ್ನುಗ್ಗಿ. ಮಕ್ಕಳ ವಿದ್ಯಾಭ್ಯಾಸ ಉತ್ತಮವಾಗಿರುತ್ತದೆ.

ವೃಶ್ಚಿಕ: ಜನರ ಜೊತೆ ನಗು-ನಗುತ್ತಾ ಬೆರೆಯುವ ನಿಮ್ಮ ವರ್ತನೆಯಿಂದ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗುತ್ತೀರಿ. ನಿಜ ಮಾರ್ಗದಿಂದ ಕಾರ್ಯಪ್ರವೃತ್ತರಾದಲ್ಲಿ ಹೆಚ್ಚಿನ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ಧನು: ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ನಿಮಗೆ ಬಂದಿದೆ. ಆದರೂ ಮುನ್ನೆಚ್ಚರಿಕೆ ಅಗತ್ಯ. ಆಡಿಟಿಂಗ್ ಕೆಲಸಗಳಿಂದ ಹೆಚ್ಚಿನ ವರಮಾನ ಗಳಿಸುವಿರಿ. ಇತರರ ಮಾತಿಗೆ ಕಿವಿಗೊಡದೆ ಇರುವುದು ಉತ್ತಮವಾಗಿರುತ್ತದೆ.

ಮಕರ: ಅನಗತ್ಯವಾಗಿ ಮಾಡುತ್ತಿರುವಂಥ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಅಮೂಲ್ಯವಾದ ವಸ್ತುವೊಂದನ್ನು ಉಡುಗೊರೆಯಾಗಿ ಪಡೆಯಲಿದ್ದೀರಿ

ಕುಂಭ: ಸ್ನೇಹಿತರು ಹಾಗೂ ಹಿತಚಿಂತಕರು ನಿಮ್ಮ ಸಹಾಯಕ್ಕೆ ಎಂದಿಗೂ ಇರುವರೆಂಬ ನಂಬಿಕೆ ಬರುವುದು. ವರ್ಗಾವಣೆಗಾಗಿ ಮಾಡಿದ ಭಾರಿ ಪ್ರಯತ್ನ ವ್ಯರ್ಥವಾಗುವ ಸಂಭವವಿದೆ. ಹುಟ್ಟೂರಿನಿಂದ ಶುಭ ಸುದ್ದಿಯನ್ನು ಕೇಳುವಿರಿ.

ಮೀನ: ಮೇಲಧಿಕಾರಿಗಳಲ್ಲಿ ವೇತನದ ಬಗ್ಗೆ ನಿಮ್ಮ ಮನೋಭಿಲಾಷೆಗಳನ್ನು ವ್ಯಕ್ತ ಪಡಿಸಲು ಹಿಂಜರಿಯಬೇಡಿ. ಪುಸ್ತಕ ಮುದ್ರಣಾಲಯದವರಿಗೆ ಅಥವಾ ಪುಸ್ತಕದ ವ್ಯಾಪಾರಿಗಳಿಗೆ ಒಳ್ಳೆಯ ಲಾಭವಾಗುವ ಸಂಭವವಿದೆ.

ಪದಬಂಧ 5646

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಊಟ ಮಾಡದಿರುವುದು (4)
3. ಮದವಣಗಿತ್ತಿ ಹಚ್ಚಿಕೊಂಡಿರುವ ಮೆಹೆಂದಿ (4)
5. ಒಣಗಿದ ಸಣ್ಣ ಕಟ್ಟಿಗೆ ಮೊದಲಾದ ಉರುವಲು (3)
6. ಖಗದ ಹತ್ತಿರ ಕಾಡುಕೋಣ ನಿಂತಿದೆಯಲ್ಲಾ! (4)
7. ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲು ಭೂಮಿ (7)
10. ಅಂಗೈಯಿಂದ ಕೆನ್ನೆಗೆ ಕೊಡುವ ಏಟು (4)
11. ಜನ ಹಚ್ಚಿಕೊಂಡಿರುವ ಕಾಡಿಗೆ (3)
14. ಅದೃಷ್ಟಹೀನ ವ್ಯಕ್ತಿ (4)
15. ಸುವಾಸನೆ ಇಲ್ಲಿ ಹರಡಿದೆ (4)

ಮೇಲಿಂದ ಕೆಳಕ್ಕೆ
1. ಕುಯುಕ್ತಿಯಿಂದ ಹೇಳಿದ ಮಾತು! (2)
2. ವಾರದೊಳಗೆ ಬಂದಿರುವ ಕಪಿ (3)
4. ಗಿಡದ ಹತ್ತಿರವಿರುವ ಡೇಗೆ (3)
5. ಅಡುಗೆಗೆ ಬಳಸುವ ಸುವಾಸಿತ ಸೊಪ್ಪು (3)
6. ಖನಿಯಲ್ಲಿ ಸಿಕ್ಕಿದುದು (3)
8. ಆವರಣ ಅಥವಾ ತೆರೆ ಎಂದರೂ ಸರಿ (3)
9. ಜ್ಯೋತಿಶ್ಚಕ್ರದ ರಾಶಿಯಲ್ಲಿನ ಜೋಡಿ (3)
10. ಒಂದೇ ವಿಷಯದಲ್ಲಿ ಆಸಕ್ತನಾದವನು (3)
12. ಕೂಡಲೇ ಆಗಬೇಕಾದುದು (3)
13. ಸಂಪುಟದಲ್ಲಿ ನಡೆದ ಮುಷ್ಕರ! (2)



5645ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಅನುಭವಿ 3. ದಿಗ್ಬಂಧನ 5. ಪ್ರಕಟ 7. ರಸ 9. ಮಂಕ 10. ಉಮೇದು 11. ಧನ 12. ನೆಪ 14. ವಾರಸು 16. ಯಮಸುತ 17. ರತ್ನಾಕರ

ಮೇಲಿಂದ ಕೆಳಕ್ಕೆ: 1. ಅಸುರ 2. ವಿಪ್ರ 3. ದಿಟ 4. ನಡುಕ 6. ಕಲಸುಮೇಲೋಗರ 8. ಸಮಕಾಲೀನ 9. ಮಂತ್ರಾಲೋಚನೆ 11. ಧನಿಯ 13. ಪತ್ತಾರ 1 4. ವಾತ 15. ಸುರ

ಸುಡೊಕು 6031

			3		8		2	4
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	7

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6030 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ಪ್ರಜಾ ಮತ

2024 ಜನತಂತ್ರದ ಹಬ್ಬ

ಮತ ಪತ್ರ



ಕಾಂಗ್ರೆಸ್ ವಿರುದ್ಧದ ಸಿಟ್ಟು 'ಮೈತ್ರಿ'ಗೆ ವರ

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡು ಕಣಕ್ಕಿಳಿದಿವೆ. ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಮುಗಿ ಬೀಳುತ್ತಿವೆ. ಮೈತ್ರಿಯ ಅಗತ್ಯವಿತ್ತೇ, ಮುಂದುವರಿಯುತ್ತದೆಯೇ, ಕಾರ್ಯತಂತ್ರವೇನು ಎಂಬಿತ್ಯಾದಿ ವಿಷಯಗಳ ಕುರಿತು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಅವರು 'ಪ್ರಜಾವಾಣಿ' ಜತೆ ಮಾತನಾಡಿದ್ದಾರೆ.

• ಎಂ. ಮಹೇಶ

• ಬಿಜೆಪಿ–ಜೆಡಿಎಸ್ ಮೈತ್ರಿ ಅಗತ್ಯವಿತ್ತೆ?

ರಾಜ್ಯದಲ್ಲಿ ಜೆಡಿಎಸ್ ಗಟ್ಟಿಯಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಉತ್ತಮ ಪ್ರತಿಕ್ರಿಯೆಯೇ ಸಿಕ್ಕಿದೆ. ಆದರೆ, ದೇಶದ ಭವಿಷ್ಯದ ದೃಷ್ಟಿಯಿಂದ ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಬೇಕು, ಅದಕ್ಕಾಗಿ ಕೈಜೋಡಿಸಬೇಕು ಎಂಬ ಪಕ್ಷದ ವರಿಷ್ಠ ದೇವೇಗೌಡರ ಅಭಿಲಾಷೆಯಂತೆ ಒಂದಾಗಿದ್ದೇವೆ. ದೇಶದಲ್ಲಿ ಸುಭದ್ರತೆ, ಶಾಂತಿ ಕಾಪಾಡಿಕೊಂಡಿರುವ ಮೋದಿ, ಅಭಿವೃದ್ಧಿಯನ್ನೂ ಮಾಡುತ್ತಿದ್ದಾರೆ. ನೆರೆಯ ದೇಶಗಳಲ್ಲಿ ನೆಮ್ಮದಿಯ ವಾತಾವರಣವಿಲ್ಲ. ಅಲ್ಪಸಂಖ್ಯಾತರು ಕೂಡ ನಮ್ಮಲ್ಲಿ ನೆಮ್ಮದಿಯಿಂದ ಇದ್ದಾರೆ. ಇದು ಮುಂದುವರಿಯಲು ಎರಡೂ ಪಕ್ಷಗಳೂ ಒಂದಾಗಬೇಕು ಎಂಬ ಭಾವನೆ ಜನರಲ್ಲೂ ಇತ್ತು. ಅದರಂತೆ ನಡೆದುಕೊಂಡಿದ್ದೇವೆ. ಕಾಂಗ್ರೆಸ್‌ನಿಂದ ರಾಜ್ಯದ ಅಭಿವೃದ್ಧಿ ಆಗುತ್ತಿಲ್ಲ, ಬದಲಿಗೆ ತುಂಬಾ ಹಿಂದಕ್ಕೆ ಹೋಗುತ್ತಿದೆ. ಹೀಗಾಗಿ ಕಾಂಗ್ರೆಸ್ ಸರ್ಕಾರ ತೆಗೆಯಬೇಕಿದ್ದು ಅದಕ್ಕಾಗಿ ಒಗ್ಗೂಡಿದ್ದೇವೆ.

• ಕೆಲವೇ ಕ್ಷೇತ್ರಗಳನ್ನು ಪಡೆದುಕೊಳ್ಳಲು ಬಿಜೆಪಿ ಸಖ್ಯ ಬೇಕಿತ್ತೇ?

ಜೆಡಿಎಸ್‌ನವರು ಗೆಲ್ಲುವುದಷ್ಟೆ ಮುಖ್ಯವಲ್ಲ. 28 ಕ್ಷೇತ್ರಗಳಲ್ಲೂ ಮೈತ್ರಿಕೂಟದ ಅಭ್ಯರ್ಥಿಗಳು ಗೆಲ್ಲಬೇಕು ಎನ್ನುವುದು ನಮ್ಮ ಉದ್ದೇಶ. ನಮ್ಮ ಪಕ್ಷವೂ ಉಳಿಯಬೇಕು. ಬಿಜೆಪಿಯೂ ಉಳಿಯಬೇಕು. ಇದಕ್ಕಾಗಿ ಸಖ್ಯ.

• ಒಂದು ಕಾಲದಲ್ಲಿ ಟೀಕಿಸುತ್ತಿದ್ದವರ ಜೊತೆಗೇ ಹೋಗಿ ಮತ ಕೇಳಲು ಮುಜುಗರವಿಲ್ಲವೇ?

ಚುನಾವಣಾ ರಾಜಕಾರಣದಲ್ಲಿ ಬದಲಾವಣೆಗಳು ಸಹಜ. ಕಾಂಗ್ರೆಸ್‌ನವರು ಯಾರೊಂದಿಗೂ ಹೊಂದಾಣಿಕೆ ಮಾಡಿಕೊಂಡಿಲ್ಲವೇ? ದೇಶದ ಭವಿಷ್ಯಕ್ಕಾಗಿ ನಾವು ಒಂದಾಗಿದ್ದೇವೆ. ಟೀಕೆಗಳು ಸಹಜ. ಕಾಂಗ್ರೆಸ್ ಸರ್ಕಾರದ ನಡೆಯು ಅಭಿವೃದ್ಧಿಗೆ ಪೂರಕ ಆಗಿಲ್ಲವಾದ್ದರಿಂದ ಮುಜುಗರವನ್ನೆಲ್ಲ ಮರೆತು ಒಂದಾಗಿದ್ದೇವೆ.

ಪ್ರಜಾವಾಣಿ ಸಂದರ್ಶನ

ಜಿ.ಟಿ.ದೇವೇಗೌಡ, ಶಾಸಕ

• ಈ ಮೈತ್ರಿ ತಾತ್ಕಾಲಿಕವೋ, ಮುಂದುವರಿಯುತ್ತದೆಯೋ?

ಮೈತ್ರಿ ಗಟ್ಟಿ ಇದೆ. ಮುಂದೆಯೂ ಒಟ್ಟಾಗಿ ಹೋಗುತ್ತದೆ. ಮುಂಬರುವ ಎಲ್ಲ ಚುನಾವಣೆಗಳಲ್ಲೂ ಹೊಂದಾಣಿಕೆ ಮುಂದುವರೆಯಲಿದೆ.

• ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸವಾಲನ್ನು ಅವರ ತವರಿನಲ್ಲೇ ಮೆಟ್ಟಿ ನಿಲ್ಲಲು ಮೈತ್ರಿಕೂಟ ಯಶಸ್ವಿಯಾಗುವುದೇ?

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಳೆದ ಎರಡು ಚುನಾವಣೆಯಲ್ಲೂ ಬಿಜೆಪಿಯೇ ಗೆದ್ದಿದೆ. ಸಿದ್ದರಾಮಯ್ಯ ಅವರಿಗೆ ಮುಖಭಂಗ ಮಾಡಬೇಕು ಎಂಬ ಪ್ರಶ್ನೆ ಇಲ್ಲ. ಎರಡೂ ಪಕ್ಷಗಳ ಕಾರ್ಯಕರ್ತರು ಮೈತ್ರಿಕೂಟದ ಯದುವೀರ್ ಗೆಲುವಿಗೆ ಶ್ರಮಿಸಲಿದ್ದೇವೆ.

• ಮೈಸೂರಿನಲ್ಲಿ ಸಿಎಂ, ಡಿಸಿಎಂ ಒಕ್ಕಲಿಗ ಅಸ್ತ್ರ ಬಳಸುತ್ತಿದ್ದಾರಲ್ಲಾ?

ಒಕ್ಕಲಿಗ ಸಮಾಜದ ಮೇಲೆ ಸಿದ್ದರಾಮಯ್ಯ ಅವರಿಗೆ ಎಷ್ಟು ಪ್ರೀತಿ ಇದೆ ಎಂಬುದನ್ನು ಈ ರಾಜ್ಯದ ಜನರು ನೋಡಿದ್ದಾರೆ. ಚುನಾವಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯು ಪ್ರೀತಿಯ ಮಾತನಾಡುತ್ತಿದ್ದಾರೆ. ಈ ಸಮಾಜ ತಮ್ಮನ್ನು ನಂಬುವುದಿಲ್ಲ ಎನ್ನುವುದು ಅವರಿಗೂ ಗೊತ್ತು. ಒಕ್ಕಲಿಗರು ಎಂದಿಗೂ ಜಾತಿವಾದಿಗಳಲ್ಲ.

• ಸಿದ್ದರಾಮಯ್ಯ ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ಪದೇ ಪದೇ ಹೇಳುತ್ತಿದ್ದೀರಲ್ಲಾ?

ಕಾಂಗ್ರೆಸ್ ಅಭ್ಯರ್ಥಿಗೆ ಲೀಡ್ ಬಂದರೆ ನನ್ನನ್ನು ಯಾರೂ ಮುಟ್ಟಕ್ಕಾಗಲ್ಲ ಎಂದು ಮುಖ್ಯಮಂತ್ರಿಯು ಸ್ವಕ್ಷೇತ್ರ ವರುಣದಲ್ಲೇ ಹೇಳಿದ್ದಾರೆ. ಇದರ ಅರ್ಥವೇನು? ಮುಖ್ಯಮಂತ್ರಿ ಸ್ಥಾನ ಕಳೆದುಕೊಳ್ಳುವ ಭೀತಿ ಅವರಲ್ಲೇ ಇದೆ. ಅಧಿಕಾರದಿಂದ ಇಳಿಸುವ ಪ್ರಯತ್ನವನ್ನು ನಾವು ಮಾಡುವುದಿಲ್ಲ. ಅವರಲ್ಲೇ ಕಿತ್ತಾಟ ನಡೆಯುತ್ತಿದೆ. ಅದೇ ಈ ಸರ್ಕಾರಕ್ಕೆ ಮುಳುವಾಗಲಿದೆ.

• ಲೋಕಸಭೆ ಚುನಾವಣೆ ನಂತರ ರಾಜ್ಯ ಸರ್ಕಾರದ ಸ್ಥಿತಿ ಏನಾಗಲಿದೆ?

ಅವರ ಭಾರದಿಂದಲೇ ಸರ್ಕಾರ ಕುಸಿಯಲಿದೆ. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಕಳಪೆ ಸಾಧನೆ ಮಾಡಿದರೆ ಮುಖ್ಯಮಂತ್ರಿ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಬೇಕಲ್ಲವೇ? ಮುಂದೆ ಈ ಸರ್ಕಾರದ ಸ್ಥಿತಿ ತುಂಬಾ ಗಂಭೀರವಾಗಲಿದೆ.

• ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಕಾರ್ಯತಂತ್ರವೇನು?

ಗೆಲ್ಲುವುದೇ ಎರಡೂ ಪಕ್ಷದವರ ಕಾರ್ಯಸೂಚಿ ಆಗಿದೆ. ಎರಡೂ ಪಕ್ಷಗಳ ನಾಯಕರೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿರುವುದು ರಾಜ್ಯದ ರಾಜಕಾರಣದ ಇತಿಹಾಸದಲ್ಲೇ ಇದು ಮೊದಲು. ಸಮನ್ವಯದಿಂದ ಹೋಗುತ್ತಿದ್ದೇವೆ.

• ಮೈತ್ರಿಕೂಟದ ಪರಸ್ಪರ ಸಹಕಾರ ತೃಪ್ತಿಕರವಾಗಿದೆಯೇ?

ಶೇ 100ರಷ್ಟು ತೃಪ್ತಿ ಇದೆ. ಎರಡೂ ಪಕ್ಷದವರಲ್ಲೂ ನಂಬಿಕೆ–ವಿಶ್ವಾಸ ಬಂದಿದೆ. ಒಟ್ಟಾಗಿ ಹೋಗುತ್ತಿದ್ದೇವೆ.

• ನಾಯಕರು ಒಂದಾಗುತ್ತೀರಿ, ಕಾರ್ಯಕರ್ತರು ಪ್ರಚಾರದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿಲ್ಲವಲ್ಲ.

ಎಲ್ಲರೂ ಒಂದಾಗಿದ್ದೇವೆ. ನಾಮಪತ್ರ ಪರಿಶೀಲನೆ ಪ್ರಕ್ರಿಯೆ ಮುಗಿದಿದೆ. ಎರಡೂ ಪಕ್ಷಗಳ ಶಕ್ತಿ ಪ್ರದರ್ಶನ ಏ.10ರಿಂದ ಗೊತ್ತಾಗಲಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರಲ್ಲಿರುವ ಆಕ್ರೋಶ ನಮಗೆ ವರವಾಗಲಿದೆ.

• ಜೆಡಿಎಸ್ ಎಲ್ಲಿದೆ ಎಂದು ಸಿಎಂ, ಡಿಸಿಎಂ ಕೇಳುತ್ತಿದ್ದಾರಲ್ಲಾ?

ಜೆಡಿಎಸ್ ಶಾಸಕರೆಲ್ಲ ಕಾಂಗ್ರೆಸ್‌ಗೆ ಬರುತ್ತಾರೆ ಎಂದು ಕಾಂಗ್ರೆಸ್‌ನವರು ಸರ್ಕಾರ ರಚನೆಯಾದ ಆರಂಭದಲ್ಲಿ ಹೇಳುತ್ತಿದ್ದರು. ಅದು ನಡೆಯಿತೇ? ಪಕ್ಷಕ್ಕೆ ನೆಲೆ ಇರುವ ಕಾರಣದಿಂದಲೇ ಎಲ್ಲರೂ ನಮ್ಮಲ್ಲೇ ಉಳಿದಿದ್ದಾರೆ. ಗಟ್ಟಿಯಾದ ತಳಹದಿಯ ಪಕ್ಷವಿದು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಬಿಟ್ಟು ಬಂದು ಪ್ರಾದೇಶಿಕ ಪಕ್ಷ ಕಟ್ಟಿ 10 ಮಂದಿಯನ್ನು ಗೆಲ್ಲಿಸಿಕೊಳ್ಳಲಿ ನೋಡೋಣ. ಜೆಡಿಎಸ್ ಜನರ ಮನಸ್ಸಿನಲ್ಲಿದೆ. ಫಲಿತಾಂಶವೇ ಎಲ್ಲದಕ್ಕೂ ಉತ್ತರ ಕೊಡಲಿದೆ.

• ಎಚ್.ಡಿ. ದೇವೇಗೌಡರ ಅಳಿಯ ಡಾ.ಸಿ.ಎನ್. ಮಂಜುನಾಥ್ ಅವರನ್ನೇಕೆ ಜೆಡಿಎಸ್‌ನಿಂದ ಕಣಕ್ಕಿಳಿಸಲಿಲ್ಲ?

ಮಂಜುನಾಥ್ ಅವರ ಸಾಧನೆಯ ಅರಿವಿದ್ದರಿಂದಲೇ ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರೇ ಇಷ್ಟಪಟ್ಟು ಬಿಜೆಪಿಯಿಂದ ಕಣಕ್ಕಿಳಿಸಿದ್ದಾರೆ. ಕಾಂಗ್ರೆಸ್‌ನವರ ಟೀಕೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ.

ಮತ ಆಮಿಷ: ಆಯೋಗದ ವಶ

₹44.09 ಕೋಟಿ ನಗದು

ಉಚಿತ ಉಡುಗೊರೆ	₹79.36 ಕೋಟಿ
ಮದ್ಯ	₹143.79 ಕೋಟಿ (1.39 ಕೋಟಿ ಲೀ)
ಮಾದಕವಸ್ತು	₹9.54 ಕೋಟಿ (339 ಕೆ.ಜಿ.)
ಚಿನ್ನ	₹10.56 ಕೋಟಿ (19 ಕೆ.ಜಿ.)
ಬೆಳ್ಳಿ	₹69.23 ಲಕ್ಷ (230 ಕೆ.ಜಿ.)

ಎಂಥಾ ಮಾತು!

ಅಮ್ಮಾ ನೀವೇ ಬೆಳಗಾವಿಯವರಲ್ಲ. ನೀವು ಖಾನಾಪುರ ತಾಲ್ಲೂಕಿನ ಹಟ್ಟಿಹೊಳಿಯವರು. ಇದು ಉತ್ತರ ಕನ್ನಡ ಲೋಕಸಭೆ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆದರೆ, ಬೆಳಗಾವಿ ಗ್ರಾಮೀಣ ಕ್ಷೇತ್ರಕ್ಕೆ ಬಂದು ಶಾಸಕಿಯಾಗಿದ್ದೀರಿ. ಹೀಗಿದ್ದರೂ ಬೆಳಗಾವಿ ಜನ ನಿಮ್ಮನ್ನು ಪ್ರಶ್ನಿಸಿಲ್ಲ. ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಸಿದ್ದರಾಮಯ್ಯ ಇವರೆಲ್ಲ ಬೇರೆ ಬೇರೆ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದಾರೆ. ಬೆಳಗಾವಿ ಅಷ್ಟೇ ಅಲ್ಲ, ಶೆಟ್ಟರ್ ಅವರಿಗೆ ದೇಶದಲ್ಲಿ ಎಲ್ಲಿಯಾದರೂ ಸ್ಪರ್ಧಿಸುವ ಹಕ್ಕು ಇದೆ

ಮುರುಗೇಶ ನಿರಾಣಿ, ಉಪಾಧ್ಯಕ್ಷ, ಬಿಜೆಪಿ ರಾಜ್ಯ ಘಟಕ
(ಜಗದೀಶ ಶೆಟ್ಟರ್ ಹೊರಗಿನವರು ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಮೊದಲ ಮತದ ಸಂಭ್ರಮ

ರಕ್ಷಿತ್ ಎಚ್.ಎಂ., ಪೀಣ್ಯ ಬೆಂಗಳೂರು

ಮತದಾನ ಪ್ರಕ್ರಿಯೆ ಹೇಗಿರುತ್ತದೆ ಎಂಬ ಕುತೂಹಲ ಹೆಚ್ಚಿದೆ. ಮತದಾನ ಪ್ರಕ್ರಿಯೆ ಹೇಗೆ ಇರುತ್ತದೆ ಎಂಬುದನ್ನು ಯೂಟ್ಯೂಬ್‌ನಲ್ಲಿ ನೋಡಿದ್ದೇನೆ. ಮತದಾನದ ಸಂದರ್ಭದಲ್ಲಿ ನನಗೇನಾದರೂ ಗೊಂದಲಗಳಾದರೆ, ಮತಗಟ್ಟೆ ಸಿಬ್ಬಂದಿಗಳ ಸಹಾಯ ಪಡೆದುಕೊಳ್ಳುತ್ತೇನೆ. ಮತದಾನಕ್ಕೆ ಹೋಗುವ ಮೊದಲು, ನನ್ನ ಮತಕ್ಷೇತ್ರದ ಅಭ್ಯರ್ಥಿಗಳ ಸಾಮರ್ಥ್ಯ, ಸಾಮಾಜಿಕ ಕಳಕಳಿಗಳ ಬಗ್ಗೆ ತಿಳಿದುಕೊಂಡು ಎಚ್ಚರದಿಂದ ಮತ ಚಲಾಯಿಸುವ ಬಗ್ಗೆ ಕಾತರದಿಂದ ಕಾಯುತ್ತಿದ್ದೇನೆ

ಅಮಿತ್ ಶಾ ಮಾತಿಗೆ ಬೆಚ್ಚಿದ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದಲ್ಲಿ ಬಂಡಾಯ, ಭಿನ್ನಮತ ತಣ್ಣಗಾದಂತೆ ಕಂಡರೂ, ಸಮಸ್ಯೆ ಇನ್ನೂ ಬೂದಿ ಮುಚ್ಚಿದ ಕೆಂಡದಂತಿರುವುದು ಕೇಂದ್ರ ಗೃಹ ಸಚಿವ ಅಮಿತ್ ಶಾ ವರ ಗಮನಕ್ಕೆ ಬಂದಿದ್ದು, ಇತ್ತೀಚಿನ ಬೆಂಗಳೂರು ಭೇಟಿ ವೇಳೆ ಪಕ್ಷದ ಪ್ರಮುಖ ನಾಯಕರನ್ನು ಈ ವಿಚಾರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಬಂಡಾಯ ಮತ್ತು ಭಿನ್ನಮತವನ್ನು ತಕ್ಷಣವೇ ಶಮನಗೊಳಿಸಬೇಕು. ಪಕ್ಷಕ್ಕೆ ಹೊಡೆತ ಕೊಡುವ ರೀತಿಯಲ್ಲಿ ವರ್ತಿಸುತ್ತಿರುವ ಕೆಲವು ನಾಯಕರನ್ನು ಸ್ವಕ್ಷೇತ್ರಗಳನ್ನು ಬಿಟ್ಟು ಬೇರೆ ಕ್ಷೇತ್ರಗಳಿಗೆ ಪ್ರಚಾರಕ್ಕೆ ಕಳುಹಿಸಬೇಕು ಎಂಬ ಖಡಕ್ ಸೂಚನೆಯ ಬೆನ್ನಲ್ಲೇ ಹಲವರಿಗೆ ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡಲು ನಿರ್ದೇಶನ ನೀಡಲಾಗಿದೆ.

ಶಾ ಅವರ ಕಣ್ಣಿಗೆ ಬಿದ್ದವರ ಪೈಕಿ ಮೈಸೂರಿನ ಸಂಸದ ಪ್ರತಾಪ್ ಸಿಂಹ, ಹಾಸನದ ಮಾಜಿ ಶಾಸಕ ಪ್ರೀತಂಗೌಡ ಪ್ರಮುಖರು. ಪ್ರೀತಂಗೌಡ ಅವರಿಗೆ ಚಾಮರಾಜನಗರ ಕ್ಷೇತ್ರದ ಉಸ್ತುವಾರಿಯನ್ನೂ, ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಗೆ ಚಿಕ್ಕಮಗಳೂರು ಕ್ಷೇತ್ರದ ಉಸ್ತುವಾರಿಯನ್ನೂ ನೀಡಲಾಗಿದೆ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರನ್ನು 'ಸ್ಟಾರ್ ಪ್ರಚಾರಕ'ರನ್ನಾಗಿ ಮಾಡಿರುವುದರಿಂದ ಬೆಂಗಳೂರು ಗ್ರಾಮಾಂತರಕ್ಕೆ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರನ್ನು ನೇಮಿಸಲಾಗಿದೆ.

ಅಮಿತ್ ಶಾ ಇತ್ತೀಚೆಗೆ ಬೆಂಗಳೂರಿಗೆ ಬಂದಾಗ ಬಂಡಾಯದ ವಿಷಯವನ್ನೇ ಮುಂದಿಟ್ಟುಕೊಂಡು ಪ್ರಮುಖ ನಾಯಕರನ್ನು ತರಾಟೆಗೆ ತೆಗೆದುಕೊಂಡರು. ಅವರ ಬಳಿ ಪ್ರತಿಯೊಂದು ಲೋಕಸಭಾ ಕ್ಷೇತ್ರದ ಸಂಪೂರ್ಣ ಮಾಹಿತಿ ಇತ್ತು. 'ರಾಜ್ಯದ ಉದ್ದಗಲಕ್ಕೂ ಬಂಡಾಯ, ಭಿನ್ನಮತ ತಾರಕಕ್ಕೆ ಏರಿದ್ದರೂ ಸುಮ್ಮನೇ ಏಕೆ ಇದ್ದೀರಿ? ಒಂದು ವೇಳೆ ಕಡಿಮೆ ಸ್ಥಾನಗಳು ಬಂದರೆ ಸುಮ್ಮನಿರುವುದಿಲ್ಲ. ತಕ್ಷಣವೇ ಬಂಡಾಯವನ್ನು ತಣ್ಣಗಾಗಿಸಬೇಕು. 25 ಸ್ಥಾನಗಳನ್ನು ಗೆಲ್ಲಲೇಬೇಕು. ಏನು ಮಾಡುತ್ತಿರೋ ಗೊತ್ತಿಲ್ಲ ಎಂದು ಅಮಿತ್ ಶಾ ಅವರು ಕಡ್ಡಿ ಮುರಿದಂತೆ ಹೇಳಿದರು' ಎಂದು ಮೂಲಗಳು ತಿಳಿಸಿವೆ.



ಜೆ.ಸಿ.ಮಾಧುಸ್ವಾಮಿ

ತುಮಕೂರು ಕ್ಷೇತ್ರದಲ್ಲಿ ವಿ.ಸೋಮಣ್ಣ ಅವರಿಗೆ ಟಿಕೆಟ್ ಕೊಟ್ಟಿರುವ ಬಗ್ಗೆ ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಮುನಿಸಿಕೊಂಡಿದ್ದರು. ಇವರಿಗೆ ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಉಸ್ತುವಾರಿ ನೀಡಲಾಗಿದೆ.

ಪ್ರತಾಪ್ ಸಿಂಹ

ಮೈಸೂರು ಸಂಸದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನಿರಾಕರಿಸಿದ್ದರಿಂದ ತೀವ್ರ ಅಸಮಾಧಾನಗೊಂಡು ಅಭ್ಯರ್ಥಿ ಯದುವೀರ ಅವರ ಬಗ್ಗೆ ವ್ಯಂಗ್ಯಭರಿತ ಮಾತುಗಳನ್ನು ಆಡಿದ್ದರು. ಮೈಸೂರು ಬಿಟ್ಟು ಬೇರೆ ಕಡೆ ಪ್ರಚಾರ ಮಾಡುವಂತೆ ಸೂಚಿಸಲಾಗಿದೆ.

ಪ್ರೀತಂ ಗೌಡ

ಜೆಡಿಎಸ್‌ಗೆ ಲೋಕಸಭಾ ಸ್ಥಾನ ಬಿಟ್ಟುಕೊಟ್ಟ ಬಗ್ಗೆ ತೀವ್ರ ಅಸಮಾಧಾನ ಹೊಂದಿದ್ದರು. ರಾಧಾಮೋಹನ್ ದಾಸ್ ಅಗರವಾಲ್ ಅವರು ಪ್ರೀತಂ ಅವರ ಕೋಪ ಶಮನ ಮಾಡಿದ್ದಾರೆ. ಚಾಮರಾಜನಗರ ಕ್ಷೇತ್ರದ ಉಸ್ತುವಾರಿ ನೀಡಲಾಗಿದೆ.

'ಯಾವ ಕ್ಷೇತ್ರದಲ್ಲಿ ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ, ಯಾರು ಮಾಡುತ್ತಿಲ್ಲ, ಯಾರು ಪಕ್ಷದ ವಿರುದ್ಧ ಮಾಡುತ್ತಿದ್ದಾರೆ ಎಂಬ ಮಾಹಿತಿಗಳು ಇವೆ. ಪಕ್ಷದ ಅಭ್ಯರ್ಥಿಗಳ ವಿರುದ್ಧ ಕೆಲಸ ಮಾಡುವವರನ್ನು ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ. ಪಕ್ಷದ ಯಾವುದೇ ಹುದ್ದೆಗಳು ಅಲಂಕಾರದ ಹುದ್ದೆಗಳಲ್ಲ. ಮೈ ಬಗ್ಗಿಸಿ ಕೆಲಸ ಮಾಡಬೇಕು. ರಾಜ್ಯದ ಜನತೆ ನಮ್ಮ ಪರ ಇದ್ದಾರೆ. ಅದರ ಲಾಭ ಪಡೆಯುವುದನ್ನು ಬಿಟ್ಟು ಮೈಮರೆತರೆ ಸಹಿಸಲು ಸಾಧ್ಯವಿಲ್ಲ.

ಕ್ಷಮಿಸುವುದೂ ಇಲ್ಲ. ಕಳೆದ ವಿಧಾನಸಭಾ ಚುನಾವಣೆ ವೇಳೆ ಏನೆಲ್ಲ ಆಗಿದೆ ಎಂಬುದು ಗೊತ್ತಿದೆ. ಮತ್ತೆ ಅದು ಪುನರಾವರ್ತನೆ ಆಗಬಾರದೆಂದು ಎಚ್ಚರಿಕೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಈ ಎಚ್ಚರಿಕೆಯ ಮಾತುಗಳ ಬೆನ್ನಲ್ಲೇ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿ.ಎಸ್.ಯಡಿಯೂರಪ್ಪ, ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್ ಅವರು ಸಮಸ್ಯೆಗಳು ಇರುವ ಕ್ಷೇತ್ರಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸಲು ಶ್ರಮಿಸುತ್ತಿದ್ದಾರೆ. ಈ ಕಾರ್ಯದಲ್ಲಿ ಪ್ರಭಾವೀ ನಾಯಕರನ್ನೂ ಬಳಸಿಕೊಳ್ಳಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿಯ ಒಂದು ಚಿಕ್ಕ ಗುಂಪು ಎದುರಾಳಿ ಡಿ.ಕೆ ಸಹೋದರರ ಪ್ರಭಾವಕ್ಕೆ ಒಳಗಾಗಿದ್ದಾರೆ. ಮಂಜುನಾಥ್ ಪರ ಕೆಲಸ ಮಾಡುತ್ತಿಲ್ಲ ಎಂಬ ಮಾಹಿತಿಯೂ ಅಮಿತ್ ಶಾ ಅವರನ್ನು ತಲುಪಿದೆ. ತುಂಬಾ ಕಠಿಣವಾಗಿರುವ ಶಿವಮೊಗ್ಗ ಕ್ಷೇತದಲ್ಲೂ ಕೆ.ಎಸ್.ಈಶ್ವರಪ್ಪ ಅವರನ್ನು ಸಮಾಧಾನಪಡಿಸುವ ಕೆಲಸಕ್ಕೆ ವಿಜಯೇಂದ್ರ ಕೈಹಾಕಿದ್ದಾರೆ. ಈಶ್ವರಪ್ಪ ಅವರ ಆಕ್ರೋಶಕ್ಕೆ ಸಮಾಧಾನವೇ ಉತ್ತರ ಎಂಬ ರೀತಿಯಲ್ಲಿ ಹೆಜ್ಜೆ ಇಟ್ಟಿದ್ದಾರೆ. ಆರ್‌ಎಸ್‌ಎಸ್ ಪ್ರಮುಖರೂ ಅವರನ್ನು ಸಮಾಧಾನಪಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದೂ ಮೂಲಗಳು ಹೇಳಿವೆ.

ಚುನಾವಣಾ ರಾಜಕಾರಣದಿಂದ ಮೊಯಿಲಿ ನಿವೃತ್ತಿ

ಚಿಕ್ಕಬಳ್ಳಾಪುರ: ಮಾಜಿ ಮುಖ್ಯಮಂತ್ರಿ, ಚಿಕ್ಕಬಳ್ಳಾಪುರದ ಮಾಜಿ ಸಂಸದ ಎಂ.ವೀರಪ್ಪ ಮೊಯಿಲಿ ಸೋಮವಾರ ಚುನಾವಣಾ ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದ್ದಾರೆ.

ಇನ್ನು ಮುಂದೆ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸುವುದಿಲ್ಲ. ಆದರೆ ಪಕ್ಷದ ಪ್ರಚಾರ ಸಭೆಗಳಲ್ಲಿ ಪಾಲ್ಗೊಳ್ಳುವೆ. ರಾಜಕಾರಣದಲ್ಲಿ ಸಕ್ರಿಯವಾಗಿರುವೆ ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಮೂರು ಬಾರಿ ಸ್ಪರ್ಧಿಸಿದ್ದ ವೀರಪ್ಪ ಮೊಯಿಲಿ ಅವರು ಎರಡು ಬಾರಿ ಗೆಲುವು ಸಾಧಿಸಿದ್ದರು. ಕೇಂದ್ರ ಸಚಿವರಾಗಿಯೂ ಕೆಲಸ ಮಾಡಿದ್ದರು.

ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ರಕ್ಷಾ ರಾಮಯ್ಯ ಅವರಿಗೆ ದೊರೆತ ನಂತರ ಕ್ಷೇತ್ರಕ್ಕೆ ಬಂದಿರಲಿಲ್ಲ. ಸೋಮವಾರ ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಕ್ಷಾ ರಾಮಯ್ಯ ಅವರಿಗೆ ಬೆಂಬಲ ಸೂಚಿಸಿದರು.

ಕಣ ಸ್ವಾರಸ್ಯ

ಮೂವರು ಸಚಿವರಿಗೆ ಅದೃಷ್ಟ ಪರೀಕ್ಷೆ

ಪ್ರಲ್ಹಾದ ಜೋಶಿ
ಕ್ಷೇತ್ರ: ಧಾರವಾಡ
ಪಕ್ಷ: ಬಿಜೆಪಿ
ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ ಸಚಿವ.

ಶೋಭಾ ಕರಂದ್ಲಾಜೆ
ಕ್ಷೇತ್ರ: ಬೆಂಗಳೂರು ಉತ್ತರ
ಪಕ್ಷ: ಬಿಜೆಪಿ
ಕೃಷಿ, ರೈತ ಕಲ್ಯಾಣ ಮತ್ತು ಆಹಾರ ಸಂಸ್ಕರಣಾ ಖಾತೆ ರಾಜ್ಯ ಸಚಿವೆ

ಭಗವಂತ್ ಖೂಬಾ
ಕ್ಷೇತ್ರ: ಬೀದರ್
ಪಕ್ಷ: ಬಿಜೆಪಿ
ರಾಸಾಯನಿಕ ಮತ್ತು ರಸಗೊಬ್ಬರ ರಾಜ್ಯ ಸಚಿವ.

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಎರಡನೇ ಅವಧಿಯ ಸರ್ಕಾರದಲ್ಲಿ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಮೂವರು ಸಚಿವರು ಈ ಬಾರಿ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಕೇಂದ್ರ ಸರ್ಕಾರದಲ್ಲಿ ಪ್ರಭಾವಿ ಸಚಿವರ ಪೈಕಿ ಒಬ್ಬರಾಗಿರುವ ಪ್ರಲ್ಹಾದ ಜೋಶಿ ಅವರು ಕಾಂಗ್ರೆಸ್‌ನ ಹೊಸ ಮುಖ ವಿನೋದ್ ಅಸೂಟಿ ಅವರನ್ನು ಎದುರಿಸುತ್ತಿದ್ದಾರೆ. ಲಿಂಗಾಯತರಿಗೆ ಅನ್ಯಾಯವಾಗಿದೆ ಎಂಬ ಘೋಷಣೆ ಮುಂದಿಟ್ಟುಕೊಂಡು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯುವುದಾಗಿ ಶಿರಹಟ್ಟಿ ಭಾವೈಕ್ಯಪೀಠದ ದಿಂಗಾಲೇಶ್ವರ ಸ್ವಾಮೀಜಿ ಘೋಷಿಸಿದ್ದಾರೆ. ತ್ರಿಕೋನ ಸ್ಪರ್ಧೆ ಸಾಧ್ಯತೆ ಇದೆ.

ಉಡುಪಿ–ಚಿಕ್ಕಮಗಳೂರು ಕ್ಷೇತ್ರ ಪ್ರತಿನಿಧಿಸುತ್ತಿರುವ ಶೋಭಾ ಕರಂದ್ಲಾಜೆ, ಅಲ್ಲಿ ವಿರೋಧ ವ್ಯಕ್ತವಾಗಿದ್ದರಿಂದ ಬೆಂಗಳೂರು ಉತ್ತರ ಕ್ಷೇತ್ರಕ್ಕೆ ತಮ್ಮ ಸ್ಪರ್ಧೆಯನ್ನು ಬದಲಾಯಿಸಿದ್ದಾರೆ. ರಾಜ್ಯಸಭೆಯ ಮಾಜಿ ಸದಸ್ಯ ಪ್ರೊ.ಎಂ.ವಿ. ರಾಜೀವ್ ಗೌಡ ಇವರ ಎದುರಾಳಿ. ಶೋಭಾ ಅವರು ಒಮ್ಮೆ ಯಶವಂತಪುರ ಕ್ಷೇತ್ರದ ಶಾಸಕರಾಗಿದ್ದರು. ರಾಜಾಜಿನಗರದಿಂದ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಭಗವಂತ ಖೂಬಾ ಅವರಿಗೆ ಸಚಿವ ಈಶ್ವರ ಖಂಡ್ರೆಯವರ ಪುತ್ರ ಸಾಗರ್ ಖಂಡ್ರೆ ಪ್ರತಿಸ್ಪರ್ಧಿ. ಸ್ಥಳೀಯ ಶಾಸಕರ ವಿರೋಧದ ಮಧ್ಯೆಯೂ ಖೂಬಾಗೆ ಪಕ್ಷ ಟಿಕೆಟ್ ನೀಡಿದೆ. ಮತ್ತೋರ್ವ ಸಚಿವ ಎ. ನಾರಾಯಣಸ್ವಾಮಿ ಈ ಬಾರಿ ಕಣಕ್ಕೆ ಇಳಿದಿಲ್ಲ.

ಮಂಗಳೂರು, ಬೆಂಗಳೂರಿಗೆ ಮೋದಿ 14ಕ್ಕೆ

ಮಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಏ.14ರಂದು ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಚುನಾವಣಾ ಸಂಚಾಲಕ ಸುನಿಲ್ ಕುಮಾರ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ ನೀಡಿದ್ದಾರೆ. ಎರಡನೇ ಹಂತದಲ್ಲಿ ಮೋದಿ ರಾಜ್ಯಕ್ಕೆ ಆಗಮಿಸುತ್ತಿದ್ದು, ಏ.14ರಂದು ಮಧ್ಯಾಹ್ನ 3 ಗಂಟೆಗೆ ಮಂಗಳೂರು ನಗರ ಹೊರವಲಯದ ಗೋಲ್ಡ್‌ಫಿಂಚ್ ಸಿಟಿಯಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಗಿಯಾಗುವರು. ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆಯಿದೆ. ನಂತರ ಸಂಜೆ 5.30ಕ್ಕೆ ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ರೋಡ್ ಶೋ ನಡೆಸಿ ಅಭ್ಯರ್ಥಿ ಪರ ಪ್ರಚಾರ ನಡೆಸುವರು' ಎಂದರು.

ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಅಶ್ವತ್ಥ ನಗರ ವೃತ್ತದಿಂದ ರ‍್ಯಾಲಿ ಪ್ರಾರಂಭವಾಗಲಿದ್ದು, ಗೆದ್ದಲಹಳ್ಳಿ ವೃತ್ತ, ರಾಧಾಕೃಷ್ಣ ದೇವಸ್ಥಾನ, ವೈಭವ್ ಥಿಯೇಟರ್, ನಾಗಶೆಟ್ಟಿಹಳ್ಳಿ ಜಂಕ್ಷನ್, ರಿಂಗ್ ರೋಡ್ ಜಂಕ್ಷನ್, ಕೋಟೆ ಮುತ್ತುರಾಯಸ್ವಾಮಿ ದೇವಾಲಯದ ಬಳಿ ಒಟ್ಟು 6.4 ಕಿ.ಮೀ ಅಂತರದ ರ‍್ಯಾಲಿ ಕೊನೆಗೊಳ್ಳಲಿದೆ ಎಂದು ಹೇಳಿದರು.



ಮನೆ–ಮನೆ ಪ್ರಚಾರ: ಏ.10 ಮತ್ತು 11ರಂದು ಏಕಕಾಲದಲ್ಲಿ ರಾಜ್ಯದ ಎಲ್ಲ 58 ಸಾವಿರ ಮತಗಟ್ಟೆಗಳಲ್ಲಿ ಮಹಾ ಪ್ರಚಾರ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮನೆ–ಮನೆ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಲಾಗಿದ್ದು, ಏ.15,16 ಮತ್ತು 17ರಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಂದ ಎಲ್ಲ ಹಂತದ ಪದಾಧಿಕಾರಿಗಳು, ಕಾರ್ಯಕರ್ತರು, ಮನೆ–ಮನೆ ಭೇಟಿ ಕಾರ್ಯದಲ್ಲಿ ಭಾಗಿಯಾಗಲಿದ್ದಾರೆ. ಈ ಬಾರಿ ಚುನಾವಣೆಯ ಮೂರು ಮುಖ್ಯ ಅಂಶಗಳಾದ ಸುರಕ್ಷಿತ ಭಾರತ, ಸಾಂಸ್ಕೃತಿಕ ಭಾರತ, ವಿಕಸಿತ ಭಾರತದ ಪರಿಕಲ್ಪನೆಗಳ ಬಗ್ಗೆ ಮತದಾರರಿಗೆ ಮನವರಿಕೆ ಮಾಡಿಕೊಡಲಿದ್ದಾರೆ ಎಂದು ತಿಳಿಸಿದರು.

'ಕಾಂಗ್ರೆಸ್ ಬೆಂಬಲಿಸಲು ಕರೆ'

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳನ್ನು ಸೋಲಿಸಿ, ಕಾಂಗ್ರೆಸ್‌ಗೆ ಬೆಂಬಲಿಸುವ ಮೂಲಕ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಬೇಕು' ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಕರೆ ನೀಡಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಸಂಚಾಲಕ ಇಂದೂಧರ ಹೊನ್ನಾಪುರ, 'ಅವಕಾಶವಾದಿ ರಾಜಕಾರಣಿಗಳು, ಲೂಟಿಕೋರ ಉದ್ಯಮಿಗಳು ಮತ್ತು ಸನಾತನ ಪುರೋಹಿತ ಶಾಹಿಗಳ ದುಷ್ಟಕೂಟ ಸೇರಿಕೊಂಡು ದೇಶದ ಸಾರ್ವಭೌಮತೆ, ಘನತೆ, ನೆಮ್ಮದಿಯನ್ನು ಬೀದಿ ಪಾಲು ಮಾಡುವುದರಲ್ಲಿ ತೊಡಗಿಸಿಕೊಂಡಿದೆ. ಸಂವಿಧಾನದ ಹೆಸರಿನಲ್ಲಿ ಅಧಿಕಾರ ಹಿಡಿದವರು, ಇಂದು ಸಂವಿಧಾನವನ್ನೇ ನಾಶ ಮಾಡಲು ಟೊಂಕ ಕಟ್ಟಿ ನಿಂತಿದ್ದಾರೆ. ಆದ್ದರಿಂದ, ಸಂವಿಧಾನ ಉಳಿಸಲು ದೇಶದ ಸಮಗ್ರತೆ ಕಾಪಾಡಲು ಈ ಲೋಕಸಭಾ ಚುನಾವಣೆಯಲ್ಲಿ ಅವಕಾಶವಿದೆ. ಬಿಜೆಪಿಯನ್ನು ಸೋಲಿಸಿ, ಕಾಂಗ್ರೆಸ್ ಬೆಂಬಲಿಸಬೇಕು' ಎಂದು ತಿಳಿಸಿದರು.

ಸಮಿತಿ ಸಂಚಾಲಕರಾದ ಮಾವಳ್ಳಿ ಶಂಕರ್, ಎನ್. ವೆಂಕಟೇಶ್, ಗುರುಪ್ರಸಾದ್ ಕೆರಗೋಡು, ಜೀವನ ಹಳ್ಳಿ ವೆಂಕಟೇಶ್, ವಿ.ನಾಗರಾಜ್ ಭಾಗವಹಿಸಿದ್ದರು.

ಸೊಂಟದಲ್ಲಿ ರಿವಾಲ್ವರ್: ವಿವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡಿದ್ದ ರಿಯಾಜ್ ಅಹಮ್ಮದ್ ಎಂಬಾತ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಹೋಗಿ ಹೂವಿನ ಹಾರ ಹಾಕಿ ಸನ್ಮಾನಿಸಿದ್ದು, ಭದ್ರತಾ ಲೋಪ ಉಂಟಾಗಿರುವ ಆರೋಪದಡಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಸಿದ್ದಾಪುರ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ನಡೆದಿದ್ದ ರೋಡ್ ಶೋನಲ್ಲಿ ಮುಖ್ಯಮಂತ್ರಿ ಅವರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ರಿಯಾಜ್ ಅಹಮ್ಮದ್ ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡು ಮುಖ್ಯಮಂತ್ರಿ ಅವರನ್ನು ಸನ್ಮಾನಿಸಿದ್ದ. ಘಟನೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ ತಿಳಿಸಿದರು.

ಪ್ರಕರಣದ ವಿವರ: 'ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಪರ ಪ್ರಚಾರಕ್ಕಾಗಿ ರೋಡ್ ಶೋ ಹಮ್ಮಿಕೊಳ್ಳಲಾಗಿತ್ತು. ಭೈರಸಂದ್ರದಲ್ಲಿ ನಡೆದ ರೋಡ್ ಶೋದಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯ, ತೆರೆದ ವಾಹನದಲ್ಲಿ ನಿಂತು ಮತಯಾಚನೆ ಮಾಡುತ್ತಿದ್ದರು. ಸೌಮ್ಯಾ ರೆಡ್ಡಿ ಹಾಗೂ ಸಚಿವ ರಾಮಲಿಂಗಾರೆಡ್ಡಿ ಅವರು ವಾಹನದಲ್ಲಿದ್ದರು' ಎಂದು ಪೊಲೀಸರು ಹೇಳಿದರು.

'ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡಿದ್ದ ರಿಯಾಜ್ ಅಹಮ್ಮದ್ ರೋಡ್ ಶೋನಲ್ಲಿ ಪಾಲ್ಗೊಂಡಿದ್ದ. ತೆರೆದ ವಾಹನ ಏರಿದ್ದ ರಿಯಾಜ್, ಸಿದ್ದರಾಮಯ್ಯ ಅವರಿಗೆ ಹೂವಿನ ಹಾರ ಹಾಕಿ ಸನ್ಮಾನಿಸಿದ್ದ. ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಪರ ಜೈಕಾರ ಸಹ ಹಾಕಿದ್ದ. ಇದೇ ಸಂದರ್ಭದಲ್ಲಿ ಆತನ ಸೊಂಟದಲ್ಲಿ ರಿವಾಲ್ವರ್ ಕಂಡಿತ್ತು. ನಂತರ, ಆತನೇ ವಾಹನದಿಂದ ಕೆಳಗೆ ಇಳಿದಿದ್ದ' ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರನ್ನು ಸನ್ಮಾನಿಸುವ ವೇಳೆ ಸೊಂಟದಲ್ಲಿ ರಿವಾಲ್ವರ್ ಇಟ್ಟುಕೊಂಡಿದ್ದ ರಿಯಾಜ್ ಅಹಮ್ಮದ್

'ಘಟನೆ ಗಮನಕ್ಕೆ ಬರುತ್ತಿದ್ದಂತೆ ರಿಯಾಜ್‌ನನ್ನು ವಿಚಾರಣೆ ನಡೆಸಲಾಗಿದೆ. 2019ರಲ್ಲಿ ರಿಯಾಜ್ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿತ್ತು. ಪ್ರಾಣ ಭಯ ಇರುವುದಾಗಿ ಹೇಳಿ ರಿಯಾಜ್ ರಿವಾಲ್ವರ್ ಪರವಾನಗಿ ಪಡೆದಿದ್ದ. ಚುನಾವಣೆ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳನ್ನು ಠಾಣೆಯಲ್ಲಿ ಠೇವಣಿ ಇರಿಸುವಂತೆ ಕಮಿಷನರ್ ಆದೇಶ ಹೊರಡಿಸಿದ್ದರು. ರಿಯಾಜ್ ಪ್ರಾಣಕ್ಕೆ ಕುತ್ತು ಇರುವುದನ್ನು ಮನಗಂಡು ರಿವಾಲ್ವಾರ್ ಠೇವಣಿಗೆ ರಿಯಾಯಿತಿ ನೀಡಲಾಗಿತ್ತು' ಎಂದು ಹೇಳಿದರು.

ಹಾಸನದಲ್ಲಿ ಒಂದು ಮತ ಜಾಸ್ತಿ: ಪ್ರೀತಂ

ಪ್ರಜಾವಾಣಿ ವಾರ್ತೆ

ಮೈಸೂರು: 'ಹಾಸನ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಗೆ ಹೊಳೆನರಸೀಪುರದಲ್ಲಿ ಸಿಗುವುದಕ್ಕಿಂತಲೂ ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಮತ ಹೆಚ್ಚು ಸಿಗುತ್ತದೆ. ಇದಕ್ಕಿಂತ ಇನ್ನೇನು ಹೇಳಬೇಕು?' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಕೇಳಿದರು.

ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಕೆಲ ಬಿಜೆಪಿ ಮುಖಂಡರು ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಪರ ಪ್ರಚಾರ ನಡೆಸುತ್ತಿರುವ ಬಗ್ಗೆ ಇಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನಮ್ಮ ಯಾವ ಬೆಂಬಲಿಗರೂ ಕಾಂಗ್ರೆಸ್ ಜೊತೆ ಹೋಗಿಲ್ಲ. ಈಗ ಹೋಗಿರುವ ಯಾರೋ ಒಬ್ಬ ಬೂತ್ ಅಧ್ಯಕ್ಷ ಕೂಡ ಅಲ್ಲ. ಯಾರೋ ಚಹಾ ಕುಡಿದು ಪ್ರಚಾರ ಪತ್ರ ಕೊಟ್ಟ ಕೂಡಲೇ ಅವರು ಕಾಂಗ್ರೆಸ್‌ನವರು ಆಗುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಾವೇ ಕಾಂಗ್ರೆಸ್‌ನವರನ್ನು ಬಿಜೆಪಿಗೆ ಕರೆತರುವ ಪ್ರಯತ್ನ ಮಾಡುತ್ತಿದ್ದೇವೆ. ಹೀಗಿರುವಾಗ, ಬಿಜೆಪಿಯಿಂದ ಅಲ್ಲಿಗೆ ಹೋಗುವ ಪ್ರಶ್ನೆ ಯಾಕೆ ಬರುತ್ತದೆ' ಎಂದು ಪ್ರಶ್ನಿಸಿದರು.

ಹಾಸನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರನ್ನು ಭೇಟಿ ಮಾಡಿದ ಬಿಜೆಪಿ ಮುಖಂಡ ಉದ್ದೂರು ಪುರುಷೋತ್ತಮ್, ಬೆಂಬಲ ಸೂಚಿಸಿದರು.

ಕಾಂಗ್ರೆಸ್ ಪರ ಪ್ರೀತಂ ಆಪ್ತರ ಪ್ರಚಾರ

ಹಾಸನ: ಪ್ರೀತಂ ಗೌಡರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಕೆಲ ಬಿಜೆಪಿ ಮುಖಂಡರು, ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಪರ ಬಹಿರಂಗವಾಗಿ ಪ್ರಚಾರಕ್ಕೆ ಮುಂದಾಗಿದ್ದಾರೆ. ಇದರಿಂದಾಗಿ ಜೆಡಿಎಸ್ ನಾಯಕರಿಗೆ ಇರಿಸು ಮುರಿಸು ಉಂಟಾಗಿದೆ.

ಶ್ರೇಯಸ್ ಪಟೇಲ್ ಅವರನ್ನು ಭೇಟಿ ಮಾಡಿದ ಬಿಜೆಪಿ ಮುಖಂಡ ಉದ್ದೂರು ಪುರುಷೋತ್ತಮ್ ಸೇರಿ ಹಲವರು, ಬೆಂಬಲ ಘೋಷಿಸಿ ಪ್ರಚಾರ ಆರಂಭಿಸಿದ್ದಾರೆ.

ಪ್ರೀತಂ ಗೌಡರು ಎನ್‌ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಪರ ಯಾವುದೇ ಸೂಚನೆ ನೀಡದಿರುವುದರಿಂದ ಶ್ರೇಯಸ್ ಪಟೇಲ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಪುರುಷೋತ್ತಮ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಧ್ರುವೀಕರಣವೇ ಗೆಲುವಿನ ಮೆಟ್ಟಿಲು

• ಸುಕೃತ ಎಸ್.

ಬುಡಕಟ್ಟು ಸಮುದಾಯಗಳೇ ಅಧಿಕವಾಗಿರುವ ಈಶಾನ್ಯ ರಾಜ್ಯಗಳಲ್ಲಿ 'ಹೊರಗಿನವರು ಮತ್ತು ಮೂಲ ನಿವಾಸಿಗಳು' ಎನ್ನುವ ಸಂಘರ್ಷವು ಹೊಸತೇನಲ್ಲ. ಹಾಗಿದ್ದರೂ ಇಷ್ಟೊಂದು ಸುದೀರ್ಘವಾದ ಸಂಘರ್ಷವು ಹಿಂದೆಂದೂ ನಡೆದಿರಲಿಲ್ಲ. ಈ ಸಂಘರ್ಷವು ಜನರನ್ನು ಹೈರಾಣಾಗಿಸಿರುವುದಲ್ಲದೆ, ರಾಜಕೀಯವಾಗಿಯೂ ಈಶಾನ್ಯದ ಎಲ್ಲ ರಾಜ್ಯಗಳ ಮೇಲೆ ಪರಿಣಾಮ ಬೀರಿದೆ. ಇದಕ್ಕೆ ಕಳೆದ ಡಿಸೆಂಬರ್‌ನಲ್ಲಿ ನಡೆದ ಮಿಜೋರಾಂ ಚುನಾವಣೆಯೇ ಉದಾಹರಣೆ. ಈ ಲೋಕಸಭಾ ಚುನಾವಣೆಯಲ್ಲೂ ಮಣಿಪುರ ಸಂಘರ್ಷ ನೇರ ಪ್ರಭಾವ ಬೀರಲಿದೆ ಎಂದು ಅಂದಾಜಿಸಲಾಗುತ್ತಿದೆ.



'ಭಾರತವು ನಮ್ಮನ್ನು ಎಂದಿಗೂ ತಮ್ಮವರು ಎಂದು ಪರಿಗಣಿಸಿಯೇ ಇಲ್ಲ' ಎನ್ನುವುದು ಹಿಂದಿನಿಂದಲೂ ಈಶಾನ್ಯ ರಾಜ್ಯದ ಜನರ ಬೇಸರ. ಮಣಿಪುರ ಸಂಘರ್ಷ ಆರಂಭವಾದಾಗಲೂ, ಸುಮಾರು ಒಂದು ವರ್ಷದಿಂದ ಸಂಘರ್ಷ ನಡೆಯುತ್ತಿರುವಾಗಲೂ ಅಲ್ಲಿನ ಜನರು ಹೇಳಿದ ಮಾತಿದು. ಸಂಘರ್ಷವನ್ನು ತಣಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿರುವುದು ಅಲ್ಲಿನ ಜನರ ಬೇಸರವನ್ನು ಇನ್ನಷ್ಟು ಹೆಚ್ಚಿಸಿದೆ. ಮಣಿಪುರದಲ್ಲಂತೂ ಈ ವಿಚಾರ ಮತನಿರ್ಣಯವನ್ನು ನೇರವಾಗಿ ಪ್ರಭಾವಿಸಲಿದೆ ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

'ಲೋಕಸಭಾ ಚುನಾವಣೆಯ ಮತದಾನಕ್ಕೂ ಮುನ್ನ ರಾಜ್ಯದಲ್ಲಿ ಶಾಂತಿ ನೆಲೆಸಬೇಕು' ಎನ್ನುವುದು ಕುಕಿ ಬುಡಕಟ್ಟು ಸಮುದಾಯ ಹಾಗೂ ಬಹುಸಂಖ್ಯಾತ ಮೈತೇಯಿ ಸಮುದಾಯದ ಜನರ ಆಗ್ರಹ. 'ನಿರಾಶ್ರಿತ ಶಿಬಿರಗಳಿಂದ ನಾವು ಮತ ಹಾಕುವುದಿಲ್ಲ. ನಮ್ಮ ನಮ್ಮ ಮನೆಗಳಿಗೆ ತೆರಳಬೇಕು. ಅಲ್ಲಿಂದಲೇ ನಾವು ಮತದಾನ ಮಾಡುತ್ತೇವೆ. ಇಲ್ಲವಾದಲ್ಲಿ ಮತದಾನಕ್ಕೆ ನಮ್ಮ ಬಹಿಷ್ಕಾರ ಇದೆ' ಎನ್ನುತ್ತಿದ್ದಾರೆ. ಮೈತೇಯಿ ಸಮುದಾಯದ ಮಹಿಳೆಯರ ಗುಂಪು, 'ಮಯಿರಾ ಪೈಬಿ'ಯವರೂ ಇದನ್ನೇ ಹೇಳುತ್ತಿದ್ದಾರೆ. 'ನಾವು ಮತದಾನ ಮಾಡುವುದಿಲ್ಲ. ಒಂದು ವೇಳೆ ಮತದಾನ ಮಾಡುವುದಕ್ಕೆ ಒತ್ತಾಯ ಮಾಡಿದರೆ, ನೋಟಾ ಒತ್ತುತ್ತೇವೆ' ಎನ್ನುತ್ತಿದ್ದಾರೆ.

ಮಣಿಪುರದಲ್ಲಿ ಚುನಾವಣೆಯ ಚಟುವಟಿಕೆಗಳು ನಡೆಯುತ್ತಿಲ್ಲ. 'ನಾವು ದೊಡ್ಡ ದೊಡ್ಡ ರ‍್ಯಾಲಿಗಳನ್ನು ಆಯೋಜಿಸುವುದಿಲ್ಲ, ಚುನಾವಣಾ ಪ್ರಚಾರವನ್ನೂ ಮಾಡುವುದಿಲ್ಲ' ಎಂದು ಮಣಿಪುರದ ಬಿಜೆಪಿ ಘಟಕ ಹೇಳಿದೆ. ಮಣಿಪುರಲ್ಲಿ ಇರುವುದು ಎರಡು ಲೋಕಸಭಾ ಕ್ಷೇತ್ರ. ಮೈತೇಯಿ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿರುವ 'ಇನ್ನರ್ ಮಣಿಪುರ' ಕ್ಷೇತ್ರದಲ್ಲಿ ಮಾತ್ರವೇ ಬಿಜೆಪಿ ಸ್ಪರ್ಧಿಸುತ್ತಿದೆ. ರಾಜ್ಯ ಬಿಜೆಪಿ ಸರ್ಕಾರವು ಮೈತೇಯಿಗಳ ಹಿಡಿತದಲ್ಲೇ ಇದ್ದಿದ್ದರಿಂದ, ಅವರ ಪರವಾಗಿಯೇ ನೀತಿಗಳನ್ನು ರೂಪಿಸಿತ್ತು. ಸಂಘರ್ಷದ ಸಂದರ್ಭದಲ್ಲೂ ಮೈತೇಯಿಗಳ ಪರವಾಗಿಯೇ ನಿಂತಿತ್ತು. ಹೀಗಾಗಿ ಇನ್ನರ್ ಮಣಿಪುರದಲ್ಲಿ ಬಿಜೆಪಿ ಸುಲಭವಾಗಿ ಗೆಲ್ಲಲಿದೆ ಎಂದು ನಿರೀಕ್ಷಿಸಲಾಗುತ್ತಿದೆ.

ಆದರೆ ಕುಕಿ ಮತ್ತು ನಾಗಾ ಬುಡಕಟ್ಟುಗಳ ಪ್ರಾಬಲ್ಯವಿರುವ 'ಔಟರ್ ಮಣಿಪುರ' ಲೋಕಸಭಾ ಕ್ಷೇತ್ರದಲ್ಲಿ ಹಲವು ಪಕ್ಷಗಳು ಕಣದಲ್ಲಿವೆ. ನಾಗಾ ಪೀಪಲ್ಸ್ ಪಾರ್ಟಿಗೆ ಬಿಜೆಪಿ ಬೆಂಬಲ ಘೋಷಿಸಿದೆ. ಮಣಿಪುರ ಸಂಘರ್ಷದ ದಿನದಿಂದಲೂ ಕುಕಿ ಮತ್ತು ನಾಗಾ ಬುಡಕಟ್ಟು ಜನರ ಹಕ್ಕುಗಳನ್ನು ರಕ್ಷಿಸುತ್ತೇವೆ ಎಂದು ಹೇಳುತ್ತಿರುವ ಕಾಂಗ್ರೆಸ್ ಈ ಬಾರಿ ನಾಗಾ ನಾಯಕ ಎ.ಕೆ.ಆರ್ತೂರ್ ಅವರನ್ನು 'ಔಟರ್ ಮಣಿಪುರ'ದಿಂದ ಕಣಕ್ಕೆ ಇಳಿಸಿದೆ. ಪ್ರತಿ ಬಾರಿ ಕುಕಿ ಮತಗಳು, ಕುಕಿ ಅಭ್ಯರ್ಥಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಮಧ್ಯೆ ವಿಭಜನೆಯಾಗುತ್ತಿತ್ತು. ಇದರಿಂದ ಬಿಜೆಪಿ ಬೆಂಬಲಿತ ಅಭ್ಯರ್ಥಿ ಸುಲಭವಾಗಿ ಗೆಲುವು ಸಾಧಿಸುತ್ತಿದ್ದರು. ಹೀಗೆ ತಮ್ಮ ಸಮುದಾಯದ ಮತ ವಿಭಜನೆ ಆಗುವುದನ್ನು ತಡೆಯಲೆಂದೇ ಕುಕಿ ಸಮುದಾಯ 'ಐಟಿಎಲ್‌ಎಫ್' ತನ್ನ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿಲ್ಲ. ಸಂಘರ್ಷದ ಕಾರಣದಿಂದಲೇ ಈ ನಿರ್ಧಾರ ತೆಗೆದುಕೊಂಡಿದ್ದೇವೆ ಎಂದು ಐಟಿಎಲ್‌ಎಫ್ ಹೇಳಿದೆ. ಈ ನಿರ್ಧಾರವು ಔಟರ್ ಮಣಿಪುರದಲ್ಲಿ ಬಿಜೆಪಿ ಬೆಂಬಲಿತ ಎನ್‌ಪಿಪಿ ಅಭ್ಯರ್ಥಿಗೆ ತೀವ್ರ ಸವಾಲು ಒಡ್ಡಲಿದೆ ಎಂದು ನಿರೀಕ್ಷಿಸಲಾಗಿದೆ.

ಮಣಿಪುರ ಗಲಭೆ ಮತ್ತು ಮಿಜೋರಾಂ ವಿಧಾನಸಭೆ ಚುನಾವಣೆ

ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ನಡೆಯುತ್ತಿರುವಾಗಲೇ, ಮಿಜೋರಾಂನಲ್ಲಿ ಚುನಾವಣೆ ನಡೆದಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರಕ್ಕಾಗಿ ಮಿಜೋರಾಂಗೆ ಹೋಗಲೇ ಇಲ್ಲ. ಚುನಾವಣೆಗಾಗಿ ಪ್ರಧಾನಿ ಮೋದಿ ಅವರು ಪ್ರಚಾರ ನಡೆಸದ ಮೊದಲ ರಾಜ್ಯ ಮಿಜೋರಾಂ. ಎನ್‌ಡಿಎ ಜೊತೆಗಿದ್ದ ಎಂಎನ್‌ಎಫ್ ಪಕ್ಷವು ಆಗ ಮಿಜೋರಾಂನಲ್ಲಿ ಅಧಿಕಾರದಲ್ಲಿತ್ತು. ಮಣಿಪುರ ಸಂಘರ್ಷ ಆರಂಭವಾಗುತ್ತಿದಂತೆಯೇ, ಮಾಜಿ ಮುಖ್ಯಮಂತ್ರಿ, ಎಂಎನ್‌ಎಫ್‌ನ ಝೋರಮ್‌ತಂಗಾ ಅವರು ಬಿಜೆಪಿ ಸರ್ಕಾರವನ್ನು ಬಹಿರಂಗವಾಗಿಯೇ ವಿರೋಧಿಸಿದ್ದರು. 'ಪ್ರಧಾನಿ ಮೋದಿ ಅವರೊಂದಿಗೆ ವೇದಿಕೆ ಹಂಚಿಕೊಳ್ಳುವುದಿಲ್ಲ' ಎಂದೂ ಹೇಳಿದ್ದರು. ಬಿಜೆಪಿಯಿಂದ ಅಂತರ ಕಾಯ್ದುಕೊಂಡರೂ ಜನರು ಎಂಎನ್‌ಎಫ್ ಸರ್ಕಾರವನ್ನು ತಿರಸ್ಕರಿಸಿದರು. ಈಗ ಲೋಕಸಭಾ ಚುನಾವಣೆಯಲ್ಲಿ, ಅಧಿಕಾರದಲ್ಲಿರುವ ಝೆಡ್‌ಪಿಎಂ ಪಕ್ಷವು ಎನ್‌ಡಿಎಯೊಂದಿಗೆ ಮೈತ್ರಿ ಮಾಡಿಕೊಂಡಿದೆ. ಜನರು ಈ ಮೈತ್ರಿಗೆ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ಕಾದು ನೋಡಬೇಕು.

ಹಿಮಂತ ಮತ್ತು ಹಿಂದುತ್ವ

ಅಸ್ಸಾಂ, ತ್ರಿಪುರಾಗಳಲ್ಲಿ ಹಿಂದೂ ಜನ ಸಂಖ್ಯೆ ಹೆಚ್ಚಿದೆ. ಹಿಮಂತ ಬಿಸ್ವಾ ಶರ್ಮಾ ಅವರು ಅಸ್ಸಾಂ ಮುಖ್ಯಮಂತ್ರಿ ಆದಾಗಿನಿಂದಲೂ ಅಸ್ಸಾಂನಲ್ಲಿ ಹಿಂದುತ್ವದ ಅಬ್ಬರ ಹೆಚ್ಚಿದೆ. ಅಸ್ಸಾಂ ಸರ್ಕಾರವು, ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲು ಅಣಿಯಾಗಿದೆ. ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಪ್ರಕ್ರಿಯೆ ನಡೆಯುತ್ತಿದೆ. ಇವೆಲ್ಲವೂ ಹಿಂದೂ ಮತಗಳನ್ನು ಸೆಳೆಯುವ ಪ್ರಯತ್ನ. ಹಿಮಂತ ಅವರು ಬಿಜೆಪಿ ಸೇರುವುದಕ್ಕೂ ಮೊದಲೇ ಆರ್‌ಎಸ್‌ಎಸ್ ಅಸ್ಸಾಂ ಮತ್ತು ಸುತ್ತಲ ರಾಜ್ಯಗಳಲ್ಲಿ ಹಲವು ವರ್ಷಗಳ ಹಿಂದಿನಿಂದಲೇ ತನ್ನ ಕಾರ್ಯಚಟುವಟಿಕೆಯನ್ನು ಆರಂಭಿಸಿತ್ತು. ಆದರೆ, ಹಿಮಂತ ಅವರ ಆಗಮನದಿಂದ ಆ ಎಲ್ಲ ಚಟುವಟಿಕೆಗಳಿಗೆ ರಾಯಭಾರಿಯೊಬ್ಬರು ಸಿಕ್ಕಿದಂತಾಯಿತು. ಈ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಉಗ್ರ ಹಿಂದುತ್ವವನ್ನು ಪ್ರತಿಪಾದಿಸುತ್ತಿದೆ. ಹಿಂದೂಗಳು ನಿರ್ಣಾಯಕರಾಗಿರುವ ಕ್ಷೇತ್ರಗಳಲ್ಲಿ ಇದು ಬಿಜೆಪಿಗೆ ಅನುಕೂಲವಾಗಬಹುದು ಎಂದು ನಿರೀಕ್ಷಿಸಲಾಗಿದೆ.

'ದನದ ಮಾಂಸ ತಿನ್ನುವುದು ನಮ್ಮ ಸಂಸ್ಕೃತಿ': ದನದ ಮಾಂಸ ತಿನ್ನುವ ಕುರಿತು ಬಿಜೆಪಿಯ ಈಶಾನ್ಯ ರಾಜ್ಯ ಘಟಕಗಳಿಗೂ, ಭಾರತದ ಇತರ ಪ್ರದೇಶದ ಬಿಜೆಪಿ ಘಟಕಗಳಿಗೂ ಬೇರೆ ಅಭಿಪ್ರಾಯವಿದೆ. 'ದನದ ಮಾಂಸ ತಿನ್ನುವುದು ನಮ್ಮ ಸಂಸ್ಕೃತಿಯ ಭಾಗ. ಆದ್ದರಿಂದ ದನದ ಮಾಂಸ ತಿನ್ನಲು ಯಾವುದೇ ಅಭ್ಯಂತರವಿಲ್ಲ' ಎಂದು ಮೇಘಾಲಯದ ಬಿಜೆಪಿ ಅಧ್ಯಕ್ಷ ಅರ್ನೆಸ್ಟ್ ಮಾರ್ವಿ ಹೇಳಿದ್ದರು. ಇಲ್ಲಿನ ಎಲ್ಲ ಜನರ ಸಂಸ್ಕೃತಿಯನ್ನು ನಿರಾಕರಿಸುವುದು ಬಿಜೆಪಿಗೆ ರಾಜಕೀಯವಾಗಿ ನಷ್ಟದ ವಿಚಾರ. ಹೀಗೆ ತನ್ನ ಸಿದ್ಧಾಂತದಲ್ಲಿ ರಾಜಿ ಮಾಡಿಕೊಳ್ಳುವ ಮೂಲಕ ಬಿಜೆಪಿ ಮೇಘಾಲಯದಲ್ಲಿ ಮತನೆಲೆಯನ್ನು ಗಟ್ಟಿಮಾಡಿಕೊಳ್ಳುತ್ತಿದೆ. ಮತದಾನದ ವೇಳೆಯೂ ಇದು ಬಿಜೆಪಿಗೆ ಅನುಕೂಲವಾಗಲಿದೆ.

'ಬುಡಕಟ್ಟು ಜನರು ಭಯೋತ್ಪಾದಕರು'

'ಮಣಿಪುರದ ಈ ಸಂಘರ್ಷವು ಜನಾಂಗೀಯ ಸಂಘರ್ಷವಲ್ಲ ಅಥವಾ ಕಾನೂನು ಸುವ್ಯವಸ್ಥೆಯ ವಿಚಾರವೂ ಅಲ್ಲ. ಇದು ಭಾರತದ ವಿರುದ್ಧದ ಯುದ್ಧ. ಮ್ಯಾನ್ಮಾರ್ ಹಾಗೂ ಬಾಂಗ್ಲಾದೇಶದ ಕುಕಿ ಭಯೋತ್ಪಾದಕರೊಂದಿಗೆ ಸೇರಿ ಇಲ್ಲಿನ ಕುಕಿ ಭಯೋತ್ಪಾದಕರು ಯುದ್ಧ ನಡೆಸುತ್ತಿದ್ದಾರೆ' ಎಂದು ಮಣಿಪುರದ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು ಹೇಳಿದ್ದರು. ಮೈತೇಯಿ ಸಮುದಾಯದ ಗುಂಪುಗಳೂ ಇದನ್ನೇ ಹೇಳಿದ್ದವು. ಹೀಗೆ ಇಲ್ಲಿನ ಜನರನ್ನು ಧರ್ಮ ಮತ್ತು ಸಂಸ್ಕೃತಿಯ ಆಧಾರದಲ್ಲಿ ವಿಭಜನೆ ಮಾಡಿ, ಮತ ಧ್ರುವೀಕರಣ ಮಾಡುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಬಹುಸಂಖ್ಯಾತರಲ್ಲಿ ಬಹುತೇಕರ ಮತಗಳು ಬಿಜೆಪಿಗೇ ಬೀಳಲಿವೆ. ಈ ರೀತಿ ಧ್ರುವೀಕರಣ ಮಾಡಿರುವ ಕಾರಣದಿಂದಲೇ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಈಶಾನ್ಯದ ರಾಜ್ಯಗಳಲ್ಲಿ ಅತಿಹೆಚ್ಚು ಸ್ಥಾನಗಳನ್ನು ಗೆಲ್ಲುವ ವಿಶ್ವಾಸದಲ್ಲಿವೆ.

ಜನಾಂಗೀಯ ಸಂಘರ್ಷವನ್ನು ವಿರೋಧಿಸಿ ಮಣಿಪುರದ ಯುವತಿಯೊಬ್ಬಳು ನವದಹಲಿಯಲ್ಲಿ ಪ್ರತಿಭಟನೆ ನಡೆಸಿದ್ದರು –ಪಿಟಿಐ ಚಿತ್ರ

'ಇನ್ನರ್ ಮಣಿಪುರ' ಕ್ಷೇತ್ರದ ಎಲ್ಲ ಮತಗಟ್ಟೆಗಳಲ್ಲಿ ಹಾಗೂ 'ಔಟರ್ ಮಣಿಪುರ' ಕ್ಷೇತ್ರದ ಕೆಲವು ಮತಗಟ್ಟೆಗಳಲ್ಲಿ ಏ. 19ರಂದು ಮತದಾನ ನಡೆಯಲಿದೆ. 'ಔಟರ್ ಮಣಿಪುರ'ದ ಉಳಿದ ಮತಗಟ್ಟೆಗಳಲ್ಲಿ ಏ.26ರಂದು ಮತದಾನ ನಡೆಯಲಿದೆ

ನೃತ್ಯ

ಲೋಕಸಭಾ ಚುನಾವಣೆ ಪ್ರಚಾರದ ಭಾಗವಾಗಿ ಬಾಂಕುಡಾ ಜಿಲ್ಲೆಯ ರಾಯಪುರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಲಾವಿದರ ಜೊತೆ ನೃತ್ಯ ಮಾಡಿದರು –ಪಿಟಿಐ ಚಿತ್ರ

'ವಿವಾದಗಳ 'ರಾಣಿ' ಕಂಗನಾ'

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದ ಲೋಕೋಪಯೋಗಿ ಸಚಿವ ವಿಕ್ರಮಾದಿತ್ಯ ಸಿಂಗ್ ಅವರು ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಅವರನ್ನು 'ವಿವಾದಗಳ ರಾಣಿ' ಎಂದು ಸೋಮವಾರ ಹೇಳಿದ್ದಾರೆ.

'ಕಂಗನಾ ಉತ್ತಮ ನಟಿ ಎಂಬುದರಲ್ಲಿ ಅನುಮಾನವಿಲ್ಲ. ಆದರೆ, ಅವರು 'ವಿವಾದಗಳ ರಾಣಿ' ಎನ್ನುವುದನ್ನು ಕೂಡ ನಾವು ಮರೆಯಬಾರದು. ಅದರ ಬಗ್ಗೆ ಅವರು ಚಿಂತಿಸಿದರೆ ಮತ್ತು ಕಾಲದಿಂದ ಕಾಲಕ್ಕೆ ಅವರು ಹೇಳಿದ ಮಾತುಗಳು ಚುನಾವಣೆಯಲ್ಲಿ ಉಲ್ಲೇಖವಾಗದಿದ್ದರೆ, ಆಗ ಆಕೆಗೆ ಜೈ ಶ್ರೀರಾಮ್ ಹೇಳುತ್ತೇನೆ' ಎಂದು ಮಾಧ್ಯಮಗಳಿಗೆ ತಿಳಿಸಿದರು.

'ಚುನಾವಣೆಯಲ್ಲಿ ಎಲ್ಲ ವಿಚಾರಗಳನ್ನೂ ಪ್ರಸ್ತಾಪಿಸಲಾಗುತ್ತದೆ ಮತ್ತು ಕಂಗನಾ ಹಿಮಾಚಲ ಪ್ರದೇಶದ ಜನರಿಗೆ ಉತ್ತರಿಸಬೇಕಾಗುತ್ತದೆ' ಎಂದಿದ್ದಾರೆ.

ವಿಕ್ರಮಾದಿತ್ಯ ಸಿಂಗ್, ಮಂಡಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿಯಾಗಿದ್ದಾರೆ. ಅವರು ಅಥವಾ ಅವರ ತಾಯಿ ಪ್ರತಿಭಾ ಸಿಂಗ್ ಮಂಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗುವ ಸಾಧ್ಯತೆಯಿದೆ. ಪ್ರತಿಭಾ, ಮಂಡಿ ಕ್ಷೇತ್ರದ ಹಾಲಿ ಸಂಸದರಾಗಿದ್ದಾರೆ.

'ಗೋಮಾಂಸ ತಿನ್ನುವುದಿಲ್ಲ'

ತಾನು ಗೋಮಾಂಸ ತಿನ್ನುತ್ತೇನೆ ಎನ್ನುವ ಆರೋಪದ ಬಗ್ಗೆ 'ಎಕ್ಸ್' ವೇದಿಕೆಯಲ್ಲಿ ಪ್ರತಿಕ್ರಿಯಿಸಿರುವ ಕಂಗನಾ ರನೌತ್, 'ನನ್ನ ಬಗ್ಗೆ ಆಧಾರರಹಿತ ಗಾಳಿಸುದ್ದಿಗಳನ್ನು ಹರಡುತ್ತಿರುವುದು ನಾಚಿಕೆಗೇಡು. ಜನರಿಗೆ ನನ್ನ ಬಗ್ಗೆ ಗೊತ್ತಿದೆ. ನಾನು ಹೆಮ್ಮೆಯ ಹಿಂದೂ ಎನ್ನುವುದನ್ನು ಅರಿತಿರುವ ಅವರನ್ನು ಯಾವುದೇ ಕಾರಣಕ್ಕೂ ದಾರಿ ತಪ್ಪಿಸಲಾಗದು. ನಾನು ಗೋಮಾಂಸವನ್ನಾಗಲಿ, ಯಾವುದೇ ರೆಡ್ ಮೀಟ್ ತಿನ್ನುವುದಿಲ್ಲ' ಎಂದಿದ್ದಾರೆ.

ಪ್ರಧಾನಿ ಮೋದಿಗೆ ತಿರುಗೇಟು ನೀಡಿದ ಮಲ್ಲಿಕಾರ್ಜುನ ಖರ್ಗೆ

'ಮುಸ್ಲಿಂ ಲೀಗ್ ಬೆಂಬಲಿಸಿದ್ದ ಬಿಜೆಪಿ'

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಮೋದಿ–ಶಾ ಅವರ ರಾಜಕೀಯ ಹಾಗೂ 'ತಾತ್ವಿಕ ಪೂರ್ವಜರು' ಸ್ವಾತಂತ್ರ್ಯ ಹೋರಾಟದಲ್ಲಿ ಭಾರತಕ್ಕೆ ಬದಲಾಗಿ ಬ್ರಿಟಿಷರನ್ನು ಮತ್ತು ಮುಸ್ಲಿಂ ಲೀಗ್ ಅನ್ನು ಬೆಂಬಲಿಸಿದ್ದರು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಹೇಳಿದ್ದಾರೆ.

'ಕಾಂಗ್ರೆಸ್ ಪ್ರಣಾಳಿಕೆ ಮುಸ್ಲಿಂ ಲೀಗ್ ಪ್ರತಿರೂಪದಂತಿದೆ' ಎನ್ನುವ ಪ್ರಧಾನಿ ಮೋದಿ ಹೇಳಿಕೆಗೆ ಅವರು ತಿರುಗೇಟು ನೀಡಿದರು. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ತುಷ್ಟೀಕರಣ ಮಾಡಿದೆ ಎಂದಿದ್ದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಪಕ್ಷವು ಏಕೆ ಬಹುಸಂಖ್ಯಾತರ ವಿರುದ್ಧವಿದೆ ಎನ್ನುವುದಕ್ಕೆ ಉತ್ತರಿಸಬೇಕೆಂದು ಕೇಳಿದ್ದರು.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಖರ್ಗೆ, 'ದೇಶದ ಸಾಮಾನ್ಯ ಜನರ ಬೇಡಿಕೆ, ಅಗತ್ಯ, ಆಶೋತ್ತರಗಳಿಂದ ಪ್ರೇರಿತವಾದ ಕಾಂಗ್ರೆಸ್‌ನ 'ನ್ಯಾಯ ಪತ್ರ'ಕ್ಕೆ ವಿರುದ್ಧವಾಗಿ ಇಂದು ಕೂಡ ಬಿಜೆಪಿ, ಮುಸ್ಲಿಂ ಲೀಗ್ ಅನ್ನು ಆವಾಹಿಸಿಕೊಂಡಿದೆ' ಎಂದು ಟೀಕಿಸಿದರು.

'1942ರಲ್ಲಿ ಮೌಲಾನಾ ಆಜಾದ್ ಅವರ ಅಧ್ಯಕ್ಷತೆಯಲ್ಲಿ ಮಹಾತ್ಮ ಗಾಂಧಿ ಅವರು 'ಕ್ವಿಟ್ ಇಂಡಿಯಾ'ಗೆ ಕರೆ ನೀಡಿದಾಗ ಅದನ್ನು 'ಮೋದಿ–ಶಾ ಅವರ 'ತಾತ್ವಿಕ ಪೂರ್ವಜರು' ವಿರೋಧಿಸಿದ್ದರು' ಎಂದು ಕುಟುಕಿದರು.

'1940ರಲ್ಲಿ ಶ್ಯಾಮ ಪ್ರಸಾದ್ ಮುಖರ್ಜಿ ಬಂಗಾಳ, ಸಿಂಧ್ ಮತ್ತು ವಾಯವ್ಯ ಗಡಿಯಲ್ಲಿ (ನಾರ್ತ್ ವೆಸ್ಟ್ ಫ್ರಾಂಟಿಯರ್) ಮುಸ್ಲಿಂ ಲೀಗ್ ಜತೆ ಮೈತ್ರಿ ಮಾಡಿಕೊಂಡು ತಮ್ಮ ಸರ್ಕಾರಗಳನ್ನು ರಚಿಸಿದ್ದರು ಎನ್ನುವುದು ಎಲ್ಲರಿಗೂ ಗೊತ್ತಿದೆ' ಎಂದು ಖರ್ಗೆ ಹೇಳಿದರು.

'1942ರ ಕ್ವಿಟ್ ಇಂಡಿಯಾ ಚಳವಳಿಯನ್ನು ಹೇಗೆ ಎದುರಿಸಬೇಕು, ಕಾಂಗ್ರೆಸ್ ಅನ್ನು ಹೇಗೆ ದಮನ ಮಾಡಬೇಕು ಎಂದು ಶ್ಯಾಮ ಪ್ರಸಾದ್ ಮುಖರ್ಜಿ ಆಗಿನ ಬ್ರಿಟಿಷ್ ಗವರ್ನರ್‌ಗೆ ಬರೆದಿರಲಿಲ್ಲವೇ, ಅದಕ್ಕಾಗಿ ಭಾರತೀಯರು ಬ್ರಿಟಿಷರನ್ನು ನಂಬಬೇಕು ಎಂದು ಅವರು ಹೇಳಿರಲಿಲ್ಲವೇ' ಎಂದು ಖರ್ಗೆ ಪ್ರಶ್ನಿಸಿದ್ದಾರೆ.

'ಮೋದಿ–ಶಾ ಮತ್ತು ಅವರಿಂದ ನೇಮಕವಾಗಿರುವ ಅಧ್ಯಕ್ಷರು ಇಂದು ಕಾಂಗ್ರೆಸ್ ಪ್ರಣಾಳಿಕೆ ಬಗ್ಗೆ ಸುಳ್ಳುಗಳನ್ನು ಹರಡುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

'ಎಸ್‌ಸಿ, ಎಸ್‌ಟಿ ಮಹಿಳೆಯರ ಖಾತೆಗಳಿಗೆ ₹1 ಲಕ್ಷ ಜಮೆ'

ಸಿವನಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸುವ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನೇತೃತ್ವದ ಸರ್ಕಾರವು ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ಸಮುದಾಯಗಳ ಮಹಿಳೆಯರ ಖಾತೆಗಳಿಗೆ ₹1 ಲಕ್ಷ ಜಮೆ ಮಾಡಲಿದೆ ಎಂದು ಘೋಷಿಸಿದರು.

ಮಧ್ಯಪ್ರದೇಶದ ಆದಿವಾಸಿ ಜನರೊಂದಿಗೆ ಸಂವಾದ ನಡೆಸಿದ ಅವರು, 'ನೀವು ಭೂಮಿಯ ನಿಜವಾದ ಮಾಲೀಕರಾಗಿದ್ದು, ನಿಮ್ಮ ಸಮುದಾಯದ ಯಾವುದೇ ವ್ಯಕ್ತಿ ದೇಶದ ಉನ್ನತ 100 ಕಂಪನಿಗಳ ಪ್ರವರ್ತಕರಲ್ಲೊಬ್ಬರಾಗಲಿ, ಅವುಗಳ ವ್ಯವಸ್ಥಾಪನಾ ತಂಡದ ಭಾಗವಾಗಲಿ ಆಗಿಲ್ಲ' ಎಂದು ಸೋಮವಾರ ಹೇಳಿದರು.

ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಮೂಲನಿವಾಸಿಗಳ ಭೂಮಿ ವಿಷಯವನ್ನು ಒಂದು ವರ್ಷದ ಒಳಗೆ ಇತ್ಯರ್ಥಪಡಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರಧಾನಿ ವಿರುದ್ಧ ಕಾಂಗ್ರೆಸ್ ದೂರು (ನವದೆಹಲಿ ವರದಿ): ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಪಕ್ಷವನ್ನು ಗುರಿಯಾಗಿಸಿಕೊಂಡಿಸಿರುವುದು ಮತ್ತು ಪಕ್ಷದ ಲೋಕಸಭಾ ಚುನಾವಣೆಯ ಪ್ರಣಾಳಿಕೆಯನ್ನು ಮುಸ್ಲಿಂ ಲೀಗ್‌ಗೆ ಹೋಲಿಸಿರುವುದರ ವಿರುದ್ಧ ಪಕ್ಷದ ನಿಯೋಗವು ಚುನಾವಣಾ ಆಯೋಗಕ್ಕೆ ಸೋಮವಾರ ದೂರು ಸಲ್ಲಿಸಿದೆ. ಸರ್ಕಾರಿ ಕಟ್ಟಡಗಳಲ್ಲಿ ಮತ್ತು ಕಾಲೇಜುಗಳಲ್ಲಿ ಪ್ರಧಾನಿಯ ಚಿತ್ರ ಮತ್ತು ಬೃಹತ್ ಕಟೌಟ್ ಅಳವಡಿಸಿರುವುದರ ವಿರುದ್ಧವೂ ದೂರು ನೀಡಿರುವ ನಿಯೋಗವು, ಸಮಾನ ಸ್ಪರ್ಧೆಯ ಅವಕಾಶ ಕಲ್ಪಿಸುವ ದೃಷ್ಟಿಯಿಂದ ಅವನ್ನು ತೆಗೆದುಹಾಕುವಂತೆ ಒತ್ತಾಯಿಸಿದೆ.

'ಕಾಂಗ್ರೆಸ್ ಹಾಗಲಕಾಯಿ ಇದ್ದಂತೆ'



ನರೇಂದ್ರ ಮೋದಿ

ಚಂದ್ರಪುರ (ಪಿಟಿಐ): ಕಾಂಗ್ರೆಸ್ ಪಕ್ಷವನ್ನು ಹಾಗಲಕಾಯಿಗೆ ಹೋಲಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ತುಪ್ಪದ ಜತೆ ಹುರಿದರೂ ಅಥವಾ ಸಕ್ಕರೆ ಜತೆ ಬೆರೆಸಿದರೂ ಅದರ ರುಚಿ ಬದಲಾಗುವುದಿಲ್ಲ, ಅದೇ ರೀತಿ ಕಾಂಗ್ರೆಸ್ ಪಕ್ಷವು ದೇಶದ ಎಲ್ಲ ಸಮಸ್ಯೆಗಳ ಮೂಲವಾಗಿದೆ ಎಂದು ಪ್ರತಿಪಾದಿಸಿದರು.

ಮಹಾರಾಷ್ಟ್ರದಲ್ಲಿ ಸೋಮವಾರ ತಮ್ಮ ಮೊದಲ ಚುನಾವಣಾ ರ‍್ಯಾಲಿ ನಡೆಸಿದ ಪ್ರಧಾನಿ, 'ದೇಶದ ಎಲ್ಲ ಸಮಸ್ಯೆಗಳಿಗೂ ಕಾಂಗ್ರೆಸ್ ಕಾರಣ. ಧರ್ಮದ ಆಧಾರದ ಮೇಲೆ ದೇಶ ವಿಭಜನೆಯಾಗಲು ಯಾರು ಕಾರಣ? ಕಾಶ್ಮೀರ, ನಕ್ಸಲಿಸಂ..? ರಾಮ ಮಂದಿರ ನಿರ್ಮಾಣವನ್ನು ವಿರೋಧಿಸಿದ್ದು ಮತ್ತು ರಾಮನ ಅಸ್ತಿತ್ವವನ್ನು ಪ್ರಶ್ನಿಸಿದ್ದು ಯಾರು? ರಾಮ ಮಂದಿರದ ಉದ್ಘಾಟನೆಯ ಆಹ್ವಾನವನ್ನು ತಿರಸ್ಕರಿಸಿದವರು ಯಾರು?' ಎಂದು ಅವರು ಚಂದ್ರಪುರದಲ್ಲಿ ನೆರೆದಿದ್ದ ಜನರನ್ನು ಪ್ರಶ್ನಿಸಿದರು.

ಶೇ 16 ಅಭ್ಯರ್ಥಿಗಳಿಗೆ ಕ್ರಿಮಿನಲ್ ನಂಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನಕ್ಕೆ ಅಖಾಡ ಸಜ್ಜಾಗಿದೆ. 21 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 102 ಕ್ಷೇತ್ರಗಳಲ್ಲಿ 1,625 ಅಭ್ಯರ್ಥಿಗಳು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಕಣದಲ್ಲಿರುವ ಪ್ರತಿ 10 ಅಭ್ಯರ್ಥಿಗಳಲ್ಲಿ ಒಬ್ಬರು ಗಂಭೀರ ಕ್ರಿಮಿನಲ್ ಪ್ರಕರಣಗಳನ್ನು ಹೊಂದಿದ್ದಾರೆ. ಪ್ರತಿ ಮೂವರಲ್ಲಿ ಒಬ್ಬರು ಕೋಟ್ಯಧಿಪತಿ. ಕಾಂಗ್ರೆಸ್‌ನ ಹಿರಿಯ ನಾಯಕ ಕಮಲನಾಥ್ ಪುತ್ರ ನಕುಲ್ ನಾಥ್ ಅತ್ಯಂತ ಶ್ರೀಮಂತ ಉಮೇದುವಾರ.

ಅಭ್ಯರ್ಥಿಗಳ ಅಪರಾಧ ಹಿನ್ನೆಲೆ, ಹಣಕಾಸು, ಶಿಕ್ಷಣ, ಲಿಂಗ ಹಾಗೂ ಇತರ ವಿಷಯಗಳ ಬಗ್ಗೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸೋಮವಾರ ವರದಿ ಪ್ರಕಟಿಸಿದೆ.

ಅಭ್ಯರ್ಥಿಯೊಬ್ಬರು ಅತ್ಯಾಚಾರ ಪ್ರಕರಣದ ಆರೋಪಿಯಾಗಿದ್ದಾರೆ. 10 ಅಭ್ಯರ್ಥಿಗಳು ಯಾವುದೇ ಆಸ್ತಿ ಹೊಂದಿಲ್ಲವೆಂದು ಘೋಷಿಸಿಕೊಂಡಿದ್ದಾರೆ. ಮೊದಲ ಹಂತದ ಮತದಾನ 19 ರಂದು ನಡೆಯಲಿದೆ

ಅಭ್ಯರ್ಥಿಗಳ ಪ್ರವರ

1,618 ಅಭ್ಯರ್ಥಿಗಳ ಪ್ರಮಾಣಪತ್ರ ವಿಶ್ಲೇಷಣೆ	252 ಕ್ರಿಮಿನಲ್ ಪ್ರಕರಣ ಎದುರಿಸುತ್ತಿರುವವರು	161 ಗಂಭೀರ ಕ್ರಿಮಿನಲ್ ಪ್ರಕರಣ

35 ದ್ವೇಷ ಭಾಷಣ	19 ಕೊಲೆ ಯತ್ನ	18 ಮಹಿಳೆಯರ ಮೇಲಿನ ಅಪರಾಧ	15 ಶಿಕ್ಷೆಗೊಳಗಾದವರು	7 ಕೊಲೆ

ಗಂಭೀರ ಪ್ರಕರಣ ಹೊಂದಿರುವ ಪಕ್ಷ ಮತ್ತು ಅಭ್ಯರ್ಥಿಗಳು

ಪಕ್ಷ	ಅಭ್ಯರ್ಥಿಗಳು
ಟಿಎಂಸಿ	1
ಆರ್‌ಜೆಡಿ	2
ಎಸ್‌ಪಿ	2
ಡಿಎಂಕೆ	6
ಎಐಎಡಿಎಂಕೆ	6
ಕಾಂಗ್ರೆಸ್	8
ಬಿಎಸ್ಪಿ	8
ಬಿಜೆಪಿ	14

ಹಣ ಮತ್ತು ಅಭ್ಯರ್ಥಿಗಳು

ಕೋಟ್ಯಧಿಪತಿಗಳು	450
ಆರ್‌ಜೆಡಿ	4
ಟಿಎಂಸಿ	4
ಬಿಎಸ್ಪಿ	18
ಡಿಎಂಕೆ	21
ಎಐಎಡಿಎಂಕೆ	35
ಕಾಂಗ್ರೆಸ್	49
ಬಿಜೆಪಿ	69

ಆಸ್ತಿ ವಿವರ

₹4.51 ಕೋಟಿ ಅಭ್ಯರ್ಥಿಗಳ ಸರಾಸರಿ ಆಸ್ತಿ	₹35.61 ಕೋಟಿ ಎಐಎಡಿಎಂಕೆ
₹31.22 ಕೋಟಿ ಡಿಎಂಕೆ	₹27.79 ಕೋಟಿ ಕಾಂಗ್ರೆಸ್
₹22.37 ಕೋಟಿ ಬಿಜೆಪಿ	₹8.93 ಕೋಟಿ ಆರ್‌ಜೆಡಿ
₹6.67 ಕೋಟಿ ಎಸ್ಪಿ	₹3.72 ಕೋಟಿ ಟಿಎಂಸಿ

ಕಣದ ಕುಬೇರರು

₹716.94 ಕೋಟಿ ನಕುಲ್ ನಾಥ್ (ಛಿಂದ್ವಾರ, ಕಾಂಗ್ರೆಸ್)	₹662.46 ಕೋಟಿ ಅಶೋಕ್ ಕುಮಾರ್ (ಈರೋಡ್, ಎಐಎಡಿಎಂಕೆ);
₹304.92	ದೇವನಾಥನ್ ಯಾದವ್ (ಶಿವಗಂಗಾ, ಬಿಜೆಪಿ)

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್)

ಚುಟುಕು

'ಕೈ' ಬ್ಯಾನರ್‌ನಲ್ಲಿ ಬಿಜೆಪಿ ಅಭ್ಯರ್ಥಿ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಮಂಡಲಾ ಲೋಕಸಭಾ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ಅವರ ಚುನಾವಣಾ ಪ್ರಚಾರದ ವೇಳೆ ಕಟ್ಟಿದ್ದ ಬ್ಯಾನರ್‌ನಲ್ಲಿ ಕೇಂದ್ರ ಸಚಿವ, ಬಿಜೆಪಿ ಅಭ್ಯರ್ಥಿ ಫಗ್ಗನ್ ಸಿಂಗ್ ಕುಲಸ್ತೆ ಅವರ ಫೋಟೊ ಇದ್ದದ್ದು ಕಾಂಗ್ರೆಸ್ ನಾಯಕರಿಗೆ ಮುಜುಗರ ಉಂಟುಮಾಡಿದೆ.

ಈ ಘಟನೆಯನ್ನು ಕಾಂಗ್ರೆಸ್, 'ಮಾನವ ದೋಷ' ಎಂದು ಹೇಳಿದರೆ, ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು, 'ಚುನಾವಣೆಗೂ ಮುನ್ನವೇ ಕಾಂಗ್ರೆಸ್ ಸೋಲೊಪ್ಪಿಕೊಂಡಿದೆ' ಎಂದು ವ್ಯಂಗ್ಯವಾಡಿದ್ದಾರೆ.

ಮಂಡಲಾ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಧನೋರಾ ಎಂಬಲ್ಲಿ ಸೋಮವಾರ ರಾಹುಲ್ ಅವರ ಪ್ರಚಾರ ಸಭೆ ಏರ್ಪಡಿಸಲಾಗಿತ್ತು. ವೇದಿಕೆಯಲ್ಲಿ ಕಟ್ಟಿದ್ದ ಬ್ಯಾನರ್‌ನಲ್ಲಿ ಕುಲಸ್ತೆ ಅವರ ಚಿತ್ರವೂ ಇತ್ತು. ತಪ್ಪು ಗಮನಕ್ಕೆ ಬಂದ ಕೂಡಲೇ ಕಾಂಗ್ರೆಸ್ ಕಾರ್ಯಕರ್ತರು ಕುಲಸ್ತೆ ಅವರ ಚಿತ್ರದ ಮೇಲೆ ಕಾಂಗ್ರೆಸ್ ಶಾಸಕ ರಜನೀಶ್ ಹರವಂಶ್ ಸಿಂಗ್ ಅವರ ಚಿತ್ರ ಅಂಟಿಸಿದ್ದಾರೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ತಲಾ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್, ನ್ಯಾಷನಲ್ ಕಾನ್ಫರೆನ್ಸ್ ನಿರ್ಧಾರ

ನವದೆಹಲಿ (ಪಿಟಿಐ): ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷಗಳು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನ ಲೋಕಸಭಾ ಕ್ಷೇತ್ರಗಳ ಸೀಟು ಹಂಚಿಕೆಯನ್ನು ಅಂತಿಮಗೊಳಿಸಿದ್ದು, ತಲಾ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿವೆ.

'ಕಾಂಗ್ರೆಸ್ ಪಕ್ಷವು ಉಧಂಪುರ, ಜಮ್ಮು ಮತ್ತು ಲಡಾಖ್ ಕ್ಷೇತ್ರಗಳಲ್ಲಿ ಹಾಗೂ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಅನಂತನಾಗ್, ಶ್ರೀನಗರ ಮತ್ತು ಬಾರಾಮಲ್ಲಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿವೆ' ಎಂದು ಎನ್‌ಸಿ ಮುಖಂಡ ಒಮರ್ ಅಬ್ದುಲ್ಲಾ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕಾಂಗ್ರೆಸ್ ಸೀಟು ಹಂಚಿಕೆ ಸಮಿತಿ ಸದಸ್ಯ ಸಲ್ಮಾನ್ ಖುರ್ಷಿದ್ ಹಾಜರಿದ್ದರು.

ಜಿಗಿ–ನೆಗೆದಾಟ

ಬೀರೇಂದ್ರ ಸಿಂಗ್ ಕಾಂಗ್ರೆಸ್‌ಗೆ

ಚಂಡೀಗಢ (ಪಿಟಿಐ): ಕೇಂದ್ರದ ಮಾಜಿ ಸಚಿವ ಬೀರೇಂದ್ರ ಸಿಂಗ್ ಅವರು ಬಿಜೆಪಿ ತೊರೆದಿದ್ದು, ಮಂಗಳವಾರ ಕಾಂಗ್ರೆಸ್ ಪಕ್ಷ ಸೇರಲಿದ್ದಾರೆ.

ಬೀರೇಂದ್ರ ಅವರ ಮಗ, ಬ್ರಿಜೇಂದರ್ ಸಿಂಗ್ ಅವರು ತಿಂಗಳ ಹಿಂದೆಯಷ್ಟೇ ಕಾಂಗ್ರೆಸ್ ಸೇರಿದ್ದರು. ಬೀರೇಂದ್ರ ಅವರ ಪತ್ನಿ, ಹರಿಯಾಣದ ಬಿಜೆಪಿಯ ಮಾಜಿ ಶಾಸಕಿ ಪ್ರೇಮಲತಾ ಅವರೂ ಬಿಜೆಪಿ ತೊರೆದಿದ್ದಾರೆ.

'ಬಿಜೆಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದು, ರಾಜೀನಾಮೆ ಪತ್ರವನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಕಳುಹಿಸಿದ್ದೇನೆ. ಪತ್ನಿ ಪ್ರೇಮಲತಾ ಅವರೂ ಬಿಜೆಪಿ ತೊರೆದಿದ್ದಾರೆ. ಮಂಗಳವಾರ ಕಾಂಗ್ರೆಸ್ ಪಕ್ಷ ಸೇರಲಿದ್ದೇವೆ' ಎಂದು ಬೀರೇಂದ್ರ ಅವರು ನವದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಮಾರು 4 ದಶಕಗಳ ಕಾಲ ಕಾಂಗ್ರೆಸ್‌ನಲ್ಲಿದ್ದ ಬೀರೇಂದ್ರ, 10 ವರ್ಷದ ಹಿಂದೆ ಬಿಜೆಪಿ ಸೇರಿದ್ದರು. ಇದೀಗ ಮತ್ತೆ ಕೈ ಪಾಳಯಕ್ಕೆ ಮರಳಿದ್ದಾರೆ.

ಎಂಥಾ ಮಾತು!

ನರೇಂದ್ರ ಮೋದಿ ಅವರ 10 ವರ್ಷಗಳ ಆಡಳಿತದಲ್ಲಿ ದೇಶದ ಗಡಿಗಳು ಸುರಕ್ಷಿತವಾಗಿದ್ದು, ವಿಶ್ವದಲ್ಲಿ ಭಾರತದ ಬಗ್ಗೆ ಗೌರವ ಹೆಚ್ಚಿದೆ. ಮೋದಿ ಅವರ ನಾಯಕತ್ವದಡಿ ಭಾರತವನ್ನು ಜಾಗತಿಕ ಶಕ್ತಿಯನ್ನಾಗಿಸುವುದು ಎನ್‌ಡಿಎ ಸರ್ಕಾರದ ಗುರಿ. ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬಲ್ಲ ನೇತಾ (ನಾಯಕ), ನೀತಿ (ಯೋಜನೆಗಳು) ಮತ್ತು ನಿಯತ್ (ಉದ್ದೇಶ) ವಿರೋಧ ಪಕ್ಷಗಳ ಬಳಿಯಿಲ್ಲ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ಶ್ರೀಕೃಷ್ಣನ ಜನ್ಮಭೂಮಿ ಎಂದೇ ಪ್ರಸಿದ್ಧವಾಗಿರುವ ಉತ್ತರ ಪ್ರದೇಶದ ಮಥುರಾದ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಮೂರನೇ ಬಾರಿಯೂ ನಟಿ ಹೇಮಾ ಮಾಲಿನಿ ಅವರನ್ನು ಕಣಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಹೇಮಾ ಅವರು 2,90,023 ಮತಗಳ ಅಂತರದಿಂದ ರಾಷ್ಟ್ರೀಯ ಲೋಕದಳದ (ಆರ್‌ಎಲ್‌ಡಿ) ಅಭ್ಯರ್ಥಿ ಕುನ್ವರ್ ನರೇಂದ್ರ ಸಿಂಗ್ ಅವರನ್ನು ಪರಾಭವಗೊಳಿಸಿದ್ದರು. ಕ್ಷೇತ್ರಕ್ಕೆ ಹೊರಗಿನವರು ಎಂಬ ಹಣೆಪಟ್ಟಿ ಇದ್ದರೂ ಇಲ್ಲಿನ ಜನರು ಹೇಮಾ ಅವರ ಕೈಬಿಟ್ಟಿಲ್ಲ. ಇದೇ ವಿಶ್ವಾಸದಿಂದ ಅವರು ಮೂರನೇ ಬಾರಿಯೂ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಹೇಮಾ ಅವರ ವಿರುದ್ಧ ಸೆಣಸಲು ಕಾಂಗ್ರೆಸ್, ಈ ಬಾರಿ ಮುಕೇಶ್ ಧನ್‌ಗರ್ ಅವರನ್ನು ಅಖಾಡಕ್ಕಿಳಿಸಿದೆ. ಉತ್ತರ ಪ್ರದೇಶದಲ್ಲಿ ಸಮಾಜವಾದ ಪಕ್ಷವು 'ಇಂಡಿಯಾ' ಮೈತ್ರಿಕೂಟದ ಜೊತೆಗಿರುವುದರಿಂದ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಗೆ ಅನುಕೂಲಕರ ವಾತಾವರಣ ಇದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. 2009ರಲ್ಲಿ ಈ ಕ್ಷೇತ್ರದಲ್ಲಿ ಆರ್‌ಎಲ್‌ಡಿಯ ಜಯಂತ್ ಚೌಧರಿ ಗೆದ್ದಿದ್ದರು. ಅನಂತರ ಆ ಪಕ್ಷವು ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಬಿಎಸ್‌ಪಿಯು ಈ ಬಾರಿ ಸುರೇಶ್ ಸಿಂಗ್ ಅವರನ್ನು ಅಭ್ಯರ್ಥಿಯಾಗಿಸಿದೆ. ಬಿಎಸ್‌ಪಿಯು ಅಭ್ಯರ್ಥಿಯನ್ನು ಕಣಕ್ಕಿಳಿಸಿರುವುದರಿಂದ ಕಾಂಗ್ರೆಸ್‌ನ ಮತಗಳು ವಿಭಜನೆಯಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಈ ಬಾರಿ ಬಾಕ್ಸರ್ ವಿಜೇಂದರ್ ಸಿಂಗ್ ಅವರನ್ನು ಕಾಂಗ್ರೆಸ್ ಇಲ್ಲಿಂದ ಸ್ಪರ್ಧೆಗಿಳಿಸಲಿದೆ ಎನ್ನುವ ವದಂತಿ ದಟ್ಟವಾಗಿತ್ತು. ಆದರೆ ವಿಜೇಂದರ್ ಅವರು ಈಚೆಗೆ ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿದ್ದರು.

ಮುಖಾಮುಖಿ

ಮೀರಠ್ (ಉತ್ತರ ಪ್ರದೇಶ)

ಅರುಣ್ ಗೋವಿಲ್
(ಬಿಜೆಪಿ)

ಅಯೋಧ್ಯೆಯಲ್ಲಿ ರಾಮ ಮಂದಿರ ಸಾಕಾರಗೊಂಡಿರುವ ಕಾರಣ ಈ ಬಾರಿ ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ವಿಶ್ವಾಸದಲ್ಲಿರುವ ಬಿಜೆಪಿ ವರಿಷ್ಠರು ಉತ್ತರ ಪ್ರದೇಶದ ಮೀರಠ್ ಕ್ಷೇತ್ರದಿಂದ ಕಿರುತೆರೆ ನಟ ಅರುಣ್ ಗೋವಿಲ್ ಅವರನ್ನು ಕಣಕ್ಕಿಳಿಸಿದ್ದಾರೆ. ಅರುಣ್ ಅವರು 1987ರಲ್ಲಿ ದೂರದರ್ಶನದಲ್ಲಿ ಪ್ರಸಾರಗೊಂಡಿದ್ದ ರಮಾನಂದ ಸಾಗರ್ ಅವರ 'ರಾಮಾಯಣ' ಧಾರಾವಾಹಿಯಲ್ಲಿ ರಾಮನ ಪಾತ್ರದಲ್ಲಿ ನಟಿಸುವ ಮೂಲಕ ಮನೆ ಮಾತಾಗಿದ್ದರು. ಇದೇ ಪ್ರಸಿದ್ಧಿಯೂ ಅವರಿಗೆ ಗೆಲುವು ತಂದುಕೊಡಬಹುದು ಎಂಬುದು ಬಿಜೆಪಿಯ ಲೆಕ್ಕಾಚಾರ. ಅವರು ಮೀರಠ್‌ನವರೇ ಆಗಿರುವುದರಿಂದ ಸ್ಥಳೀಯವಾಗಿಯೂ ಹೆಚ್ಚು ಜನಜನಿತರು. ಇದು ಅವರಲ್ಲೂ ಗೆಲುವಿನ ವಿಶ್ವಾಸ ಹೆಚ್ಚಿಸಿದೆ. ಅರುಣ್, 2021ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 1980ರಲ್ಲಿ ಅವರು ಕಾಂಗ್ರೆಸ್ ಪರವಾಗಿ ಚುನಾವಣಾ ಪ್ರಚಾರ ನಡೆಸಿದ್ದರು. ಬಳಿಕ ರಾಜಕೀಯದಿಂದ ದೂರವಿದ್ದರು.

V/S

ಸುನಿತಾ ವರ್ಮಾ
(ಸಮಾಜವಾದಿ ಪಕ್ಷ)

ಅರುಣ್ ಗೋವಿಲ್ ಅವರಿಗೆ ಪೈಪೋಟಿ ನೀಡಲು ಸಮಾಜವಾದಿ ಪಕ್ಷವು (ಎಸ್‌ಪಿ) ಸುನಿತಾ ವರ್ಮಾ ಅವರನ್ನು ಅಖಾಡಕ್ಕಿಳಿಸಿದೆ. ಸುನಿತಾ ಅವರು ಮಾಜಿ ಮೇಯರ್ ಆಗಿದ್ದು, ಸ್ಥಳೀಯಾಗಿ ಪ್ರಭಾವಿ ನಾಯಕಿಯಾಗಿದ್ದಾರೆ. 2007ರಲ್ಲಿ ಹಸ್ತಿನಾಪುರ ವಿಧಾನಸಭಾ ಕ್ಷೇತ್ರದಿಂದ ಬಿಎಸ್‌ಪಿಯಲ್ಲಿ ಸ್ಪರ್ಧಿಸಿ ಗೆದ್ದಿದ್ದ ಯೋಗೇಶ್ ವರ್ಮಾ ಅವರ ಪತ್ನಿಯಾಗಿದ್ದಾರೆ. ಸಮಾಜವಾದಿ ಪಕ್ಷವು ಆರಂಭದಲ್ಲಿ ಭಾನುಪ್ರತಾಪ್ ಸಿಂಗ್ ಅವರ ಹೆಸರನ್ನು ಈ ಕ್ಷೇತ್ರಕ್ಕೆ ಘೋಷಿಸಿತ್ತು. ಬಿಜೆಪಿಯು ಅರುಣ್ ಗೋವಿಲ್ ಅವರನ್ನು ಅಭ್ಯರ್ಥಿಯಾಗಿಸಿದ ಬಳಿಕ ಭಾನುಪ್ರತಾಪ್ ಬದಲಿಗೆ ಅತುಲ್ ಅವರನ್ನು ಅಭ್ಯರ್ಥಿ ಎಂದು ಘೋಷಣೆ ಮಾಡಲಾಗಿತ್ತು. ಬಳಿಕ ಸುನಿತಾ ಅವರನ್ನು ಅಖಾಡಕ್ಕಿಳಿಸಲಾಗಿದೆ. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಬಿಜೆಪಿಯ ರಾಜೇಂದ್ರ ಅಗರ್‌ವಾಲ್ ಅವರು ಗೆದ್ದಿದ್ದರು. 'ಇಂಡಿಯಾ' ಒಕ್ಕೂಟದ ಜೊತೆಗಿರುವುದರಿಂದ ಎಸ್‌ಪಿ ಅಭ್ಯರ್ಥಿಯ ಗೆಲುವಿನ ನಿರೀಕ್ಷೆ ಹೆಚ್ಚಿದೆ.

ಷೇರುಪೇಟೆ ವಹಿವಾಟು 494



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,513
ಇಂದಿನ ಅಂತ್ಯ	22,666
▲	152
ದಿನದ ಗರಿಷ್ಠ	22,697

ವಿನಿಮಯ ದರ

$ ಡಾಲರ್	83.32
£ ಪೌಂಡ್	105.18
€ ಯುರೊ	90.20
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1510 (1520)
ಸೋಯಾ (ರಿಫೈನ್ಡ್)	₹970 (975)
ಸೂರ್ಯಕಾಂತಿ (ರಿಫೈನ್ಡ್)	₹960 (975)
ಪಾಮೋಲಿನ್	₹965 (970)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹177-405
ದ್ವಿತಳಿ (ಬಿ.ವಿ) ₹225-560

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7500-9450
ಪುತ್ತೂರು	₹5500-8200

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹181
ಆರ್‌ಎಸ್‌ಎಸ್-5 ₹174.50
ಗುಡ್ ಲಾಟ್ ₹164.50

ಇದೇ ಮೊದಲ ಬಾರಿಗೆ ಸಾರ್ವಕಾಲಿಕ ಗರಿಷ್ಠ ● ಗಳಿಕೆ ಕಂಡ ಬಿಎಸ್‌ಇ ಕಂಪನಿಗಳು

₹400 ಲಕ್ಷ ಕೋಟಿ ದಾಟಿದ ಎಂ–ಕ್ಯಾಪ್

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕದಲ್ಲಿ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ಸೋಮವಾರದ ವಹಿವಾಟಿನ ವೇಳೆ ₹400.86 ಲಕ್ಷ ಕೋಟಿಗೆ ಏರಿಕೆಯಾಗಿ, ಸಾರ್ವಕಾಲಿಕ ದಾಖಲೆ ಮುಟ್ಟಿತು.

ಕಳೆದ ವರ್ಷ ಜುಲೈನಲ್ಲಿ ಎಂ–ಕ್ಯಾಪ್ ₹300 ಲಕ್ಷ ಕೋಟಿ ದಾಟಿತ್ತು.

ದಿನದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 494 ಅಂಶಗಳಷ್ಟು ಹೆಚ್ಚಳವಾಗಿ 74,742ಕ್ಕೆ ಸ್ಥಿರವಾಯಿತು. ವಹಿವಾಟಿನ ವೇಳೆ ಇದು 74,869ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ನಿಫ್ಟಿ) 152 ಅಂಶ ಏರಿಕೆಯಾಗಿ 22,666ಕ್ಕೆ ಅಂತ್ಯಗೊಂಡಿತು.

ಮಾರುತಿ ಸುಜುಕಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಎನ್‌ಟಿಪಿಸಿ, ಜೆಎಸ್‌ಡಬ್ಲ್ಯು ಸ್ಟೀಲ್, ಲಾರ್ಸನ್ ಆ್ಯಂಡ್ ಟೊಬ್ರೊ, ರಿಲಯನ್ಸ್ ಇಂಡಸ್ಟ್ರೀಸ್, ಎಕ್ಸಿಸ್ ಬ್ಯಾಂಕ್ ಮತ್ತು ಪವರ್ ಗ್ರಿಡ್ ಕಂಪನಿಗಳು ಷೇರು ಮೌಲ್ಯ ಗಳಿಕೆ ಕಂಡಿವೆ. ನೆಸ್ಲೆ, ವಿಪ್ರೊ, ಎಚ್‌ಸಿಎಲ್ ಟೆಕ್ನಾಲಜೀಸ್, ಟೈಟನ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್ ಮತ್ತು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಷೇರು ಮೌಲ್ಯ ಇಳಿಕೆ ಕಂಡಿದೆ.

ಏಷ್ಯನ್ ಮಾರುಕಟ್ಟೆಯಲ್ಲಿ ಸಿಯೋಲ್, ಟೋಕಿಯೊ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ಕಂಡಿದ್ದರೆ, ಶಾಂಘೈ ಇಳಿಕೆ ಕಂಡಿದೆ. ಬ್ರೆಂಟ್ ಕಚ್ಚಾ ತೈಲ ಬ್ಯಾರಲ್‌ಗೆ ಶೇ 0.81ರಷ್ಟು ಇಳಿಕೆ ಕಂಡು, 90.45 ಡಾಲರ್‌ನಂತೆ ಮಾರಾಟವಾಯಿತು.

ಗಳಿಕೆ ಕಂಡ ಕಂಪನಿಗಳು (ಶೇಕಡಾವಾರು)

3.26	ಮಾರುತಿ ಸುಜುಕಿ
3.22	ಮಹೀಂದ್ರ ಆ್ಯಂಡ್ ಮಹೀಂದ್ರ
2.54	ಎನ್‌ಟಿಪಿಸಿ
2.39	ಜೆಎಸ್‌ಡಬ್ಲ್ಯು ಸ್ಟೀಲ್
1.92	ಎಲ್ ಆ್ಯಂಡ್ ಟಿ

ಇಳಿಕೆ ಕಂಡ ಕಂಪನಿಗಳು (ಶೇಕಡವಾರು)

-1.59	ನೆಸ್ಲೆ ಇಂಡಿಯಾ
-1.09	ವಿಪ್ರೊ
-0.51	ಸನ್‌ಫಾರ್ಮಾ
-0.37	ಎಚ್‌ಸಿಎಲ್ ಟೆಕ್
-0.32	ಟೈಟನ್

ಬಂಧನ್ ಬ್ಯಾಂಕ್ ಷೇರು ಶೇ6ರಷ್ಟು ಇಳಿಕೆ: ಬಂಧನ್ ಬ್ಯಾಂಕ್‌ನ ಸಂಸ್ಥಾಪಕ, ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಚಂದ್ರಶೇಖರ್ ಘೋಷ್ ತಮ್ಮ ಅಧಿಕಾರಾವಧಿ ಪೂರ್ಣಗೊಂಡಾಗ ಕಚೇರಿಯನ್ನು ಬಿಡಲು ನಿರ್ಧರಿಸಿರುವುದರಿಂದ ಬ್ಯಾಂಕ್‌ನ ಷೇರು ಮೌಲ್ಯ ಶೇ 6ಕ್ಕಿಂತ ಹೆಚ್ಚು ಇಳಿಕೆ ಕಂಡಿವೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ಕ್ರಮವಾಗಿ ₹184 ಮತ್ತು ₹185ಕ್ಕೆ ಮುಟ್ಟಿದೆ. ಇದರಿಂದ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯ ₹2,004 ಕೋಟಿ ಇಳಿಕೆ ಆಗಿದ್ದು, ಒಟ್ಟು ಎಂ–ಕ್ಯಾಪ್ ₹29,794 ಕೋಟಿಗೆ ಕುಸಿದಿದೆ.

ವಿಪ್ರೊ ಷೇರು ಮೌಲ್ಯ ಇಳಿಕೆ: ಬೆಂಗಳೂರು ಮೂಲದ ಮಾಹಿತಿ ತಂತ್ರಜ್ಞಾನ ಕಂಪನಿ ವಿಪ್ರೊದ ಸಿಇಒ ಥಿಯರಿ ಡೆಲಾಪೋರ್ಟ್ ತಮ್ಮ ಹುದ್ದೆಗೆ ರಾಜಿನಾಮೆ ಸಲ್ಲಿಸಿರುವುದು ಮತ್ತು ಈ ಸ್ಥಾನಕ್ಕೆ ಶ್ರೀನಿವಾಸ್ ಪಲ್ಲಿಯಾ ಅವರನ್ನು ನೂತನ ಸಿಇಒ ಆಗಿ ನೇಮಿಸಿರುವುದರಿಂದ ಕಂಪನಿಯ ಷೇರಿನ ಮೌಲ್ಯ ಶೇ 1ರಷ್ಟು ಇಳಿದಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 1.09 ಮತ್ತು ಎನ್‌ಎಸ್‌ಇಯಲ್ಲಿ ಶೇ 0.99ರಷ್ಟು ಇಳಿಕೆ ಆಯಿತು. ಷೇರಿನ ಬೆಲೆ ಕ್ರಮವಾಗಿ ₹479 ಮತ್ತು ₹480ಕ್ಕೆ ಮುಟ್ಟಿತು. ಇದರಿಂದ ಕಂಪನಿಯ ಎಂ–ಕ್ಯಾಪ್ ಒಂದೇ ದಿನ ₹2,733 ಕೋಟಿ ಕರಗಿದ್ದು, ಒಟ್ಟು ಮಾರುಕಟ್ಟೆ ಮೌಲ್ಯ ₹2.50 ಲಕ್ಷ ಕೋಟಿಗೆ ಇಳಿಯಿತು.

ಮುಂಬೈ ಧಾರಣೆ

ಶೇಂಗಾ 08-4-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1530)
ಒಂದು ವಾರದ ಡೆಲಿವರಿ	1515 (1525)
ಸೋಯಾ ಕಚ್ಚಾ	920 (930)
ಪಾಮ್ ವಾರದ ಡೆಲಿವರಿ	963 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (890)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹70,850 (69,750)
ಬೆಳ್ಳಿ ಕೆ.ಜಿ ₹81,450 (79,200)
ಆವರಣದಲ್ಲಿ ಶನಿವಾರದ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15200
ಎಸಿ	₹8400
ಆರ್‌ಪಿ	₹15400
ಆರ್‌ಸಿ	₹9620

ಬಿಸಿಲ ಬೇಗೆಗೆ ಮಾಗುತ್ತಿರುವ ಹಣ್ಣು: ಖರೀದಿಗೆ ಹಿಂದೇಟು

ಕೊಳ್ಳುವವರಿಲ್ಲದೆ ಕೊಳೆಯುತ್ತಿದೆ ಬಾಳೆಕಾಯಿ

● ಸುಜಯ್ ಭಟ್

ಸಿದ್ದಾಪುರ (ಉತ್ತರ ಕನ್ನಡ ಜಿಲ್ಲೆ): ಮಲೆನಾಡಿನ ರೈತರಿಗೆ ಉಪ ಆದಾಯ ತಂದುಕೊಡುವ ಬಾಳೆಕಾಯಿಗೆ ಸದ್ಯ ಬೇಡಿಕೆ ಇದ್ದರೂ ಖರೀದಿ ಪ್ರಕ್ರಿಯೆ ನಡೆಯುತ್ತಿಲ್ಲ. ತೋಟ, ರೈತರ ಮನೆಯ ಅಂಗಳದಲ್ಲೇ ಕೊಳೆಯುತ್ತಿವೆ.

ಮೇ ತಿಂಗಳವರೆಗೆ ಶುಭ ಕಾರ್ಯ, ಜಾತ್ರೆ ಮತ್ತು ಉತ್ಸವಗಳು ನಡೆಯುವ ಕಾರಣ ಬಾಳೆಹಣ್ಣುಗಳಿಗೆ ಬೇಡಿಕೆ ಇರುತ್ತದೆ. ಆದರೆ, ಒಂದು ವಾರದಿಂದ ಮಾರುಕಟ್ಟೆ ಮತ್ತು ವ್ಯಾಪಾರಿಗಳು ಬಾಳೆಕಾಯಿ ಖರೀದಿಸುತ್ತಿಲ್ಲ.

ತಾಲ್ಲೂಕಿನಲ್ಲಿ 622 ಹೆಕ್ಟೇರ್ ಪ್ರದೇಶದಲ್ಲಿ ಬಾಳೆ ಬೆಳೆಯಲಾಗುತ್ತಿದೆ. ಮಲೆನಾಡಿನ ಗ್ರಾಮಗಳ ರೈತರಿಂದ ಬಾಳೆಕಾಯಿ ಖರೀದಿಸುವ ರೈತರು ಅವುಗಳನ್ನು ಗೋವಾ, ಕರಾವಳಿ ಭಾಗಕ್ಕೆ ಪೂರೈಸುತ್ತಾರೆ. ಅತಿ ಬಿಸಿಲಿನಿಂದ ಬಾಳೆಕಾಯಿ ಸಾಗಣೆ ಮಾಡುವ ಅವಧಿಯಲ್ಲೇ ಹಣ್ಣಾಗುತ್ತಿರುವುದು ವ್ಯಾಪಾರಿಗಳನ್ನು ಚಿಂತೆಗೆ ತಳ್ಳಿದೆ. ಹಣ್ಣು ಕಡಿಮೆ ಅವಧಿಯಲ್ಲೇ ಕೊಳೆ ಯುವ ಕಾರಣ ಖರೀದಿ ಪ್ರಕ್ರಿಯೆ ನಡೆಯುತ್ತಿಲ್ಲ.

‘ತಾಪಮಾನ ಹೆಚ್ಚಳದಿಂದ ಬಾಳೆಕಾಯಿ ಬೇಗ ಹಾಳಾಗುತ್ತವೆ. ಸಾಗಣೆ, ದಾಸ್ತಾನು ಮಾಡುವುದರಿಂದ ಲಾಭಕ್ಕಿಂತ ನಷ್ಟ ಹೆಚ್ಚು. ಮಳೆ ಆರಂಭವಾದರೆ, ಇಳುವರಿ ಕಡಿಮೆಯಾಗಿ ಬೆಲೆ ಹೆಚ್ಚುತ್ತದೆ’ ಎಂದು ವ್ಯಾಪಾರಿ ನಾಗಪತಿ ಹೆಗಡೆ ತಿಳಿಸಿದರು.

‘ಎರಡು ವರ್ಷಗಳ ಹಿಂದೆ ಹೊಸದಾಗಿ ಎರಡು ಎಕರೆಯಲ್ಲಿ ಅಡಿಕೆ ಗಿಡಗಳನ್ನು ನೆಟ್ಟಿದ್ದೇವೆ. ಅಡಿಕೆಯಿಂದ ಆದಾಯ ಬರಲು ಇನ್ನೂ 4 ವರ್ಷ ಕಾಯಬೇಕು. ಹೀಗಾಗಿ, ಉಪ ಬೆಳೆಯಾಗಿ ಬಾಳೆ ಬೆಳೆಯುತ್ತಿದ್ದೇವೆ. ತಿಂಗಳಿಗೆ ಸರಿಸುಮಾರು ₹4 ಸಾವಿರದಷ್ಟು ಆದಾಯ ಬಾಳೆಕಾಯಿ ಬೆಳೆಯಿಂದ ಸಿಗುತಿತ್ತು. ಈ ಆದಾಯ ಅಡಿಕೆ ಗಿಡಗಳ ನಿರ್ವಹಣೆಗೆ ಸಹಕಾರಿ ಆಗುತಿತ್ತು. ಬಾಳೆಕಾಯಿಗೆ ದರ ಕುಸಿದಿದ್ದು ಈಗ ಕೊಳ್ಳುವವರೇ ಇಲ್ಲದಂತಾಗಿದೆ. ತೋಟದ ನಿರ್ವಹಣೆ ಕಷ್ಟವಾಗಿದೆ’ ಎಂದು ತಾಲ್ಲೂಕಿನ ಕಬ್ಬಗಾರಿನ ಕೃಷಿಕ ಗುರುಮೂರ್ತಿ ನಾಯ್ಕ ತಿಳಿಸಿದರು.

ಸಿದ್ದಾಪುರದ ರೈತರೊಬ್ಬರ ಮನೆ ಅಂಗಳದಲ್ಲಿ ಕೊಳ್ಳುವವರಿಲ್ಲದೇ ಬಾಳೆಕಾಯಿ ರಾಶಿ ಹಾಕಲಾಗಿದೆ

> **ರೈತರು ಬಾಳೆಕಾಯಿಯ ಮೌಲ್ಯವರ್ಧನೆಯತ್ತ ಗಮನ ಹರಿಸಬೇಕು. ಬಾಳೆಕಾಯಿ ಸುಕೇಳಿ, ಚಿಪ್ಸ್, ಹಪ್ಪಳ ತಯಾರಿಸಿದರೆ ಉತ್ತಮ ಮಾರುಕಟ್ಟೆ ಕಂಡುಕೊಳ್ಳಬಹುದು**
> **ಪ್ರಶಾಂತ ಜಿ.ಎಸ್,** ತೋಟಗಾರಿಕೆ ಅಧಿಕಾರಿ

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36200
ಹಳತು	36200-43200
ಚಿತ್ರದುರ್ಗ	
ಅಪಿ	48639-49099
ಬೆಟ್ಟೆ	34119-34559
ಕೆಂಪುಗೋಟು	28409-28810
ರಾಶಿ	48129-48569
ಪುತ್ತೂರು	
ಕೋಕ	11500-26000
ಕುಮಟ	
ಚಿಪ್ಪು	25609-27569
ಕೋಕ	16019-23509
ಫ್ಯಾಕ್ಟರಿ	11019-21429
ಹಳೆಚಾಲಿ	35099-38009
ಹೊಸಚಾಲಿ	30899-38099
ಸಾಗರ	
ಬಿಳಿಗೋಟು	21699-25313
ಚಾಲಿ	26599-33209
ಕೋಕ	12681-23699
ಕೆಂಪುಗೋಟು	10199-31199
ರಾಶಿ	31399-48209
ಸಿಪ್ಪೆಗೋಟು	15899-17869
ಶಿವಮೊಗ್ಗ	
ಬೆಟ್ಟೆ	41509-47899
ಗೊರಬಲು	17829-34009
ರಾಶಿ	32279-48858
ಸರಕು	53010-53010
ಸಿದ್ದಾಪುರ	
ಬಿಳಿಗೋಟು	25899-29099
ಚಾಲಿ	32799-35239
ಕೋಕ	25019-30019
ಹಳೆಚಾಲಿ	34639-35319
ಕೆಂಪುಗೋಟು	29099-31399
ರಾಶಿ	42089-46499
ತಟ್ಟಿಬೆಟ್ಟೆ	34699-39600
ಶಿರಸಿ	
ಬೆಟ್ಟೆ	34699-44201
ಬಿಳಿಗೋಟು	24009-29469
ಚಾಲಿ	32098-35702
ಕೆಂಪುಗೋಟು	26099-32099
ರಾಶಿ	42298-46999
ಯಲ್ಲಾಪುರ	
ಅಪಿ	55059-60169
ಬಿಳಿಗೋಟು	21899-31319
ಕೋಕ	11069-29912

‘ರಿಯಲ್ ಎಸ್ಟೇಟ್ ಭಾರಿ ಪ್ರಗತಿ’

ನವದೆಹಲಿ (ಪಿಟಿಐ): ‘ನೋಟು ರದ್ದತಿ, ರೇರಾ, ಜಿಎಸ್‌ಟಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಕೈಗೆಟಕುವ ದರದ ಮನೆಗಳ ವಿಶೇಷ ಯೋಜನೆಯಂಥ (ಎಸ್‌ಡಬ್ಲ್ಯುಎಎಂಐಎಚ್) ಕೇಂದ್ರ ಸರ್ಕಾರದ ಸುಧಾರಣಾ ನೀತಿಗಳ ಕಾರಣದಿಂದ ಕಳೆದ 10 ವರ್ಷಗಳಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರ ಹಲವು ಪಟ್ಟು ಹಿಗ್ಗಿದೆ. ಈ ಕಾರಣಕ್ಕಾಗಿ ಈ ಕ್ಷೇತ್ರದಲ್ಲಿ ಇದೇ ಅವಧಿಯಲ್ಲಿ 3 ಕೋಟಿ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ’ ಎಂದು ಅನರಾಕ್ ಹಾಗೂ ಎನ್‌ಎಆರ್‌ಇಡಿಸಿಒ ಜಂಟಿಯಾಗಿ ಸೋಮವಾರ ವರದಿ ಬಿಡುಗಡೆ ಮಾಡಿವೆ.

‘ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಹಲವು ಸುಧಾರಣಾ ಕ್ರಮಗಳ ಕಾರಣದಿಂದಾಗಿಯೇ ಈ ಕ್ಷೇತ್ರವು ಶಕ್ತಿಯುತವಾಗಿರುವುದಲ್ಲದೆ, ಹೊಸ ಎತ್ತರಗಳನ್ನೂ ಏರಿದೆ. ಇದೇ ಕಾರಣಕ್ಕೆ, 2013ರಲ್ಲಿ 4 ಕೋಟಿ ಯಷ್ಟಿದ್ದ ಉದ್ಯೋಗಾವಕಾಶವು 2023ರಲ್ಲಿ 7.1 ಕೋಟಿಗೆ ಏರಿಕೆಯಾಗಿದೆ. ಜೊತೆಗೆ, ದೇಶದ ಒಟ್ಟು ಉದ್ಯೋಗಗಳಲ್ಲಿ ಶೇ 18ಕ್ಕೂ ಹೆಚ್ಚು ಉದ್ಯೋಗಗಳು ರಿಯಲ್ ಎಸ್ಟೇಟ್ ಮತ್ತು ಸಂಬಂಧಿತ ಉದ್ಯಮಗಳಿಂದಲೇ ಸೃಷ್ಟಿಯಾಗಿವೆ’ ಎಂದು ‘ರಿಯಲ್ ಎಸ್ಟೇಸ್ ಅನ್‌ಬಾಕ್ಸ್ಡ್: ದಿ ಮೋದಿ ಎಫೆಕ್ಟ್’ ವರದಿಯಲ್ಲಿ ಹೇಳಲಾಗಿದೆ.

ಅಧಿಕಗೊಂಡ ಬೇಡಿಕೆ

‘ಕಳೆದ 10 ವರ್ಷದ ಪ್ರಯಾಣವು ಯಶಸ್ವಿಯಾಗಿತ್ತು. ಬೇಡಿಕೆಯು ಅತ್ಯಧಿಕವಾಗಿತ್ತು. ಸರ್ಕಾರವು ತನ್ನ ನೀತಿಗಳ ಮೂಲಕ ಸಹಕಾರ ನೀಡಿತು. ಹೂಡಿಕೆದಾರರಲ್ಲಿ ಆತ್ಮವಿಶ್ವಾಸ ಹೆಚ್ಚಾಗಿದೆ. ಈ ಅಂಶಗಳು ಕ್ಷೇತ್ರದ ಭವಿಷ್ಯದ ವೃದ್ಧಿಗೆ ಪೂರಕವಾಗಲಿವೆ. ದೇಶದ ಏಳು ಪ್ರಮುಖ ನಗರಗಳಲ್ಲಿ, ಮನೆ ಬೆಲೆಗಳು ಶೇ 25ರಿಂದ ಶೇ60ರಷ್ಟು ಏರಿಕೆ ಕಂಡಿದೆ. ಈ ನಗರಗಳಲ್ಲಿ 29.32 ಲಕ್ಷ ಮನೆಗಳ ನಿರ್ಮಾಣವಾಗಿವೆ. ಇವುಗಳಲ್ಲಿ 28.27 ಲಕ್ಷ ಮನೆಗಳು ಮಾರಾಟವಾಗಿವೆ’ ಎಂದು ಅನರಾಕ್‌ನ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.

ಅಧಿಕ ಬೇಡಿಕೆ ಇರುವ ನಗರಗಳು

- ದೆಹಲಿ–ಎನ್‌ಸಿಆರ್
- ಮುಂಬೈ
- ಕೋಲ್ಕತ್ತ
- ಚೆನ್ನೈ
- ಬೆಂಗಳೂರು
- ಹೈದರಾಬಾದ್
- ಪುಣೆ

ಮಾರುಕಟ್ಟೆ ಮೌಲ್ಯ ಏರಿಕೆ ಅಂದಾಜು



> **ರಿಯಲ್ ಎಸ್ಟೇಟ್ ಕ್ಷೇತ್ರವು 2014–17ರವರೆಗೆ ದೇಶದ ಜಿಡಿಪಿಗೆ ಶೇ 6.8ರಷ್ಟು ಕೊಡುಗೆ ನೀಡುತ್ತಿತ್ತು. 2025ರ ಹೊತ್ತಿಗೆ ಈ ಪ್ರಮಾಣವು ಶೇ 13ರಷ್ಟಾಗಲಿದೆ. ಉದ್ಯೋಗ ಸೃಷ್ಟಿಯೊಂದೇ ಅಲ್ಲದೆ, ರಿಯಲ್ ಎಸ್ಟೇಟ್‌ಗೆ ಪೂರಕ ಉದ್ಯಮಗಳ ಕ್ಷೇತ್ರವೂ ಪ್ರಗತಿ ಸಾಧಿಸಿದೆ**
> **‘ರಿಯಲ್ ಎಸ್ಟೇಸ್ ಅನ್‌ಬಾಕ್ಸ್ಡ್: ದಿ ಮೋದಿ ಎಫೆಕ್ಟ್’ ವರದಿ**

ಬೆಂಗಳೂರಲ್ಲಿ 10 ಗ್ರಾಂ ಚಿನ್ನದ ಬೆಲೆ ₹73,560

ನವದೆಹಲಿ(ಪಿಟಿಐ):ಬೆಂಗಳೂರಿನಲ್ಲಿ ಸೋಮವಾರದಂದು ಚಿನ್ನ ಮತ್ತು ಬೆಳ್ಳಿ ದರವು ಸಾರ್ವಕಾಲಿಕ ಗರಿಷ್ಠಮಟ್ಟ ಮುಟ್ಟಿತ್ತು. 10 ಗ್ರಾಂ ಚಿನ್ನದ ದರವು ₹73,560ರಂತೆ ಮಾರಾಟವಾಗಿದೆ. ಇದೇ ವೇಳೆ ಕೆ.ಜಿ ಬೆಳ್ಳಿ ಧಾರಣೆ ₹83,900ಕ್ಕೆ ಮುಟ್ಟಿದೆ.

ದೆಹಲಿಯಲ್ಲೂ ಏರಿಕೆ: ದೆಹಲಿಯಲ್ಲಿ ಚಿನ್ನದ ದರವು 10 ಗ್ರಾಂಗೆ ₹350 ಏರಿಕೆಯಾಗಿದ್ದು, ₹71,700ಕ್ಕೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹800 ಹೆಚ್ಚಳವಾಗಿದೆ. ಪ್ರಸ್ತುತ ಒಂದು ಕೆ.ಜಿ ಬೆಳ್ಳಿ ಧಾರಣೆಯು ₹84,000ಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಕಂಡಿದೆ. ಇದು ದೇಶೀಯ ಮಾರುಕಟ್ಟೆ ಮೇಲೂ ಪರಿಣಾಮ ಬೀರಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,336 ಡಾಲರ್ (ಅಂದಾಜು ₹ 1.94 ಲಕ್ಷ) ಮತ್ತು 27.80 (ಅಂದಾಜು ₹2,315) ಡಾಲರ್‌ನಂತೆ ಮಾರಾಟವಾಗಿದೆ.

ಆಕಾಶ್ ಶಿಕ್ಷಣ ಸಂಸ್ಥೆಗೆ ಸಿಇಒ ನೇಮಕ

ನವದೆಹಲಿ (ಪಿಟಿಐ): ಬೈಜುಸ್ ಸಮೂಹದ ಆಕಾಶ್ ಎಜುಕೇಷನಲ್ ಸರ್ವಿಸಸ್ ಲಿಮಿಟೆಡ್‌ನ (ಎಇಎಸ್‌ಎಲ್) ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ದೀಪಕ್ ಮೆಹ್ರೋತ್ರಾ ನೇಮಕವಾಗಿದ್ದಾರೆ.

2023ರ ಸೆಪ್ಟೆಂಬರ್‌ನಲ್ಲಿ ಸಿಇಒ ಅಭಿಷೇಕ್ ಮಹೇಶ್ವರಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಏಳು ತಿಂಗಳ ನಂತರ ಮೆಹ್ರೋತ್ರಾ ನೇಮಕವಾಗಿದ್ದು, ಅವರ ನೇಮಕಾತಿ ತಕ್ಷಣದಿಂದಲೇ ಜಾರಿಗೆ ಬಂದಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

35 ವರ್ಷಕ್ಕೂ ಹೆಚ್ಚು ಅನುಭವವಿರುವ ಮೆಹ್ರೋತ್ರಾ ಅವರು, ಎಫ್‌ಎಂಸಿಜಿ, ಟೆಲಿಕಾಂ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಜೊತೆಗೆ ಆಶೀರ್ವಾದ್ ಪೈಪ್ಸ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ, ಪಿಯರ್ಸನ್ ಇಂಡಿಯಾ, ಭಾರ್ತಿ ಏರ್‌ಟೆಲ್, ಕೋಕಾ-ಕೋಲಾ ಮತ್ತು ಏಷ್ಯನ್ ಪೇಂಟ್ಸ್‌ನಲ್ಲಿ ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಐಐಟಿ ರೂರ್ಕಿಯಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಷಯದಲ್ಲಿ ಪದವಿ ಪಡೆದಿದ್ದಾರೆ.

ಜೆಎಸ್‌ಡಬ್ಲ್ಯು: 2.64 ಕೋಟಿ ಟನ್ ಕಚ್ಚಾ ಉಕ್ಕು ಉತ್ಪಾದನೆ

ನವದೆಹಲಿ (ಪಿಟಿಐ): ಜೆಎಸ್‌ಡಬ್ಲ್ಯು ಸ್ಟೀಲ್ 2023–24ರ ಹಣಕಾಸು ವರ್ಷದಲ್ಲಿ ಒಟ್ಟು 2.64 ಕೋಟಿ ಟನ್ ಕಚ್ಚಾ ಉಕ್ಕನ್ನು ಉತ್ಪಾದನೆ ಮಾಡಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 2.41 ಕೋಟಿ ಟನ್ ಉತ್ಪಾದನೆ ಆಗಿತ್ತು. ಅದಕ್ಕೆ ಹೋಲಿಸಿದರೆ ಶೇ 9ರಷ್ಟು ಏರಿಕೆ ಎಂದು ಕಂಪನಿ ಸೋಮವಾರ ತಿಳಿಸಿದೆ. ಕಂಪನಿಯು ತನ್ನ ಭಾರತದ ಕಾರ್ಯಾಚರಣೆಗಳಿಂದ 2.55 ಕೋಟಿ ಟನ್ ಉಕ್ಕನ್ನು ಉತ್ಪಾದಿಸಿದ್ದರೆ, ಕಳೆದ ಹಣಕಾಸು ವರ್ಷದಲ್ಲಿ 2.36 ಕೋಟಿ ಟನ್ ಉತ್ಪಾದಿಸಿತ್ತು ಎಂದು ತಿಳಿಸಿದೆ.

ರಾಷ್ಟ್ರಧ್ವಜಕ್ಕೆ ಅಣಕ ಮಾಲ್ದೀವ್ಸ್ ಮಾಜಿ ಸಚಿವೆ ಕ್ಷಮೆ

ಮಾಲೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅಪಮಾನಕರ ಹೇಳಿಕೆಯನ್ನು ನೀಡಿದ್ದ ಹಿನ್ನೆಲೆಯಲ್ಲಿ ಸಚಿವೆ ಸ್ಥಾನ ಕಳೆದುಕೊಂಡಿದ್ದ ಮಾಲ್ದೀವ್ಸ್‌ನ ಮರಿಯಂ ಶಿಉನಾ, ಈಗ ಭಾರತದ ರಾಷ್ಟ್ರಧ್ವಜವನ್ನು ಗುರಿಯಾಗಿಸಿ ಅಣಕವಾಡಿದ್ದಾರೆ.

ಭಾರತದ ರಾಷ್ಟ್ರಧ್ವಜದ ಕೆಲಭಾಗ ಮತ್ತು ವಿರೋಧಪಕ್ಷ ಮಾಲ್ದೀವ್ಸ್ ಡೆಮಾಕ್ರಾಟಿಕ್ ಪಕ್ಷ (ಎಂಡಿಪಿ) ಅಭಿಯಾನದ ತಿರುಚಲಾದ ಭಿತ್ತಿಪತ್ರ ವನ್ನು ಒಟ್ಟಾಗಿಸಿ ಅಣಕವಾಡಿದ್ದು, ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದರು. ಮಾಜಿ ಸಚಿವೆಯ ಈ ನಡೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ಇದರ ಬೆನ್ನಲ್ಲೇ ಕ್ಷಮೆಯಾಚಿಸಿದರು. ‘ನನ್ನ ಇತ್ತೀಚಿನ ಪೋಸ್ಟ್‌ಗೆ ತೀವ್ರ ಆಕ್ಷೇಪ, ಟೀಕೆ ವ್ಯಕ್ತವಾಗಿದೆ. ಇದ ರಿಂದ ಆಗಿರುವ ಗೊಂದಲ ಮತ್ತು ನೋವುಗಳಿಗಳಿಗಾಗಿ ನಾನು ಕ್ಷಮೆ ಕೋರುತ್ತೇನೆ’ ಎಂದು ಮಾಜಿ ಸಚಿವೆ ಪೋಸ್ಟ್ ಮಾಡಿದ್ದಾರೆ. ‘ವಿರೋಧ ಪಕ್ಷದ ಪೋಸ್ಟ್‌ಗೆ ಪ್ರತಿಕ್ರಿಯಿಸಿ ಹಾಕಿದ್ದ ಚಿತ್ರದಲ್ಲಿದ್ದ ಕೆಲ ಅಂಶಗಳು ಭಾರತದ ರಾಷ್ಟ್ರಧ್ವಜಕ್ಕೆ ಹೋಲಿಕೆ ಆಗುವಂತಿದೆ ಎಂದು ನನ್ನ ಗಮನಕ್ಕೆ ತರಲಾಗಿದೆ. ಇದು, ಉದ್ದೇಶಪೂರ್ವಕವಾಗಿ ಆಗಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಝಪೊರಿಝಿಯಾ ಅಣುವಿದ್ಯುತ್ ಸ್ಥಾವರದ ಮೇಲೆ ಡ್ರೋನ್ ದಾಳಿ

ಕೀವ್ (ಎಪಿ): ರಷ್ಯಾದ ನಿಯಂತ್ರಣದಲ್ಲಿ ಇರುವ ಝಪೊರಿಝಿಯಾ ಅಣುವಿದ್ಯುತ್ ಸ್ಥಾವರದ ಮೇಲೆ ನಡೆದಿರುವ ಡ್ರೋನ್ ದಾಳಿಯು ‘ದೊಡ್ಡ ಅಣುಶಕ್ತಿ ದುರ್ಘಟನೆ ನಡೆಯುವ ಸಾಧ್ಯತೆಯನ್ನು ಗಣನೀಯವಾಗಿ ಹೆಚ್ಚಿಸಿದೆ’ ಎಂದು ವಿಶ್ವಸಂಸ್ಥೆಯ ಅಣುಶಕ್ತಿ ಕಣ್ಗಾವಲು ಸಂಸ್ಥೆಯ ಮುಖ್ಯಸ್ಥ ರಫೇಲ್ ಮರಿಯಾನೊ ಗ್ರಾಸಿ ಹೇಳಿದ್ದಾರೆ.

ಅಣುವಿದ್ಯುತ್ ಸ್ಥಾವರದ ಮೇಲೆ ಕನಿಷ್ಠ ಮೂರು ನೇರ ದಾಳಿಗಳು ಆಗಿವೆ ಎಂಬುದನ್ನು ಗ್ರಾಸಿ ಅವರು ಎಕ್ಸ್ ಮೂಲಕ ಖಚಿತಪಡಿಸಿದ್ದಾರೆ. ಈ ರೀತಿ ಆಗಬಾರದು ಎಂದು ಅವರು ಎಚ್ಚರಿಸಿದ್ದಾರೆ.

ಅಣು ವಿಕಿರಣಕ್ಕೆ ಕಾರಣವಾಗಬಲ್ಲ ಗಂಭೀರ ಸ್ವರೂಪದ ಅವಘಡ ತಪ್ಪಿಸಬೇಕು ಎಂದಾದರೆ ಪಾಲಿಸಬೇಕಿರುವ ಐದು ಮೂಲಭೂತ ತತ್ವಗಳನ್ನು ತಾವು 2022ರ ನವೆಂಬರ್‌ನಲ್ಲಿ ಪಟ್ಟಿಮಾಡಿದ ನಂತರದಲ್ಲಿ ನಡೆದಿರುವ ಇಂತಹ ಮೊದಲ ದಾಳಿ ಇದು ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಸ್ಥಾವರದ ಮೇಲಿನ ದಾಳಿಯಿಂದ ಭೌತಿಕವಾಗಿ ಆಗಿರುವ ಪರಿಣಾಮಗಳನ್ನು ಖಚಿತಪಡಿಸಿ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ಹೇಳಿಕೆ ನೀಡಿದೆ. ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿರುವುದಾಗಿಯೂ ಅದು ಹೇಳಿದೆ. ‘ಸ್ಥಾವರದ ಆರನೆಯ ಘಟಕಕ್ಕೆ ಆಗಿರುವ ಹಾನಿಯು ಸುರಕ್ಷತೆಗೆ ಧಕ್ಕೆ ತಂದಿಲ್ಲ. ಆದರೆ ಅದು ಅಣುವಿಕಿರಣವನ್ನು ತಡೆಯುವ ವ್ಯವಸ್ಥೆಗೆ ಧಕ್ಕೆ ತರುವ ಸಾಮರ್ಥ್ಯ ಹೊಂದಿತ್ತು’ ಎಂದು ಐಎಇಎ ಹೇಳಿದೆ. ಸ್ಥಾವರದ ಮೇಲೆ ಉಕ್ರೇನ್ ಮಿಲಿಟರಿಗೆ ಸೇರಿದ ಡ್ರೋನ್ ದಾಳಿ ಭಾನುವಾರ ನಡೆದಿದೆ ಎಂದು ಝಪೊರಿಝಿಯಾ ಅಣುವಿದ್ಯುತ್ ಸ್ಥಾವರದ ಅಧಿಕಾರಿಗಳು ಹೇಳಿದ್ದಾರೆ.

ದಾಳಿ ನಿರಾಕರಿಸಿದ ಉಕ್ರೇನ್: ಯುರೋಪಿನ ಅತಿದೊಡ್ಡ ಅಣುವಿದ್ಯುತ್ ಸ್ಥಾವರವಾದ ಝಪೊರಿಝಿಯಾ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದೆ ಎಂದು ರಷ್ಯಾ ಮಾಡಿರುವ ಆರೋಪವನ್ನು ಉಕ್ರೇನ್‌ನ ಹಿರಿಯ ಅಧಿಕಾರಿಗಳು ತಳ್ಳಿಹಾಕಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧ ಆರಂಭವಾದ ಕೆಲವೇ ದಿನಗಳಲ್ಲಿ ಈ ಸ್ಥಾವರವನ್ನು ರಷ್ಯಾ ವಶಕ್ಕೆ ತೆಗೆದುಕೊಂಡಿದೆ. ಉಕ್ರೇನ್ ಮಿಲಿಟರಿಯ ಗುಪ್ತಚರ ವಿಭಾಗದ ವಕ್ತಾರ ಆ್ಯಂಡ್ರಿ ಯುಸೊವ್ ಅವರು ದಾಳಿ ನಡೆದೇ ಇಲ್ಲ ಎಂದು ಹೇಳಿದ್ದಾರೆ. ರಷ್ಯಾದ ಅಧಿಕಾರಿಗಳು ಆ ಸ್ಥಾವರದ ಮೇಲಿನ ದಾಳಿ ವಿಚಾರವಾಗಿ ವಾಸ್ತವ ತಿರುಚುವ ಕೆಲಸವನ್ನು ಮತ್ತೆ ಮತ್ತೆ ಮಾಡುತ್ತಿರುತ್ತಾರೆ ಎಂದು ದೂರಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com or Scan QR code to access booking form

ಶ್ರದ್ಧಾಂಜಲಿ
ಶ್ರೀಮಾನ್ ಶ್ರೀ ಪುಟ್ಟಮಾರಯ್ಯ
ಇವರು ದಿ॥07-04-2024ರ ಭಾನುವಾರ ರಾತ್ರಿ 10:15ಕ್ಕೆ ವಿಧಿವಶರಾಗಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಇವರ ತತ್ಸಂಬಂಧವಾದ ಅಂತಿಮ ವಿಧಿ ವಿಧಾನ ಕಾರ್ಯಗಳು ದಿ॥10-04-24 ಬುಧವಾರ ಬೆಳಗ್ಗೆ 10 ಗಂಟೆಗೆ ಚಾಮರಾಜಪೇಟೆಯ ಟಿ. ಆರ್. ಮಿಲ್ ರುದ್ರಭೂಮಿಯಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತರು: ಪತ್ನಿ ಶ್ರೀಮತಿ ಸುನಂದಮ್ಮ ಹಾಗೂ ಕುಟುಂಬವರ್ಗದವರು ಮತ್ತು ಬಂಧುಗಳು–ಮಿತ್ರರು

REMEMBRANCE
G. MUNIYAPPA IAS (Retd)
10.04.2008
Inserted by
D. Radhakrishna & Brothers
Daughters
M. Kavitha, M. Rekha

ವೈಕುಂಠ ಸಮಾರಾಧನೆ
ಶ್ರೀ ಸಿ. ಎಸ್. ಭೈರೇಗೌಡರವರು
(Director- Sun Techpro Engg pvt ltd Bangalore)
ಮೊಬೈಲ್ : 9845056308, 9986031236, 9845972144, 8310249751

ವೈಕುಂಠ ಸಮಾರಾಧನೆ
ಸ್ಥಳ: ಕಲ್ಪತರು ಫಾರಂ, ಚಿಕ್ಕಸಣ್ಣೆ ತೋಟ, ದೇವನಹಳ್ಳಿ ತಾ॥
ಬಿ. ಕೃಷ್ಣಪ್ಪನವರು
ನಿಧನ : 31-03-2024
ಪುಣ್ಯಾಹ : 10-04-2024 ಬುಧವಾರ, ಬೆಳಿಗ್ಗೆ 9-30ಕ್ಕೆ
ಇಂತಿ ದುಃಖತಪ್ತರು:– ಪತ್ನಿ ಲಕ್ಷ್ಮಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು

For Online Classified Booking
Name Change / Education / Property / Job / Services & many more
Log on to : dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಪ್ರಕಟಣೆಯ ಅನುಸೂಚಿ ಸ್ಥಿರಾಸ್ತಿಯು ಟಿ.ಎನ್. ಮಹೇಶ್ವರ ಬಿನ್ ನರಸಪ್ಪ, ಬೆಳಗುಂಬ ರಸ್ತೆ, ಭಾಗ್ಯನಗರ, ತುಮಕೂರು. ಇವರಿಗೆ ಸೇರಿದ ಆಸ್ತಿಯಾಗಿದ್ದು, ಈ ಅನುಸೂಚಿ ಅಸ್ತಿಯನ್ನು ನಮ್ಮ ಕಕ್ಷಿದಾರರಿಗೆ ಮಾರಾಟ ಮಾಡಲು ಇಚ್ಛಿಸಿದ್ದು, ಈ ಅನುಸೂಚಿ ಆಸ್ತಿಯ ಮೇಲೆ ಯಾವುದೇ ವ್ಯಕ್ತಿ, ಸಂಘ, ಸಂಸ್ಥೆ ಮತ್ತು ಬ್ಯಾಂಕಿಗೆ ಯಾವುದೇ ರೀತಿಯ ಹಕ್ಕು, ಒಡೆತನ, ಸ್ವಾಧೀನ ಮತ್ತು ಆಸಕ್ತಿ ಇದ್ದಲ್ಲಿ, ಅಂತಹ ವ್ಯಕ್ತಿ, ಸಂಘ, ಸಂಸ್ಥೆ ಮತ್ತು ಬ್ಯಾಂಕಿನವರು 7 ದಿನಗಳ ಒಳಗಾಗಿ ಈ ಕೆಳಗೆ ನಮೂದಿಸಿರುವ ಮೊಬೈಲ್ ಸಂಖ್ಯೆಗೆ ಅಥವಾ ವಕೀಲರನ್ನು ಸಂಪರ್ಕಿಸತಕ್ಕದ್ದು.
ಅನುಸೂಚಿ
ಕರ್ನಾಟಕ ರಾಜ್ಯದ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೆಹಳ್ಳಿ ಹೋಬಳಿ, ದೊಡ್ಡೇರಿ ಕಾವಲು ಗ್ರಾಮದ ಸ್ಥಿರಾಸ್ತಿ ಯಿ-ಖಾತೆ ಸಂಖ್ಯೆ 151600502400320036, ಗ್ರಾಮ ಪಂಚಾಯಿತಿ ಸ್ಥಿರಾಸ್ತಿ ಸಂಖ್ಯೆ 101/1, ಇರುವ ಪೂರ್ವ–ಪಶ್ಚಿಮ 155 ಮೀಟರ್, ದಕ್ಷಿಣೋತ್ತರ 100 ಮೀಟರ್ ಒಟ್ಟು 15.500 ಚದರ ಮೀಟರ್ ಅಳತೆಯ ಖಾಲಿ ನಿವೇಶನ ಮತ್ತು ಅದರಲ್ಲಿ 1420.940100 ಚದರ ಮೀಟರ್ ಅಳತೆಯ ವಾಣಿಜ್ಯ ಕಟ್ಟಡ ಮತ್ತು ಅದರ ಚಕ್ಕು ಬಂಧಿ :
ಪೂರ್ವಕ್ಕೆ : ಸಿ. ಬಾಬುರವರ ಅಸ್ತಿ ಮತ್ತು ರಸ್ತೆ.
ಪಶ್ಚಿಮಕ್ಕೆ : ರಂಗಪ್ಪನವರ ಆಸ್ತಿ.
ಉತ್ತರಕ್ಕೆ : ನಂಜಮ್ಮನವರ ಆಸ್ತಿ.
ದಕ್ಷಿಣಕ್ಕೆ : ಲಕ್ಷ್ಮಮ್ಮರವರ ಆಸ್ತಿ.
ಈ ಮಧ್ಯೆ ಇರುವುದು.
ಜೆ.ಪಿ. ಲಕ್ಮನ್ ವಕೀಲರು, ಹಾಸನ
ಮೊಬೈಲ್ : 9844183243
ದಿನಾಂಕ : 08-04-2024 ಹಾಸನ

The Indian Pentecostal Church of GOD Karnataka State
ವಿಷಯ: ಸರ್ವ ಸದಸ್ಯರ ಮಹಾಸಭೆಯ ಬಗ್ಗೆ ಸೂಚನೆ
ಐ.ಪಿ.ಸಿ. ಕರ್ನಾಟಕ ರಾಜ್ಯದ ಸರ್ವ ಸದಸ್ಯರ ಮಹಾಸಭೆಯನ್ನು ಮೇ. 01, 2024 ಬುಧವಾರದಂದು ಬೆಳಿಗ್ಗೆ 10 ಗಂಟೆಗೆ ಐ.ಪಿ.ಸಿ. ಕರ್ನಾಟಕ ರಾಜ್ಯ ಪ್ರಧಾನ ಕಛೇರಿ, ಬೆಂಗಳೂರು–560113 ರಲ್ಲಿ, ರಾಜ್ಯಾಧ್ಯಕ್ಷರಾದ ಪಾಸ್ಟರ್ ಕೆ.ಎಸ್. ಜೋಸೆಫ್‌ರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿದ್ದು, ಈ ಮಹಾಸಭೆಯನ್ನು IPCKS/GM/03/2024-25 ರ ಉಲ್ಲೇಖ ಸಂಖ್ಯೆ: ದಿ: 07-04-2024 ರಂದು ಎಲ್ಲಾ ಸಭೆಗಳಿಗೆ ಕಳುಹಿಸಿದ ಸುತ್ತೋಲೆಯ ಪ್ರಕಾರ ನಡೆಸಲಾಗುತ್ತಿದೆ.
ಪಾಸ್ಟರ್ ಡಾ. ವರುಗೀಸ್ ಫಿಲಿಫ್ ಕಾರ್ಯದರ್ಶಿ, ಐ.ಪಿ.ಸಿ. ಕರ್ನಾಟಕ ರಾಜ್ಯ.

ಪ್ರವಾಸ
Travel
ಸುಸಜ್ಜಿತವಾದ ವಸತಿ ಊಟ,ತಿಂಡಿ ಉಪಚಾರದೊಂದಿಗೆ 2.6.2024 ರಿಂದ 18/14ದಿನಗಳ ರೈಲು ಮತ್ತು ವಿಮಾನದಲ್ಲಿ ಚಾರ್ಧಾಮ್ ಯಾತ್ರೆ. ಕೇದಾರನಾಥ್, ಬದರಿನಾಥ್, ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವಲ್ಸ್,ಬೆಂಗಳೂರು. 9741024122, 9740311411.

TRAVEL CORNER
KENYA 8 days in Wild
Amboseli• Nakuru• Naivasha• Masai Mara
18 June 2024 ₹178000/-
ಕನ್ನಡದವರೊಂದಿಗೆ ಕನ್ನಡದಲ್ಲಿ
raise www.raise.in
Call: 9448073129 9449984859

ಸಮಾಜಸೇವೆ
Others
ಶ್ರೀ ಶಕ್ತಿ ಹೆಲ್ತ್ ಕೇರ್ ವತಿಯಿಂದ,ನೊಂದವರ ಬಾಳಿಗೆ ಬೆಳಕು, ಅನ್ನದಾನ, ಕಡುಬಡವರಿಗೆ ವಿದ್ಯಾಭ್ಯಾಸಕ್ಕೆ ಸಹಾಯ, ವಿಧವೆ ಮಹಿಳೆಯರಿಗೆ ಸಹಾಯ, ತ್ಯಾಜ್ಯ ಕಾಗದ (ಚಿಂದಿ)ಹಾಯುವ ಮಕ್ಕಳಿಗೆ , ಕೂಲಿ ಕಾರ್ಮಿಕರಿಗೆ, ನಿರಾಶ್ರಿತರಿಗೆ, ಧನ ಸಹಾಯ ಮಾಡುವುದು. ಸಿಂಗಲ್ ಪೇರೆಂಟ್ ಮಕ್ಕಳಿಗೆ ಶಿಕ್ಷಣಕ್ಕೆ ಸಹಾಯ ಮಾಡುವುದು. ಅತಿಯಾದ ಕುಡಿತಕ್ಕೆ ಒಳಗಾದ ಕುಟುಂಬಕ್ಕೆ ಸಾಂತ್ವಾನ (ಕೌನ್ಸಲಿಂಗ್) ಹೇಳುವುದು. ಶೇಷಾದ್ರಿಪುರ, ಬೆಂಗಳೂರು. 7349494852

ಉದ್ಯೋಗಾವಕಾಶ
Multiple Vacancy
REQUIRED EXPERIENCED Telecaller, Loan Recovery Supervisor. For BankLoan collection. Salary 30,000+ Incentive Contact: 9620206756.
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ
ಮಾನ್ಯ ಓದುಗರು ಮತ್ತು ಜಾಹೀರಾತುದಾರರಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳು
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
Ph: 9845114560 | 9731810277
9901641752 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಜಡೇಜ ದಾಳಿಗೆ ಕುಸಿದ ಕೆಕೆಆರ್: ಋತುರಾಜ್ ಅಜೇಯ ಅರ್ಧಶತಕ

ಚೆನ್ನೈ ಸೂಪರ್ ಕಿಂಗ್ಸ್‌ಗೆ ಸುಲಭ ಜಯ

ಚೆನ್ನೈ (ಪಿಟಿಐ): ಸ್ಪಿನ್ ಮತ್ತು ವೇಗದ ಬೌಲರ್‌ಗಳ ಉತ್ತಮ ಪ್ರದರ್ಶನದ ನಂತರ ನಾಯಕ ಋತುರಾಜ್ ಗಾಯಕವಾಡ (ಔಟಾಗದೇ 67; 58ಎ, 4x9) ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಸೋಲಿಸಿತು.

ರವೀಂದ್ರ ಜಡೇಜ (18ಕ್ಕೆ3) ನೇತೃತ್ವದಲ್ಲಿ ಸ್ಪಿನ್ನರ್‌ಗಳು ಕೋಲ್ಕತ್ತ ಕುಸಿತಕ್ಕೆ ನಾಂದಿಹಾಡಿದರೆ, ವೇಗದ ಬೌಲರ್‌ಗಳಾದ ತುಷಾರ್ ದೇಶಪಾಂಡೆ (33ಕ್ಕೆ 3) ಮತ್ತು ಮುಸ್ತಫಿಜುರ್ ರೆಹಮಾನ್ (22ಕ್ಕೆ 2) ಅವರು ಕೋಲ್ಕತ್ತ ದೊಡ್ಡ ಮೊತ್ತ ಗಳಿಸದಂತೆ ತಡೆಹಾಕಿದರು. ಇದರಿಂದ, ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಕೋಲ್ಕತ್ತ ತಂಡ 9 ವಿಕೆಟ್‌ಗೆ 137 ರನ್‌ಗಳ ಅಲ್ಪ ಮೊತ್ತ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ಆತಿಥೇಯರು 14 ಎಸೆತ ಬಾಕಿ ಇರುವಂತೆ ಮೂರು ವಿಕೆಟ್ ನಷ್ಟದಲ್ಲಿ 141 ರನ್ ಗಳಿಸಿದರು. ಇದರಿಂದ ಸತತ ಮೂರನೇ ಸೋಲನ್ನು ತಪ್ಪಿಸಿಕೊಂಡರು.

ಇದು ಈ ಆವೃತ್ತಿಯಲ್ಲಿ ಕೆಕೆಆರ್‌ಗೆ ಮೊದಲ ಸೋಲು.

ರಚಿನ್ ರವೀಂದ್ರ (15) ಅವರನ್ನು ಮೂರನೇ ಓವರ್‌ನಲ್ಲಿ ಕಳೆದುಕೊಂಡ ಚೆನ್ನೈ ತಂಡಕ್ಕೆ ಗಾಯಕವಾಡ ಮತ್ತು ಡೇರಿಲ್ ಮಿಚೆಲ್ (25) ಅವರು 70 ರನ್‌ಗಳ ಎರಡನೇ ವಿಕೆಟ್ ಜೊತೆಯಾಟ ಮೂಲಕ ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು. ಗುರಿ ಹತ್ತಿರವಿರುವಾಗ ಶಿವಂ ದುಬೆ (28) ನಿರ್ಗಮಿಸಿದರು.

ಇದಕ್ಕೆ ಮೊದಲು, ಚೆನ್ನೈನ ಅನುಭವಿ ಸ್ಪಿನ್ನರ್ ರವೀಂದ್ರ ಜಡೇಜ ಎಂಟು ಎಸೆತಗಳ ಅಂತರದಲ್ಲಿ ಮೂರು ಪ್ರಮುಖ ವಿಕೆಟ್‌ಗಳನ್ನು ಪಡೆದು ಕೋಲ್ಕತ್ತ ನೈಟ್ ರೈಡರ್ಸ್‌ಗೆ ಬಲವಾದ ಪೆಟ್ಟು ನೀಡಿದ್ದರು. ಜಡೇಜ, ಮಹೀಷ ತೀಕ್ಷಣ ಮತ್ತು ರಚಿನ್ ರವೀಂದ್ರ ಒಟ್ಟು 9 ಓವರ್‌ಗಳಲ್ಲಿ 50 ರನ್ ಮಾತ್ರ ನೀಡಿದರು. 4 ವಿಕೆಟ್‌ಗಳನ್ನೂ ಪಡೆದರು. ಕೊನೆಯಲ್ಲಿ ವೇಗದ ಬೌಲರ್‌ಗಳೂ ಮಿಂಚಿದರು. ಪ್ರಬಲ ಬ್ಯಾಟಿಂಗ್ ಸರದಿ ಹೊಂದಿದ್ದ ಕೆಕೆಆರ್ ತಂಡ ಪವರ್‌ಪ್ಲೇ ನಂತರ ತಿಣುಕಾಡಿತು.

ತುಷಾರ್ ಅವರ ಮೊದಲ ಓವರ್‌ನ ಮೊದಲ ಎಸೆತದಲ್ಲೇ ಫಿಲ್ ಸಾಲ್ಟ್ ಅವರ ವಿಕೆಟ್ ಪಡೆದರು. ಆದರೆ ಉತ್ತಮ ಲಯದಲ್ಲಿರುವ ಸುನಿಲ್ ನಾರಾಯಣ್ (27, 20ಎ) ಮತ್ತು ನವತಾರೆ ಅಂಗ್‌ಕ್ರಿಶ್ ರಘುವಂಶಿ (24, 18ಎ) ಬಿರುಸಿನ ಆಟದಿಂದ ಪವರ್‌ಪ್ಲೇ ಒಳಗೆ ಕೆಕೆಆರ್ ತಂಡ 1 ವಿಕೆಟ್‌ಗೆ 54 ರನ್‌ಗಳ ಉತ್ತಮ ಮೊತ್ತ ಗಳಿಸಿತ್ತು. ಈ ಐಪಿಎಲ್‌ನಲ್ಲಿ 201ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿರುವ ಸುನಿಲ್ ಮೂರು ಬೌಂಡರಿ ಜೊತೆ ಎರಡು ಸಿಕ್ಸರ್ ಬಾರಿಸಿದರು.

ಈ ಹಂತದಲ್ಲಿ ಜಡೇಜ ಮೊದಲ ಓವರ್‌ನಲ್ಲೇ ಎರಡು ವಿಕೆಟ್ ಪಡೆದರು. ರಘುವಂಶಿ ರಿವರ್ಸ್ ಸ್ವೀಪ್ ಯತ್ನದಲ್ಲಿ ಎಲ್‌ಬಿ ಬಲೆಗೆ ಬಿದ್ದರು. ಅದೇ ಓವರ್‌ನಲ್ಲಿ ಸುನಿಲ್, ಲಾಂಗ್‌ಆಫ್‌ನಲ್ಲಿ ಕ್ಯಾಚಿತ್ತರು. ಮರು ಓವರ್‌ನಲ್ಲಿ ಅವರು ವೆಂಕಟೇಶ್ ಅಯ್ಯರ್ (3) ಅವರ ವಿಕೆಟ್ ಪಡೆದರು.

ಕೊನೆಯ ಐದು ಓವರುಗಳಲ್ಲಿ ಕೋಲ್ಕತ್ತ ತಂಡ 28 ರನ್ ಗಳಿಸಲಷ್ಟೇ ಶಕ್ತವಾಯಿತು. ನಾಲ್ಕು ವಿಕೆಟ್‌ಗಳನ್ನೂ ಕಳೆದುಕೊಂಡಿತು.

ನಾಯಕ ಶ್ರೇಯಸ್ ಅಯ್ಯರ್ ಅವರು ಸಹನೆಯಿಂದ 34 (32ಎ, 4x3) ರನ್ ಗಳಿಸಿ ಎಂಟನೆಯವರಾಗಿ ನಿರ್ಗಮಿಸಿದರು. ಮುಸ್ತಫಿಜುರ್ ಬೌಲಿಂಗ್‌ನಲ್ಲಿ ಡೀಪ್ ಮಿಡ್ ವಿಕೆಟ್‌ನಲ್ಲಿ ಅಯ್ಯರ್ ಕ್ಯಾಚ್ ಪಡೆದ ಜಡೇಜಗೆ ಐಪಿಎಲ್‌ನಲ್ಲಿ ನೂರು ಕ್ಯಾಚ್ ಪೂರೈಸಿದರು.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಋತುರಾಜ್ ಗಾಯಕವಾಡ ಬ್ಯಾಟಿಂಗ್ ವೈಖರಿ. ಎಎಫ್‌ಪಿ ಚಿತ್ರ

ವಿಕೆಟ್ ಪಡೆದ ಸಂಭ್ರಮದಲ್ಲಿ ರವೀಂದ್ರ ಜಡೇಜ. ಪಿಟಿಐ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	4	4	0	8	1.120
ಕೋಲ್ಕತ್ತ ನೈಟ್ ರೈಡರ್ಸ್	4	3	1	6	1.528
ಲಖನೌ ಸೂಪರ್ ಜೈಂಟ್ಸ್	4	3	1	6	0.775
ಚೆನ್ನೈ ಸೂಪರ್ ಕಿಂಗ್ಸ್	5	3	2	6	0.666
ಸನ್‌ರೈಸರ್ಸ್ ಹೈದರಾಬಾದ್	4	2	2	4	0.409
ಪಂಜಾಬ್ ಕಿಂಗ್ಸ್	4	2	2	4	-0.220
ಗುಜರಾತ್ ಟೈಟನ್ಸ್	5	2	3	4	-0.797
ಮುಂಬೈ ಇಂಡಿಯನ್ಸ್	4	1	3	2	-0.704
ರಾಯಲ್ ಚಾಲೆಂಜರ್ಸ್ ಬೆಂಗಳೂರು	5	1	4	2	-0.843
ಡೆಲ್ಲಿ ಕ್ಯಾಪಿಟಲ್ಸ್	5	1	4	2	-1.370

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್ ,ಸಿಎಸ್‌ಕೆ (8 ವಿಕೆಟ್)

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 9ಕ್ಕೆ 137 (20 ಓವರ್‌ಗಳಲ್ಲಿ)
ಸಾಲ್ಟ್ ಸಿ ಜಡೇಜ ಬಿ ತುಷಾರ್ 0 (1ಎ)
ಸುನಿಲ್ ಸಿ ತೀಕ್ಷಣ ಬಿ ಜಡೇಜ 27 (20ಎ, 4x3, 6x2)
ರಘುವಂಶಿ ಎಲ್‌ಬಿಡಬ್ಲ್ಯು ಬಿ ಜಡೇಜ 24 (18ಎ, 4x3, 6x1)
ಶ್ರೇಯಸ್ ಸಿ ಜಡೇಜ ಬಿ ರೆಹಮಾನ್ 34 (32ಎ, 4x3)
ವೆಂಕಟೇಶ್ ಸಿ ಮಿಚೆಲ್ ಬಿ ಜಡೇಜ 3 (8ಎ)
ರಮಣ್‌ದೀಪ್ ಬಿ ತೀಕ್ಷಣ 13 (12ಎ, 6x1)
ರಿಂಕು ಬಿ ದೇಶಪಾಂಡೆ 9 (14ಎ)
ರಸೆಲ್ ಸಿ ಮಿಚೆಲ್ ಬಿ ತುಷಾರ್ 10 (10ಎ, 4x2)
ಅನುಕೂಲ್ ಔಟಾಗದೇ 3 (3ಎ)
ಮಿಚೆಲ್ ಸಿ ರವೀಂದ್ರ ಬಿ ರೆಹಮಾನ್ 0 (3ಎ)
ವೈಭವ್ ಔಟಾಗದೇ 1 (1ಎ)
ಇತರೆ: 13 (ಬೈ 1, ಲೆಗ್‌ಬೈ 4, ನೋಬಾಲ್ 2, ವೈಡ್ 6)
ವಿಕೆಟ್ ಪತನ: 1-0 (ಫಿಲ್ ಸಾಲ್ಟ್; 0.1), 2-56 (ಅಂಗಕ್ರಿಷ್ ರಘುವಂಶಿ; 6.1), 3-60 (ಸುನಿಲ್ ನಾರಾಯಣ್; 6.5), 4-64 (ವೆಂಕಟೇಶ್ ಅಯ್ಯರ್; 8.2), 5-85 (ರಮಣದೀಪ್ ಸಿಂಗ್; 11.5), 6-112 (ರಿಂಕು ಸಿಂಗ್; 16.4), 7-127 (ಆ್ಯಂಡ್ರೆ ರಸೆಲ್; 18.2), 8-135 (ಶ್ರೇಯಸ್ ಅಯ್ಯರ್; 19.1), 9-135 (ಮಿಚೆಲ್ ಸ್ಟಾರ್ಕ್; 19.4)
ಬೌಲಿಂಗ್: ತುಷಾರ್ ದೇಶಪಾಂಡೆ 4-0-33-3, ಮುಸ್ತಫಿಜುರ್ ರೆಹಮಾನ್ 4-0-22-2, ಶಾರ್ದೂಲ್ ಠಾಕೂರ್ 3-0-27-0, ಮಥೀಶಾ ತೀಕ್ಷಣ 4-0-28-1, ರವೀಂದ್ರ ಜಡೇಜ 4-0-18-3, ರಚಿನ್ ರವೀಂದ್ರ 1-0-4-0

ಚೆನ್ನೈ ಸೂಪರ್ ಕಿಂಗ್ಸ್ 3ಕ್ಕೆ 141 (17.4 ಓವರ್‌ಗಳಲ್ಲಿ)
ರಚಿನ್ ಸಿ ವರುಣ್ ಬಿ ಅರೋರಾ 15 (8ಎ, 4x3)
ಋತುರಾಜ್ ಔಟಾಗದೇ 67 (58ಎ, 4x8)
ಡೇರಿಲ್ ಬಿ ನಾರಾಯಣ್ 25 (19ಎ, 4x1, 6x1)
ಶಿವಂ ಬಿ ಅರೋರಾ 28 (18ಎ, 4x1, 6x3)
ಧೋನಿ ಔಟಾಗದೇ 1 (3ಎ)
ಇತರೆ: 5 (ಲೆಗ್ ಬೈ 2, ವೈಡ್ 3)
ವಿಕೆಟ್ ಪತನ: 1-27 (ರಚಿನ್ ರವೀಂದ್ರ; 3.2), 2-97 (ಡೇರಿಲ್ ಮಿಚೆಲ್; 12.3), 3-135 (ಶಿವಂ ದುಬೆ; 16.5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 3-0-29-0
ವೈಭವ್ ಅರೋರಾ 4-0-28-2
ಅನುಕೂಲ್ ರಾಯ್ 1.4-0-18-0
ಸುನಿಲ್ ನಾರಾಯಣ್ 4-0-30-1
ವರುಣ್ ಚಕ್ರವರ್ತಿ 4-0-26-0
ಆ್ಯಂಡ್ರೆ ರಸೆಲ್ 1-0-8-0
ಪಂದ್ಯದ ಆಟಗಾರ: ರವೀಂದ್ರ ಜಡೇಜ

ಕೆಎಸ್‌ಸಿಎಗೆ ಪತ್ರ ಬರೆದ ಮುಖ್ಯಮಂತ್ರಿ ಸಿದ್ದರಾಮಯ್ಯ

ಚಿನ್ನಸ್ವಾಮಿ ಕ್ರೀಡಾಂಗಣದ ಸ್ಟ್ಯಾಂಡ್ಸ್‌ಗೆ ದಿಗ್ಗಜ ಕ್ರಿಕೆಟಿಗರ ಹೆಸರಿಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿರುವ ಸ್ಟ್ಯಾಂಡ್‌ಗಳಿಗೆ ದಿಗ್ಗಜ ಕ್ರಿಕೆಟಿಗರಾದ ಜಿ.ಆರ್. ವಿಶ್ವನಾಥ್, ಇ.ಎ.ಎಸ್. ಪ್ರಸನ್ನ ಮತ್ತು ಬಿ.ಎಸ್. ಚಂದ್ರಶೇಖರ್ ಅವರ ಹೆಸರುಗಳನ್ನು ಇಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಅವರಿಗೆ ಸೋಮವಾರ ಪತ್ರ ಬರೆದಿರುವ ಸಿದ್ಧರಾಮಯ್ಯ, ಈ ವಿಷಯದ ಕುರಿತು ಲೇಖಕ ಮತ್ತು ಇತಿಹಾಸಕಾರ ರಾಮಚಂದ್ರ ಗುಹಾ ಅವರು ಮಾರ್ಚ್ 29ರಂದು ತಮಗೆ ಬರೆದಿದ್ದ ಪತ್ರದ ಕುರಿತು ಉಲ್ಲೇಖಿಸಿದ್ದಾರೆ.

'ರಾಮಚಂದ್ರ ಗುಹಾ ಅವರು ಮಾಡಿರುವ ಮನವಿಯಲ್ಲಿ ಶ್ರೇಷ್ಠ ಅಂಶಗಳಿವೆ. ಜಿ.ಆರ್. ವಿಶ್ವನಾಥ್, ಇ.ಎ.ಎಸ್. ಪ್ರಸನ್ನ ಹಾಗೂ ಬಿ.ಎಸ್. ಚಂದ್ರಶೇಖರ್ ಅವರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಬೇಕೆಂದು ಮನವಿ ಮಾಡುತ್ತೇನೆ. ಇದರಿಂದ ಮುಂದಿನ ಪೀಳಿಗೆಯ ಆಟಗಾರರಿಗೆ ಪ್ರೇರಣೆ ಲಭಿಸುತ್ತದೆ' ಎಂದು ಸಿದ್ಧರಾಮಯ್ಯ ಉಲ್ಲೇಖಿಸಿದ್ದಾರೆ.

'1974ರಲ್ಲಿ ಪ್ರಸನ್ನ ನಾಯಕತ್ವದ ಕರ್ನಾಟಕ ತಂಡವು ಮೊದಲ ಬಾರಿಗೆ ರಣಜಿ ಟ್ರೋಫಿ ಜಯಿಸಿತ್ತು. ಸತತ 15 ಬಾರಿ ರಣಜಿ ಚಾಂಪಿಯನ್ ಆಗಿದ್ದ ಮುಂಬೈ ತಂಡದ ಪಾರಮ್ಯಕ್ಕೆ ಕರ್ನಾಟಕ ತಡೆಯೊಡ್ಡಿದ್ದು ಐತಿಹಾಸಿಕ ಸಾಧನೆ. ಆ ವಿಜಯಕ್ಕೆ ಈಗ 50 ವರ್ಷಗಳು ತುಂಬಿರುವ ಸಂಭ್ರಮ. ಶ್ರೇಷ್ಠ ಬ್ಯಾಟರ್ ವಿಶ್ವನಾಥ್, ಸ್ಪಿನ್ ಅವಳಿಗಳಾದ ಪ್ರಸನ್ನ ಮತ್ತು ಚಂದ್ರಶೇಖರ್ ರಾಜ್ಯ ಮತ್ತು ದೇಶದ ಕ್ರಿಕೆಟ್‌ಗೆ ನೀಡಿರುವ ಕೊಡುಗೆ ಅಮೋಘವಾದದ್ದು. ಅವರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡಲು ಕ್ರಮ ಕೈಗೊಳ್ಳಬೇಕು' ಎಂದು ಗುಹಾ ಅವರು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ವಿವರಿಸಿದ್ದರು.

ಸಿದ್ದರಾಮಯ್ಯ

ಈಚೆಗೆ ಕೆಎಸ್‌ಎಲ್‌ಟಿಎನಲ್ಲಿ ನಡೆದಿದ್ದ 1974ರ ರಣಜಿ ಟ್ರೋಫಿ ವಿಜೇತ ತಂಡದ ಆಟಗಾರರನ್ನು ಸನ್ಮಾನಿಸುವ ಸಮಾರಂಭದಲ್ಲಿ ಭಾರತ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಅವರೂ ತಮ್ಮ ವಿಡಿಯೊ ಸಂದೇಶದಲ್ಲಿ ಇದೇ ಮಾತನ್ನು ಹೇಳಿದ್ದರು.

ಮುಖ್ಯಮಂತ್ರಿ ಅವರ ಪತ್ರದ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, 'ಈ ವಿಷಯದ ಕುರಿತು ಪರಿಶೀಲಿಸಲಾಗುವುದು. ಪದಾಧಿಕಾರಿಗಳು, ಸದಸ್ಯರೊಂದಿಗೆ ಸಭೆಯಲ್ಲಿ ವಿಷಯ ಚರ್ಚೆಯಾಗಬೇಕು. ಸದ್ಯ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯಗಳ ಆಯೋಜನೆಯಲ್ಲಿ ಎಲ್ಲರೂ ತೊಡಗಿಕೊಂಡಿದ್ದಾರೆ' ಎಂದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮುಂದಿನ ಪಂದ್ಯವು ಏ. 15ರಂದು ನಡೆಯಲಿದೆ.

ಕ್ರಿಕೆಟ್‌ಪ್ರೇಮಿಗಳ ಬೇಡಿಕೆ ಇದು: ಗುಹಾ

ಈ ಬೇಡಿಕೆಯು ನನ್ನೊಬ್ಬನದಷ್ಟೇ ಅಲ್ಲ. ಕರ್ನಾಟಕದ ಸಮಸ್ತ ಕ್ರಿಕೆಟ್ ಅಭಿಮಾನಿಗಳ ಬಹುದಿನಗಳ ಬೇಡಿಕೆ ಇದಾಗಿದೆ. ಮುಂಬೈನಲ್ಲಿ ಗಾವಸ್ಕರ್, ತೆಂಡೂಲ್ಕರ್, ದೆಹಲಿಯಲ್ಲಿ ಮೊಹಿಂದರ್ ಅಮರನಾಥ್, ಸೆಹ್ವಾಗ್, ಬೇಡಿ, ಕೋಲ್ಕತ್ತದಲ್ಲಿ ಗಂಗೂಲಿ ಅವರ ಹೆಸರಿನ ಸ್ಟ್ಯಾಂಡ್‌ಗಳಿವೆ. ಆದರೆ ಕರ್ನಾಟಕದಲ್ಲಿ ಈ ರೀತಿ ಮಾಡದಿರುವುದು ದುರದೃಷ್ಟಕರ. ಇದನ್ನೇ ಪತ್ರದಲ್ಲಿ ಬರೆದಿದ್ದೆ. ಇದಕ್ಕೆ ಸೂಕ್ತ ಸ್ಪಂದನೆ ನೀಡಿ ಕೆಎಸ್‌ಸಿಎಗೆ ಪತ್ರ ಬರೆದಿರುವ ಮುಖ್ಯಮಂತ್ರಿಗಳಿಗೆ ಕೃತಜ್ಞತೆಗಳು.

ಕಳೆದ ವಾರ ಸುನಿಲ್ ಗಾವಸ್ಕರ್ ಅವರೂ ಇದೇ ವಿಷಯವನ್ನು ಪ್ರಸ್ತಾಪಿಸಿದ್ದರು. ಕರ್ನಾಟಕವು ಮೊಟ್ಟಮೊದಲ ರಣಜಿ ಟ್ರೋಫಿ ಜಯಿಸಿ ಈಗ 50 ವರ್ಷ ತುಂಬಿದೆ. ಆದ್ದರಿಂದ ಮೊದಲಿಗೆ ವಿಶ್ವನಾಥ್, ಪ್ರಸನ್ನ ಮತ್ತು ಚಂದ್ರಶೇಖರ್ ಅವರ ಹೆಸರುಗಳನ್ನು ಇಡಲು ಆದ್ಯತೆ ನೀಡಬೇಕು. ನಂತರದಲ್ಲಿ ಸೈಯದ್ ಕಿರ್ಮಾನಿ, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಭಾರತ ಮಹಿಳಾ ತಂಡದ ನಾಯಕಿಯಾಗಿದ್ದ ಶಾಂತಾ ರಂಗಸ್ವಾಮಿ ಅವರಂತಹ ಮಹನೀಯರ ಹೆಸರುಗಳನ್ನು ಸ್ಟ್ಯಾಂಡ್‌ಗಳಿಗೆ ಇಡಲು ಕ್ರಮ ವಹಿಸಬೇಕು ಎಂದು ರಾಮಚಂದ್ರ ಗುಹಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್ ಇಂದಿನಿಂದ

ಸಿಂಧು, ಲಕ್ಷ್ಯ ಮೇಲೆ ನಿರೀಕ್ಷೆ

ನಿಂಗ್ಬೋ (ಚೀನಾ) (ಪಿಟಿಐ): ಪಿ.ವಿ. ಸಿಂಧು ಸೇರಿದಂತೆ ಭಾರತದ ಬ್ಯಾಡ್ಮಿಂಟನ್‌ಪಟುಗಳು ಮಂಗಳವಾರ ಇಲ್ಲಿ ಆರಂಭವಾಗಲಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನಲ್ಲಿ ಪದಕದ ಅಭಿಯಾನ ಆರಂಭಿಸುವರು. ಈ ಹಾದಿಯಲ್ಲಿ ಅವರು ವಿಶ್ವದ ಪ್ರಮುಖ ಆಟಗಾರರ ಸವಾಲು ಎದುರಿಸಬೇಕಿದೆ.

ವಿಶ್ವದ ಅಗ್ರಮಾನ್ಯ ಡಬಲ್ಸ್ ಜೋಡಿ ಹಾಗೂ ಹಾಲಿ ಚಾಂಪಿಯನ್ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕೊನೆಯ ಕ್ಷಣದಲ್ಲಿ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ ಭಾರತದ ಸಿಂಗಲ್ಸ್ ಆಟಗಾರರ ಮೇಲೆ ಜವಾಬ್ದಾರಿ ಇಮ್ಮಡಿಯಾಗಿದೆ.

ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು ಲಯ ಕಂಡುಕೊಳ್ಳುತ್ತಿದ್ದಾರೆ. ಕಳೆದ ತಿಂಗಳು ನಡೆದ ಫ್ರೆಂಚ್ ಓಪನ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಅವರು, ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತೆ ಚೆನ್ ಯುಫೀ ಅವರಿಗೆ ಪ್ರಬಲ ಸ್ಪರ್ಧೆ ನೀಡಿದ್ದರು.

ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಸಿಂಧು ಇಲ್ಲಿ ಮೊದಲ ಸುತ್ತಿನಲ್ಲಿ ಮಲೇಷ್ಯಾದ ಗೋಹ್ ಜಿನ್ ವೀ ಅವರನ್ನು ಎದುರಿಸಲಿದ್ದಾರೆ. 33ನೇ ಕ್ರಮಾಂಕದ ಆಟಗಾರ್ತಿ ವಿರುದ್ಧ 4-1 ಗೆಲುವಿನ ದಾಖಲೆಯನ್ನು ಹೊಂದಿರುವ ಸಿಂಧು ಅವರಿಗೆ ನಂತರದ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಹಾನ್ ಯುಯೆ ಎದುರಾಗುವ ಸಾಧ್ಯತೆಯಿದೆ.

ಭಾರತದ ಮತ್ತೊಬ್ಬ ಸಿಂಗಲ್ಸ್ ಆಟಗಾರ್ತಿ ಆಕರ್ಷಿ ಕಶ್ಯಪ್ ಅವರು ಥಾಯ್ಲೆಂಡ್‌ನ ಬುಸಾನನ್ ಒಂಗ್‌ಬಮ್ರುಂಗ್‌ಫಾನ್ ವಿರುದ್ಧ ಆರಂಭಿಕ ಸುತ್ತಿನಲ್ಲಿ ಸೆಣಸಾಡುವರು.

ಉತ್ತಮ ಲಯದಲ್ಲಿರುವ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಶಿ ಯು ಕಿ (ಚೀನಾ) ಅವರ ಸವಾಲನ್ನು ಎದುರಿಸಬೇಕಿದೆ. ಫ್ರೆಂಚ್ ಓಪನ್ ಮತ್ತು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದ್ದ ಸೇನ್ ಇಲ್ಲೂ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಏಳನೇ ಶ್ರೇಯಾಂಕದ ಎಚ್.ಎಸ್. ಪ್ರಣಯ್ ಅವರು ಚೀನಾದ ಲು ಗುವಾಂಗ್ ಜು ವಿರುದ್ಧ ಅಭಿಯಾನವನ್ನು ಆರಂಭಿಸಲಿದ್ದಾರೆ. ಈ ಬಾರಿಯ ಲಯ ಕಂಡುಕೊಳ್ಳುವಲ್ಲಿ ವಿಫಲವಾಗಿರುವ ಪ್ರಣಯ್ ಬಹುತೇಕ ಟೂರ್ನಿಗಳಲ್ಲಿ ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿದ್ದರು.

ವಿಶ್ವದ 27ನೇ ರ‍್ಯಾಂಕ್‌ನ ಕಿದಂಬಿ ಶ್ರೀಕಾಂತ್ ಅವರು ಮೊದಲ ಸುತ್ತಿನಲ್ಲಿ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನ ಫೈನಲಿಸ್ಟ್, ಎರಡನೇ ಶ್ರೇಯಾಂಕದ ಆಂಥೋನಿ ಗಿಂಟಿಂಗ್ ಅವರನ್ನು ಎದುರಿಸಬೇಕಿದೆ. ಯುವ ಆಟಗಾರ ಪ್ರಿಯಾಂಶು ರಾಜಾವತ್ ಅವರು ಮಲೇಷ್ಯಾದ ಲೀ ಝಿ ಜಿಯಾ ವಿರುದ್ಧ ಕಣಕ್ಕೆ ಇಳಿಯುವರು.

ಪಿ.ವಿ. ಸಿಂಧು

ಎರಡು ಗೆದ್ದು, ಎರಡು ಸೋತಿರುವ ಉಭಯ ತಂಡಗಳು

ಪಂಜಾಬ್‌ಗೆ ಎಸ್‌ಆರ್‌ಎಚ್ ಸವಾಲು

ಮುಲ್ಲನಪುರ (ಪಂಜಾಬ್): ಒಂದೆಡೆ ಪಂಜಾಬ್ ಕಿಂಗ್ಸ್ ತಂಡ ಒಮ್ಮೆ ಉತ್ತಮ, ಒಮ್ಮೆ ಕಳಪೆ ಪ್ರದರ್ಶನ ನೀಡುತ್ತಿದ್ದರೆ, ಇನ್ನೊಂದೆಡೆ ಸನ್‌ರೈಸರ್ಸ್ ಹೈದರಾಬಾದ್ ತಂಡ ಈ ಆವೃತ್ತಿಯಲ್ಲಿ ಆಕ್ರಮಣಕಾರಿಯಾಗಿ ಆಡುತ್ತಿದೆ. ಮಂಗಳವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಈ ಎರಡು ತಂಡಗಳು ಮುಖಾಮುಖಿಯಾಗಲಿವೆ.

ಎರಡೂ ತಂಡಗಳು ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡು ಗೆಲುವು, ಎರಡು ಸೋಲುಗಳನ್ನು ಕಂಡಿವೆ. ಹೀಗಾಗಿ ಈ ಹಂತದಲ್ಲಿ ಜಯಕ್ಕಾಗಿ ಹಾತೊರೆಯಲಿವೆ. ನೂತನ ಮಹಾರಾಜ ಯಾದವೀಂದ್ರ ಸಿಂಗ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎರಡನೇ ಐಪಿಎಲ್ ಪಂದ್ಯ ಇದು.

ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳು ಎರಡು ಪಂದ್ಯಗಳಲ್ಲಿ ಅಬ್ಬರದ ಪ್ರದರ್ಶನ ನೀಡಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧ ಗೆಲ್ಲುವ ಹಾದಿಯಲ್ಲಿ ಸನ್‌ರೈಸರ್ಸ್ ತಂಡ ಐಪಿಎಲ್‌ನಲ್ಲೇ ದಾಖಲೆ ಮೊತ್ತ (277) ಕಲೆಹಾಕಿತ್ತು. ಹಿಂದಿನ ಶುಕ್ರವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧವೂ ಆರು ವಿಕೆಟ್ ಗೆಲುವಿನ ಮೂಲಕ ಅತ್ಯುತ್ತಮ ಪ್ರದರ್ಶನ ನೀಡಿತ್ತು.

ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ಹೆನ್ರಿಚ್ ಕ್ಲಾಸೆನ್ ಮತ್ತು ಏಡನ್ ಮರ್ಕರಂ ಅವರಂಥ ಆಟಗಾರರು ಎದುರಾಳಿ ಬೌಲರ್‌ಗಳ ಮೇಲೆ ದಂಡೆತ್ತಿ ಹೋಗಬಲ್ಲ ಸಮರ್ಥರು.

ಪಂಜಾಬ್ ಕಿಂಗ್ಸ್ ತಂಡದಲ್ಲಿ ನಾಯಕ ಶಿಖರ್ ಧವನ್, ಜಾನಿ ಬೇಸ್ಟೊ, ಲಿಯಾಮ್ ಲಿವಿಂಗ್‌ಸ್ಟೋನ್ ಅಂಥ ಬ್ಯಾಟರ್‌ಗಳಿದ್ದಾರೆ. ಆದರೆ ಧವನ್ ಅವರನ್ನುಳಿದು ಉಳಿದವರು ಸ್ಥಿರ ಪ್ರದರ್ಶನ ನೀಡಿಲ್ಲ. ಕಳೆದ ಪಂದ್ಯದಲ್ಲಿ ಯಾರೂ ನಿರೀಕ್ಷಿಸದ ರೀತಿ ಶಶಾಂಕ್ ಸಿಂಗ್ (29 ಎಸೆತಗಳಲ್ಲಿ 61) ಭರ್ಜರಿ ಆಟವಾಡಿ ಗುಜರಾತ್ ಟೈಟನ್ಸ್ ವಿರುದ್ಧ ಗೆಲುವು ತಂದುಕೊಟ್ಟಿದ್ದರು. ತಂಡ ಪ್ರಭಸಿಮ್ರನ್ ಸಿಂಗ್ ಮತ್ತು ಭಾರತ ತಂಡದ ಆಟಗಾರ ಜಿತೇಶ್ ಶರ್ಮಾ ಅವರಿಂದ ಉತ್ತಮ ಕೊಡುಗೆಯ ನಿರೀಕ್ಷೆಯಲ್ಲಿದೆ.

ಎರಡೂ ತಂಡಗಳಿಗೆ ಬೌಲಿಂಗ್ ವಿಭಾಗದ್ದೇ ಸ್ವಲ್ಪ ಚಿಂತೆಯಿದೆ. ಪಂಜಾಬ್ 'ಡೆತ್ ಓವರ್'ಗಳಲ್ಲಿ ಹೇರಳ ರನ್ ಬಿಟ್ಟುಕೊಡುತ್ತಿದೆ.

ಕಗಿಸೊ ರಬಾಡ ತಂಡದ ಪ್ರಮುಖ ಬೌಲರ್. ಅರ್ಷದೀಪ್ ಸಿಂಗ್ ಮತ್ತು ಹರ್ಷಲ್ ಪಟೇಲ್ ಹೆಚ್ಚು ರನ್ ಕೊಡುತ್ತಿದ್ದಾರೆ. ಲೆಗ್ ಸ್ಪಿನ್ನರ್ ರಾಹುಲ್ ಚಾಹರ್ ಕೂಡ ಪರಿಣಾಮಕಾರಿ ಆಗಿಲ್ಲ. ಹರ್‌ಪ್ರೀತ್ ಬ್ರಾರ್ ಸ್ವಲ್ಪ ರನ್‌ಕೊಟ್ಟರೂ, ದುಬಾರಿ ಎನಿಸಿಲ್ಲ.

ಹೈದರಾಬಾದ್‌ಗೆ ಆರಂಭದ ಬೌಲರ್‌ಗಳದ್ದೇ ಚಿಂತೆ. ಜಯದೇವ್ ಉನದ್ಕತ್, ಮಯಂಕ್ ಮಾರ್ಕಂಡೆ ಮತ್ತು ಭುವನೇಶ್ವರ ಕುಮಾರ್ ಅವರು ಧಾರಾಳಿಗಳೆನಿಸಿದ್ದಾರೆ. ಅನುಭವಿಯಾಗಿದ್ದರೂ, ಭುವನೇಶ್ವರ್ ನಿರೀಕ್ಷೆಗೆ ತಕ್ಕ ನಿರ್ವಹಣೆ ನೀಡಿಲ್ಲ. ಎರಡು ಪಂದ್ಯಗಳನ್ನು ಕಳೆದುಕೊಂಡಿದ್ದ ಟಿ.ನಟರಾಜನ್ ತಂಡಕ್ಕೆ ಮರಳಿದ್ದು, ಅವರು ಈವರೆಗೆ ನಾಲ್ಕು ವಿಕೆಟ್ ಪಡೆದಿದ್ದಾರೆ.

ನಾಯಕ ಪ್ಯಾಟ್ ಕಮಿನ್ಸ್ ನಾಲ್ಕು ಪಂದ್ಯಗಳಿಂದ ಐದು ವಿಕೆಟ್ ಪಡೆದಿದ್ದಾರೆ. ಅವರಿಗೆ ಇತರ ಬೌಲರ್‌ಗಳಿಂದ ಬೆಂಬಲ ದೊರೆತಿಲ್ಲ.

ಪಂದ್ಯ ಆರಂಭ: ರಾತ್ರಿ 7.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್. **ಬುಧವಾರದ ಪಂದ್ಯ:** ರಾಜಸ್ಥಾನ ರಾಯಲ್ಸ್– ಗುಜರಾತ್ ಟೈಟನ್ಸ್



ಪ್ಯಾಟ್ ಕಮಿನ್ಸ್



ಶಿಖರ್ ಧವನ್

ಹಾಕಿ: ಐನಂಡ, ಮೇಕೆರಿರಕ್ಕೆ ಜಯ

ಕಾಂಗೀರ ಮತ್ತು ಮೇಕೆರಿರ ತಂಡಗಳ ಆಟಗಾರರ ಸೆಣಸಾಟ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಐನಂಡ, ಮೇಕೆರಿರ ತಂಡಗಳು ಕುಂಡ್ಯೋಳಂಡ ಕಪ್‌ಗಾಗಿ ನಡೆಯುತ್ತಿರುವ ಹಾಕಿ ಟೂರ್ನಿಯಲ್ಲಿ ಸೋಮವಾರ ಭರ್ಜರಿ ಜಯ ದಾಖಲಿಸಿದವು.

ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ, ಐನಂಡ ತಂಡವು ಚೇರಂಡ ವಿರುದ್ಧ 6-1 ಗೋಲುಗಳಿಂದ ಜಯ ಸಾಧಿಸಿದರೆ, ಮೇಕೆರಿರ ತಂಡದವರು ಕಾಂಗೀರ ತಂಡದವರನ್ನು 6-2 ಗೋಲುಗಳಿಂದ ಮಣಿಸಿದರು.

ಮುಕ್ಕಾಟಿರ (ಬೋಂದ) ತಂಡವು ವಸಂತ್ ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಬಿದ್ದಾಟಂಡ ವಿರುದ್ದ 4-0 ಅಂತರದಲ್ಲಿ ಜಯ ಗಳಿಸಿತು. 1-1ರ ಸಮಬಲ ಸಾಧಿಸಿದ ಐಚೆಟ್ಟಿರ ಮತ್ತು ಮಾರ್ತಂಡ ತಂಡಗಳಿಗೆ ನಂತರ ನಡೆದ ಪೆನಾಲ್ಟಿ ಶೂಟೌಟ್‌ನಲ್ಲಿ ಐಚೆಟ್ಟಿರ ತಂಡವು 5 -4 ಅಂತರದಿಂದ ರೋಚಕ ಗೆಲುವು ಸಾಧಿಸಿತು.

ಫಲಿತಾಂಶ: ಬಿದ್ದಂಡ ತಂಡವು 3-1ರಿಂದ ಚೋಳಂಡ ವಿರುದ್ಧ; ಚೋಕಿರ 1-0ರಿಂದ ಚೆಯ್ಯಂಡ ವಿರುದ್ಧ; ಕಂಬೇಯಂಡ 4-0ರಿಂದ ಕೋಲುಮಾದಂಡ ವಿರುದ್ಧ; ಚಂಗೇಟಿರ 3-2ರಲ್ಲಿ ಮೊಳ್ಳೆರ ವಿರುದ್ಧ; ಕಾಂಡೇರ ತಂಡವು 3-0ರಿಂದ ಮಾಣಿರ ವಿರುದ್ಧ; ಮಂದನೆರವಂಡ 5-0ರಿಂದ ಕೋಲತಂಡ ವಿರುದ್ಧ; ಮುದ್ದಂಡ 1-0ರಿಂದ ಮಾಚಂಡ ವಿರುದ್ಧ; ಮರುವಂಡ ತಂಡವು 4-0ರಿಂದ ಪೋರಂಗಡ ವಿರುದ್ಧ; ಚೇಂದಿರ ತಂಡವು ಮುಕ್ಕಾಟಿರ ವಿರುದ್ಧ 2-1 ಅಂತರದಿಂದ; ಅಳಮೇಂಗಡ 4-0ರಿಂದ ಬಟ್ಟಿಯಂಡ ವಿರುದ್ದ; ಚೌರಿರ (ಹೊದ್ದೂರು) ತಂಡವು ಅಯ್ಯನೆರವಂಡ ವಿರುದ್ಧ 5 -0 ಅಂತರದಿಂದ: ಕೊಳ್ಳಿರ ತಂಡವು 3- 2ರಿಂದ ಬೊಳಕಾರಂಡ ವಿರುದ್ಧ; ಮಲ್ಲಚ್ಚಿರ ತಂಡವು 2-1ರಿಂದ ಐತಿಚಂಡ ವಿರುದ್ದ; ಅಪ್ಪನೆರವಂಡ ತಣಡವು 2-0ರಿಂದ ಪಾಲೆಂಗಡ ವಿರುದ್ದ; ಚಂಗುಲಂಡ ತಂಡವು 4-0 ಅಂತದಿಂದ ಪಾಲೆಯಂಡ ವಿರುದ್ಧ ಗೆಲುವು ಸಾಧಿಸಿದವು.

ಮಹಿಳಾ ಹಾಕಿ: ಅನುಭವಿಗಳೊಂದಿಗೆ ಹೊಸ ಮುಖಗಳಿಗೂ ಮಣೆ

ರಾಷ್ಟ್ರೀಯ ಶಿಬಿರಕ್ಕೆ 33 ಸಂಭಾವ್ಯ ಆಟಗಾರ್ತಿಯರು

ಬೆಂಗಳೂರು (ಪಿಟಿಐ): ಬೆಂಗಳೂರಿನಲ್ಲಿ ಮೇ 16ರವರೆಗೆ ನಡೆಯುವ ಭಾರತ ಮಹಿಳಾ ಹಾಕಿ ರಾಷ್ಟ್ರೀಯ ಶಿಬಿರಕ್ಕೆ 33 ಸಂಭನೀಯರನ್ನು ಹಾಕಿ ಇಂಡಿಯಾ ಆಯ್ಕೆ ಮಾಡಿದೆ. ಸವಿತಾ ಪೂನಿಯಾ, ವಂದನಾ ಕಟಾರಿಯಾ ಮೊದಲಾದ ಅನುಭವಿಗಳೊಂದಿಗೆ ಹೊಸ ಮುಖಗಳಿಗೂ ಸ್ಥಾನ ಕಲ್ಪಿಸಲಾಗಿದೆ.

ಮುಂಬರುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಗೆ ಆಟಗಾರ್ತಿಯರನ್ನು ಗುರುತಿಸುವ ಭಾಗವಾಗಿ ಶಿಬಿರ ಆಯೋಜಿಸಲಾಗಿದೆ. ಮೇ 22ರಿಂದ ನಡೆಯುವ ಹಾಕಿ ಪ್ರೊ ಲೀಗ್‌ನಲ್ಲಿ ಭಾರತ ಮಹಿಳಾ ತಂಡವು ಅರ್ಜೆಂಟೀನಾ, ಬೆಲ್ಜಿಯಂ, ಜರ್ಮನಿ ಮತ್ತು ಬ್ರಿಟನ್ ತಂಡಗಳನ್ನು ಎದುರಿಸಲಿದ್ದು, ಆ ನಿಟ್ಟಿನಲ್ಲಿ ಆ್ಯಂಟ್‌ವರ್ಪ್ (ಬೆಲ್ಜಿಯಂ) ಮತ್ತು ಲಂಡನ್‌ಗೆ ಪ್ರಯಾಣಿಸಲಿದೆ.

ಈಚೆಗೆ ನಡೆದ 14ನೇ ಸೀನಿಯರ್ ಮಹಿಳಾ ರಾಷ್ಟ್ರೀಯ ಚಾಂಪಿಯನ್‌ಷಿಪ್ ಮೂಲಕ ಉತ್ತಮ ಆಟಗಾರ್ತಿಯರನ್ನು ಆಯ್ಕೆ ಮಾಡಲು ಸಾಧ್ಯವಾಗಿದೆ. ಹೊಸ ತಂಡವು ಭವಿಷ್ಯದಲ್ಲಿ ಉತ್ತಮ ಪ್ರದರ್ಶನ ತೋರುವ ವಿಶ್ವಾಸವಿದೆ ಎಂದು ಹಾಕಿ ಇಂಡಿಯಾ ಹೈ ಪರ್ಫಾರ್ಮೆನ್ಸ್ ನಿರ್ದೇಶಕ ಹರ್ಮನ್ ಕ್ರೂಸ್ ಹೇಳಿದ್ದಾರೆ.

ಸವಿತಾ ಪೂನಿಯಾ

ಅನುಭವಿಗಳಾದ ಭಾರತ ತಂಡದ ನಾಯಕಿ, ಗೋಲ್‌ಕೀಪರ್ ಸವಿತಾ, ಡಿಫೆಂಡರ್ಸ್ ನಿಕ್ಕಿ ಪ್ರಧಾನ್, ಮಿಡ್-ಫೀಲ್ಡರ್‌ಗಳಾದ ಸಲಿಮಾ ಟೆಟೆ, ಅಜ್ಮಿನಾ ಕುಜೂರ್ ಮತ್ತು ನಿಶಾ ಸಂಭಾವ್ಯರ ತಂಡದಲ್ಲಿದ್ದಾರೆ. ಫಾರ್ವರ್ಡ್ ಆಟಗಾರ್ತಿಯರಾದ ಲಾಲ್‌ರೆಮ್ಸಿಯಾಮಿ, ಸಂಗೀತಾ ಕುಮಾರ್ ಮತ್ತು ಕಟಾರಿಯಾ ಕೂಡ ಸ್ಥಾನ ಪಡೆದಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ನಾಲ್ಕನೇ ಸ್ಥಾನ ಗಳಿಸಿದ್ದ ಭಾರತದ ಮಹಿಳಾ ತಂಡವು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾಗಿತ್ತು. ಈ ಹಿನ್ನೆಲೆಯಲ್ಲಿ ಹಾಕಿ ಇಂಡಿಯಾವು ತಂಡಕ್ಕೆ ಹೊಸಸ್ವರೂಪ ನೀಡಲು ಮುಂದಾಗಿದೆ. 22 ವರ್ಷದ ಮರೀನಾ ಲಾಲ್‌ರಮ್ಕಿ ಮತ್ತು 25 ವರ್ಷದ ಮನೀಶಾ ಚೌಹಾನ್ ಶಿಬಿರಕ್ಕೆ ಆಯ್ಕೆಯಾಗಿರುವ ಹೊಸಮುಖಗಳು. ಅವರು ರಾಷ್ಟ್ರೀಯ ಟೂರ್ನಿಯಲ್ಲಿ ಕ್ರಮವಾಗಿ ಮಿಜೋರಾಂ ಮತ್ತು ಮಣಿಪುರ ತಂಡವನ್ನು ಪ್ರತಿನಿಧಿಸಿದ್ದರು. 2017ರಲ್ಲಿ ವಿಶ್ವ ಲೀಗ್ ಸೆಮಿಫೈನಲ್‌ನಲ್ಲಿ ಸೀನಿಯರ್ ತಂಡದಲ್ಲಿ ಕೊನೆಯ ಬಾರಿಗೆ ಕಾಣಿಸಿಕೊಂಡ ಪ್ರೀತಿ ದುಬೆ ಶಿಬಿರಕ್ಕೆ ವಾಪಸಾಗಿದ್ದಾರೆ.

ಕಳೆದ ವರ್ಷದ ಜೂನಿಯರ್ ವಿಶ್ವಕಪ್‌ನಲ್ಲಿ ಕಾಣಿಸಿಕೊಂಡಿದ್ದ ಗೋಲ್‌ಕೀಪರ್ ಮಾಧುರಿ ಕಿಂಡೊ, ಡಿಫೆಂಡರ್‌ಗಳಾದ ರೋಪ್ನಿ ಕುಮಾರಿ, ಪ್ರೀತಿ, ಮಿಡ್‌ಫೀಲ್ಡರ್ ಎಡುಲಾ ಜ್ಯೋತಿ ಮತ್ತು ಫಾರ್ವರ್ಡ್‌ಗಳಾದ ದೀಪಿಕಾ ಸೊರೆಂಗ್ ಮತ್ತು ರುತುಜಾ ಪಿಸಲ್ ಅವರೂ ಶಿಬಿರದಲ್ಲಿ ಸ್ಥಾನ ಪಡೆದಿದ್ದಾರೆ.

ಸಂಭಾವ್ಯ ಆಟಗಾರ್ತಿಯರು: ಗೋಲ್‌ಕೀಪರ್ಸ್: ಸವಿತಾ ಪೂನಿಯಾ, ಬಿಚುದೇವಿ ಖರಿಬಮ್, ಬನ್ಸಾರಿ ಸೋಲಂಕಿ, ಮಾಧುರಿ ಕಿಂಡೊ.

ಡಿಫೆಂಡರ್ಸ್: ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಮೋನಿಕಾ, ರೋಪ್ನಿ ಕುಮಾರಿ, ಮಹಿಮಾ ಚೌಧರಿ, ಜ್ಯೋತಿ ಛತ್ರಿ, ಪ್ರೀತಿ.

ಮಿಡ್‌ಫೀಲ್ಡರ್‌ಗಳು: ಸಲೀಮಾ ಟೆಟೆ, ಮರೀನಾ ಲಾಲ್‌ರಮ್ಕಿ, ವೈಷ್ಣವಿ ಫಾಲ್ಕೆ, ನೇಹಾ, ಜ್ಯೋತಿ, ಎದುಲಾ ಜ್ಯೋತಿ, ಬಲ್ಜೀತ್ ಕೌರ್, ಮನೀಶಾ ಚೌಹಾನ್, ಅಕ್ಷತಾ ಅಬಾಸೊ ಢೇಕಳೆ, ಅಜ್ಮಿನಾ ಕುಜೂರ್, ನಿಶಾ.

ಫಾರ್ವರ್ಡ್‌ಗಳು: ಮುಮ್ತಾಜ್ ಖಾನ್, ಲಾಲ್ರೆಮ್ಸಿಯಾಮಿ, ಸಂಗೀತಾ ಕುಮಾರಿ, ದೀಪಿಕಾ, ಶರ್ಮಿಳಾ ದೇವಿ, ನವನೀತ್ ಕೌರ್, ದೀಪಿಕಾ ಸೊರೆಂಗ್, ಪ್ರೀತಿ ದುಬೆ, ವಂದನಾ ಕಟಾರಿಯಾ, ರುತುಜಾ ಪಿಸಲ್.

ಕ್ಯಾಂಡಿಡೇಟ್ಸ್ ಟೂರ್ನಿ: 'ಡ್ರಾ' ಪಂದ್ಯದಲ್ಲಿ ಗುಕೇಶ್, ಪ್ರಗ್ಗು

ನೆಪೊಮ್‌ಗೆ ಮಣಿದ ವಿದಿತ್

ಟೊರಾಂಟೊ (ಪಿಟಿಐ): ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್, ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಉತ್ತಮ ಆಟದ ಪ್ರದರ್ಶನ ನೀಡಿ ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ (ಅಮೆರಿಕ) ಅವರ ಜೊತೆ ಭಾನುವಾರ 'ಡ್ರಾ' ಮಾಡಿಕೊಂಡರು. ಆದರೆ ಭಾರತದ ಇನ್ನೊಬ್ಬ ಆಟಗಾರ ವಿದಿತ್ ಸಂತೋಷ್ ಗುಜರಾತಿ ಸತತ ಎರಡನೇ ಸೋಲನುಭವಿಸಿದರು.

ಹೋದ ವರ್ಷ ಡಿಂಗ್ ಲಿರೆನ್ ಜೊತೆ ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಆಡಿದ್ದ ಇಯಾನ್ ನೆಪೊಮ್‌ನಿಯಾಚಿ ಅವರು ವಿದಿತ್ ಅವರನ್ನು ಸೋಲಿಸಿದರು. ಭಾರತದ ಇನ್ನೊಬ್ಬ ಪ್ರತಿಭಾನ್ವಿತ ಆರ್. ಪ್ರಜ್ಞಾನಂದ ಮತ್ತು ಅಮೆರಿಕದ ಹಿಕಾರು ನಕಾಮುರಾ ನಡುವಣ ಪಂದ್ಯ 24 ನಡೆಗಳ ನಂತರ 'ಡ್ರಾ' ಆಯಿತು.

ಎಂಟು ಆಟಗಾರರ ಈ ಟೂರ್ನಿಯಲ್ಲಿ ಕಡಿಮೆ ರ‍್ಯಾಂಕಿಂಗ್ ಹೊಂದಿರುವ ನಿಜತ್ ಅಬಸೊವ್ (ಅಜರ್‌ಬೈಜಾನ್), ಹೋರಾಟದ ಆಟವಾಡಿ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಜೊತೆ ಅವರನ್ನು 'ಡ್ರಾ'ಕ್ಕೆ ಒಳಪಡಿಸಿದರು.

ಹಾಲಿ ವಿಶ್ವ ಚಾಂಪಿಯನ್‌ಗೆ ಸವಾಲಿಗ (ಚಾಲೆಂಜರ್)ನನ್ನು ನಿರ್ಧರಿಸಲು ನಡೆಯುತ್ತಿರುವ ಈ ಟೂರ್ನಿ 'ಡಬಲ್ ರೌಂಡ್ ರಾಬಿನ್' ಮಾದರಿಯಲ್ಲಿ ನಡೆಯುತ್ತಿದೆ. ಅಂದರೆ ಪ್ರತಿಯೊಬ್ಬ ಆಟಗಾರ ಎದುರಾಳಿಯನ್ನು ಎರಡು ಸಲ ಎದುರಿಸಬೇಕಾಗುತ್ತದೆ.

ನಾಲ್ಕನೇ ಸುತ್ತಿನ ಪಂದ್ಯದ ವೇಳೆ ಯೋಚನಾಮಗ್ನರಾಗಿರುವ ಪ್ರಜ್ಞಾನಂದ. ಪಿಟಿಐ ಚಿತ್ರ

ಎರಡನೇ ಜಯದ ಮೂಲಕ ನೆಪೊಮ್‌ನಿಯಾಚಿ ಅವರು ನಾಲ್ಕು ಸುತ್ತುಗಳ ನಂತರ ಮೂರು ಪಾಯಿಂಟ್ಸ್ ಸಂಗ್ರಹಿಸಿ ಒಂಟಿಯಾಗಿ ಅಗ್ರಸ್ಥಾನದಲ್ಲಿದ್ದಾರೆ. ಕರುವಾನಾ ಮತ್ತು ಗುಕೇಶ್ (ತಲಾ 2.5) ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಪ್ರಜ್ಞಾನಂದ (2) ಮೂರನೇ ಸ್ಥಾನದಲ್ಲಿದ್ದಾರೆ. ವಿದಿತ್, ಅಬಸೋವ್, ಅಲಿರೇಝಾ ಮತ್ತು ನಕಾಮುರಾ (ತಲಾ 1.5) ನಂತರದ ಸ್ಥಾನದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಆರ್. ವೈಶಾಲಿ, ರೇಟಿಂಗ್ ಪ್ರಕಾರ ಅಗ್ರಸ್ಥಾನದಲ್ಲಿರುವ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಎದುರು 'ಡ್ರಾ' ಮಾಡಿಕೊಂಡಿದ್ದು ಕಡಿಮೆ ಸಾಧನೆಯೇನೂ ಆಗಿರಲಿಲ್ಲ. ಆದರೆ ಮಾಜಿ ವಿಶ್ವ ರ‍್ಯಾಪಿಡ್ ಚಾಂಪಿಯನ್ ಕೋನೇರು ಹಂಪಿ, ತಮಗಿಂತ ಕಡಿಮೆ ಶ್ರೇಯಾಂಕದ ನುರ್ಗ್ಯುಲ್ ಸಲಿಮೋವಾ (ಬಲ್ಗೇರಿಯಾ) ಎದುರು ಪರಾಭವ ಅನುಭವಿಸಿದರು. ಇದು ಹಂಪಿಗೆ ಇಲ್ಲಿ ಮೊದಲ ಸೋಲು.

ಚೀನಾದ ಝೊಂಗ್ಯಿ ತಾನ್ ಮೂರು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಅವರು ಕ್ಯಾತರಿನಾ ಲಾಗ್ನೊ (ರಷ್ಯಾ) ಜೊತೆ 'ಡ್ರಾ' ಮಾಡಿಕೊಂಡರು. ತಾನ್ ಅವರನ್ನು ಬೆನ್ನತ್ತಿರುವ ರಷ್ಯಾದ ಗೊರ್ಯಾಚ್ಕಿನಾ (2.5) ಅರ್ಧ ಪಾಯಿಂಟ್ ಅಂತರದಿಂದ ಎರಡನೇ ಸ್ಥಾನದಲ್ಲಿದ್ದಾರೆ.

ವೈಶಾಲಿ, ಸಲಿಮೋವಾ ಮತ್ತು ಲಾಗ್ನೊ (ತಲಾ 2 ಪಾಯಿಂಟ್) ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ಹಂಪಿ, ಮುಝಿಚುಕ್, ಟಿಂಗ್ಜಿ ಲೀ ಜೊತೆ ನಾಲ್ಕನೇ ಸ್ಥಾನ (ತಲಾ 1.5) ಹಂಚಿಕೊಂಡಿದ್ದಾರೆ.

ಚೀನಾದ ಟಿಂಗ್ಜಿ ಲೀ ಅವರು ಉಕ್ರೇನ್‌ನ ಅನ್ನಾ ಮುಝಿಚುಕ್ ಎದುರು 'ಡ್ರಾ' ಮಾಡಿಕೊಂಡರು.

ಕರುವಾನಾ ವಿರುದ್ಧ ಕಪ್ಪು ಕಾಯಿಗಳಲ್ಲಿ ಆಡಿದ ಗುಕೇಶ್, 72 ನಡೆಗಳನ್ನು ಕಂಡ ಪಂದ್ಯದ ಮಧ್ಯದ ಹಂತದಲ್ಲಿ ಸ್ವಲ್ಪ ಒತ್ತಡಕ್ಕೆ ಒಳಗಾದರು. ಆದರೆ ಪಾನ್ ಬಿಟ್ಟುಕೊಟ್ಟು ಡ್ರಾ ಮಾಡಲು ಸುಗಮ ಹಾದಿ ಕಂಡುಕೊಂಡರು.

ಮ್ಯಾಟಿಯೊಗೆ ನಗಾಲ್ ಆಘಾತ

ಟೆನಿಸ್: ವಿಶ್ವದ 38ನೇ ರ‍್ಯಾಂಕ್‌ನ ಆಟಗಾರನಿಗೆ ಆಘಾತ ನೀಡಿದ ಭಾರತೀಯ

ಮಾಂಟೆ ಕಾರ್ಲೊ (ಪಿಟಿಐ): ಭಾರತದ ಅಗ್ರಗಣ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಇಲ್ಲಿ ನಡೆಯುತ್ತಿರುವ ಮಾಂಟೆ ಕಾರ್ಲೊ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಮುಖ್ಯಸುತ್ತಿನಲ್ಲಿ ವಿಶ್ವದ 38ನೇ ಕ್ರಮಾಂಕದ ಮ್ಯಾಟಿಯೊ ಅರ್ನಾಲ್ಡಿ ಅವರಿಗೆ ಆಘಾತ ನೀಡಿದರು.

ಕ್ವಾಲಿಫೈಯರ್ ಪಂದ್ಯಗಳನ್ನು ಗೆದ್ದು ಎಟಿಪಿ ಮಾಸ್ಟರ್ 1000 ಹಂತದ ಟೂರ್ನಿಯಲ್ಲಿ ಪ್ರಧಾನ ಸುತ್ತು ಪ್ರವೇಶಿಸಿದ್ದ 26 ವರ್ಷದ ನಗಾಲ್ ಸೋಮವಾರ 64ರ ಘಟ್ಟದ ಪಂದ್ಯದಲ್ಲಿ 5-7, 6-2, 6-4ರಿಂದ ಮ್ಯಾಟಿಯೊ ಅವರನ್ನು ಹಿಮ್ಮೆಟ್ಟಿಸಿದರು.

ಸುಮಿತ್ ನಗಾಲ್

ಇಟಲಿಯ ಆಟಗಾರನ ವಿರುದ್ಧ ಮೂರು ಸೆಟ್‌ಗಳ ಹೋರಾಟದಲ್ಲಿ ಮೇಲುಗೈ ಸಾಧಿಸಿದ ವಿಶ್ವದ 95ನೇ ಕ್ರಮಾಂಕದ ನಗಾಲ್, ಮುಂದಿನ ಸುತ್ತಿನಲ್ಲಿ ವಿಶ್ವದ ಏಳನೇ ಶ್ರೇಯಾಂಕದ ಹೋಲ್ಗರ್ ರೂನ್ (ಡೆನ್ಮಾರ್ಕ್) ಅವರನ್ನು ಎದುರಿಸಲಿದ್ದಾರೆ.

ನಗಾಲ್ ಅವರಿಗೆ ವಿಶ್ವ ರ‍್ಯಾಂಕಿಂಗ್‌ನ ಟಾಪ್ 50 ಆಟಗಾರರ ವಿರುದ್ಧ ಇದು ಮೂರನೇ ಗೆಲುವು.

ಪ್ರಸಕ್ತ ಋತುವಿನಲ್ಲಿ ಎರಡನೇ ಗೆಲುವು. ಈ ಋತುವಿನ ಆರಂಭದಲ್ಲಿ ನಡೆದ ಆಸ್ಟ್ರೇಲಿಯಾ ಓಪನ್‌ನಲ್ಲಿ ನಗಾಲ್ ಅವರು 27ನೇ ಕ್ರಮಾಂಕದ ಅಲೆಕ್ಸಾಂಡರ್ ಬುಬ್ಲಿಕ್ ಅವರಿಗೆ ಆಘಾತ ನೀಡಿದ್ದರು. 2021ರಲ್ಲಿ ಅರ್ಜೆಂಟೀನಾ ಓಪನ್‌ನಲ್ಲಿ ಆಗಿನ ವಿಶ್ವದ 22ನೇ ಕ್ರಮಾಂಕದ ಕ್ರಿಸ್ಟಿಯನ್ ಗ್ಯಾರಿನ್ (ಚಿಲಿ) ಅವರನ್ನು ಮಣಿಸಿದ್ದರು.

ಮೊದಲ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 63ನೇ ಸ್ಥಾನದಲ್ಲಿರುವ ಫ್ಲಾವಿಯೊ ಕೊಬೊಲ್ಲಿ (ಇಟಲಿ) ವಿರುದ್ಧ, ಎರಡನೇ ಪಂದ್ಯದಲ್ಲಿ 55ನೇ ರ‍್ಯಾಂಕ್‌ನ ಫಕುಂಡೊ ಡಯಾಜ್ ಅಕೋಸ್ಟಾ (ಅರ್ಜೆಂಟೀನಾ) ವಿರುದ್ಧ ಗೆಲುವು ಸಾಧಿಸಿ ನಗಾಲ್ ಮುಖ್ಯ ಸುತ್ತು ಪ್ರವೇಶಿಸಿದ್ದರು.

ಈ ಗೆಲುವಿನೊಂದಿಗೆ ವೃತ್ತಿಜೀವನದ ಅತ್ಯುನ್ನತ 80ನೇ ರ‍್ಯಾಂಕ್ ಅನ್ನು ಖಚಿತಪಡಿಸಿಕೊಂಡಿದ್ದಾರೆ.

ಕರ್ನಾಟಕ ತಂಡಕ್ಕೆ ಅಲೆನ್ ಸಾರಥ್ಯ

ಬೆಂಗಳೂರು: ಅಲೆನ್ ದಾಮು ಅವರು ಇದೇ 13ರಿಂದ ಚಂಡೀಗಢದಲ್ಲಿ ನಡೆಯುವ ಸ್ವಾಮಿ ವಿವೇಕಾನಂದ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ (20 ವರ್ಷದೊಳಗಿನವರ) ರಾಜ್ಯ ತಂಡವನ್ನು ಮುನ್ನಡೆಸಲಿದ್ದಾರೆ.

ಕರ್ನಾಟಕ ತಂಡ: ಸುಂದರ್‌ರಾಮನ್, ಸ್ಯಾಮ್ ಜಾರ್ಜ್ (ಗೋಲ್‌ಕೀಪರ್ಸ್), ಅಲೆನ್ ದಾಮು (ನಾಯಕ), ರೋವಾನ್ ಜೇಮ್ಸ್, ನಿಹಾರ್ ಮಣಿರಾಮ, ಯಶ್ಚಿಕ್ ಪಿ, ಮದನ್ ಕುಮಾರ್ ಪ್ರಸನ್ನ ಸ್ವಾಮಿನಾಥನ್, ಬಿ.ಜಯಸೂರ್ಯ, ಅಭಿರಾಮ್ ಕೃಪಾ, ರಿಕಿ ಸಿಂಗ್, ಇಶಾನ್ ರಘುನಂದ, ನಿತಿನ್ ಪೌಲ್, ಗುರುವೀರ್ ಸಿಂಗ್, ಶ್ಯಾಮ್ ಸುಂದರ್, ಪರೇಶ್ ಟಿ, ಬೋರಿಶ್ ಸಿಂಗ್, ಮಿರ್ ಮೊಹಮ್ಮದ್ ಅಬೀಸ್ ರಜಾ.

ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಆಕ್ರೋಶ

ಕಾರ್ಯಕಾರಿ ಸಮಿತಿ ಸದಸ್ಯರಿಂದ ಅಲಕ್ಷ್ಯ

ನವದೆಹಲಿ (ಪಿಟಿಐ): 'ನನ್ನ ವಿರುದ್ಧ ಬಂಡಾಯವೆದ್ದಿರುವ ಕಾರ್ಯಕಾರಿ ಸಮಿತಿ ಸದಸ್ಯರು ನಾನು ನೇಮಿಸಿದ ಅಧಿಕಾರಿಗೆ ವಜಾ ಪತ್ರ ನೀಡುವುದೂ ಸೇರಿದಂತೆ ಪ್ರತಿರೋಧದ ಕೃತ್ಯಗಳ ಮೂಲಕ ತಮ್ಮನ್ನು ಮೂಲೆಗುಂಪು ಮಾಡಲು ಪ್ರಯತ್ನಿಸುತ್ತಿದ್ದಾರೆ' ಎಂದು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಸೋಮವಾರ ಹೇಳಿದ್ದಾರೆ.

ಪಿ.ಟಿ.ಉಷಾ

'ಅನಧಿಕೃತ ವ್ಯಕ್ತಿಗಳು' ಪ್ರಧಾನ ಕಚೇರಿಯೊಳಗೆ ಪ್ರವೇಶಿಸಬಾರದು ಎಂಬ ನೋಟಿಸ್ ಅನ್ನು ಕಾರ್ಯಕಾರಿ ಸಮಿತಿಯ ಒಂಬತ್ತು ಸದಸ್ಯರು ಕಳೆದ ಶುಕ್ರವಾರ ಕಚೇರಿ ಆವರಣದಲ್ಲಿ ಅಂಟಿಸಿದ್ದರು. ಇತ್ತೀಚೆಗೆ ಉಷಾ ನೇಮಕ ಮಾಡಿರುವ ಇಬ್ಬರು ಸದಸ್ಯರನ್ನು ಗುರಿಯಾಗಿಸಿ ಈ ನೋಟಿಸ್ ಅಂಟಿಸಲಾಗಿತ್ತು. 'ಇದು ದಬ್ಬಾಳಿಕೆಯ ಕ್ರಮ' ಎಂದು ಉಷಾ ಟೀಕಿಸಿದ್ದಾರೆ.

ಐಒಎ ಸಿಇಒ ಆಗಿ ರಘುರಾಮ್ ಅಯ್ಯರ್ ಅವರ ನೇಮಕವನ್ನು ಅನೂರ್ಜಿತ ಎಂದು ಘೋಷಿಸುವ ಅಮಾನತು ಆದೇಶಕ್ಕೆ ಸಹಿ ಹಾಕಿದ್ದೇವೆ ಎಂದು ಬಹುತೇಕ ಸದಸ್ಯರು ಈ ಹಿಂದೆ ಹೇಳಿಕೊಂಡಿದ್ದರು. ಐಒಎ ಅಧ್ಯಕ್ಷರಿಗೆ ಕಾರ್ಯನಿರ್ವಾಹಕ ಅಸಿಸ್ಟೆಂಟ್ ಆಗಿ ಅಜಯ್ ನಾರಂಗ್ ಅವರ ನೇಮಕವನ್ನೂ ರದ್ದುಪಡಿಸಲಾಗಿದೆ ಎಂದು ಸದಸ್ಯರು ಹೇಳಿದ್ದರು.

'ನಾವು ಇನ್ನೂ ತಂಡವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ನಿಮ್ಮ ಪ್ರತಿಯೊಂದು ಕೃತ್ಯವೂ ನನ್ನನ್ನು ಕಡೆಗಣಿಸುವ ಪ್ರಯತ್ನವಾಗಿದೆ' ಎಂದು ಉಷಾ ಅವರು ಬಂಡಾಯ ಸದಸ್ಯರಿಗೆ ಕಳುಹಿಸಿದ ಪ್ರತಿಕ್ರಿಯೆಯಲ್ಲಿ ತಿಳಿಸಿದ್ದಾರೆ.

'ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು ಮತ್ತು ವಜಾಗೊಳಿಸುವುದು ಸೇರಿದಂತೆ ದೈನಂದಿನ ಆಡಳಿತಾತ್ಮಕ ಕಾರ್ಯಗಳು ಕಾರ್ಯಕಾರಿ ಸಮಿತಿ ಕೆಲಸವಲ್ಲ ಎಂದು ನೆನಪಿಸುವುದನ್ನು ಬಿಟ್ಟು ನನಗೆ ಬೇರೆ ಆಯ್ಕೆಯಿಲ್ಲ. ಕಾರ್ಯಕಾರಿ ಸಮಿತಿಯಾಗಿ ತನ್ನ ಅಧಿಕಾರ ಮತ್ತು ಹಕ್ಕನ್ನು ಐಒಎಯನ್ನು ಎತ್ತರಕ್ಕೆ ಕೊಂಡೊಯ್ಯಲು ಬಳಸಬೇಕು' ಎಂದು ಅವರು ಹೇಳಿದ್ದಾರೆ.

'ಕಚೇರಿ ಆವರಣದಲ್ಲಿ ಅಂಟಿಸಿರುವ ನೋಟಿಸ್ ಪ್ರತಿಗಳನ್ನು ತೆಗೆದುಹಾಕುವಂತೆ ಐಒಎ ಸಿಬ್ಬಂದಿಗೆ ನಿರ್ದೇಶಿಸಲಾಗಿದೆ. ನನ್ನ ಕಾರ್ಯನಿರ್ವಾಹಕ ಸಹಾಯಕರ ಮೂಲಕ ನನ್ನ ಕಚೇರಿಯಿಂದ ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ಅನುಸರಿಸಲು ಸಿಬ್ಬಂದಿಗೆ ಸೂಚನೆ ನೀಡಲಾಗಿದೆ' ಎಂದರು.

'ಕ್ಯಾಪ್ಟನ್ ಅಜಯ್ ಕುಮಾರ್ ನಾರಂಗ್ (ನಿವೃತ್ತ) ಮಾಡಿದ ಕೆಲಸದಿಂದ ನನಗೆ ತೃಪ್ತಿ ಇದೆ ಮತ್ತು ಅವರ ಸೇವೆಗಳನ್ನು ಕೊನೆಗೊಳಿಸಲು ಯಾವುದೇ ಕಾರಣ ಕಂಡುಬಂದಿಲ್ಲ' ಎಂದು ಹೇಳಿದ್ದಾರೆ.

ಇಂದಿನಿಂದ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್

ಬೆಂಗಳೂರು: ಪುದುಚೇರಿಯ ರಾಜೀವ್ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾಗಲಿರುವ 38ನೇ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಪುರುಷರ ತಂಡವು 'ಡಿ' ಗುಂಪಿನಲ್ಲಿ ಮತ್ತು ಮಹಿಳೆಯರ ತಂಡವು 'ಬಿ' ಗುಂಪಿನಲ್ಲಿ ಸ್ಥಾನ ಪಡೆದಿದೆ.

ಪುರುಷರ 'ಡಿ' ಗುಂಪಿನಲ್ಲಿ ಹಿಮಾಚಲ ಪ್ರದೇಶ, ಮಿಜೋರಾಂ ಮತ್ತು ಪಶ್ಚಿಮ ಬಂಗಾಳ ತಂಡಗಳಿದ್ದು, ಇವುಗಳೊಂದಿಗೆ ಕರ್ನಾಟಕ ಸೆಣಸಲಿದೆ. ಮಹಿಳೆಯರ 'ಬಿ' ಗುಂಪಿನಲ್ಲಿ ಮಧ್ಯಪ್ರದೇಶ, ಉತ್ತರ ಪ್ರದೇಶ, ತಮಿಳುನಾಡು, ತೆಲಂಗಾಣ ತಂಡಗಳಿದ್ದು, ಇವುಗಳೊಂದಿಗೆ ಕರ್ನಾಟಕ ಮುಖಾಮುಖಿಯಾಗಲಿದೆ.

ಗುಂಪುಗಳು ಹೀಗಿವೆ: ಪುರುಷರ ವಿಭಾಗ: ಲೆವಲ್ 1: ಎ ಗುಂಪು: ಪಂಜಾಬ್, ಕೇರಳ, ಉತ್ತರ ಪ್ರದೇಶ, ಚಂಡೀಗಢ, ಒಡಿಶಾ, ತೆಲಂಗಾಣ, ಸರ್ವಿಸ್.

ಬಿ ಗುಂಪು: ಮಧ್ಯಪ್ರದೇಶ, ತಮಿಳುನಾಡು, ರಾಜಸ್ಥಾನ, ಬಿಹಾರ, ಹರಿಯಾಣ. ಲೆವಲ್ 2: ಸಿ ಗುಂಪು: ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್

ಡಿ ಗುಂಪು: ಕರ್ನಾಟಕ, ಹಿಮಾಚಲ ಪ್ರದೇಶ, ಮಿಜೇರಾಂ, ಪಶ್ಚಿಮ ಬಂಗಾಳ

ಇ ಗುಂಪು: ಆಂಧ್ರ ಪ್ರದೇಶ, ಗುಜರಾತ್, ಪಾಂಡಿಚೇರಿ, ಉತ್ತರಾಖಂಡ. ಎಫ್ ಗುಂಪು: ಛತ್ತೀಸಗಢ, ದೆಹಲಿ, ಸಿಕ್ಕಿಂ, ತೆಲಂಗಾಣ

ಮಹಿಳೆಯರ ವಿಭಾಗ: ಲೆವಲ್ 1; ಎ ಗುಂಪು: ಮಹಾರಾಷ್ಟ್ರ, ರಾಜಸ್ಥಾನ, ಕೇರಳ, ಪಂಜಾಬ್, ದೆಹಲಿ

ಬಿ ಗುಂಪು: ಮಧ್ಯಪ್ರದೇಶ, ಕರ್ನಾಟಕ, ತಮಿಳುನಾಡು, ತೆಲಂಗಾಣ

ಲೆವಲ್ 2: ಸಿ ಗುಂಪು: ಚಂಡೀಗಢ, ಗುಜರಾತ್, ಹಿಮಾಚಲ ಪ್ರದೇಶ

ಡಿ ಗುಂಪು: ಹರಿಯಾಣ, ಛತ್ತೀಸ್‌ಗಡ, ಜಾರ್ಖಂಡ್

ಇ ಗುಂಪು: ಒಡಿಶಾ, ಬಿಹಾರ, ಪುದುಚೇರಿ. ಎಫ್ ಗುಂಪು: ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಸಿಕ್ಕಿಂ, ಉತ್ತರಾಖಂಡ

ಅಧಿಕೃತ ಡೀಲರ್ಸ್: ಬೆಂಗಳೂರು: ಶಾಂತಲಕ್ಷ್ಮಿ ಎಲೆಕ್ಟ್ರಿಕಲ್ಸ್ ✆9845505597 | ಶ್ರೀ ಮಾರುತಿ ಎಂಟರ್‌ಪ್ರೈಸಸ್ ✆9731358294 | ಗುರು ಅಸೋಸಿಯೇಟ್ಸ್ 9480826460 | ಜೆ.ವಿ.ಬಿ. ಫ್ಲೋಟೆಕ್ 9845446176 | ಎ.ಎನ್. ಎಂಟರ್‌ಪ್ರೈಸಸ್ ✆9901163007 | ಸಿಂಟ್ರಾನ್‌ಸೇಲ್ಸ್ ಕಾರ್ಪೋರೇಷನ್ ✆9844425588 | ತಿರುಮಲ ಎಂಟರ್‌ಪ್ರೈಸಸ್ ✆9886091121 | ಶ್ರೀ ಮಂಜುನಾಥ ಏಜೆನ್ಸಿಸ್ ✆7892648452 | ಇ.ಎಸ್.ಪಿ.ಆರ್. ಎಲೆಕ್ಟ್ರಿಕಲ್ ಸರ್ವೀಸ್ಸ್ ✆9845469172 | ವಿನಾಯಕ ಮಾರ್ಕೆಟಿಂಗ್ ✆9448379398 | ವಿಎಸ್‌ಪಿ ಪಂಪ್ಸ್ ✆9880165527 | ಎಂಎಸ್ ಆಗ್ರೋಟೆಕ್ ✆9740166606 | ಮಂಜುನಾಥ್ ಎಂಟರ್ ಪ್ರೈಸಸ್ ✆9880871679 | ರಾಮನಗರ : ಮಂಜುಶ್ರೀ ಎಲೆಕ್ಟ್ರಿಕಲ್ಸ್ ✆9242220554 | ರಾಜಾನಕುಂಟೆ : ಮಂಜುನಾಥ ಟ್ರೇಡರ್ಸ್ ✆9343736456 | ದೇವನಹಳ್ಳಿ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ವಿಜಯಪುರ : ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ವರ್ಕ್ಸ್ ✆9448551213 | ಹೊಸಕೋಟೆ : ಪ್ರಭು ಎಲೆಕ್ಟ್ರಿಕಲ್ಸ್ ✆9448081876 | ಕನಕಪುರ : ಶ್ರೀ ಮಂಜುನಾಥೇಶ್ವರ ಎಂಟರ್‌ಪ್ರೈಸಸ್ ✆9972049822 | ಕೆಂಗೇರಿ: ಎಸ್.ಎಲ್.ವಿ. ಪಂಪ್ಸ್ ✆9448513248 | ಪೀಣ್ಯ: ವಿನಾಯಕ ಎಂಟರ್‌ಪ್ರೈಸಸ್ ✆9741414592 | ನೆಲಮಂಗಲ : ಗುರು ಅಸೋಸಿಯೆಟ್ಸ್ ✆9448373404 | ಕೋಲಾರ : ಉಮಾ ಎಲೆಕ್ಟ್ರಿಕಲ್ಸ್ ✆9902808605 | ಓಂಕಾರ ಏಜೆನ್ಸಿಸ್ ✆9880190749 | ಶ್ರೀನಿವಾಸಪುರ : ವಿಜಯಲಕ್ಷ್ಮಿ ಏಜೆನ್ಸಿಸ್ ✆9845141512 | ಬಂಗಾರಪೇಟೆ : ವರದರಾಜ ಏಜೆನ್ಸಿಸ್ ✆8971981066 | ಬಾಗೇಪಲ್ಲಿ : ಮಾರುತಿ ಎಂಟರ್‌ಪ್ರೈಸಸ್ ✆9844406508 | ಚಿಕ್ಕಬಳ್ಳಾಪುರ : ಮಂಜುನಾಥ ಎಲೆಕ್ಟ್ರಿಕಲ್ಸ್ ✆9448886619 | ಚಿಂತಾಮಣಿ : ರಾಜೇಶ್ವರಿ ಟ್ರೇಡರ್ಸ್ ✆9880156246 | ಶಿಡ್ಲಘಟ್ಟ : ರಾಜೇಶ್ವರಿ ಎಂಟರ್‌ಪ್ರೈಸಸ್ ✆9880856246 | ಗುಡಿಬಂಡೆ : ನಾಗರಾಜ ಎಂಟರ್‌ಪ್ರೈಸಸ್ ✆9880104195 | ಶ್ರೀ ಮಂಜುನಾಥ ಎಲೆಕ್ಟ್ರಿಕಲ್ ಸ್ಟೋರ್ಸ್ ✆9448664483 | ಹೆಚ್.ಕ್ರಾಸ್ : ಉಮಾ ಇಂಜಿನಿಯರಿಂಗ್ ವರ್ಕ್ಸ್ ✆9448165195 | ಗೌರಿಬಿದನೂರು : ಶ್ರೀನಿವಾಸ ಎಲೆಕ್ಟ್ರಿಕ್ ಸ್ಟೋರ್ಸ್ ✆9448314982 | ಮಾಲೂರು : ಶ್ರೀದೇವಿ ಎಲೆಕ್ಟ್ರಿಕಲ್ಸ್ ✆9961320501 | ಚೇಳೂರು : ಮಾರುತಿ ಎಲೆಕ್ಟ್ರಿಕಲ್ಸ್ ✆9448950429 | ತುಮಕೂರು : ಗುರು ಏಜೆನ್ಸಿಸ್ ✆8095242587 | ಶಿರಾ : ಗುರು ಎಂಟರ್ ಪ್ರೈಸಸ್ ✆9448093767 | ಮಧುಗಿರಿ : ಪ್ರಸಾದ ಎಂಟರ್‌ಪ್ರೈಸಸ್ ✆9448250601 | ತಿಪಟೂರು : ಶ್ರೀನಿವಾಸ ಎಂಟರ್‌ಪ್ರೈಸಸ್ ✆9448106005 | ಚಿಕ್ಕನಾಯಕನಹಳ್ಳಿ : ಸಿದ್ಧಶ್ರೀ ಟ್ರೇಡರ್ ✆7624844129 | ಪೇರಸಂದ್ರಾ : ಶ್ರೀ ನಂಜುಡೇಶ್ವರ ಎಂಟರ್‌ಪ್ರೈಸಸ್ ✆9886534395 | ದೊಡ್ಡಬಳ್ಳಾಪುರ : ಕಾಪರ್ತಿ ಏಜೆನ್ಸಿಸ್ ✆9880165527 | ವಿ.ಎಸ್.ಪಿ ಪಂಪ್ಸ್ ✆9448379398 | ಮುಳಬಾಗಿಲು : ರೆಡ್ಡಿ ಎಲೆಕ್ಟ್ರಿಕಲ್ಸ್ ✆9986995862 |